
prajavani.net prajavani
ಗುರುವಾರ, ನವೆಂಬರ್ 27, 2025 | ಬೆಂಗಳೂರು | ₹ 7.00 | ಸಂಪುಟ 78 | ಸಂಚಿಕೆ 327 | ಪುಟ 12
www.prajavani.net

ಸಂವಿಧಾನ ದಿನ
ಮೈಸೂರಿನಲ್ಲಿ ಬುಧವಾರ ನಡೆದ ಸಂವಿಧಾನ ದಿನಾಚರಣೆಯಲ್ಲಿ ಪಾಲ್ಗೊಂಡಿದ್ದ ವಿದ್ಯಾರ್ಥಿನಿಯರು ಡಾ.ಬಿ.ಆರ್. ಅಂಬೇಡ್ಕರ್ ಅವರ ಉಕ್ತಿಯುಳ್ಳ ಫಲಕ ಪ್ರದರ್ಶಿಸಿದರು



ಪ್ರಜಾ ವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ



ಶ್ರೀಕಾಂತ್ ಮುನ್ನಡೆ
ಭಾರತದ ಅನುಭವಿ ಶಟ್ಲರ್ ಕಿದಂಬಿ ಶ್ರೀಕಾಂತ್ ಅವರು ಸೈಯದ್ ಮೋದಿ ಅಂತರರಾಷ್ಟ್ರೀಯ ಸೂಪರ್ 300 ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಬುಧವಾರ ಪ್ರಿಕ್ವಾರ್ಟರ್‌ಫೈನಲ್‌ಗೆ ಮುನ್ನಡೆದರು

ಸೆನ್ಸೆಕ್ಸ್ 85,609 | ನಿಫ್ಟಿ 26,205 | $/₹ 89.22 | ಚಿನ್ನ (Std. 10g) ₹1,31,750 (ಬೆಂಗಳೂರು) | ಶುದ್ಧ ಬೆಳ್ಳಿ (kg) ₹1,69,100 (ಬೆಂಗಳೂರು)

ಶಿವಕುಮಾರ್ ಪರ 'ಒಕ್ಕಲಿಗರ' ಸ್ವರ

ಕಾಂಗ್ರೆಸ್ ಸರ್ಕಾರದ ನಾಯಕತ್ವಕ್ಕಾಗಿ ನಡೆಯುತ್ತಿರುವ ಹಗ್ಗ ಜಗ್ಗಾಟದಲ್ಲಿ 'ಜಾತಿ ಕಾರ್ಡ್' ಅಡಿ ಇಟ್ಟಿದೆ. ಮುಖ್ಯಮಂತ್ರಿ ಆಗಲೇಬೇಕೆಂಬ ಹಟಕ್ಕೆ ಬಿದ್ದಿರುವ ಡಿ.ಕೆ. ಶಿವಕುಮಾರ್, ಸಿದ್ದರಾಮಯ್ಯ ಆಪ್ತ ಬಣದಲ್ಲಿ ಗುರುತಿಸಿಕೊಂಡಿರುವ ಸಚಿವರು, ಶಾಸಕರನ್ನು ತಮ್ಮ ಸೆಳೆಯುವತ್ತ ಗಮನ ನೆಟ್ಟಿದ್ದಾರೆ. ಇಲ್ಲಿಯವರೆಗೆ ಮೌನವಾಗಿದ್ದ ಒಕ್ಕಲಿಗ ಸಮುದಾಯ, ಶಿವಕುಮಾರ್ ಪರ ಧ್ವನಿ ಎತ್ತಿದೆ. ಸಮುದಾಯದ ಸ್ವಾಮೀಜಿ ಬೇಸರ ಹೊರಹಾಕಿದ್ದರೆ, ಒಕ್ಕಲಿಗರ ಸಂಘ ಕೂಡ ಹೋರಾಟಕ್ಕೆ ಧುಮುಕುವ ಸುಳಿವು ನೀಡಿದೆ

ಶಿವಕುಮಾರ್ ಸಿ.ಎಂ ಆಗಲಿ: ಚುಂಚನಗಿರಿಶ್ರೀ



ಚನ್ನರಾಯಪಟ್ಟಣ (ಹಾಸನ ಜಿಲ್ಲೆ): 'ಡಿ.ಕೆ.ಶಿವಕುಮಾರ್ ಮುಖ್ಯಮಂತ್ರಿ ಆಗಬೇಕು ಎನ್ನುವ ಭಾವನೆ ನಮಗೂ ಇತ್ತು. ಪಕ್ಷಕ್ಕೆ ದುಡಿದಿರುವ ಅವರಿಗೆ ಆ ಸ್ಥಾನ ಸಿಗಬೇಕು' ಎಂದು ಆದಿಚುಂಚನಗಿರಿ ಮಠದ ಪೀಠಾಧ್ಯಕ್ಷ ನಿರ್ಮಲಾನಂದನಾಥ ಸ್ವಾಮೀಜಿ ಹೇಳಿದರು.

ತಾಲ್ಲೂಕಿನ ಕುಂದೂರು ಮಠದಲ್ಲಿ ಸುದ್ದಿಗಾರರೊಂದಿಗೆ ಬುಧವಾರ ಮಾತನಾಡಿದ ಅವರು, 'ಎರಡೂವರೆ ವರ್ಷ ಶಿವಕುಮಾರ್ ಅವರಿಗೆ ಅವಕಾಶ ಕೊಡಬೇಕು. ಪಕ್ಷನಿಷ್ಠರಾಗಿದ್ದು, ಯಾವತ್ತೂ ಪಕ್ಷ ಬಿಟ್ಟುಕೊಟ್ಟವರಲ್ಲ. ಅವರ ಅಧ್ಯಕ್ಷತೆಯಲ್ಲೇ ಚುನಾವಣೆ ನಡೆದಿದೆ. ಕಾಂಗ್ರೆಸ್‌ಗಾಗಿ ಎಷ್ಟೋ ನೋವುಗಳನ್ನು ನುಂಗಿದ್ದಾರೆ. ಅವರೀಗ ಮುಖ್ಯಮಂತ್ರಿ ಆಗಬೇಕು ಎನ್ನುವುದು ನಮ್ಮ ಸಮುದಾಯ ಹಾಗೂ ನಮ್ಮ ಭಾವನೆಯಾಗಿದೆ' ಎಂದರು.

'ಸಾವಿರಾರು ಭಕ್ತರು ನಮಗೆ ಫೋನ್ ಮಾಡುತ್ತಿದ್ದಾರೆ. ನಮ್ಮವರು ಮುಖ್ಯಮಂತ್ರಿ ಆಗುತ್ತಾರೆಂದು ಶಿವಕುಮಾರ್ ಅವರನ್ನು ಆಯ್ಕೆ ಮಾಡಿದ್ದೆವು. ಎರಡು ವರ್ಷಗಳ ನಂತರ ಆಗುತ್ತಾರೆ ಅಂದುಕೊಂಡಿದ್ದೆವು. ಈಗಿನ ಬೆಳವಣಿಗೆ ನಮಗೆ ಬೇಸರ ತಂದಿದೆ' ಎಂದು ಹೇಳಿದರು.

'ಈ ವಿಚಾರದಲ್ಲಿ ಕಾಂಗ್ರೆಸ್ ಹೈಕಮಾಂಡ್ ಸೂಕ್ತ ತೀರ್ಮಾನ ಮಾಡಲಿದೆ ಎನ್ನುವ ಭರವಸೆ ಇದೆ. ಅದು ಆದಷ್ಟು ಬೇಗ ಆಗಲಿ' ಎಂದರು.

▶11

'ಜಾತಿ ಬಳಸುವವರ ಕುಗ್ಗಿಸಿ'

'ಜಾತಿ, ಧರ್ಮದ ಆಧಾರದ ಮೇಲೆ ಅಧಿಕಾರ ಹಿಡಿಯುವ ಪ್ರಯತ್ನಗಳು ನಡೆದಿವೆ. ಜಾತಿಯ ಪ್ರಭಾವ ಬಳಸುವವರನ್ನು ಕುಗ್ಗಿಸಬೇಕು. ತುಳಿತಕ್ಕೆ ಒಳಗಾದವರು ಒಗ್ಗಟ್ಟಾಗಿದ್ದರೆ ಮಾತ್ರ ಇದು ಸಾಧ್ಯ' ಎಂದು ಸಮಾಜ ಕಲ್ಯಾಣ ಸಚಿವ ಎಚ್‌.ಸಿ. ಮಹದೇವಪ್ಪ ಹೇಳಿದರು.

ಬುಧವಾರ ಸಂವಿಧಾನ ದಿನಾಚರಣೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, 'ಶೋಷಿತ ಸಮುದಾಯಗಳು ಸಿದ್ದರಾಮಯ್ಯ ಅವರ ನಾಯಕತ್ವ ಬಲಪಡಿಸಬೇಕು. ಅವರಿಗೆ ಜನರ ಆಶೀರ್ವಾದ, ಬೆಂಬಲ ಬೇಕು. ಪ್ರಜಾಪ್ರಭುತ್ವವಾದಿಯಾದ ಅವರಂತಹವರ ನಾಯಕತ್ವ ಅಗತ್ಯವಿದೆ' ಎಂದರು.

'ಸಿದ್ದರಾಮಯ್ಯ ಅವರು ಐದು ವರ್ಷವೂ ಮುಖ್ಯಮಂತ್ರಿಯಾಗಿ ಮುಂದುವರೆಯಬೇಕು. ಅಧಿಕಾರ ಬಿಟ್ಟುಕೊಡಬಾರದು' ಎಂದು ದಲಿತ ಮುಖಂಡರು ಘೋಷಣೆ ಕೂಗಿದರು.

'ನಾಯಕತ್ವ ಬದಲಾವಣೆ ಇಲ್ಲ'

'ಸಿದ್ದರಾಮಯ್ಯ ನಾಯಕತ್ವದ ಮೇಲೆ ನಮಗೆ ನಂಬಿಕೆ ಇದೆ. ನಾಯಕತ್ವ ಬದಲಾವಣೆ ಇಲ್ಲ' ಎಂದು ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ಹೇಳಿದರು.

'ಇದುವರೆಗೂ ಸಿದ್ದರಾಮಯ್ಯ ಅವರ ಜತೆ ಗುರುತಿಸಿಕೊಂಡಿದ್ದೇವೆ. ನಮ್ಮದು ಗುರು–ಶಿಷ್ಯರ ಸಂಬಂಧ. ಮುಂದೆಯೂ ಇದೇ ರೀತಿ ಮುಂದುವರಿಯಲಿದೆ' ಎಂದು ಹೇಳಿದರು. 'ಪಕ್ಷದ ನಿರ್ಧಾರಕ್ಕೂ ಬದ್ಧರಾಗಿರುತ್ತೇವೆ. ಪಕ್ಷ ನೀಡುವ ಜವಾಬ್ದಾರಿಯನ್ನೂ ನಿಭಾಯಿಸುತ್ತೇವೆ' ಎಂದರು.

ಕೊಟ್ಟ ಮಾತಿಗೆ ತಕ್ಕಂತೆ ನಡೆಯಿರಿ: ಡಿಕೆಶಿ

ಬೆಂಗಳೂರು: 'ಮಾತಿನ ಶಕ್ತಿಯೇ ವಿಶ್ವದ ಶಕ್ತಿ ಎನ್ನುವಂತೆ ಕೊಟ್ಟ ಮಾತನ್ನು ಉಳಿಸಿಕೊಳ್ಳುವುದೇ ವಿಶ್ವದಲ್ಲಿರುವ ದೊಡ್ಡ ಶಕ್ತಿ. ನ್ಯಾಯಾಧೀಶರು, ರಾಷ್ಟ್ರಪತಿ ಸೇರಿದಂತೆ ಯಾರೇ ಆದರೂ ಕೊಟ್ಟ ಮಾತಿಗೆ ತಕ್ಕಂತೆ ನಡೆಯಬೇಕು' ಎಂದು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಪ್ರತಿಪಾದಿಸಿದರು.

'ಕಾಂಗ್ರೆಸ್ ಆಂತರಿಕ ವಿಚಾರದ ಬಗ್ಗೆ ಬಿಜೆಪಿ ಹೇಳಿಕೆ ಅಗತ್ಯ. ಕಾಂಗ್ರೆಸ್ ನನ್ನ ಬೆನ್ನಿಗಿದೆ. ನನ್ನ ಹಿತ ಕಾಯಲಿದೆ' ಎಂದೂ ಅವರು ಹೇಳಿದರು.

▶11

> **ಪಕ್ಷದ ಹಿರಿಯ ನಾಯಕರಾದ ಸೋನಿಯಾ ಗಾಂಧಿ ಹಾಗೂ ರಾಹುಲ್ ಗಾಂಧಿ ಜತೆಗೆ ಚರ್ಚೆ ನಡೆಸಿ ಕಾಂಗ್ರೆಸ್ ಪಕ್ಷದಲ್ಲಿರುವ ಸಮಸ್ಯೆ ಬಗೆಹರಿಸಲಾಗುವುದು**
> **ಮಲ್ಲಿಕಾರ್ಜುನ ಖರ್ಗೆ,** ಎಐಸಿಸಿ ಅಧ್ಯಕ್ಷ

ಜಾರಕಿಹೊಳಿ ಜತೆ ಡಿಕೆಶಿ ರಹಸ್ಯ ಸಭೆ

ಸಿದ್ದರಾಮಯ್ಯ ಆಪ್ತ ಬಣದಲ್ಲಿ ಗುರುತಿಸಿಕೊಂಡಿರುವ ಸಚಿವರು, ಶಾಸಕರನ್ನು ಒಲಿಸಿಕೊಳ್ಳುವ ಯತ್ನ ಮುಂದುವರಿಸಿರುವ ಡಿ.ಕೆ. ಶಿವಕುಮಾರ್, ಸಚಿವ ಸತೀಶ ಜಾರಕಿಹೊಳಿ ಅವರ ಜತೆ ಮಂಗಳವಾರ ತಡರಾತ್ರಿ ಎರಡು ಗಂಟೆಗೂ ಹೆಚ್ಚು ಸಮಯ ರಹಸ್ಯ ಸಭೆ ನಡೆಸಿದರು.

ಸಿದ್ದರಾಮಯ್ಯ ಅವರ ಜತೆ ನಿಕಟ ಬಾಂಧವ್ಯ ಹೊಂದಿರುವ ಸತೀಶ, ಶಿವಕುಮಾರ್ ಜತೆ ಅಂತರ ಕಾಯ್ದುಕೊಂಡೇ ಬಂದಿದ್ದಾರೆ. ಕೆಲವೊಮ್ಮೆ ನೇರವಾಗಿ ಶಿವಕುಮಾರ್ ವಿರುದ್ಧ ಮಾತನಾಡಿದ್ದರು.

ಸತೀಶ ಅವರನ್ನು ತಮ್ಮ ಮನೆಗೆ ಕರೆಯಿಸಿಕೊಂಡಿದ್ದ ಶಿವಕುಮಾರ್, ಮುಖ್ಯಮಂತ್ರಿಯಾಗಲು ತಮಗೆ ಬೆಂಬಲ ಸೂಚಿಸುವಂತೆ ಮನವಿ ಮಾಡಿದ್ದಾರೆ ಎಂದು ಗೊತ್ತಾಗಿದೆ. ಸಚಿವ ಕೆ.ಜೆ. ಜಾರ್ಜ್ ಹಾಗೂ ಜಮೀರ್ ಅಹಮದ್ ಖಾನ್ ಅವರ ಜತೆ ಸಮಾಲೋಚಿಸಿದ್ದ ಶಿವಕುಮಾರ್, ಈಗ ಮತ್ತೊಂದು ಹೆಜ್ಜೆ ಮುಂದಿಟ್ಟಿದ್ದಾರೆ.



ಸಂಸತ್ತಿನ ಸೆಂಟ್ರಲ್ ಹಾಲ್‌ನಲ್ಲಿ ಬುಧವಾರ ನಡೆದ ಸಂವಿಧಾನ ದಿನಾಚರಣೆ ಕಾರ್ಯಕ್ರಮದಲ್ಲಿ ಕೇಂದ್ರ ಸಚಿವ ಜೆ.ಪಿ.ನಡ್ಡಾ, ಪ್ರಧಾನಿ ನರೇಂದ್ರ ಮೋದಿ, ಉಪ ರಾಷ್ಟ್ರಪತಿ ಸಿ.ಪಿ. ರಾಧಾಕೃಷ್ಣನ್, ರಾಷ್ಟ್ರಪತಿ ದ್ರೌಪದಿ ಮುರ್ಮು, ಲೋಕಸಭೆಯ ಸ್ಪೀಕರ್ ಓಂ ಬಿರ್ಲಾ, ರಾಜ್ಯಸಭೆ ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ ಮತ್ತು ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರು ಸಂವಿಧಾನದ ಪೀಠಿಕೆ ವಾಚಿಸಿದರು – ಪಿಟಿಐ ಚಿತ್ರ

'ಸಂವಿಧಾನ ವಿರೋಧಿ ಮನುವಾದಿಗಳ ಗುರುತಿಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ದೇಶದಲ್ಲಿರುವ ಸಂವಿಧಾನ ವಿರೋಧಿ ಮನುವಾದಿಗಳು ಯಾರು ಎನ್ನುವುದನ್ನು ಗುರುತಿಸಿ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಕರೆ ನೀಡಿದರು.

ಸಮಾಜ ಕಲ್ಯಾಣ ಇಲಾಖೆಯು ಡಾ.ಬಿ.ಆರ್.ಅಂಬೇಡ್ಕರ್ ಭವನದಲ್ಲಿ ಬುಧವಾರ ಆಯೋಜಿಸಿದ್ದ ಸಂವಿಧಾನ ದಿನಾಚರಣೆ-2025 ಉದ್ಘಾಟಿಸಿ ಅವರು ಮಾತನಾಡಿದರು.

'ಸಂವಿಧಾನಕ್ಕೆ ಮೊದಲು ದೇಶದಲ್ಲಿ ಅಲಿಖಿತ ಮನುಸ್ಮೃತಿ ಜಾರಿಯಲ್ಲಿತ್ತು. ಮನುಸ್ಮೃತಿಯಲ್ಲಿದ್ದ ಮನುಷ್ಯ ವಿರೋಧಿ, ಸಮಾನತೆ ವಿರೋಧಿ ನಿಯಮಗಳಿಗೆ ಅಂಬೇಡ್ಕರ್ ಅವರು ನೀಡಿದ ಸಂವಿಧಾನದಿಂದಾಗಿ ಅವಕಾಶ ಇಲ್ಲದಂತಾಯಿತು. ಅದಕ್ಕೇ ಮನುವಾದಿಗಳು ಸಂವಿಧಾನವನ್ನು ವಿರೋಧಿಸುತ್ತಾರೆ' ಎಂದರು.

'ಸಂವಿಧಾನ ಅಂಬೇಡ್ಕರ್ ಅವರಿಂದ ಆಗಿಲ್ಲ ಎಂದು ಈಗಲೂ ಮನುವಾದಿಗಳು ವಾದಿಸುತ್ತಾರೆ. ಅಂಬೇಡ್ಕರ್ ಅವರೇ ಸಂವಿಧಾನ ಶಿಲ್ಪಿ ಎನ್ನುವುದನ್ನು ಮರೆಯಬಾರದು. ಸ್ವಾತಂತ್ರ್ಯ, ಸಮಾನತೆ, ಭ್ರಾತೃತ್ವದ ಆಶಯಗಳನ್ನು ನೀಡಿದ ಅಂಬೇಡ್ಕರ್ ಅವರು ಸಂವಿಧಾನ ಸಭೆಯಲ್ಲಿ ನೀಡಿದ ಎಚ್ಚರಿಕೆ ಮಾತುಗಳನ್ನು ಎಲ್ಲರೂ ಮನವರಿಕೆ ಮಾಡಿಕೊಳ್ಳಬೇಕು' ಎಂದು ಹೇಳಿದರು.

'ಶೂದ್ರ ವರ್ಗದವರಿಗೆ ಆರ್ಥಿಕ ಶಕ್ತಿ ಬಂದಾಗ ಮಾತ್ರ ಜಾತಿ ದುರ್ಬಲವಾಗುತ್ತದೆ. ಅಸಮಾನತೆ ಇರುವ ದೇಶದಲ್ಲಿ ಸಮಾನತೆ ಸುಲಭವಾಗಿ ಬರುವುದಿಲ್ಲ. ಈ ಕಾರಣಕ್ಕಾಗಿಯೇ ಸಮಾನತೆ ಸಿಗುವವರೆಗೂ ಮೀಸಲಾತಿ ಇರಬೇಕು' ಎಂದು ಅವರು ಪ್ರತಿಪಾದಿಸಿದರು.

ಸಮಾಜ ಕಲ್ಯಾಣ ಸಚಿವ ಡಾ. ಎಚ್‌.ಸಿ. ಮಹದೇವಪ್ಪ ಮಾತನಾಡಿ, 'ಭಾರತ ಶೈಕ್ಷಣಿಕ, ವೈಜ್ಞಾನಿಕವಾಗಿ ಸಾಕಷ್ಟು ಪ್ರಗತಿ ಕಂಡರೂ ಪರಿಪೂರ್ಣ ಅಭಿವೃದ್ಧಿಯನ್ನು ಈವರೆಗೂ ಕಾಣಲು ಆಗಿಲ್ಲ. ಕರ್ನಾಟಕದಲ್ಲಿ ಸಂವಿಧಾನ ಪೀಠಿಕೆಯನ್ನು ಶಾಲೆಯಲ್ಲಿ ಓದುವುದಕ್ಕೆ ಅವಕಾಶ ಮಾಡಿಕೊಡಲಾಯಿತು' ಎಂದು ತಿಳಿಸಿದರು.

ಸಚಿವರಾದ ಕೆ.ಎಚ್.ಮುನಿಯಪ್ಪ, ಡಾ.ಎಂ.ಸಿ.ಸುಧಾಕರ್, ಕಾನೂನು ಸಲಹೆಗಾರ ಎ.ಎಸ್.ಪೊನ್ನಣ್ಣ, ರಾಜಕೀಯ ಕಾರ್ಯದರ್ಶಿ ನಸೀರ್ ಅಹ್ಮದ್, ಸಮಾಜ ಕಲ್ಯಾಣ ಇಲಾಖೆ ಕಾರ್ಯದರ್ಶಿ ಡಿ.ರಂದೀಪ್, ಆಯುಕ್ತ ಕೆ.ರಾಕೇಶ್‌ಕುಮಾರ್ ಉಪಸ್ಥಿತರಿದ್ದರು.

ವಿಧಾನಸೌಧದ ಮೆಟ್ಟಿಲುಗಳಿಂದ ಅಂಬೇಡ್ಕರ್ ಭವನದವರೆಗೆ ವಿದ್ಯಾರ್ಥಿಗಳು ಕಾಲ್ನಡಿಗೆ ಜಾಥಾದಲ್ಲಿ ಭಾಗಿಯಾದರು.

ಇನ್ನಷ್ಟು ಸುದ್ದಿ ▶6 ▶7

ಮುರುಘಾ ಶರಣರು ಖುಲಾಸೆ

ಪೋಕ್ಸೊ ಕಾಯ್ದೆಯಡಿ ದಾಖಲಾಗಿದ್ದ ಮೊದಲ ಪ್ರಕರಣ

ಪ್ರಜಾವಾಣಿ ವಾರ್ತೆ

ಚಿತ್ರದುರ್ಗ: 'ಪೋಕ್ಸೊ' ಕಾಯ್ದೆಯಡಿ ದಾಖಲಾಗಿದ್ದ ಮೊದಲ ಪ್ರಕರಣದಲ್ಲಿ ಪ್ರಮುಖ ಆರೋಪಿಗಳಾಗಿದ್ದ ಶಿವಮೂರ್ತಿ ಮುರುಘಾ ಶರಣರು ಹಾಗೂ ಇತರ ಇಬ್ಬರನ್ನು ಆರೋಪದಿಂದ ಖುಲಾಸೆಗೊಳಿಸಿ ನಗರದ 2ನೇ ಹೆಚ್ಚುವರಿ ಜಿಲ್ಲಾ ಮತ್ತು ಸಿವಿಲ್ ನ್ಯಾಯಾಲಯ ಬುಧವಾರ ಆದೇಶ ಪ್ರಕಟಿಸಿತು.



ಶಿವಮೂರ್ತಿ ಮುರುಘಾ ಶರಣರು

ಶರಣರ ವಿರುದ್ಧ ದಾಖಲಾಗಿದ್ದ 2ನೇ ಪ್ರಕರಣದ ವಿಚಾರಣೆಗೆ ಹೈಕೋರ್ಟ್ ತಡೆನೀಡಿದೆ. ಶಿವಮೂರ್ತಿ ಮುರುಘಾ ಶರಣರು, ಮಠದ ವ್ಯವಸ್ಥಾಪಕ ಪರಮಶಿವಯ್ಯ ಹಾಗೂ ಮಠದ ಹಾಸ್ಟೆಲ್‌ನ ಮಹಿಳಾ ವಾರ್ಡನ್ ರಶ್ಮಿ ಅವರನ್ನು ಕೋರ್ಟ್ ದೋಷಮುಕ್ತಗೊಳಿಸಿತು.

'ಆರೋಪದಿಂದ ಮುಕ್ತಗೊಳಿಸಿ, ಆರೋಪಿಗಳನ್ನು ಖುಲಾಸೆಗೊಳಿಸಲಾಗಿದೆ' ಎಂದು ನ್ಯಾಯಾಧೀಶರಾದ ಚನ್ನಬಸಪ್ಪ ಹಡಪದ ಅವರು ಒಂದು ಸಾಲಿನಲ್ಲಿ ಆದೇಶ ಪ್ರಕಟಿಸಿದರು.

ಸುಪ್ರೀಂ ಕೋರ್ಟ್ ಸೂಚನೆ ಮೇರೆಗೆ ಮೊದಲ ಪ್ರಕರಣದ ವಿಚಾರಣೆ ಸುದೀರ್ಘವಾಗಿ ನಡೆದಿತ್ತು. ಆರೋಪಿಗಳು, ಇಬ್ಬರು ಸಂತ್ರಸ್ತೆಯರು ಹಾಗೂ 14 ಸಾಕ್ಷಿಗಳ ವಿಚಾರಣೆ ನಡೆಸಲಾಗಿತ್ತು. ನ.18ರಂದು ಸಂತ್ರಸ್ತೆಯರ ಪರ ಸರ್ಕಾರಿ ವಕೀಲ ಎಚ್‌.ಆರ್. ಜಗದೀಶ್ ಅಂತಿಮ ವಾದ ಮಂಡಿಸಿದ್ದರು. ಆರೋಪಿಗಳ ಪರ ಸಿ.ವಿ.ನಾಗೇಶ್ ವಾದಿಸಿದ್ದರು.

ಬುಧವಾರ ಬೆಳಿಗ್ಗೆ 10 ಗಂಟೆಗೆ ಆರೋಪಿಗಳು ಕೋರ್ಟ್ ಆವರಣಕ್ಕೆ ಬಂದರು. ಆದೇಶ ಪ್ರಕಟಣೆಯನ್ನು ನ್ಯಾಯಾಧೀಶರು ಮಧ್ಯಾಹ್ನ 2.45ಕ್ಕೆ ಮುಂದೂಡಿದರು. ಆರೋಪಿಗಳು ಅಲ್ಲಿಯವರೆಗೆ ಕೋರ್ಟ್ ಆವರಣದಲ್ಲೇ ಕುಳಿತಿದ್ದರು. ಶರಣರ ಆಪ್ತರು, ಮಠದ ಭಕ್ತರೂ ಇದ್ದರು.

▶6

ಕರ್ನಾಟಕದ ಒಂಬತ್ತು ಜಿಲ್ಲೆಗಳನ್ನು ಒಳಗೊಂಡ ಯೋಜನೆ

ಕೈಗಾರಿಕಾ ಕಾರಿಡಾರ್: ಕೇಂದ್ರ ಒಲವು

ಪ್ರಜಾವಾಣಿ ವಾರ್ತೆ

ನವದೆಹಲಿ: ಕರ್ನಾಟಕದ ಒಂಬತ್ತು ಜಿಲ್ಲೆಗಳನ್ನು ಒಳಗೊಂಡ ರಾಷ್ಟ್ರೀಯ ಕೈಗಾರಿಕಾ ಕಾರಿಡಾರ್ ಅಭಿವೃದ್ಧಿ ಯೋಜನೆಯನ್ನು ಜಾರಿಗೊಳಿಸಲು ಕೇಂದ್ರ ಸರ್ಕಾರ ಉತ್ಸುಕತೆ ತೋರಿದೆ.

ಕರ್ನಾಟಕದ ಕೈಗಾರಿಕೆ ಹಾಗೂ ಸಾಗಣೆ ಕ್ಷೇತ್ರಗಳಿಗೆ ಪರಿವರ್ತನಾತ್ಮಕ ಕಾಯಕಲ್ಪ ನೀಡುವ ಈ ಯೋಜನೆ ಜಾರಿಗೆ ಅಗತ್ಯ ಕ್ರಮ ಕೈಗೊಳ್ಳುವುದಾಗಿ ಕೇಂದ್ರದ ವಾಣಿಜ್ಯ ಮತ್ತು ಕೈಗಾರಿಕಾ ಸಚಿವ ಪೀಯೂಷ್ ಗೋಯಲ್ ತಿಳಿಸಿದ್ದಾರೆ. ಈ ಸಂಬಂಧ ಕೇಂದ್ರ ಭಾರಿ ಕೈಗಾರಿಕೆ ಸಚಿವ ಎಚ್‌.ಡಿ. ಕುಮಾರಸ್ವಾಮಿ ಅವರಿಗೆ ಪತ್ರ ಬರೆದಿರುವ ಅವರು, ಯೋಜನೆ ಅನುಷ್ಠಾನ ಮಾಡಲು ಅಗತ್ಯ ಕ್ರಮ ಕೈಗೊಳ್ಳುವಂತೆ ಸಂಬಂಧಿತ ಇಲಾಖೆಗೆ ಸೂಚಿಸಲಾಗಿದೆ ಎಂದು ತಿಳಿಸಿದ್ದಾರೆ.



> **ಈ ಪ್ರಸ್ತಾವವು ರಾಜ್ಯದ ಅಭಿವೃದ್ಧಿಗೆ ಪರಿವರ್ತನಾತ್ಮಕ ಪರಿಕಲ್ಪನೆ. ಕರ್ನಾಟಕದ ಪ್ರಾದೇಶಿಕ ಸಮತೋಲಿತ ಕೈಗಾರಿಕಾ ಅಭಿವೃದ್ಧಿಗೆ ಇದು ಪೂರಕವಾಗಿದೆ. ಕೇಂದ್ರದ ರಚನಾತ್ಮಕ ನೀತಿಗಳನ್ನು ಕಾರ್ಯರೂಪಕ್ಕೆ ತರುವಲ್ಲಿ ಈ ಯೋಜನೆಯು ಆರಂಭಿಕ ಹೆಜ್ಜೆ.**
> **ಪೀಯೂಷ್ ಗೋಯಲ್,** ವಾಣಿಜ್ಯ ಮತ್ತು ಕೈಗಾರಿಕಾ ಸಚಿವ



> **ಪ್ರಸ್ತಾವಿತ ಈ ಕೈಗಾರಿಕಾ ಪಾರ್ಕ್‌ಗಳು ಭಾರಿ ಪ್ರಮಾಣದಲ್ಲಿ ಉದ್ಯೋಗ ಸೃಷ್ಟಿಸುವ, ಪ್ರಾದೇಶಿಕ ಪೂರೈಕೆ ಸರಪಳಿಯ ಸಂಪರ್ಕಗಳನ್ನು ಮತ್ತಷ್ಟು ಬಲಪಡಿಸಲು ನೆರವಾಗಲಿದೆ. ಹುಬ್ಬಳ್ಳಿ-ಧಾರವಾಡ ಮತ್ತು ಮಂಗಳೂರಿನಲ್ಲಿ ಸಾಗಣೆ ಹಾಗೂ ಉತ್ಪಾದನೆ, ರಾಯಚೂರಿನಲ್ಲಿ ಕೃಷಿ ಸಂಸ್ಕರಣೆ, ಮೈಸೂರು ಮತ್ತು ಕೋಲಾರದಲ್ಲಿ ಮೌಲ್ಯವರ್ಧಿತ ವಲಯಗಳ ವಿಸ್ತರಣೆವರೆಗೆ ವಿಶೇಷ ಕೈಗಾರಿಕಾ ಸಮೂಹಗಳನ್ನು ಉತ್ತೇಜಿಸಲಿದೆ.**
> **ಎಚ್‌.ಡಿ.ಕುಮಾರಸ್ವಾಮಿ,** ಭಾರಿ ಕೈಗಾರಿಕೆ ಸಚಿವ

ನವೆಂಬರ್ 13ರಂದು ಗೋಯಲ್ ಅವರನ್ನು ಭೇಟಿಯಾಗಿದ್ದ ಕುಮಾರಸ್ವಾಮಿ, ಈ ಯೋಜನೆ ಜಾರಿ ಮಾಡಬೇಕೆಂದು ಕೋರಿ ಮನವಿ ಸಲ್ಲಿಸಿ ಮಾತುಕತೆ ನಡೆಸಿದ್ದರು. ಕೈಗಾರಿಕೆ ಕ್ಷೇತ್ರದಲ್ಲಿ ಮುಂಚೂಣಿ ರಾಜ್ಯವಾಗಿರುವ ಕರ್ನಾಟಕದಾದ್ಯಂತ ಸೂಕ್ತ ಕೈಗಾರಿಕಾ ಕಾರಿಡಾರ್ ಯೋಜನೆಯ ಚೌಕಟ್ಟಿನಡಿಯಲ್ಲಿ ಕೈಗಾರಿಕಾ ಪಾರ್ಕ್‌ಗಳನ್ನು ಸ್ಥಾಪಿಸುವ ಕುರಿತು ಮನವೊಲಿಸಿದ್ದರು.

ಪ್ರಾದೇಶಿಕ ಕೈಗಾರಿಕಾ ಬೆಳವಣಿಗೆ ಬಲಪಡಿಸಿ ಉತ್ತೇಜಿಸಲು, ಸಾಗಣೆಕೆಯ ಮೂಲಸೌಕರ್ಯವನ್ನು ಅಧಿಕವಾಗಿ ಅಭಿವೃದ್ಧಿಪಡಿಸಲು ಹಾಗೂ ಕರ್ನಾಟಕದ ಉದ್ದಗಲಕ್ಕೂ ಹೆಚ್ಚಿನ ಪ್ರಮಾಣದಲ್ಲಿ ಉದ್ಯೋಗಾವಕಾಶ ಸೃಷ್ಟಿಸಲು ಈ ಯೋಜನೆಯು ಕೊಡುಗೆ ನೀಡಲಿದೆ ಎಂದು ಸಚಿವರು ತಿಳಿಸಿದ್ದಾರೆ.


ಈ ಯೋಜನೆ ಅನುಷ್ಠಾನಕ್ಕೆ ಬಂದರೆ ರಾಜ್ಯದಲ್ಲಿ ಸರಕು, ಕೈಗಾರಿಕೆ ಉತ್ಪನ್ನಗಳ ಸಾಗಣೆ ಸುಲಭವಾಗಿ ಕೈಗಾರಿಕಾಭಿವೃದ್ಧಿ ವೇಗಗತಿಯಲ್ಲಿ ಸಾಗುತ್ತದೆ. ಉದ್ದೇಶಿತ ಜಿಲ್ಲೆಗಳಲ್ಲಿ ಯೋಜನೆ ಅನುಷ್ಠಾನಕ್ಕೆ ಬಂದರೆ ಇಡೀ ರಾಜ್ಯದ ನಾಲ್ಕು ದಿಕ್ಕುಗಳಿಗೂ ಅನುಕೂಲ ಆಗುತ್ತದೆ ಎಂದು ಅವರು ಮಾಹಿತಿ ನೀಡಿದ್ದಾರೆ.

ನಾಳೆ ಉಡುಪಿಗೆ ಪ್ರಧಾನಿ ಭೇಟಿ

ಉಡುಪಿ: ಇಲ್ಲಿನ ಶ್ರೀಕೃಷ್ಣ ಮಠಕ್ಕೆ ಇದೇ 28ರಂದು ಪ್ರಧಾನಿ ನರೇಂದ್ರ ಮೋದಿ ಭೇಟಿ ನೀಡುವರು ಎಂದು ಪರ್ಯಾಯ ಪುತ್ತಿಗೆ ಮಠಾಧೀಶ ಸುಗುಣೇಂದ್ರ ತೀರ್ಥ ಸ್ವಾಮೀಜಿ ಬುಧವಾರ ತಿಳಿಸಿದರು.

▶6

ಚಿನಕುರುಳಿ ಪ್ರಕಾಶ್ ಶೆಟ್ಟಿ



2030ರ ಕಾಮನ್‌ವೆಲ್ತ್ ಕ್ರೀಡೆ: ಭಾರತದ ಆತಿಥ್ಯ

ಗ್ಲಾಸ್ಗೊ (ಪಿಟಿಐ): ಗುಜರಾತ್‌ನ ಅಹಮದಾಬಾದ್‌ಗೆ 2030ರ ಕಾಮನ್‌ವೆಲ್ತ್ ಕ್ರೀಡೆಗಳ ಆತಿಥ್ಯವನ್ನು ಬುಧವಾರ ಅಧಿಕೃತವಾಗಿ ವಹಿಸಲಾಯಿತು. ಆ ಮೂಲಕ ಸುಮಾರು 15 ವರ್ಷಗಳ ನಂತರ ಬಹುಕ್ರೀಡೆಗಳ ಈ ಕೂಟ ಭಾರತಕ್ಕೆ ಮರಳಲಿದೆ.

2036ರ ಒಲಿಂಪಿಕ್ಸ್ ಆತಿಥ್ಯ ವಹಿಸುವ ಭಾರತದ ಮಹತ್ವಾಕಾಂಕ್ಷೆಗೂ ಈ ಆತಿಥ್ಯವು ಇಂಬು ನೀಡಲಿದೆ. ಇದನ್ನೂ ಅಹಮದಾಬಾದಿನಲ್ಲಿ ನಡೆಸಲು ಯೋಚಿಸಲಾಗಿದೆ.

ಕಾಮನ್‌ವೆಲ್ತ್ ಸ್ಪೋರ್ಟ್ಸ್ ಸಾಮಾನ್ಯ ಸಭೆಯಲ್ಲಿ 74 ಸದಸ್ಯರು ಭಾರತ ಬಿಡ್‌ಗೆ ಅಂಗೀಕಾರದ ಮುದ್ರೆ ಒತ್ತಿದರು. ಕಾಮನ್‌ವೆಲ್ತ್ ಕ್ರೀಡೆಗಳ ಕಾರ್ಯನಿರ್ವಾಹಕ ಮಂಡಳಿಯು ಕಳೆದ ತಿಂಗಳಷ್ಟೇ ಅಹಮದಾಬಾದ್ ನಗರವನ್ನು ಆತಿಥ್ಯಕ್ಕೆ ಶಿಫಾರಸು ಮಾಡಿತ್ತು. ಇದರ ಬೆನ್ನಲ್ಲೇ ಕಾಮನ್‌ವೆಲ್ತ್ ಕ್ರೀಡಾ ಮೌಲ್ಯಮಾಪನ ಸಮಿತಿಯು ಬಿಡ್ ಪರಿಶೀಲನೆ ಪ್ರಕ್ರಿಯೆ ನಡೆಸಿತ್ತು. ಭಾರತ ಈ ಹಿಂದೆ 2010ರಲ್ಲಿ ದೆಹಲಿಯಲ್ಲಿ ಕೊನೆಯ ಬಾರಿ ಕಾಮನ್‌ವೆಲ್ತ್ ಕ್ರೀಡೆಗಳನ್ನು ನಡೆಸಿತ್ತು.

2030ರ ಆವೃತ್ತಿಯು ಶತಮಾನೋತ್ಸವ ಆವೃತ್ತಿಯೂ ಆಗಲಿದೆ. ಮೊದಲ ಕಾಮನ್‌ವೆಲ್ತ್ ಕ್ರೀಡೆಗಳು (ಆಗಿನ ಹೆಸರು: ಬ್ರಿಟಿಷ್ ಎಂಪೈರ್ ಗೇಮ್ಸ್) 1930ರಲ್ಲಿ ಕೆನಡಾದ ಹ್ಯಾಮಿಲ್ಟನ್‌ನಲ್ಲಿ ನಡೆದಿದ್ದವು.

ಒಂದು ದಶಕದಿಂದ ಅಹಮದಾಬಾದಿನಲ್ಲಿ ಕ್ರೀಡಾ ಮೂಲಸೌಕರ್ಯಗಳನ್ನು ಸಮರೋಪಾದಿಯಲ್ಲಿ ಮೇಲ್ದರ್ಜೆಗೇರಿಸಲಾಗುತ್ತಿದ್ದು, ಪ್ರಮುಖ ಕ್ರೀಡಾ ಕೇಂದ್ರವನ್ನಾಗಿ ಸಜ್ಜುಗೊಳಿಸಲಾಗುತ್ತಿದೆ.

'ಸರ್ದಾರ್ ವಲ್ಲಭಭಾಯಿ ಪಟೇಲ್ ಸ್ಪೋರ್ಟ್ಸ್ ಎನ್‌ಕ್ಲೇವ್ ಮತ್ತು ಗುಜರಾತ್ ಪೊಲೀಸ್ ಅಕಾಡೆಮಿ ಸೇರಿದಂತೆ ನಾವು ಅಲ್ಲಿ ವಿಶ್ವ ದರ್ಜೆಯ ಕ್ರೀಡಾ ಮೂಲಸೌಕರ್ಯಗಳನ್ನು ನಿರ್ಮಿಸುತ್ತಿದ್ದೇವೆ. ಇಲ್ಲಿ ಪರಂಪರೆಯು ಆಧುನಿಕತೆಯೊಡನೆ ಸಮ್ಮಿಳಿತವಾಗುತ್ತಿದೆ' ಎಂದು ಸಭೆಯ ನಂತರ ಗುಜರಾತ್‌ನ ಉಪ ಮುಖ್ಯಮಂತ್ರಿ ಹರ್ಷ ಸಾಂಘವಿ ತಿಳಿಸಿದರು. ಅವರು ಕ್ರೀಡಾ ಖಾತೆಯನ್ನೂ ಹೊಂದಿದ್ದಾರೆ.

▶12

'ಅತಿಥಿ'ಗಳ ನೇಮಕ: ಅಂಗವಿಕಲ ಪ್ರಮಾಣಪತ್ರ ಸಲ್ಲಿಸಿದವರಿಗೆ ಮೊದಲ ಸುತ್ತಿನಲ್ಲೇ ಆಯ್ಕೆ ಅವಕಾಶ

ಅಂಗವಿಕಲ ಅಭ್ಯರ್ಥಿಗಳು ದಿಢೀರ್ ಹೆಚ್ಚಳ

● ಚಂದ್ರಹಾಸ ಹಿರೇಮಳಲಿ

ಬೆಂಗಳೂರು: ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಿಗೆ ಯುಜಿಸಿ ವಿದ್ಯಾರ್ಹತೆ ಇರುವ ಅತಿಥಿ ಉಪನ್ಯಾಸಕರ ನೇಮಕಾತಿ ಪ್ರಕ್ರಿಯೆ ಆರಂಭವಾಗಿದ್ದು, ಅಂಗವಿಕಲ ಅಭ್ಯರ್ಥಿಗಳ ಸಂಖ್ಯೆಯಲ್ಲಿ ದಿಢೀರ್ ಹೆಚ್ಚಳವಾಗಿದೆ.

ವಿವಿಧ ಅರ್ಹತೆಗಳಿಗೆ ನೀಡುವ ಕೃಪಾಂಕ ಪರಿಗಣಿಸದೆ ಅರ್ಜಿ ಸಲ್ಲಿಸಿದ ಎಲ್ಲ ಅಂಗವಿಕಲ ಅಭ್ಯರ್ಥಿಗಳನ್ನು ಮೊದಲ ಸುತ್ತಿನಲ್ಲೇ ಆಯ್ಕೆ ಮಾಡುವಂತೆ ಕಾಲೇಜು ಶಿಕ್ಷಣ ಇಲಾಖೆ ಸೂಚಿಸಿದೆ. ಬಹುತೇಕ ಅಭ್ಯರ್ಥಿಗಳು ಅಂಗವಿಕಲ ಪ್ರಮಾಣಪತ್ರಗಳನ್ನು ಸಲ್ಲಿಸಿ, ಆ ಕೋಟಾದ ಅಡಿ ಸ್ಥಾನ ಪಡೆಯಲು ಪೈಪೋಟಿಗೆ ಇಳಿದಿದ್ದಾರೆ.

ಅತ್ಯಂತ ಕಡಿಮೆ ಗೌರವಧನಕ್ಕೆ ಎರಡು ದಶಕಗಳಿಂದ ಕೆಲಸ ಮಾಡುತ್ತಾ ಬಂದಿರುವ ಅತಿಥಿ ಉಪನ್ಯಾಸಕರಿಗೆ ಸೇವಾ ಭದ್ರತೆ ನೀಡುವುದಕ್ಕಾಗಿ ಶೈಕ್ಷಣಿಕ ಅರ್ಹತೆ ಹಾಗೂ ಸೇವಾ ಅನುಭವದ ಆಧಾರದಲ್ಲಿ ಕೃಪಾಂಕಗಳನ್ನು ನಿಗದಿ ಮಾಡಿ ಕಾಲೇಜು ಶಿಕ್ಷಣ ಇಲಾಖೆ ಕೆಲ ವರ್ಷಗಳ ಹಿಂದೆಯೇ ಸುತ್ತೋಲೆ ಹೊರಡಿಸಿತ್ತು. ಆಯಾ ವಿಷಯಗಳಿಗೆ ಅರ್ಜಿ ಸಲ್ಲಿಸುವವರು ಸ್ನಾತಕೋತ್ತರ ಪದವಿಯಲ್ಲಿ ಪಡೆದ ಶೇಕಡವಾರು ಅಂಕಗಳಲ್ಲಿ ಶೇ 25 ನಿಗದಿ ಮಾಡಲಾಗಿದೆ (ಒಬ್ಬ ಅಭ್ಯರ್ಥಿ ಶೇ 60 ಅಂಕ ಪಡೆದಿದ್ದರೆ ಅದನ್ನು 15 ಅಂಕಗಳು ಎಂದು ಪರಿಗಣಿಸಲಾಗುತ್ತದೆ). ಪಿಎಚ್‌.ಡಿ, ನೀಟ್, ಎಂ.ಫಿಲ್ ಪದವಿಗಳಿಗೆ 27 ಅಂಕಗಳು ಹಾಗೂ ಪ್ರತಿ ವರ್ಷದ ಸೇವಾನುಭವಕ್ಕೆ 3 ಅಂಕಗಳಂತೆ ಗರಿಷ್ಠ 16 ವರ್ಷಗಳಿಗೆ 48 ಅಂಕಗಳನ್ನು ನಿಗದಿ ಮಾಡಲಾಗಿದೆ.

'ಶೈಕ್ಷಣಿಕ ಅರ್ಹತೆ ಹಾಗೂ ಕೆಲಸದ ಅನುಭವದ ಅಂಕಗಳ ಜತೆಗೆ, ಅಭ್ಯರ್ಥಿ ಅಂಗವಿಕಲರಾಗಿದ್ದರೆ ಹೆಚ್ಚುವರಿ 10 ಅಂಕಗಳನ್ನು ನೀಡಲಾಗುತ್ತದೆ. ಈ ಎಲ್ಲ ಅಂಕಗಳನ್ನೂ ಸೇರಿಸಿ ಜ್ಯೇಷ್ಠತಾ ಪಟ್ಟಿ ಸಿದ್ಧಪಡಿಸಿ, ಕೌನ್ಸೆಲಿಂಗ್ ಮೂಲಕ ಸ್ಥಳ ನಿಯುಕ್ತಿ ಮಾಡಲಾಗುತ್ತಿತ್ತು. ಆದರೆ, ಇದೇ ಮೊದಲ ಬಾರಿ ಕಾಲೇಜು ಶಿಕ್ಷಣ ಇಲಾಖೆ ಶೈಕ್ಷಣಿಕ ಅರ್ಹತೆ ಹಾಗೂ ಸೇವಾ ಅನುಭವ ಬದಿಗಿಟ್ಟು, ಅಂಗವಿಕಲ ಪ್ರಮಾಣಪತ್ರ ಇದ್ದ ಎಲ್ಲರಿಗೂ ಮೊದಲ ಸುತ್ತಿನಲ್ಲೇ ಸ್ಥಳ ಆಯ್ಕೆಯ ಅವಕಾಶ ನೀಡಿದೆ. ಈ ಅವಕಾಶದ ದುರ್ಬಳಕೆ ಮಾಡಿಕೊಂಡ ಹಲವರು ನಕಲಿ ಪ್ರಮಾಣಪತ್ರ ಪಡೆದು ಆಯ್ಕೆಯಾಗುತ್ತಿದ್ದಾರೆ. ಬಹುತೇಕ ಕಾಲೇಜುಗಳಲ್ಲಿ ಇದ್ದ ಒಂದು ಎರಡು ಖಾಲಿ ಹುದ್ದೆಗಳಿಗೆ ಅಂಗವಿಕಲರನ್ನೇ ತುಂಬಲಾಗಿದೆ. ಇದು ಅನ್ಯಾಯದ ಪರಮಾವಧಿ' ಎನ್ನುತ್ತಾರೆ ಅತಿಥಿ ಉಪನ್ಯಾಸಕ ಆರ್. ಎಂ.ಪಾಟೀಲ.

'ಕಳೆದ ಕೆಲ ವರ್ಷಗಳಿಂದ ಈಚೆಗೆ ಪಿಎಚ್‌.ಡಿ ಪಡೆದವರ ಸಂಖ್ಯೆ ಗಣನೀಯವಾಗಿ ಹೆಚ್ಚಳವಾಗಿದೆ. ಅವುಗಳಲ್ಲಿ ಶೇ 70ರಷ್ಟು ಹೊರ ರಾಜ್ಯಗಳಿಂದ ಪಡೆದ ನಕಲಿ ಪಿಎಚ್‌.ಡಿಗಳಾಗಿವೆ. ಈಗ ನಕಲಿ ಅಂಗವಿಕಲರ ಪ್ರಮಾಣಪತ್ರದ ಹಾವಳಿ ಆರಂಭವಾಗಿದೆ' ಎಂದು ಆರೋಪಿಸುತ್ತಾರೆ ಉಪನ್ಯಾಸಕಿ ರಶ್ಮಿ.

16ರಷ್ಟು ಅಂಗವಿಕಲ ಅಭ್ಯರ್ಥಿಗಳು ಆಯ್ಕೆ

ಯುಜಿಸಿ ಅರ್ಹತೆ ಇಲ್ಲದವರನ್ನು ಕೈಬಿಟ್ಟ ನಂತರ ಐದು ಸಾವಿರಕ್ಕೂ ಹೆಚ್ಚು ಅತಿಥಿ ಉಪನ್ಯಾಸಕ ಸ್ಥಾನಗಳು ಉಳಿದಿವೆ. ಹಿಂದಿನ ವರ್ಷದಲ್ಲಿ ಕೆಲಸ ಮಾಡಿದ್ದ ಯುಜಿಸಿ ಅರ್ಹತೆ ಇರುವ ಸ್ಥಾನಗಳನ್ನೂ ಸೇರಿಸಿ 10 ಸಾವಿರಕ್ಕೂ ಹೆಚ್ಚು ಸ್ಥಾನಗಳಿಗೆ ನ.24ರಿಂದ ಕೌನ್ಸೆಲಿಂಗ್ ನಡೆಯುತ್ತಿದ್ದು, ಅವುಗಳಲ್ಲಿ ಶೇ 20ರಷ್ಟು ಅಂಗವಿಕಲ ಅಭ್ಯರ್ಥಿಗಳ ಪಾಲಾಗಿವೆ.

'ಅಂಗವಿಕಲರಿಗೆ ಮೀಸಲಾದ ಕೋಟಾದಂತೆ ಖಾಲಿ ಸ್ಥಾನಗಳನ್ನು ಭರ್ತಿ ಮಾಡಬೇಕು. ಅರ್ಜಿ ಸಲ್ಲಿಸಿದ ಎಲ್ಲರಿಗೂ ಮೊದಲ ಸುತ್ತಿನಲ್ಲೇ ಅವಕಾಶ ನೀಡಿದರೆ ಇತರರಿಗೆ ಅವಕಾಶವೇ ಸಿಗುವುದಿಲ್ಲ. ಇದೇ ನಿಯಮ ಮುಂದುವರಿದರೆ ಹಣ ಕೊಟ್ಟು ನಕಲಿ ಪ್ರಮಾಣಪತ್ರ ಪಡೆಯುವವರ ಸಂಖ್ಯೆ ಏರಿಕೆಯಾಗುತ್ತಲೇ ಹೋಗುತ್ತದೆ' ಎನ್ನುತ್ತಾರೆ ಅತಿಥಿ ಉಪನ್ಯಾಸಕ ರಮೇಶ್.

ಅಂಕಿ ಅಂಶಗಳು

440
ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳು

10,424
2025-25ನೇ ಸಾಲಿಗೆ ಆಯ್ಕೆ ಮಾಡುತ್ತಿರುವ ಅತಿಥಿ ಉಪನ್ಯಾಸಕರು

1,619
ಅಂಗವಿಕಲ ಪ್ರಮಾಣಪತ್ರ ಸಲ್ಲಿಸಿದವರು

> **ಅಂಗವಿಕಲ ಪ್ರಮಾಣಪತ್ರಗಳನ್ನು ಜಿಲ್ಲಾ ವೈದ್ಯಕೀಯ ಮಂಡಳಿಯಿಂದ ಪರಿಶೀಲನೆಗೆ ಒಳಪಡಿಸಲಾಗುವುದು. ನಕಲಿಯಾದರೆ ಅವರನ್ನು ವಜಾಗೊಳಿಸಲಾಗುವುದು**
> **ಕೆ.ಎನ್.ಮಂಜುಶ್ರೀ,** ಆಯುಕ್ತೆ, ಕಾಲೇಜು ಶಿಕ್ಷಣ ಇಲಾಖೆ

> **ಅತಿಥಿ ಉಪನ್ಯಾಸಕರ ಆಯ್ಕೆ ಪ್ರಕ್ರಿಯೆಯಲ್ಲಿ ಕಾಲೇಜು ಶಿಕ್ಷಣ ಇಲಾಖೆ ಎಲ್ಲ ನಿಯಮಗಳನ್ನೂ ಗಾಳಿಗೆ ತೂರಿದೆ**
> **ಎಚ್‌.ಸೋಮಶೇಖರ ಶಿಮೊಗ್ಗಿ,** ಅಧ್ಯಕ್ಷ, ಅತಿಥಿ ಉಪನ್ಯಾಸಕರ ರಾಜ್ಯ ಸಮನ್ವಯ ಸಮಿತಿ

ಹವಾಮಾನ ಮುನ್ಸೂಚನೆ: ನಗರದಲ್ಲಿ ಭಾಗಶಃ ಮೋಡ ಕವಿದ ವಾತಾವರಣ ಇರಲಿದೆ.

ಅಪಘಾತ: ಮೃತರ ಸಂಖ್ಯೆ 4ಕ್ಕೆ ಏರಿಕೆ

ಕಲಬುರಗಿ/ಜೇವರ್ಗಿ: ಜೇವರ್ಗಿ ಸಮೀಪ ರಾಷ್ಟ್ರೀಯ ಹೆದ್ದಾರಿ–50ರಲ್ಲಿ ಮಂಗಳವಾರ ನಡೆದ ಕಾರು ಅಪಘಾತದಲ್ಲಿ ಗಾಯಗೊಂಡಿದ್ದ ಈರಣ್ಣ ಶಿರಸಂಗಿ ಬುಧವಾರ ಮೃತಪಟ್ಟಿದ್ದಾರೆ. ಮೃತರ ಸಂಖ್ಯೆ ನಾಲ್ಕಕ್ಕೆ ಏರಿದೆ. ಕಾರಿನ ಚಾಲಕ ಆಂಥೋನಿಯಾ ರಾಜ್ ಆರೋಗ್ಯ ಸ್ಥಿರವಾಗಿದೆ. ಐಎಎಸ್ ಅಧಿಕಾರಿ ಮಹಾಂತೇಶ ಬೀಳಗಿ ಸೇರಿ ಮೂವರು ಮಂಗಳವಾರ ಮೃತಪಟ್ಟಿದ್ದರು.

ಕೈದಿಗಳಿಂದ ಮದ್ಯ ತಯಾರಿಕೆ?

ಬ್ಯಾರಕ್‌ನಲ್ಲಿ ಕೊಳೆತ ಹಣ್ಣು ಪತ್ತೆ • ಜಾಲತಾಣದಲ್ಲಿ ಹರಿದಾಡಿದ ವಿಡಿಯೊ

ಪ್ರಜಾವಾಣಿ ವಾರ್ತೆ



ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹ

ಬೆಂಗಳೂರು: ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿರುವ ಸಜಾ ಬಂದಿಗಳು ಹಾಗೂ ವಿಚಾರಣಾಧೀನ ಕೈದಿಗಳನ್ನು ಇರಿಸಲಾಗಿರುವ ಬ್ಯಾರಕ್‌ವೊಂದರಲ್ಲಿ ಕೊಳೆತ ಹಣ್ಣುಗಳನ್ನು ದಾಸ್ತಾನು ಮಾಡಿಕೊಂಡಿರುವ ವಿಡಿಯೊವೊಂದು ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿದೆ.

ಕಳ್ಳಬಟ್ಟಿ ಮಾದರಿಯಲ್ಲಿ ನಶೆ ಏರಿಸುವ ಮದ್ಯವನ್ನು ಜೈಲಿನ ಬ್ಯಾರಕ್‌ನಲ್ಲಿ ಕೈದಿಗಳು ತಯಾರಿಕೆ ಮಾಡಿಕೊಳ್ಳುತ್ತಿದ್ದರೇ ಎಂಬ ಅನುಮಾನ ವ್ಯಕ್ತವಾಗಿದೆ.

ಕೊಳೆತ ದ್ರಾಕ್ಷಿ, ಸೇಬು ಹಾಗೂ ಗೋಧಿ, ಸಕ್ಕರೆ, ತಂಬಾಕು ಉತ್ಪನ್ನ ಸಂಗ್ರಹ ಮಾಡಿಕೊಂಡಿರುವುದು ಪತ್ತೆ ಆಗಿದೆ. ಈ ಹಣ್ಣುಗಳನ್ನು ಶೇಖರಿಸಿಕೊಂಡು ಮದ್ಯವನ್ನು ತಯಾರು ಮಾಡುಲಾಗುತ್ತಿತ್ತೇ ಎಂಬ ಅನುಮಾನ ವ್ಯಕ್ತವಾಗಿದ್ದು, ವಿಡಿಯೊ ದೃಶ್ಯಾವಳಿ ಆಧರಿಸಿ ಪರಿಶೀಲನೆ ನಡೆಸಲಾಗುತ್ತಿದೆ.

ಅತ್ಯಾಚಾರ, ಸರಣಿ ಕೊಲೆಯ ಪಾತಕಿ ಉಮೇಶ್ ರೆಡ್ಡಿ, ಇಸ್ಲಾಮಿಕ್ ಸ್ಟೇಟ್ (ಐಎಸ್) ಭಯೋತ್ಪಾದಕ ಸಂಘಟನೆಯ ಉಗ್ರ ಜುಹಾದ್ ಹಮೀದ್ ಶಕೀಲ್ ಮನ್ನಾ, ದುಬೈನಿಂದ ಚಿನ್ನ ಕಳ್ಳಸಾಗಣೆ ಮಾಡಿದ ಪ್ರಕರಣದ ಆರೋಪಿ ತರುಣ್ ರಾಜ್ ತಾವಿರುವ ಬ್ಯಾರಕ್‌ನಲ್ಲಿ ಮೊಬೈಲ್ ಹಿಡಿದು ಮಾತನಾಡುತ್ತಿರುವ, ಟಿ.ವಿ ವೀಕ್ಷಣೆ ಮಾಡುತ್ತಿರುವ ವಿಡಿಯೊಗಳು ಸಾಮಾಜಿಕ ಜಾಲತಾಣದಲ್ಲಿ ಇತ್ತೀಚೆಗಷ್ಟೇ ಹರಿದಾಡಿದ್ದವು. ಅದರ ಬೆನ್ನಲ್ಲೇ, ಮಾಂಸ, ಮದ್ಯ ಸೇವಿಸಿ ಜೈಲಿನಲ್ಲಿ ವಿಚಾರಣಾಧೀನ ಕೈದಿಗಳು ನೃತ್ಯ ಮಾಡುತ್ತಿರುವ ವಿಡಿಯೊವೊಂದು ಜಾಲತಾಣದಲ್ಲಿ ಹರಿದಾಡಿತ್ತು.

ಪ್ರಕರಣದ ತನಿಖೆಗೆ ಕಾನೂನು ಸುವ್ಯವಸ್ಥೆ ಎಡಿಜಿಪಿ ಹಿತೇಂದ್ರ ಅವರ ನೇತೃತ್ವದ ಉನ್ನತಮಟ್ಟದ ಸಮಿತಿ ರಚಿಸಲಾಗಿದ್ದು, ಸಮಿತಿ ತನಿಖೆ ಆರಂಭಿಸಿದೆ. ತನಿಖೆ ನಡೆಸಲು ಮುಂದಾದ ಪೊಲೀಸರಿಗೆ ಮತ್ತೊಂದು ವಿಡಿಯೊ ಲಭಿಸಿದ್ದು, ಜೈಲಿನ ಒಳಗೆ ನಡೆಯುತ್ತಿರುವ ಅಕ್ರಮ ಚಟುವಟಿಕೆಗಳು ಒಂದೊಂದೇ ಬಯಲಾಗುತ್ತಿವೆ.

ಅಪರಾಧ ಸುದ್ದಿ

‘ಒಂದು ತಂಡ ಕೊಳೆತ ಹಣ್ಣುಗಳನ್ನು ತರಿಸುತ್ತಿತ್ತು. ಮತ್ತೊಂದು ತಂಡವು, ಆ ಹಣ್ಣುಗಳನ್ನು ಬಳಸಿ ಮದ್ಯ ತಯಾರಿಸುತ್ತಿತ್ತು ಎಂದು ಹೇಳಲಾಗಿದೆ. ಈ ಹಣ್ಣುಗಳನ್ನು ಯಾರು ತಂದುಕೊಡುತ್ತಿದ್ದರು? ಯೀಸ್ಟ್ ಅನ್ನು ಯಾರು ಪೂರೈಸುತ್ತಿದ್ದರು ಎಂಬುದರ ಕುರಿತು ತನಿಖೆ ನಡೆಸಲಾಗುತ್ತಿದೆ’ ಎಂದು ಮೂಲಗಳು ಹೇಳಿವೆ.

‘ಕಳ್ಳಬಟ್ಟಿ ಪ್ರಕರಣದಲ್ಲಿ ಬಂಧನಕ್ಕೆ ಒಳಗಾಗಿ ಜೈಲು ಸೇರಿರುವ ಆರೋಪಿಗಳನ್ನು ಬಳಸಿಕೊಂಡು ನಶೆ ಏರಿಸುವ ಪದಾರ್ಥ ತಯಾರಿಕೆ ಮಾಡಲಾಗುತಿತ್ತು. ಪೊಲೀಸ್ ದಾಳಿ ವೇಳೆ ಕೈದಿಗಳ ಕೃತ್ಯ ಬಯಲಾಗಿದೆ. ಹೊಸ ವರ್ಷ, ಕೈದಿಗಳ ಜನ್ಮ ದಿನಾಚರಣೆಗೆಂದು ಈ ರೀತಿಯ ಮದ್ಯ ತಯಾರಿಕೆ ಮಾಡಿಕೊಂಡಿದ್ದಾರೆ ಎಂದು ಹೇಳಲಾಗಿದೆ. ಹಣ್ಣುಗಳನ್ನು 28 ದಿನ ಕೊಳೆಸಿ ಅಮಲು ಬರುವ ಉತ್ಪನ್ನ ತಯಾರಿಸಿಕೊಳ್ಳುತ್ತಿದ್ದರು’ ಎಂದು ಹೇಳಲಾಗಿದೆ.

ಕೊಳೆತ ಹಣ್ಣುಗಳಿಂದ ಬರುವ ರಸಕ್ಕೆ ಅಮಲು ಪದಾರ್ಥ ಸೇರಿಸಿ, ಮದ್ಯದಂತೆ ಬಾಟಲಿಯಲ್ಲಿ ಶೇಖರಿಸಿ ಇರಿಸಿಕೊಂಡಿರುವ ದೃಶ್ಯಗಳೂ ಇವೆ.

ವಿಡಿಯೊ ಇಟ್ಟುಕೊಂಡು ಬೆದರಿಕೆ

ಮದ್ಯ ಕುಡಿದು ನೃತ್ಯ ಮಾಡುವ ಹಾಗೂ ಮದ್ಯ ತಯಾರಿಸುವ ದೃಶ್ಯವನ್ನು ಕೈದಿಗಳೇ ಚಿತ್ರೀಕರಿಸಿ ಹೊರಗಿರುವ ತಮ್ಮ ಸಹಚರರಿಗೆ ಕಳುಹಿಸಿದ್ದರು. ಬ್ಯಾರಕ್‌ನಲ್ಲಿ ನಡೆಯುತ್ತಿರುವ ಅಕ್ರಮ ಚಟುವಟಿಕೆಯ ವಿಡಿಯೊವನ್ನು ಸಹಚರರ ಮೂಲಕ ಸಾಮಾಜಿಕ ಜಾಲತಾಣದಲ್ಲಿ ಹಾಕಿಸುವುದಾಗಿ ಜೈಲು ಅಧಿಕಾರಿಗಳಿಗೆ ಕೈದಿಗಳು ಬೆದರಿಕೆ ಹಾಕುತ್ತಿದ್ದರು ಎಂಬುದು ಗೊತ್ತಾಗಿದೆ.



ಬಾಟಲಿಯಲ್ಲಿ ತುಂಬಿರುವ ಮದ್ಯ

ತಂತಿ ಬೇಲಿಗೆ ಸಿಲುಕಿದ್ದ ಕರಡಿ ರಕ್ಷಣೆ



ದಾಬಸ್‌ಪೇಟೆ: ರೈತರ ತೋಟದ ರಕ್ಷಣೆಗೆ ಹಾಕಿದ್ದ ಮುಳ್ಳು ತಂತಿ ಬೇಲಿಗೆ ಸಿಲುಕಿಕೊಂಡ ಕರಡಿಯನ್ನು ನೆಲಮಂಗಲ ತಾಲ್ಲೂಕು ವಲಯ ಅರಣ್ಯ ಅಧಿಕಾರಿಗಳು ರಕ್ಷಣೆ ಮಾಡಿದ್ದಾರೆ.

ಶಿವಗಂಗೆ ತಪ್ಪಲಿಗೆ ಹೊಂದಿಕೊಂಡ ಕಂಬಾಳು ಗೊಲ್ಲರಹಟ್ಟಿ ರೈತರಾದ ಅಣ್ಣಯ್ಯಪ್ಪ ಹಾಗೂ ಚಿಟ್ಟಿಬಾಬು ಅವರ ತೋಟದ ತಂತಿ ಬೇಲಿಗೆ ಸಿಲುಕಿದ್ದ ಕರಡಿ ಬಿಡಿಸಿಕೊಳ್ಳಲು ಆಗದೆ ಇಡೀ ರಾತ್ರಿ ನರಳಿದೆ. ಕರಡಿ ತಂತಿ ಬೇಲಿಗೆ ಸಿಲುಕಿರುವುದನ್ನು ಕಂಡ ಸಾರ್ವಜನಿಕರು ಅರಣ್ಯ ಇಲಾಖೆಗೆ ಮಾಹಿತಿ ನೀಡಿದ್ದು, ಅಧಿಕಾರಿಗಳು ಕರಡಿಗೆ ಅರಿವಳಿಕೆ ಚುಚ್ಚುಮದ್ದು ನೀಡಿ ಸೆರೆ ಹಿಡಿದರು.

ಸಹಾಯಕ ಅರಣ್ಯ ಸಂರಕ್ಷಣಾ ಅಧಿಕಾರಿ ಸೈಯದ್ ನಿಜಾಮುದ್ದೀನ್, ದೊಡ್ಡಬಳ್ಳಾಪುರ ವಲಯ ಅರಣ್ಯ ಅಧಿಕಾರಿ ಮಂಜುನಾಥ್, ನೆಲಮಂಗಲ ಉಪವಲಯ ಅರಣ್ಯ ಅಧಿಕಾರಿ ಮಲ್ಲಿಕಾರ್ಜುನ್, ಪ್ರವೀಣ್ ಕುಮಾರ್, ರಾಜು ಭಾಗವಹಿಸಿದ್ದರು.

ಸುದ್ದಿ 2 ನಿಮಿಷ

₹ 7.11 ಕೋಟಿ ದರೋಡೆ ಪ್ರಕರಣ ಮಾರುವೇಷದ ಕಾರ್ಯಾಚರಣೆ

ಬೆಂಗಳೂರು: ಎಟಿಎಂ ಕೇಂದ್ರಕ್ಕೆ ಹಣ ತುಂಬಿಸಲು ತೆರಳುತ್ತಿದ್ದ ಸಿಎಂಎಸ್ ಏಜೆನ್ಸಿ ವಾಹನ ಅಡ್ಡಗಟ್ಟಿ ₹7.11 ಕೋಟಿ ದರೋಡೆ ಪ್ರಕರಣದಲ್ಲಿ ಸಿದ್ದಾಪುರ ಠಾಣೆಯ ಪೊಲೀಸರು, ಹೊರ ರಾಜ್ಯದ ಟೋಲ್‌ವೊಂದರಲ್ಲಿ ಮಾರುವೇಷದಲ್ಲಿ ಕಾರ್ಯಾಚರಣೆ ನಡೆಸಿ ಆರೋಪಿಯೊಬ್ಬನನ್ನು ಬಂಧಿಸಿದ್ದಾರೆ.

ಸಿದ್ದಾಪುರ ಪೊಲೀಸ್ ಠಾಣಾ ವ್ಯಾಪ್ತಿಯ ಡೇರಿ ವೃತ್ತದ ಮೇಲ್ಸೇತುವೆಯಲ್ಲಿ ನ.19ರಂದು ವಾಹನ ಅಡ್ಡಗಟ್ಟಿ ದರೋಡೆ ನಡೆಸಲಾಗಿತ್ತು. ದರೋಡೆಯ ಬಳಿಕ ಆರೋಪಿಗಳು ಆಂಧ್ರಪ್ರದೇಶದತ್ತ ಹೊರಟಿದ್ದರು. ಮಾರ್ಗದ ಮಧ್ಯೆ ಇನೊವಾಗೆ ನಕಲಿ ನಂಬರ್ ಪ್ಲೇಟ್ ಅಳವಡಿಸಿಕೊಂಡಿದ್ದರು. ಖಚಿತ ಮಾಹಿತಿ ಆಧರಿಸಿ ಹೊರರಾಜ್ಯಕ್ಕೆ ಪೊಲೀಸ್ ತಂಡ ತೆರಳಿತ್ತು.

ದರೋಡೆ ಗುಂಪಿನಲ್ಲಿದ್ದ ಚಾಲಕನನ್ನು ಶೇಖ್‌ಪುರ ಟೋಲ್‌ನಲ್ಲಿ ಮಾರುವೇಷದಲ್ಲಿ ಕಾರ್ಯಾಚರಣೆಯಲ್ಲಿದ್ದ ಪೊಲೀಸರು ವಶಕ್ಕೆ ಪಡೆದುಕೊಂಡಿದ್ದರು. ಆ ಚಾಲಕ ನೀಡಿದ ಮಾಹಿತಿ ಆಧರಿಸಿ ಆಂಧ್ರಪ್ರದೇಶದ ಲಾಡ್ಜ್‌ನಲ್ಲಿ ಉಳಿದುಕೊಂಡಿದ್ದ ಇತರೆ ಆರೋಪಿಗಳನ್ನು ಬಂಧಿಸಲಾಯಿತು ಎಂದು ಮೂಲಗಳು ಹೇಳಿವೆ.

‘ದರೋಡೆಗೆ ಮೂರು ತಿಂಗಳಿಂದ ಆರೋಪಿಗಳು ಸಂಚು ರೂಪಿಸಿದ್ದರು ಎಂಬುದು ಗೊತ್ತಾಗಿದೆ. ದರೋಡೆ ಮಾಡಿದ ಹಣವನ್ನು ಚಿತ್ತೂರಿನಲ್ಲಿ ಬಚ್ಚಿಟ್ಟು ಬೆಂಗಳೂರಿಗೆ ಬಂದು ತಮ್ಮ ಕೆಲಸದಲ್ಲಿ ತೊಡಗಬೇಕು ಎಂದು ರವಿ ನಿರ್ಧರಿಸಿದ್ದ. ಕೆಲವು ದಿನ ಕಳೆದ ಮೇಲೆ ಹಣ ಹಂಚಿಕೊಳ್ಳಬೇಕು ಎಂಬ ಯೋಜನೆಯನ್ನು ಎಲ್ಲ ಆರೋಪಿಗಳು ಸೇರಿಕೊಂಡು ರೂಪಿಸಿದ್ದರು ಎಂಬುದು ಗೊತ್ತಾಗಿದೆ.

ಒಂಬತ್ತು ಆರೋಪಿಗಳನ್ನು ಕಸ್ಟಡಿಗೆ ಪಡೆದುಕೊಂಡಿರುವ ಪೊಲೀಸರು ಪ್ರತ್ಯೇಕವಾಗಿ ವಿಚಾರಣೆ ನಡೆಸುತ್ತಿದ್ದಾರೆ.

ಟ್ರ್ಯಾಕ್ಟರ್- ಲಾರಿ ಡಿಕ್ಕಿ; ಇಬ್ಬರ ಸಾವು



ನೆಲಮಂಗಲ: ಟ್ರ್ಯಾಕ್ಟರ್‌ಗೆ ಲಾರಿ ಡಿಕ್ಕಿ ಹೊಡೆದ ಪರಿಣಾಮ ಇಬ್ಬರು ಸ್ಥಳದಲ್ಲೇ ಮೃತಪಟ್ಟಿರುವ ಘಟನೆ ಬುಧವಾರ ಬೆಳಗ್ಗೆ ರಾಷ್ಟ್ರೀಯ ಹೆದ್ದಾರಿ 75ರ ಮಲ್ಲರಬಾಣವಾಡಿ ತಿರುವಿನಲ್ಲಿ ನಡೆದಿದೆ.

ಗುಡೇಮಾರನಹಳ್ಳಿಯ ಪ್ರೇಮಕುಮಾರ್(35), ರಮೇಶ್(45) ಮೃತರು. ಗುಡೇಮಾರನಹಳ್ಳಿ ಕಡೆಯಿಂದ ಬಂದ ಟ್ರ್ಯಾಕ್ಟರ್, ಮಲ್ಲರಬಾಣವಾಡಿಯ ಕಡೆ ತಿರುವು ಪಡೆಯುತ್ತಿದ್ದ ವೇಳೆ ಹಾಸನ ಕಡೆಗೆ ಹೊರಟಿದ್ದ ಲಾರಿ ರಭಸವಾಗಿ ಡಿಕ್ಕಿ ಹೊಡೆದಿದೆ. ಟ್ರಾಕ್ಟರ್ ಪಲ್ಟಿಯಾಗಿ ಅದರಲ್ಲಿದ್ದ ಇಬ್ಬರು ಸ್ಥಳದಲ್ಲೇ ಮೃತಪಟ್ಟಿದ್ದಾರೆ. ನೆಲಮಂಗಲ ಸಂಚಾರ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ.

‘ಅವೈಜ್ಞಾನಿಕ ರಸ್ತೆ ತಿರುವು ಮಾಡಿರುವುದೇ ಅಪಘಾತಕ್ಕೆ ಕಾರಣ. ಇಲ್ಲಿ ಹಲವು ಅಪಘಾತ ನಡೆದರೂ ಹೆದ್ದಾರಿ ಪ್ರಾಧಿಕಾರದವರು ಯಾವುದೇ ಕ್ರಮ ಕೈಗೊಂಡಿಲ್ಲ’ ಎಂದು ಸಾರ್ವಜನಿಕರು ಆಕ್ರೋಶ ವ್ಯಕ್ತಪಡಿಸಿದರು.

ಉದ್ಯಮಿ ಸುಲಿಗೆ: ‘ಬೇಕರಿ’ ರಘು ಸೆರೆ

ಚಾಕು ತೋರಿಸಿ ₹ 2.96 ಲಕ್ಷ ವರ್ಗಾಯಿಸಿಕೊಂಡಿದ್ದ ಆರೋಪಿಗಳು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಉದ್ಯಮಿಯನ್ನು ಅಪಹರಿಸಿ ಸುಲಿಗೆ ಮಾಡಿದ್ದ ಪ್ರಕರಣದಲ್ಲಿ ರೌಡಿಶೀಟರ್ ರಾಘವೇಂದ್ರ ಅಲಿಯಾಸ್ ಬೇಕರಿ ರಘು ಎಂಬಾತನನ್ನು ಸಿಸಿಬಿಯ ಪೊಲೀಸರು ಬಂಧಿಸಿದ್ದಾರೆ.

ಉದ್ಯಮಿ ಎಚ್.ವಿ. ಮನೋಜ್ ಅವರನ್ನು ಅಪಹರಿಸಿ ಬೆದರಿಸಿದ್ದ ಆರೋಪದ ಅಡಿ ಆಗಸ್ಟ್‌ನಲ್ಲಿ ಪ್ರಕರಣ ದಾಖಲಾಗಿತ್ತು. ಆ ದೂರಿನ ಮೇರೆಗೆ ಪ್ರಕರಣ ದಾಖಲಿಸಿ ಕಾರ್ಯಾಚರಣೆ ನಡೆಸಿದ್ದ ಸಿಸಿಬಿ ಸಂಘಟಿತ ಅಪರಾಧ ದಳದ ಪೊಲೀಸರು, ರಾಜೇಶ್, ಸೀನಾ ಅಲಿಯಾಸ್ ‘ಬಾಂಬೆ’ ಸೀನ, ಲೋಕೇಶ್ ಕುಮಾರ್, ನವೀನ್ ಕುಮಾರ್, ಸೋಮಯ್ಯ ಮತ್ತು ಯುಕೇಶ್ ಎಂಬ ಆರೋಪಿಗಳನ್ನು ಬಂಧಿಸಿದ್ದರು. ತನಿಖೆಯಲ್ಲಿ ‘ಬೇಕರಿ’ ರಘು ಕೈವಾಡ ಇರುವುದು ಕಂಡು ಬಂದಿತ್ತು. ತಲೆಮರೆಸಿಕೊಂಡಿದ್ದ. ಖಚಿತ ಮಾಹಿತಿ ಆಧರಿಸಿ ಮಂಡ್ಯದಲ್ಲಿ ‘ಬೇಕರಿ’ ರಘುನನ್ನು ಮಂಗಳವಾರ ಬಂಧಿಸಲಾಗಿದೆ ಎಂದು ಪೊಲೀಸರು ಹೇಳಿದರು.



‘ಬೇಕರಿ’ ರಘು

ಮಂಡ್ಯದಲ್ಲಿ ಪೊಲೀಸರ ಕಾರ್ಯಾಚರಣೆಗೆ ಮಹಿಳೆಯೊಬ್ಬರು ಅಡ್ಡಿಪಡಿಸಿದ್ದರು. ಮಂಡ್ಯ ಗ್ರಾಮಾಂತರ ಠಾಣೆಯಲ್ಲಿ ಮಹಿಳೆ ವಿರುದ್ಧ ಪ್ರಕರಣ ದಾಖಲಿಸಲಾಗಿದೆ. ಈ ಪ್ರಕರಣದಲ್ಲಿ ಒಟ್ಟು 12 ಜನರನ್ನು ಬಂಧಿಸಲಾಗಿದೆ.

‘ಮನೋಜ್ ಕುಮಾರ್ ಅವರಿಗೆ ಆರೋಪಿ ರಾಜೇಶ್ ಪರಿಚಿತನಾಗಿದ್ದ. ಮನೋಜ್ ಅವರಿಂದ ಸಿನಿಮಾ ನಿರ್ದೇಶಕರೊಬ್ಬರಿಗೆ ₹1.20 ಲಕ್ಷ ಸಾಲ ಕೊಡಿಸಿದ್ದ. ಆದರೆ, ವರ್ಷ ಕಳೆದರೂ ಹಣವನ್ನು ನಿರ್ದೇಶಕ ವಾಪಸ್ ನೀಡಿರಲಿಲ್ಲ. ಸಾಲ ವಾಪಸ್ ಕೊಡಿಸುವಂತೆ ರಾಜೇಶ್ ಮೇಲೆ ಮನೋಜ್ ಒತ್ತಡ ಹೇರಿದ್ದರು. ಆಗಸ್ಟ್ 26ರಂದು ಸಂಜೆ 6.30ಕ್ಕೆ ಹಣ ಕೊಡುವುದಾಗಿ ರಾಜಾಜಿನಗರದ ಮೋದಿ ಆಸ್ಪತ್ರೆ ಬಳಿಗೆ ಮನೋಜ್ ಕುಮಾರ್ ಅವರನ್ನು ರಾಜೇಶ್ ಕರೆಸಿಕೊಂಡಿದ್ದ. ಬಳಿಕ, ದೊಡ್ಡವರು ಹಣ ಕೊಡುತ್ತಾರೆ ಎಂದು ಕಾರಿಗೆ ಕೂರಿಸಿಕೊಂಡು ಕರೆದುಕೊಂಡು ಹೋಗಿದ್ದ. ಮಾರ್ಗ ಮಧ್ಯೆ ಮತ್ತೊಂದು ಕಾರಿನಲ್ಲಿ ಉದ್ಯಮಿಯನ್ನು ಆರೋಪಿಗಳು ಅಪಹರಿಸಿದ್ದರು’ ಎಂದು ಪೊಲೀಸರು ಹೇಳಿದರು.

ನಗರದ ವಿವಿಧೆಡೆ ಸುತ್ತಾಡಿಸಿದ್ದ ಆರೋಪಿಗಳು ಬಳಿಕ ಚಾಕು ತೋರಿಸಿ, ಬೆದರಿಸಿ ಎರಡು ಖಾತೆಗಳಿಂದ ₹2.96 ಲಕ್ಷ ವರ್ಗಾಯಿಸಿಕೊಂಡಿದ್ದರು. ಬಳಿಕ, ₹10 ಲಕ್ಷ ಕೊಡುವಂತೆ ಬೆದರಿಸಿದ್ದರು. ಹಣ ನೀಡುವುದಾಗಿ ಮನೋಜ್ ಕುಮಾರ್ ಒಪ್ಪಿದ್ದರಿಂದ ಮರು ದಿನ ಮಧ್ಯಾಹ್ನ ಜ್ಞಾನಭಾರತಿ ಕ್ಯಾಂಪಸ್ ಬಳಿ ಕಾರಿನಿಂದ ಇಳಿಸಿ ಹೋಗಿದ್ದರು. ಬಳಿಕ ಉದ್ಯಮಿ ದೂರು ನೀಡಿದ್ದರು ಎಂದು ಸಿಸಿಬಿ ಪೊಲೀಸರು ಹೇಳಿದರು.

ರಘು ವಿರುದ್ಧ ನಗರದ 10 ಠಾಣೆಗಳಲ್ಲಿ ಸುಮಾರು 20ಕ್ಕೂ ಅಧಿಕ ಪ್ರಕರಣ ದಾಖಲಾಗಿವೆ.

ಯೋಗೇಶ್ವರ್ ಆಸ್ತಿ: ನಿರ್ಬಂಧ ತೆರವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚನ್ನಪಟ್ಟಣ ಕ್ಷೇತ್ರದ ಶಾಸಕ ಸಿ.ಪಿ.ಯೋಗೇಶ್ವರ್ ಅವರ ಕುಟುಂಬಕ್ಕೆ ಸೇರಿದ 223 ಸ್ಥಿರಾಸ್ತಿಗಳನ್ನು ಮೂರನೇ ವ್ಯಕ್ತಿಗೆ ಮಾರಾಟ ಅಥವಾ ಪರಭಾರೆ ಮಾಡದಂತೆ ವಿಧಿಸಿದ್ದ ತಾತ್ಕಾಲಿಕ ನಿರ್ಬಂಧಕಾಜ್ಞೆಯನ್ನು ಸಡಿಲಿಸಿದ್ದು, ಇವುಗಳಲ್ಲಿ 217 ಆಸ್ತಿಗಳ ಮೇಲಿನ ನಿರ್ಬಂಧಕಾಜ್ಞೆಯನ್ನು ತೆರವುಗೊಳಿಸಿದೆ.

ಈ ಸಂಬಂಧ ಸಿ.ಪಿ.ಯೋಗೇಶ್ವರ್ ಅವರ ಮೊದಲನೆ ಪತ್ನಿ ಮಾಳವಿಕಾ ಸೋಲಂಕಿ ಮತ್ತು ಅವರ ಪುತ್ರಿ ನಿಶಾ ಯೋಗೇಶ್ವರ್ ಸಲ್ಲಿಸಿದ್ದ ಅಸಲು ದಾವೆ ವಿಚಾರಣೆ ನಡೆಸಿದ 43ನೇ ಹೆಚ್ಚುವರಿ ಸಿಟಿ ಸಿವಿಲ್ ಮತ್ತು ಸೆಷನ್ಸ್ ನ್ಯಾಯಾಧೀಶ ಚಿನ್ನಣ್ಣವರ ರಾಜೇಶ ಸದಾಶಿವ ಅವರು, ‘ದಾವೆದಾರರಾದ ಮಾಳವಿಕಾ ಅವರು ಯೋಗೇಶ್ವರ್ ಅವರ 223 ಸ್ಥಿರಾಸ್ತಿಗಳಲ್ಲಿ 6 ಆಸ್ತಿಗಳಿಗೆ ಮಾತ್ರ ತಕರಾರು ಮುಂದುವರಿಸಬಹುದು’ ಎಂದು ಆದೇಶಿಸಿದೆ.

‘ದಾವೆಯಲ್ಲಿ ಉಲ್ಲೇಖಿಸಿರುವ ಬೆಂಗಳೂರು ಮತ್ತು ಇತರೆಡೆಯ ಆರು ಸ್ಥಿರಾಸ್ತಿಗಳನ್ನು ಮೂರನೇ ವ್ಯಕ್ತಿಗೆ ಮಾರಾಟ ಅಥವಾ ಪರಭಾರೆ ಮಾಡಬಾರದು’ ಎಂದು ತಾತ್ಕಾಲಿಕ ನಿರ್ಬಂಧ ವಿಧಿಸಿರುವ ಕೋರ್ಟ್, ದಾವೆಯ ಪ್ರತಿವಾದಿಗಳಾದ ಸಿ.ಪಿ.ಯೋಗೇಶ್ವರ್ ತಾಯಿ ನಾಗರತ್ನಮ್ಮ, ಎರಡನೇ ಪತ್ನಿ ಸುಶೀಲಾ, ಪುತ್ರ ಧ್ಯಾನ್, ಸಹೋದರರಾದ ಸಿ.ಪಿ.ಗಂಗಾಧರ, ಸಿ.ಪಿ.ರಾಜೇಶ್, ಸಹೋದರಿಯರಾದ ಸಿ.ಪಿ.ಪುಷ್ಪಾ, ಸಿ.ಪಿ. ಭಾಗ್ಯಲಕ್ಷ್ಮಿ ಅವರಿಗೆ ನಿರ್ದೇಶಿಸಿದೆ.

ಫೋನ್ ಇನ್ ನಾಳೆ

ಬೆಂಗಳೂರು: ಬೆಂಗಳೂರು ಜಲ ಮಂಡಳಿ ಅಧ್ಯಕ್ಷ ವಿ.ರಾಮಪ್ರಸಾತ್ ಮನೋಹರ್ ಅಧ್ಯಕ್ಷತೆಯಲ್ಲಿ ನ.28ರ ಬೆಳಿಗ್ಗೆ 9.30ರಿಂದ 10.30ರವರೆಗೆ ನೇರ ಫೋನ್-ಇನ್ ಕಾರ್ಯಕ್ರಮ ಆಯೋಜಿಸಲಾಗಿದೆ. ಕುಡಿಯುವ ನೀರಿನ ಸಮಸ್ಯೆ ಮತ್ತು ಒಳಚರಂಡಿ ಕೊಳವೆಯಿಂದ ತ್ಯಾಜ್ಯ ನೀರು ಹೊರ ಬರುತ್ತಿರುವುದು, ನೀರಿನ ಬಿಲ್ಲಿನ ಸಮಸ್ಯೆ ಬಗ್ಗೆ ಜನರು ನೇರವಾಗಿ ಮಾತನಾಡಿ ಕುಂದು-ಕೊರತೆ ಬಗೆಹರಿಸಿಕೊಳ್ಳಬಹುದು. ಸಂಪರ್ಕ 080-22945119, 080-22229639.

ಬಾಡಿಗೆಗೆ ಪಡೆದ ಟ್ರ್ಯಾಕ್ಟರ್ ಮಾರಾಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರೈತರಿಂದ ಬಾಡಿಗೆ ನೆಪದಲ್ಲಿ ಪಡೆದಿದ್ದ ಟ್ರ್ಯಾಕ್ಟರ್ ಮಾರಾಟ ಮಾಡಿ, ವಂಚಿಸುತ್ತಿದ್ದ ಆರೋಪಿಯನ್ನು ಈಶಾನ್ಯ ವಿಭಾಗದ ಚಿಕ್ಕಜಾಲ ಠಾಣೆಯ ಪೊಲೀಸರು ಬುಧವಾರ ಬಂಧಿಸಿದ್ದಾರೆ.

ದಿಬ್ಬೂರುಹಳ್ಳಿ ನಿವಾಸಿ ಪಿ.ದೇವರಾಜ್ (35) ಬಂಧಿತ. ಆರೋಪಿಯಿಂದ ₹70 ಲಕ್ಷ ಮೌಲ್ಯದ 17 ಟ್ರ್ಯಾಕ್ಟರ್ ಹಾಗೂ ಟ್ರಾಲಿ ಜಪ್ತಿ ಮಾಡಲಾಗಿದೆ ಎಂದು ಪೊಲೀಸರು ಹೇಳಿದರು.

ಆರೋಪಿ ದೇವರಾಜ್ ಅವರಿಗೆ ದಿಬ್ಬೂರುಹಳ್ಳಿಯ ರೈತರು ತಮ್ಮ ಟ್ರ್ಯಾಕ್ಟರ್ ಹಾಗೂ ಟ್ರಾಲಿಗಳನ್ನು ಬಾಡಿಗೆಗೆ ನೀಡುತ್ತಿದ್ದರು. ದೇವರಾಜ್ ಅವರಿಂದ ರೈತರು ಹಣ ಪಡೆದುಕೊಳ್ಳುತ್ತಿದ್ದರು. ದೇವರಾಜ್ ಅವರು ರೈತರಿಂದ ಪಡೆದುಕೊಂಡ ಟ್ರ್ಯಾಕ್ಟರ್‌ಗಳನ್ನು ಬೇರೆ ಕಡೆ ಹೆಚ್ಚಿನ ಬಾಡಿಗೆಗೆ ಬಿಡುತ್ತಿದ್ದರು. ಆದರೆ, ಐದು ತಿಂಗಳಿಂದ ಆರೋಪಿ, ರೈತರಿಗೆ ಹಣ ನೀಡಿರಲಿಲ್ಲ. ಅನುಮಾನಗೊಂಡ ರೈತರೊಬ್ಬರು ದೂರು ನೀಡಿದ್ದರು. ದೂರಿನ ಮೇರೆಗೆ ಭಾರತೀಯ ನ್ಯಾಯ ಸಂಹಿತೆ ಕಲಂ 318 (4) ಹಾಗೂ 316(2)ರ ಅಡಿ ಪ್ರಕರಣ ದಾಖಲಿಸಿ, ತನಿಖೆ ನಡೆಸಲಾಯಿತು ಎಂದು ಪೊಲೀಸರು ಹೇಳಿದರು.

‘ಟ್ರ್ಯಾಕ್ಟರ್ ಹಾಗೂ ಟ್ರಾಲಿಗಳನ್ನು ದೇವರಾಜು ಮಾರಾಟ ಮಾಡಿದ್ದು ತನಿಖೆ ವೇಳೆ ಕಂಡುಬಂತು. ಬಳಿಕ ಅವರನ್ನು ಬಂಧಿಸಲಾಯಿತು’ ಎಂದು ಮೂಲಗಳು ಹೇಳಿವೆ. ಚಿಕ್ಕಜಾಲ ಠಾಣಾ ಇನ್‌ಸ್ಪೆಕ್ಟರ್ ಎನ್.ಆನಂದ ನೇತೃತ್ವದಲ್ಲಿ ವಿಶೇಷ ತಂಡ ರಚಿಸಲಾಗಿತ್ತು ಎಂದು ಈಶಾನ್ಯ ವಿಭಾಗ ಡಿಸಿಪಿ ವಿ.ಜೆ.ಸಜೀತ್ ತಿಳಿಸಿದ್ದಾರೆ.



ಪಿಂಚಣಿದಾರರಿಗೆ ಜೀವಿತ ಪ್ರಮಾಣಪತ್ರ ಸಲ್ಲಿಸಲು ಎಸ್‌ಬಿಐ ಬೆಂಗಳೂರು ವೃತ್ತದ ವತಿಯಿಂದ ಸೇಂಟ್ ಮಾರ್ಕ್ಸ್ ರಸ್ತೆಯಲ್ಲಿರುವ ಎಸ್‌ಬಿಐನ ಸ್ಥಳೀಯ ಪ್ರಧಾನ ಕಚೇರಿಯಲ್ಲಿ ಡಿಜಿಟಲ್ ಜೀವಿತ ಪ್ರಮಾಣಪತ್ರ (ಡಿಎಲ್‌ಸಿ) ಶಿಬಿರ ಆಯೋಜಿಸಲಾಯಿತು. ಶಿಬಿರವನ್ನು ಎಸ್‌ಬಿಐನ ಬೆಂಗಳೂರು ವೃತ್ತದ ಮುಖ್ಯ ಪ್ರಧಾನ ವ್ಯವಸ್ಥಾಪಕಿ ಜೂಹಿ ಸ್ಮಿತಾ ಸಿನ್ಹಾ ಉದ್ಘಾಟಿಸಿದರು. ಪ್ರಧಾನ ವ್ಯವಸ್ಥಾಪಕ (ನೆಟ್‌ವರ್ಕ್–1) ವಿ.ಎನ್. ಶರ್ಮ ಸೇರಿದಂತೆ ಬ್ಯಾಂಕಿನ ಹಿರಿಯ ಅಧಿಕಾರಿಗಳು ಭಾಗವಹಿಸಿದ್ದರು. ಡಿಎಲ್‌ಸಿ ವ್ಯವಸ್ಥೆಯಲ್ಲಿ ಪಿಂಚಣಿದಾರರು ಶಾಖೆ ಅಥವಾ ಪ್ರಮಾಣೀಕರಣ ಪ್ರಾಧಿಕಾರಗಳಿಗೆ ಭೇಟಿ ನೀಡುವ ಅಗತ್ಯವಿರುವುದಿಲ್ಲ.

ಸಿಸಿಬಿ ಪೊಲೀಸರ ಕಾರ್ಯಾಚರಣೆ • ಬಂಧಿತ ಆರೋಪಿಗಳ ಸಂಖ್ಯೆ 6ಕ್ಕೆ ಏರಿಕೆ

‘ನಂದಿನಿ’ ಕಲಬೆರಕೆ ತುಪ್ಪ: ದಂಪತಿ ಸೆರೆ

ಪ್ರಜಾವಾಣಿ ವಾರ್ತೆ


ಬೆಂಗಳೂರು: ‘ನಂದಿನಿ’ ಬ್ರ್ಯಾಂಡ್ ಹೆಸರಿನಲ್ಲಿ ಕಲಬೆರಕೆ ತುಪ್ಪ ಮಾರಾಟ ಮಾಡುತ್ತಿದ್ದ ಬೃಹತ್ ಜಾಲದ ಸಂಚುಕೋರ ದಂಪತಿಯನ್ನು ಸಿಸಿಬಿ ವಿಶೇಷ ವಿಚಾರಣಾ ದಳ ಹಾಗೂ ಕೆಎಂಎಫ್ ಜಾಗೃತ ದಳದ ಸಿಬ್ಬಂದಿ ಜಂಟಿ ಕಾರ್ಯಾಚರಣೆ ನಡೆಸಿ ಬಂಧಿಸಿದ್ದಾರೆ.

ಮೈಸೂರಿನ ಶಿವಕುಮಾರ್ ಮತ್ತು ಅವರ ಪತ್ನಿ ರಮ್ಯಾ ಬಂಧಿತರು.

ಬಂಧಿತ ದಂಪತಿ, ನಂದಿನಿ ಉತ್ಪನ್ನಗಳನ್ನು ಕಲಬೆರಕೆ ಮಾಡಿ ಮಾರಾಟ ಮಾಡುತ್ತಿದ್ದ ಪ್ರಕರಣದ ಸೂತ್ರಧಾರರು ಎಂಬುದು ತನಿಖೆ ವೇಳೆ ಕಂಡುಬಂದಿದೆ ಎಂದು ಪೊಲೀಸರು ಹೇಳಿದರು.

ಇದೇ ಪ್ರಕರಣದಲ್ಲಿ ನವೆಂಬರ್ 15ರಂದು ಕೆಎಂಎಫ್‌ನ (ಕರ್ನಾಟಕ ಹಾಲು ಉತ್ಪಾದಕರ ಒಕ್ಕೂಟ) ಉತ್ಪನ್ನಗಳ ವಿತರಕ ಮಹೇಂದ್ರ ಹಾಗೂ ಕೃತ್ಯಕ್ಕೆ ಬೆಂಬಲ ನೀಡಿದ್ದ ದೀಪಕ್, ಮುನಿರಾಜು, ಅಭಿ ಅರಸು ಎಂಬುವವರನ್ನು ಸಿಸಿಬಿ ಪೊಲೀಸರು ಬಂಧಿಸಿದ್ದರು. ತಲೆಮರೆಸಿಕೊಂಡಿದ್ದ ದಂಪತಿಗೆ ಹುಡುಕಾಟ ನಡೆದಿತ್ತು. ಖಚಿತ ಸುಳಿವು ಆಧರಿಸಿ ದಂಪತಿಯನ್ನು ಬಂಧಿಸಲಾಗಿದೆ ಎಂದು ಪೊಲೀಸರು ಹೇಳಿದರು.

ಘಟಕ ಸ್ಥಾಪಿಸಿದ್ದ ದಂಪತಿ: ಕೆಎಂಎಫ್ ಉತ್ಪನ್ನಗಳ ವಿತರಕ ಮಹೇಂದ್ರ ಎಂಬಾತ ಶುದ್ಧ ನಂದಿನಿ ತುಪ್ಪವನ್ನು ಖರೀದಿಸಿ ತಮಿಳುನಾಡಿಗೆ ಕಳುಹಿಸುತ್ತಿದ್ದ. ತಮಿಳು ನಾಡಿನಲ್ಲಿ ಕಲಬೆರಕೆ ಮಾಡ ಲಾಗುತ್ತಿತ್ತು. ಒಂದು ಲೀಟರ್ ತುಪ್ಪಕ್ಕೆ ನಾಲ್ಕು ಲೀಟರ್ ನಕಲಿ ತುಪ್ಪ ಬೆರೆಸುತ್ತಿದ್ದರು. ಪಾಮ್ ಹಾಗೂ ತೆಂಗಿನ ಎಣ್ಣೆ ಮತ್ತು ಡಾಲ್ಡಾ ಮಿಶ್ರಣ ಮಾಡಿ ಮತ್ತೆ ರಾಜ್ಯಕ್ಕೆ ತಂದು ಮಾರಾಟ ಮಾಡುತ್ತಿದ್ದರು. ತಮಿಳುನಾಡಿನಲ್ಲಿ ದಂಪತಿ ಉತ್ಪಾದನಾ ಘಟಕ ಸ್ಥಾಪಿಸಿ ದ್ದರು ಎಂದು ಮೂಲಗಳು ಹೇಳಿವೆ.



ಶಿವಕುಮಾರ್



ರಮ್ಯಾ


‘ಕಲಬೆರಕೆ ತುಪ್ಪವನ್ನು ತಮಿಳುನಾಡಿನ ಸ್ಥಳವೊಂದರಲ್ಲಿ ಸ್ಯಾಚೆಟ್ ಮತ್ತು ಪ್ಲಾಸ್ಟಿಕ್ ಬಾಟಲಿಗಳಿಗೆ ತುಂಬಿ ಬೆಂಗಳೂರಿನ ಅಧಿಕೃತ ಪರವಾನಗಿ ಪಡೆದಂತಹ ಮಳಿಗೆಗಳಿಗೆ ಆರೋಪಿಗಳು ಪೂರೈಕೆ ಮಾಡುತ್ತಿದ್ದರು. ಕಲಬೆರಕೆ ತುಪ್ಪದ ಸ್ಯಾಚೆಟ್ ಹಾಗೂ ಬಾಟಲಿಗಳು ಅಸಲಿ ತುಪ್ಪದ ಮಾದರಿ ಯಲ್ಲೇ ತಯಾರಿಸಿದ್ದರು. ನಗರದ ವಿವಿಧ ಸಗಟು, ಚಿಲ್ಲರೆ ಹಾಗೂ ನಂದಿನಿ ಪಾರ್ಲರ್‌ಗಳಿಗೆ ಮೂಲ ನಂದಿನಿ ತುಪ್ಪದ ಬೆಲೆಗೆ ಮಾರಾಟ ಮಾಡುತ್ತಿರುವುದು ಕಂಡುಬಂದಿದೆ’ ಎಂದು ಪೊಲೀಸರು ಹೇಳಿದರು.

‘ದಂಪತಿಯ ಬ್ಯಾಂಕ್ ಖಾತೆಯಲ್ಲಿದ್ದ ₹60 ಲಕ್ಷದ ವಹಿವಾಟು ಸ್ಥಗಿತ (ಫ್ರೀಜ್) ಮಾಡಲಾಗಿದೆ. ಕಲಬೆರಕೆಗೆ ಯಾವೆಲ್ಲಾ ವಸ್ತುಗಳನ್ನು ಮಿಶ್ರಣ ಮಾಡಲಾಗಿದೆ ಎಂಬುದನ್ನು ಪತ್ತೆ ಹಚ್ಚಲು, ವಶಪಡಿಸಿಕೊಂಡ ಮಾದರಿಗಳನ್ನು ವಿಧಿ ವಿಜ್ಞಾನ ಪ್ರಯೋಗಾಲಯಕ್ಕೆ (ಎಫ್‌ಎಸ್‌ಎಲ್) ರವಾನೆ ಮಾಡಲಾಗಿದೆ. ಈ ದಂಪತಿ ವಿರುದ್ಧ ಈ ಹಿಂದೆಯೂ ಮೈಸೂರಿನಲ್ಲಿಯೂ ಇದೇ ರೀತಿಯ ನಕಲಿ ಉತ್ಪನ್ನ ತಯಾರಿಕೆಯ ಪ್ರಕರಣ ದಾಖಲಾಗಿತ್ತು’ ಎಂದು ಸಿಸಿಬಿ ಮೂಲಗಳು ಹೇಳಿವೆ.

ಕಲಬೆರಕೆ ತುಪ್ಪ ತಯಾರಿಸಲು ಖರೀದಿಸಿದ್ದ ಯಂತ್ರಗಳನ್ನು ವಶಕ್ಕೆ ಪಡೆದು ಕೊಳ್ಳಲಾಗಿದೆ. ಈ ಪ್ರಕರಣದಲ್ಲಿ ಇದುವರೆಗೂ ₹ 1.88 ಕೋಟಿ ಮೌಲ್ಯದ ಸಾಮಗ್ರಿ ಹಾಗೂ ವಾಹನಗಳು ವಶಕ್ಕೆ ಪಡೆದಂತೆ ಆಗಿದೆ ಎಂದು ಸಿಸಿಬಿಯ ಡಿಸಿಪಿ ಹರಿಬಾಬು ಅವರು ಮಾಹಿತಿ ನೀಡಿದರು.

ಸಾಂಸ್ಕೃತಿಕ ಮುನ್ನೋಟ

ವಿದ್ಯಾಭೂಷಣರಿಂದ ಸಂಗೀತ ಕಛೇರಿ


ವಿದ್ಯಾಭೂಷಣ

ಬೆಂಗಳೂರು: ಹಜಾರಿ ಪ್ರಸಾದ್ ಫೌಂಡೇಷನ್ ವತಿಯಿಂದ ಅಂಧರು ಮತ್ತು ಅವಕಾಶ ವಂಚಿತ ಕಲಾವಿದರ ವೈದ್ಯಕೀಯ ನೆರವಿಗಾಗಿ ಇದೇ 30ರಂದು ಸಂಜೆ 5.30ಕ್ಕೆ ಚೌಡಯ್ಯ ಸ್ಮಾರಕ ಭವನದಲ್ಲಿ ವಿದ್ಯಾಭೂಷಣ ಅವರಿಂದ ಸಂಗೀತ ಕಛೇರಿ ನಡೆಯಲಿದೆ.

ನಿಧಿ ಸಂಗ್ರಹಿಸುವ ಉದ್ದೇಶದಿಂದ ಹಮ್ಮಿಕೊಳ್ಳಲಾದ ಈ ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಗಳಾಗಿ ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ ತಂಗಡಗಿ, ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿ ಅಧ್ಯಕ್ಷ ಶುಭಾ ಧನಂಜಯ್, ಲಹರಿ ಸಂಸ್ಥೆಯ ಲಹರಿ ವೇಲು ಹಾಗೂ ಹಜಾರಿ ಪ್ರಸಾದ್ ಪ್ರತಿಷ್ಠಾನದ ವ್ಯವಸ್ಥಾಪಕ ಟ್ರಸ್ಟಿ ವಿಶ್ವನಾಥ್ ಪ್ರಸಾದ್ ಎಚ್. ಭಾಗವಹಿಸುತ್ತಾರೆ. ಇದೇ ವೇಳೆ ಗಾಯಕ ವಿದ್ಯಾಭೂಷಣ, ಭರತನಾಟ್ಯ ಕಲಾವಿದೆ ಲಲಿತಾ ಶ್ರೀನಿವಾಸನ್ ಹಾಗೂ ಹಿಂದೂಸ್ತಾನಿ ಗಾಯಕ ಶಂಕರಪ್ಪ ಲಕ್ಷ್ಮಪ್ಪ ಬೆಲ್ಲಾಧ ಅವರಿಗೆ 'ಕಲಾ ಸೇವಾ ಪುರಸ್ಕಾರ' ಪ್ರಶಸ್ತಿ ನೀಡಿ ಗೌರವಿಸಲಾಗುತ್ತದೆ.

ಟಿಕೆಟ್‌ಗಳು ರಿದಮ್ಸ್ ಅಕಾಡೆಮಿಯ ಕೇಂದ್ರಗಳು ಹಾಗೂ ಬುಕ್ ಮೈಶೋದಲ್ಲಿ ಲಭ್ಯ. ಸಂಪರ್ಕಕ್ಕೆ: 8217651966 ಅಥವಾ 7618778555

'ರಾಮ ಶಾಮ ಡ್ರಾಮ' ನಾಟಕ

ಬೆಂಗಳೂರು: ವಿಶ್ವಪಥ ಕಲಾ ಸಂಗಮ ಹವ್ಯಾಸಿ ರಂಗತಂಡವು ಇದೇ 29ರಂದು ಸಂಜೆ 7.30ಕ್ಕೆ ಮಲ್ಲತ್ತಹಳ್ಳಿಯ ಕಲಾಗ್ರಾಮದಲ್ಲಿರುವ ಸಾಂಸ್ಕೃತಿಕ ಸಮುಚ್ಚಯದಲ್ಲಿ 'ರಾಮ ಶಾಮ ಡ್ರಾಮ' ನಾಟಕ ಪ್ರದರ್ಶನ ಹಮ್ಮಿಕೊಂಡಿದೆ.

ರಾಜೇಂದ್ರ ಕಾರಂತ ಅವರು ಈ ನಾಟಕ ರಚಿಸಿ, ನಿರ್ದೇಶಿಸಿದ್ದಾರೆ. ದೇವರೇ ಗತಿ ಆ್ಯಕ್ಸಿಡೆಂಟ್ ಆ್ಯಂಡ್ ಎಮರ್ಜೆನ್ಸಿ ಸೆಂಟರ್‌ನಲ್ಲಿ ಕೆಲಸ ಮಾಡುವ ವೈದ್ಯ ರಾಮ್, ಸಹಾಯಕ ಶಾಮ ಮತ್ತು ಸ್ವಾಗತಕಾರ ಭಾಮ ಹಾಗೂ ಚಿತ್ರ ವಿಚಿತ್ರ ಸಮಸ್ಯೆಗಳನ್ನು ಹೊತ್ತು ಆಸ್ಪತ್ರೆಗೆ ಬರುವ ರೋಗಿಗಳ ನಡುವೆ ನಡೆಯುವ ಹಾಸ್ಯ ಸನ್ನಿವೇಶಗಳೇ ನಾಟಕದ ಕಥಾವಸ್ತು. ಟಿಕೆಟ್‌ಗಳು ಬುಕ್ ಮೈ ಶೋನಲ್ಲಿ ಲಭ್ಯ.

ಸಂಪರ್ಕಕ್ಕೆ: 9945977184 ಅಥವಾ 9916863637


'ರಾಮ ಶಾಮ ಡ್ರಾಮ' ನಾಟಕದ ದೃಶ್ಯ

'ಸ್ವರನಮನ' ಗಾಯನ–ಭಕ್ತಿ ಸಂಗೀತ


ಲಕ್ಷ್ಮೀ ನಾಗರಾಜ್

ಬೆಂಗಳೂರು: ಸತೀಶ್ ಹಂಪಿಹೊಳಿ ಮ್ಯೂಸಿಕ್ ಫೌಂಡೇಷನ್ ಟ್ರಸ್ಟ್ ಸರಸ್ವತಿ ಮತ್ತು ದತ್ತಾತ್ರೇಯ ಹಂಪಿಹೊಳಿ ಸ್ಮರಣಾರ್ಥ ಇದೇ 30ರಂದು ಸಂಜೆ 5.30ಕ್ಕೆ ತ್ಯಾಗರಾಜನಗರದಲ್ಲಿರುವ ದತ್ತಾತ್ರೇಯ ದೇವಸ್ಥಾನದಲ್ಲಿ 'ಸ್ವರನಮನ' ಕಾರ್ಯಕ್ರಮ ಹಮ್ಮಿಕೊಂಡಿದೆ.

ಮುಖ್ಯ ಅತಿಥಿಗಳಾಗಿ ಲಕ್ಷ್ಮೀ ನಾಗರಾಜ್ ಹಾಗೂ ನಟ ತಬಲಾ ನಾಣಿ ಭಾಗವಹಿಸಲಿದ್ದಾರೆ. ಉಮಾ ಕುಲಕರ್ಣಿ, ಸುಮನಾ ಕಡೇಕಾರ್, ರಶ್ಮಿ ಶಶಿಧರ್ ಹಾಗೂ ಶಿವರಂಜನಿ ಅವರಿಂದ ಭಕ್ತಿ ಸಂಗೀತ, ವೈಸಿರಿ ಎನ್. ಆತ್ರೇಯ ಅವರಿಂದ ಭಕ್ತಿ ಸಿಂಚನ, ಗುರುರಾಜ ಹೊಳೆನರಸೀಪುರ ಅವರಿಂದ ತಬಲಾ ವಾದನ, ನಾಗೇಂದ್ರ ರಾಣಾಪೂರ್ ಮತ್ತು ವೃಂದದಿಂದ ದತ್ತ ಗೀತಾಂಜಲಿ, ವಿನೀತ್ ರಾಣಾಪೂರ್ ಅವರಿಂದ ಹಿಂದೂಸ್ತಾನಿ ಸಂಗೀತ ಕಾರ್ಯಕ್ರಮ ನಡೆಯಲಿದೆ.

ಸತೀಶ್ ಹಂಪಿಹೊಳಿ, ಶಿವಕುಮಾರ್ ಮಹಾಂತ್, ಅಮೃತೇಶ್ ಕುಲಕರ್ಣಿ, ನಾಗಶಯನ ಬಿ., ಗೌತಮ್ ಕಾರ್ಕಳ, ಪುನೀತ್ ರಾಣಾಪೂರ್, ಸುತೇಜ್ ಆರ್. ಹರಿತ್ಸ ಹಾಗೂ ರೋಗನ್ ಕುಮಾರ್ ಅವರು ವಾದ್ಯ ಸಹಕಾರ ನೀಡಲಿದ್ದಾರೆ.

ಕನ್ನಡ ಸಂಸ್ಕೃತಿ ಸಂಭ್ರಮ

ಬೆಂಗಳೂರು: ಹೆಣ್ಣೂರು ಬಡಾವಣೆ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘ ಹಾಗೂ ದಂಡು ಪ್ರದೇಶ ಕನ್ನಡ ಸಂಘಟನೆಗಳ ಒಕ್ಕೂಟವು ಕರ್ನಾಟಕ ರಾಜ್ಯೋತ್ಸವದ ಪ್ರಯುಕ್ತ ಇದೇ 29ರಂದು ಹೆಣ್ಣೂರು ಬಂಡೆಯ ಭೈರವೇಶ್ವರ ಬಡಾವಣೆಯಲ್ಲಿ ಕನ್ನಡ ಸಂಸ್ಕೃತಿ ಸಂಭ್ರಮ ಹಮ್ಮಿಕೊಂಡಿದೆ.

ಸಂಜೆ 4.30ಕ್ಕೆ ಹೆಣ್ಣೂರು ಕ್ರಾಸ್‌ನಿಂದ ವೇದಿಕೆಯವರೆಗೆ ಜಾಗೃತಿ ಮೆರವಣಿಗೆ ನಡೆಯಲಿದೆ. ಸಂಜೆ 6 ಗಂಟೆಯಿಂದ ವೇದಿಕೆ ಕಾರ್ಯಕ್ರಮಗಳು ನಡೆಯಲಿವೆ. ವಿವಿಧ ಕಲಾ ತಂಡಗಳಿಂದ ಜಾನಪದ ನೃತ್ಯ, ಗೀತಗಾನ ಪ್ರಸ್ತುತಿ, ಚಿತ್ರಗೀ-ತೆಗಳಿಗೆ ನೃತ್ಯ ಸೇರಿ ವಿವಿ

ಪ್ರತಿ ಗುರುವಾರ ಪ್ರಕಟವಾಗುವ 'ಸಾಂಸ್ಕೃತಿಕ ಮುನ್ನೋಟ' ಅಂಕಣದಲ್ಲಿ ಪ್ರಕಟಿಸಲು ಸಾಹಿತ್ಯ, ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಸಂಬಂಧಿಸಿದ ವಿವರಗಳನ್ನು ಈ ಕೆಳಗಿನ ಇ–ಮೇಲ್‌ಗೆ nagaradalli_indu@prajavani.co.in (ಬುಧವಾರ ಸಂಜೆ 6 ಗಂಟೆ ಒಳಗೆ) ಕಳುಹಿಸಿ

'ನಕ್ಷೆ ಇಲ್ಲದಿದ್ದರೆ ವಿದ್ಯುತ್ ಇಲ್ಲ'

ಅನಧಿಕೃತ ಕಟ್ಟಡಗಳಿಗೆ ಸಂಪರ್ಕ ನೀಡಬೇಡಿ: ಬೆಸ್ಕಾಂಗೆ ಸೂಚನೆ


ಪೂರ್ವ ನಗರ ಪಾಲಿಕೆ ವ್ಯಾಪ್ತಿಯಲ್ಲಿ ಹಲವು ಕಾಮಗಾರಿಗಳನ್ನು ಮಹೇಶ್ವರ್ ರಾವ್ ಪರಿಶೀಲಿಸಿದರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಕ್ಷೆ ಮಂಜೂರಾತಿ ಇಲ್ಲದಿದ್ದರೆ ಯಾವುದೇ ಕಟ್ಟಡಗಳಿಗೆ ವಿದ್ಯುತ್ ಸಂಪರ್ಕ ನೀಡಬಾರದು ಎಂದು ಜಿಬಿಎ ಮುಖ್ಯ ಆಯುಕ್ತ ಮಹೇಶ್ವರ್ ರಾವ್ ಸೂಚಿಸಿದರು.

ಪೂರ್ವ ನಗರ ಪಾಲಿಕೆ ವ್ಯಾಪ್ತಿಯಲ್ಲಿ ಅಧಿಕಾರಿಗಳೊಂದಿಗೆ ಸಭೆ ನಡೆಸಿದ ಅವರು, ವಿದ್ಯುತ್ ಸಂಪರ್ಕ ನೀಡುವ ಮೊದಲು, ಕಟ್ಟಡ ನಿರ್ಮಾಣಕ್ಕೆ ನಕ್ಷೆ ಮಂಜೂರಾಗಿದೆಯೇ ಎಂಬುದನ್ನು ಪರಿಶೀಲಿಸಬೇಕು. ಅದಿಲ್ಲದಿದ್ದರೆ ವಿದ್ಯುತ್ ಸಂಪರ್ಕ ನೀಡಬಾರದು' ಎಂದು ಬೆಸ್ಕಾಂ ಅಧಿಕಾರಿಗಳಿಗೆ ತಾಕೀತು ಮಾಡಿದರು.

ಬಳಗೆರೆ ರಸ್ತೆಯಲ್ಲಿ ಬೆಸ್ಕಾಂ ವಿದ್ಯುತ್ ಕಂಬಗಳನ್ನು ಸ್ಥಳಾಂತರಿಸುವ ಕೆಲಸವನ್ನು ವೇಗಗೊಳಿಸಲು ನಿರ್ದೇಶನ ನೀಡಿದರು.

ಇಬ್ಲೂರು ಜಂಕ್ಷನ್ ಬಳಿ ಮೇಲ್ಸೇತುವೆ ಕೆಳಭಾಗದಲ್ಲಿ ಈಗಾಗಲೇ ಸುಂದರೀಕರಣ ಮಾಡಲಾಗಿದೆ. ಇದೇ ಮಾದರಿಯಲ್ಲಿ ಇತರೆ ಮೇಲ್ಸೇತುವೆಗಳ ಕೆಳಭಾಗದಲ್ಲಿ ಸಿ.ಎಸ್.ಆರ್ ನಿಧಿಯಲ್ಲಿ ಅಭಿವೃದ್ಧಿಪಡಿಸಲು ಸೂಚನೆ ನೀಡಿದರು.

ಮಹದೇವಪುರ ವ್ಯಾಪ್ತಿಯ ರಾಜ ಕಾಲುವೆ ಒತ್ತುವರಿ ಪ್ರಕರಣ ಪರಿಶೀಲಿಸಿ ತಕ್ಷಣವೇ ತೆರವುಗೊಳಿಸಬೇಕು. ಗುಂಜೂರು ಪ್ರದೇಶದಲ್ಲಿ ರಾಜ ಕಾಲುವೆ ಮೇಲಿನ ಅನಧಿಕೃತ ಕಟ್ಟಡಗಳನ್ನು ತೆರವುಗೊಳಿಸಿ ಎಂದು ಹೇಳಿದರು.

ನ್ಯೂ ಹಾರಿಜನ್ ಕಾಲೇಜು ಬಳಿಯ ಎಸ್.ಎಚ್ 45 ವರ್ತೂರು-ಗುಂಜೂರು ಮುಖ್ಯ ರಸ್ತೆಯ ಬಳಿ, ಹೊಸದಾಗಿ ರಸ್ತೆ ನಿರ್ಮಿಸಲು 6 ಎಕರೆ ಅರಣ್ಯ ಜಾಗ ನೀಡಿದರೆ, ಈ ಭಾಗದಲ್ಲಿ ಬಹುತೇಕ ಸಂಚಾರ ದಟ್ಟಣೆ ನಿವಾರಣೆಯಾಲಿದೆ. ಈ ಸಂಬಂಧ ಅರಣ್ಯ ಜಾಗ ವಶಪಡಿಸಿಕೊಂಡು, ರಸ್ತೆ ನಿರ್ಮಿಸಲು ಸೂಚಿಸಿದರು.

ಪೂರ್ವ ನಗರ ಪಾಲಿಕೆ ಆಯುಕ್ತ ರಮೇಶ್ ಡಿ.ಎಸ್, ಹೆಚ್ಚುವರಿ ಆಯುಕ್ತ ಲೋಖಂಡೆ ಸ್ನೇಹಲ್ ಸುಧಾಕರ್, ಜಂಟಿ ಆಯುಕ್ತರಾದ ದಾಕ್ಷಾಯಿಣಿ ಕೆ, ಸುಧಾ, ಮುಖ್ಯ ಎಂಜಿನಿಯರ್‌ಗಳಾದ ಲೋಕೇಶ್ ಹಾಗೂ ಕೃಷ್ಣಮೂರ್ತಿ ಉಪಸ್ಥಿತರಿದ್ದರು.

ಮಹೇಶ್ವರ್ ಅವರ ಸೂಚನೆಗಳು

- ಹೊರ ವರ್ತುಲ ರಸ್ತೆಯ ಬಸ್ ನಿಲ್ದಾಣಗಳಲ್ಲಿ ಅಗತ್ಯ ಸುಧಾರಣೆ ಮಾಡಿ
- ಸರ್ಜಾಪುರ–ಇಬ್ಲೂರು ಮಾರ್ಗದಲ್ಲಿ ಪಾದಚಾರಿ ಸೇತುವೆ ನಿರ್ಮಿಸಿ
- ಇಬ್ಲೂರು–ಕಾರ್ಮೆಲ್‌ರಾಮ್–ಸರ್ಜಾಪುರ ಮಾರ್ಗದಲ್ಲಿ ಪಾದಚಾರಿ ಮಾರ್ಗ ಮತ್ತು ಸೈಕ್ಲಿಂಗ್ ಟ್ರ್ಯಾಕ್ ನಿರ್ಮಿಸಿ
- 60 ಕಿಮೀ ವ್ಯಾಪ್ತಿಯ ಸಿಡಿಪಿ ಹಾಗೂ ಸಂಪರ್ಕ ರಸ್ತೆಗಳ ಅಭಿವೃದ್ಧಿಗೆ ಟಾಸ್ಕ್ ಫೋರ್ಸ್ ರಚಿಸಿ
- ಇಬ್ಲೂರು ಜಂಕ್ಷನ್‌ನಲ್ಲಿ ವೈಜ್ಞಾನಿಕ ಟ್ರಾಫಿಕ್ ವಿನ್ಯಾಸಗೊಳಿಸಿ
- ಟ್ರಿಪಲ್-ಡೆಕ್ಕರ್ ಮೂಲಕ ಮೂಲಸೌಕರ್ಯ ವಿಸ್ತರಣೆ ಮಾಡಿ
- ಒಆರ್‌ಆರ್ ಸುತ್ತಮುತ್ತಲಿನ ಸಮಸ್ಯೆಗಳ ಸಾಮೂಹಿಕ ಪರಿಹಾರಕ್ಕಾಗಿ ಪೂರ್ವ ಮತ್ತು ದಕ್ಷಿಣ ನಗರ ಪಾಲಿಕೆಗಳ ಸಂಯುಕ್ತ ಸಮಿತಿ ರಚಿಸಿ
- 23 ಒಣ ಕಸ ಸಂಗ್ರಹ ಕೇಂದ್ರ ಆರು ತಿಂಗಳಲ್ಲಿ ಸ್ಥಾಪಿಸಿ

ಎಸ್‌ಐಟಿ ಮುಖ್ಯಸ್ಥರಿಗೆ ಹಕ್ಕೊತ್ತಾಯ ಪತ್ರ

ಬೆಂಗಳೂರು: 'ಕೊಂದವರು ಯಾರು' ಆಂದೋಲನದ ಪ್ರತಿನಿಧಿಗಳು, ದಕ್ಷಿಣ ಕನ್ನಡ ಜಿಲ್ಲೆಯ ಧರ್ಮಸ್ಥಳ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದಿರುವ ಅಪರಾಧ ಕೃತ್ಯಗಳಿಗೆ ಸಂಬಂಧಿಸಿದಂತೆ ತನಿಖೆ ನಡೆಸುತ್ತಿರುವ ವಿಶೇಷ ತನಿಖಾ ದಳದ ಮುಖ್ಯಸ್ಥ ಪ್ರಣಬ್ ಮೊಹಾಂತಿ ಅವರನ್ನು ಬುಧವಾರ ಭೇಟಿ ಮಾಡಿ ಹಕ್ಕೊತ್ತಾಯ ಪತ್ರ ಸಲ್ಲಿಸಿದರು.

ಈ ನಿಯೋಗದಲ್ಲಿ ಹೋರಾಟಗಾರರಾದ ಕೆ.ಎಸ್.ವಿಮಲಾ, ಆಶಾ ರಮೇಶ್ ಮತ್ತು ಮಲ್ಲಿಗೆ ಸಿರಿಮನೆ ಇತರರು ಇದ್ದರು. ಮುಂದಿನ ಹಂತದ ತನಿಖೆ ವೇಳೆ ದೂರುದಾರರು ಹಾಗೂ ಸಾಕ್ಷಿಗಳಿಗೆ ರಕ್ಷಣೆ ಒದಗಿಸಬೇಕು. ಸಾಕ್ಷ್ಯ ಸಂಗ್ರಹದಲ್ಲಿ ಎಚ್ಚರಿಕೆ ವಹಿಸಬೇಕು. ಹಿಂದಿನ ಪ್ರಕರಣಗಳು ಮತ್ತು ಸಾಕ್ಷಿಗಳ ಸಾವುಗಳ ತನಿಖೆ, ಮರು ಪರಿಶೀಲನೆ ನಡೆಸಬೇಕು. ನಿರ್ಲಕ್ಷ್ಯ ವಹಿಸಿದ ಅಧಿಕಾರಿಗಳು ಹಾಗೂ ತನಿಖೆಗೆ ಅಡ್ಡಿಪಡಿಸಿದವರ ವಿರುದ್ಧ ಕ್ರಮ ತೆಗೆದುಕೊಳ್ಳಬೇಕು ಎಂದು ನಿಯೋಗವು ಆಗ್ರಹಿಸಿತು.

ಅನುದಾನ ಬಳಕೆ: ಸಚಿವ ಮುನಿಯಪ್ಪ ಅಸಮಾಧಾನ


ಕೆ.ಎಚ್. ಮುನಿಯಪ್ಪ

ಬೆಂಗಳೂರು: 'ಕರ್ನಾಟಕದಲ್ಲಿ ಪರಿಶಿಷ್ಟ ಜಾತಿಯವರಿಗೆ ಮೀಸಲಿಟ್ಟಿರುವ ಅನುದಾನ ಸಮರ್ಪಕ ಬಳಕೆ ಯಾಗುತ್ತಿಲ್ಲ. ಕಾನೂನು, ಯೋಜನೆ ರೂಪಿಸಿದರೂ ಉಪಯೋಗವಾಗುತ್ತಿಲ್ಲ' ಎಂದು ಸಚಿವ ಕೆ.ಎಚ್. ಮುನಿಯಪ್ಪ ಹೇಳಿದರು.

ಅಂಬೇಡ್ಕರ್ ಭವನದಲ್ಲಿ ಬುಧವಾರ ನಡೆದ ಸಂವಿಧಾನ ದಿನಾಚರಣೆಯಲ್ಲಿ ಮಾತನಾಡಿದ ಅವರು, 'ಪ್ರತಿ ವರ್ಷ ₹43 ಸಾವಿರ ಕೋಟಿಯನ್ನು ಈ ಸಮುದಾಯದ ಅಭಿವೃದ್ಧಿಗೆ ಮೀಸಲಿಡಲಾಗುತ್ತಿದೆ. ಗುತ್ತಿಗೆದಾರರಿಗೆ ಅವಕಾಶ ಕಲ್ಪಿಸಿ ನಿಯಮಗಳಲ್ಲಿ ಬದಲಾವಣೆ ಮಾಡಿದರೂ ಉಪಯೋಗವೇ ಆಗುತ್ತಿಲ್ಲ. ಅರ್ಹತೆ ಕಾರಣ ನೀಡಿ ಗುತ್ತಿಗೆ ನಿರಾಕರಿಸಲಾಗುತ್ತಿದೆ' ಎಂದರು.

ಇದಕ್ಕೆ ಪ್ರತಿಕ್ರಿಯಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ, 'ಸರ್ಕಾರ ಎಂದರೆ ನಾನೊಬ್ಬನೇ ಅಲ್ಲ, ಮಂತ್ರಿಮಂಡಲದ ನಿರ್ಧಾರವೂ ಮುಖ್ಯವಾಗುತ್ತದೆ. ಯಾವುದೇ ಕಾರ್ಯಕ್ರಮ ರೂಪಿಸಿದರೆ ಜಾರಿಗೊಳಿಸುವ ಹೊಣೆ ಸಚಿವರು, ಶಾಸಕರು ಹಾಗೂ ಅಧಿಕಾರಿಗಳದ್ದಾಗಿರುತ್ತದೆ. ಇದಕ್ಕೆ ಬೇಕಾದ ಬದಲಾವಣೆ ಮಾಡಿ ಅನುದಾನ ಸಮುದಾಯದ ಏಳಿಗೆಗೆ ಬಳಸಿ. ದುರುಪಯೋಗ ತಪ್ಪಿಸಿ' ಎಂದು ಹೇಳಿದರು.

ಸಂವಿಧಾನ ದಿನಾಚರಣೆಯಲ್ಲಿ ಎಚ್‌.ಕೆ. ಪಾಟೀಲ ಅಭಿಮತ

'ಸಂವಿಧಾನ ಪೂಜಿಸುವ ವಸ್ತುವಲ್ಲ'


ಸಂವಿಧಾನ ಸೈನಿಕರ ಸಮಾವೇಶದಲ್ಲಿ ಪ್ರಾಧ್ಯಾಪಕರು ಹಾಗೂ ವಿದ್ಯಾರ್ಥಿಗಳು ಸಂವಿಧಾನ ಪೀಠಿಕೆ ವಾಚಿಸಿ ಪ್ರತಿಜ್ಞಾ ವಿಧಿ ಸ್ವೀಕರಿಸಿದರು
ಪ್ರಜಾವಾಣಿ ಚಿತ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸಂವಿಧಾನವು ಪೂಜಿಸುವ ವಸ್ತುವಲ್ಲ. ಅದು ಉದಾತ್ತ ಉದ್ದೇಶ ಹೊಂದಿರುವ ಪವಿತ್ರ ಗ್ರಂಥವಾಗಿದ್ದು, ಆತ್ಮಸಾಕ್ಷಿಯಿಂದ ಅದಕ್ಕೆ ಬದ್ಧರಾಗಿರಬೇಕು. ಅದುವೇ ನಾವು ಮಾಡುವ ನೈಜ ರಾಷ್ಟ್ರಸೇವೆ' ಎಂದು ಕಾನೂನು ಸಚಿವ ಎಚ್.ಕೆ. ಪಾಟೀಲ ಅಭಿಪ್ರಾಯಪಟ್ಟರು.

ಡಾ. ಮನಮೋಹನಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾಲಯ ನಗರದಲ್ಲಿ ಬುಧವಾರ ಹಮ್ಮಿಕೊಂಡಿದ್ದ ಸಂವಿಧಾನ ದಿನಾಚರಣೆ ಮತ್ತು ಸಂವಿಧಾನ ಸೈನಿಕರ ಸಮಾವೇಶದಲ್ಲಿ ಭಾರತ ಸಂವಿಧಾನದ ನಾಲ್ಕನೇ ದ್ವಿಭಾಷಾ ಆವೃತ್ತಿ ಪುಸ್ತಕವನ್ನು ಜನಾರ್ಪಣೆ ಮಾಡಿ, ಮಾತನಾಡಿದರು.

'ಧರ್ಮ ಗ್ರಂಥಗಳಲ್ಲಿ ಧರ್ಮದ ಹೆಜ್ಜೆ ಹಾಗೂ ಜೀವನ ವಿಧಾನಗಳ ಬಗ್ಗೆ ಹೇಳಲಾಗಿದೆ. ಅವುಗಳನ್ನು ಸರಿಯಾಗಿ ಅರ್ಥೈಸಿಕೊಂಡು ನಾವು ನಡೆಯಬೇಕಿದೆ. ಆದರೆ, ಆ ಗ್ರಂಥಗಳಿಗೆ ವಿಭೂತಿ, ಕುಂಕುಮ, ಗಂಧ ಹಚ್ಚಿ ದೇವರ ಮನೆಯಲ್ಲಿ ಇಡುವ ಕೆಲಸ ಮಾಡಲಾಗುತ್ತಿದೆ. ಬಸವಣ್ಣ ಅವರ ವಚನಗಳು ಸಹ ಭಾಷಣದ ವಸ್ತುಗಳಾಗಿವೆಯೇ ಹೊರತು, ವಚನಗಳ ಅನುಸಾರ ಯಾರು ನಡೆಯುತ್ತಿಲ್ಲ' ಎಂದು ಹೇಳಿದರು.

'ಕಳೆದ ಕೆಲ ವರ್ಷಗಳಿಂದ ಕೆಲವರು ಸಂವಿಧಾನಕ್ಕೆ ಅಗೌರವ ತೋರಿದ್ದಾರೆ. ಅದರ ಆಶಯವನ್ನು ತಿರಸ್ಕರಿಸಿದ್ದಾರೆ. ಹೊರಗುತ್ತಿಗೆ ವ್ಯವಸ್ಥೆಯು ಸಂವಿಧಾನದ ಉಲ್ಲಂಘನೆಯಾಗಿದೆ. ಈ ವ್ಯವಸ್ಥೆಯನ್ನು ಬದಲಾಯಿಸುವ ಚಿಂತನೆ ಸರ್ಕಾರಕ್ಕಿದ್ದು, ಆ ಪ್ರಯತ್ನ ಮಾಡುತ್ತಿದ್ದೇವೆ. ಸಂವಿಧಾನದ ಅನ್ವಯವೇ 'ಗ್ಯಾರಂಟಿ' ಯೋಜನೆಗಳನ್ನು ಜಾರಿ ಮಾಡಲಾಗಿದೆ' ಎಂದು ಅವರು ಹೇಳಿದರು.

ಕರ್ನಾಟಕ ರಾಜ್ಯ ಕಾನೂನು ಮತ್ತು ಸಂಸದೀಯ ಸುಧಾರಣಾ ಸಂಸ್ಥೆ ನಿರ್ದೇಶಕ ಪ್ರೊ.ಸಿ.ಎಸ್. ಪಾಟೀಲ, 'ಸಂವಿಧಾನ ಸಜೀವ ಗ್ರಂಥವಾಗಿದ್ದು, ಅದು ರಾಜ್ಯದ ಜನರ ಆಶೋತ್ತರಗಳನ್ನು ಈಡೇರಿಸುತ್ತಾ ಬಂದಿದೆ. ಸಂವಿಧಾನದ ಬಗ್ಗೆ ಅರಿತು ಸಾಗಬೇಕು' ಎಂದರು.

ಡಾ. ಮನಮೋಹನಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾಲಯದ ಕುಲಪತಿ ಪ್ರೊ. ರಮೇಶ್ ಬಿ., ಕುಲಸಚಿವ ನವೀನ್ ಜೋಸೆಫ್, ಡಾ. ಬಿ.ಆರ್. ಅಂಬೇಡ್ಕರ್ ಅಧ್ಯಯನ ಕೇಂದ್ರದ ನಿರ್ದೇಶಕಿ ಪ್ರೊ.ಕೆ.ಆರ್. ಜಲಜಾ, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಇಲಾಖೆಯ ಕಾರ್ಯದರ್ಶಿ ಜಿ. ಶ್ರೀಧರ್, ಕಾನೂನು ಮತ್ತು ಸಂಸದೀಯ ಸುಧಾರಣಾ ಸಂಸ್ಥೆಯ ಸಂಶೋಧನಾ ಮುಖ್ಯಸ್ಥ ರೇವಯ್ಯ ಒಡೆಯರ್ ಉಪಸ್ಥಿತರಿದ್ದರು.

ಟೊಮೆಟೊ 1 ಕೆ.ಜಿಗೆ ₹80

ಬೆಂಗಳೂರು: ನಗರದಲ್ಲಿ 15 ದಿನದಿಂದ ತೀವ್ರ ದರ ಕುಸಿತ ಕಂಡಿದ್ದ ಟೊಮೆಟೊದ ಬೆಲೆ ಮತ್ತೆ ಏರಿಕೆಯಾಗಿದೆ. ಪ್ರತಿ ಕೆ.ಜಿಗೆ ₹20ರಿಂದ ₹30ರಂತೆ ಮಾರಾಟವಾಗುತ್ತಿದ್ದ ಟೊಮೆಟೊ, ಈಗ ಕೆ.ಜಿ.ಗೆ ₹80ರಂತೆ ಮಾರಾಟವಾಗುತ್ತಿದೆ. ಟೊಮೆಟೊ ಬೆಳೆಯ ಇಳುವರಿ ಕುಂಠಿತಗೊಂಡಿದ್ದು, ಮಾರುಕಟ್ಟೆಯ ಬೇಡಿಕೆಗೆ ತಕ್ಕಂತೆ ಪೂರೈಕೆ ಆಗುತ್ತಿಲ್ಲ. ಆದ್ದರಿಂದ ದರ ಹೆಚ್ಚಳಗೊಂಡಿದೆ. ಕೆ.ಆರ್. ಮಾರುಕಟ್ಟೆಯಲ್ಲಿ ಟೊಮೆಟೊ ಪ್ರತಿ ಕೆ.ಜಿಗೆ ₹60ಕ್ಕೆ ದರವಿದ್ದರೆ, ಇತರೆ ಪ್ರದೇಶಗಳಲ್ಲಿ ₹80ರಂತೆ ಮಾರಾಟ ಮಾಡಲಾಗುತ್ತಿದೆ.

'ಮೂರು ನಾಲ್ಕು ದಿನಗಳಿಂದ ಸತತವಾಗಿ ಬೆಲೆ ಏರುತ್ತಲೇ ಸಾಗಿದೆ. ಚಿಕ್ಕಬಳ್ಳಾಪುರ ಹಾಗೂ ಕೋಲಾರ ದಿಂದ ಟೊಮೊಟೊ ನಗರಕ್ಕೆ ಬರುತ್ತದೆ. ಕಳೆದ ಮೂರು ನಾಲ್ಕು ದಿನಗಳಲ್ಲಿ ಪೂರೈಕೆ ಕಡಿಮೆಯಾಗಿದ್ದು, ಬೇಡಿಕೆ ಹೆಚ್ಚುವುದರ ಜೊತೆಗೆ ದರವು ಏರಿಕೆಯಾಗಿದೆ' ಎಂದು ತರಕಾರಿ ವ್ಯಾಪಾರಿ ಅಕ್ರಮ್ ತಿಳಿಸಿದರು.

'ಹೂಕೋಸು ₹80, ಮೆಣಸಿನಕಾಯಿ ₹70, ಬೆಂಡೆಕಾಯಿ, ಬದನೆಕಾಯಿ ಹಾಗೂ ಕ್ಯಾರೆಟ್ ಒಂದು ಕೆ.ಜಿಗೆ ₹60ರಂತೆ ಮಾರಾಟವಾಗುತ್ತದೆ' ಎಂದರು. 'ನಗರದ ಬಿನ್ನಿಮಿಲ್ಸ್ ಎಪಿಎಂಸಿಗೆ ಬುಧವಾರ 417 ಕ್ವಿಂಟಲ್ ಟೊಮೆಟೊ ಪೂರೈಕೆಯಾಗಿದೆ. ಪ್ರತಿ ಕ್ವಿಂಟಲ್‌ಗೆ ಕನಿಷ್ಠ ₹5 ಸಾವಿರ, ಗರಿಷ್ಠ ₹5,400ರಂತೆ ಮಾರಾಟವಾಗಿದೆ' ಎಂದು ಎಪಿಎಂಸಿ ಅಧಿಕಾರಿಗಳು ತಿಳಿಸಿದ್ದಾರೆ.


ಮಗು ಹಾಗೂ ಆಕೆಯ ತಾಯಿಗೆ ವೈದ್ಯರ ತಂಡ ಶುಭಹಾರೈಸಿತು. ಸಂಸ್ಥೆಯ ನಿರ್ದೇಶಕ ಡಾ.ಬಿ. ದಿನೇಶ್ ಉಪಸ್ಥಿತರಿದ್ದರು

ಜಯದೇವ: ಫಿಲಿಪ್ಪೀನ್ಸ್ ಮಗುವಿಗೆ ಶಸ್ತ್ರಚಿಕಿತ್ಸೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜನ್ಮಜಾತ ಹೃದಯ ಕಾಯಿಲೆಯಿಂದ ಬಳಲುತ್ತಿದ್ದ ಫಿಲಿಪ್ಪೀನ್ಸ್‌ನ ಎರಡು ವರ್ಷದ ಮಗುವಿಗೆ ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆಯಲ್ಲಿ ಯಶಸ್ವಿ ತೆರೆದ ಹೃದಯ ಶಸ್ತ್ರಚಿಕಿತ್ಸೆ ನಡೆಸಲಾಗಿದೆ.

ಅವಿಯನ್ನೈನ್ ಜೇಡ್ ಅಮೊರೊಸೊ ರೆ ಹೆಸರಿನ ಮಗುವು 'ಟೆಟ್ರಾಲಜಿ ಆಫ್ ಫಲ್ಲಾಟ್ (ಟಿಒಎಫ್)' ರೋಗದಿಂದ ಬಳಲುತ್ತಿತ್ತು. ಫಿಲಿಪ್ಪೀನ್ಸ್ ಹಾರ್ಟ್ ಸೆಂಟರ್‌ನಲ್ಲಿ ನಡೆಸಲಾದ ತಪಾಸಣೆಯಲ್ಲಿ ಈ ರೋಗ ದೃಢಪಟ್ಟಿತ್ತು. ಅಲ್ಲಿ ಅಗತ್ಯ ಚಿಕಿತ್ಸಾ ಸೌಲಭ್ಯ ಲಭ್ಯವಿರದ ಕಾರಣ, ರೋಟರಿ ಸಂಸ್ಥೆಯ ನೆರವಿನಿಂದ ಮಗುವನ್ನು ಇಲ್ಲಿಗೆ ಕರೆತರಲಾಗಿತ್ತು. ರಿಯಾಯಿತಿ ದರದಲ್ಲಿ ಶಸ್ತ್ರಚಿಕಿತ್ಸೆ ನಡೆಸಲಾಗಿದೆ ಎಂದು ಸಂಸ್ಥೆ ತಿಳಿಸಿದೆ.

'ಸಂಸ್ಥೆಗೆ ದಾಖಲಾದ ಸಂದರ್ಭದಲ್ಲಿ ಮಗು ತೀವ್ರ ಉಸಿರಾಟದ ಸಮಸ್ಯೆ, ಸೈನೋಸಿಸ್ ಹಾಗೂ ತೀವ್ರ ದಣಿವಿನಿಂದ ಬಳಲಿತ್ತು. ವೈದ್ಯಕೀಯ ತಪಾಸಣೆ ವೇಳೆ ರಕ್ತದಲ್ಲಿನ ಆಮ್ಲಜನಕ ಪ್ರಮಾಣ ಶೇ 75 ರಷ್ಟಿತ್ತು. ನ.1ರಂದು ದಾಖಲಾದ ಮಗುವಿಗೆ ಅಗತ್ಯ ಪರೀಕ್ಷೆಗಳನ್ನು ನಡೆಸಿ, ನ.10ರಂದು ತೆರೆದ ಹೃದಯ ಶಸ್ತ್ರಚಿಕಿತ್ಸೆ ನಡೆಸಲಾಯಿತು. ಚಿಕಿತ್ಸೆ ನಂತರ ಮಗುವಿನ ಆರೋಗ್ಯ ಸಂಪೂರ್ಣ ಸುಧಾರಿಸಿದ್ದು, ನ.26ರಂದು ಸಂಸ್ಥೆಯಿಂದ ಮಗು ತೆರಳಿದೆ' ಎಂದು ಸಂಸ್ಥೆಯ ನಿರ್ದೇಶಕ ಡಾ.ಬಿ. ದಿನೇಶ್ ಹೇಳಿದ್ದಾರೆ.

'ರೋಟರಿ ಬೆಂಗಳೂರು ಮಿಡ್‌ಟೌನ್, ರೋಟರಿ ನೀಡಿ ಹಾರ್ಟ್‌ಫೌಂಡೇಷನ್ ಮತ್ತು ಸಂಸ್ಥೆಯ ಸಹಯೋಗದಲ್ಲಿ ರಿಯಾಯಿತಿ ದರದಲ್ಲಿ ಮಗುವಿಗೆ ಚಿಕಿತ್ಸೆ ನೀಡಲಾಗಿದೆ' ಎಂದು ತಿಳಿಸಿದ್ದಾರೆ.

ಮಕ್ಕಳ ಹೃದ್ರೋಗ ತಜ್ಞರಾದ ಡಾ. ಜಯರಂಗನಾಥ, ಡಾ.ಪಿ.ಕೆ. ಸುನೀಲ್, ಡಾ. ರಶ್ಮಿ ಎ. ಕೋಟೆಚಾ, ಡಾ. ಹರೀಶ್ ಮಹಾಬಲ ಮುಖ್ರಿ ಹಾಗೂ ಹೃದಯದ ಅರಿವಳಿಕೆ ತಜ್ಞೆ ಡಾ. ಪರಿಮಳ ಪ್ರಸನ್ನ ಸಿಂಹ ಅವರನ್ನು ಒಳಗೊಂಡು ವೈದ್ಯರ ತಂಡ ಈ ಶಸ್ತ್ರಚಿಕಿತ್ಸೆ ನಡೆಸಿದೆ.

ಇಂದಿನಿಂದ ಪುಷ್ಪ ಪ್ರದರ್ಶನ ಕೆಪೆಕ್‌ನ 25 ಮಳಿಗೆಗಳು

ಪ್ರಜಾವಾಣಿ ವಾರ್ತೆ


25 ಮಳಿಗೆಗಳಲ್ಲಿ ಪಿಎಂಎಫ್‌ಎಂಇ ಯೋಜನೆಯ ವಿವಿಧ ಫಲಾನುಭವಿಗಳು, ಉತ್ಪನ್ನಗಳನ್ನು ಪ್ರದರ್ಶನ ಮಾಡಿ, ಮಾರಾಟ ಮಾಡಲಿದ್ದಾರೆ
ಸಿ.ಎನ್. ಶಿವಪ್ರಕಾಶ್, ಕೆಪೆಕ್ ವ್ಯವಸ್ಥಾಪಕ ನಿರ್ದೇಶಕ

ಬೆಂಗಳೂರು: ಕಬ್ಬನ್ ಉದ್ಯಾನದಲ್ಲಿ ನಡೆಯುವ ಪುಷ್ಪ ಪ್ರದರ್ಶನದಲ್ಲಿ ರಾಜ್ಯ ಕೃಷಿ ಉತ್ಪನ್ನಗಳ ಸಂಸ್ಕರಣೆ ಹಾಗೂ ರಫ್ತು ನಿಗಮ (ಕೆಪೆಕ್) 25 ಮಳಿಗೆಗಳನ್ನು ಸ್ಥಾಪಿಸಲಿದೆ.

'ನ.27ರಿಂದ ಡಿಸೆಂಬರ್ 7ರವರೆಗೆ ಪುಷ್ಪ ಪ್ರದರ್ಶನದಲ್ಲಿ ಪಿಎಂಎಫ್‌ಎಂಇ ಯೋಜನೆಯಡಿಯಲ್ಲಿ ಸ್ಥಾಪಿಸಿರುವ ಕಿರು ಆಹಾರ ಸಂಸ್ಕರಣಾ ಉದ್ದಿಮೆದಾರರ ಉತ್ಪನ್ನಗಳನ್ನು ಪ್ರದರ್ಶಿಸಲಾಗುತ್ತದೆ' ಎಂದು ಕೆಪೆಕ್‌ನ ವ್ಯವಸ್ಥಾಪಕ ನಿರ್ದೇಶಕ ಸಿ.ಎನ್. ಶಿವಪ್ರಕಾಶ್ ತಿಳಿಸಿದ್ದಾರೆ.

'ತೋಟಗಾರಿಕೆ ಇಲಾಖೆಯೊಂದಿಗೆ ಈ ಬಗ್ಗೆ ಒಪ್ಪಂದ ಮಾಡಿಕೊಳ್ಳಲಾಗಿದೆ. 11 ದಿನ ನಡೆಯುವ ಈ ಪುಷ್ಪ ಪ್ರದರ್ಶನದಲ್ಲಿ ಪ್ರಧಾನ ಮಂತ್ರಿ ಕಿರು ಆಹಾರ ಸಂಸ್ಕರಣಾ ಉದ್ದಿಮೆಗಳ ಯೋಜನೆಯ (ಪಿಎಂಎಫ್‌ಎಂಇ) ಕುರಿತು ಪ್ರಚಾರ ಮಾಡಲಾಗುತ್ತದೆ. ಜೊತೆಗೆ ಕಿರು ಆಹಾರ ಉದ್ದಿಮೆಗಳನ್ನು ಸ್ಥಾಪಿಸಲು ಈ ಯೋಜನೆ ಅಡಿಯಲ್ಲಿ ಕೇಂದ್ರ ಹಾಗೂ ರಾಜ್ಯ ಸರ್ಕಾರದಿಂದ ₹15 ಲಕ್ಷ ಸಹಾಯ ಧನ ನೀಡುವ ಬಗ್ಗೆ ಸಾರ್ವಜನಿಕರಿಗೆ ಮಾಹಿತಿ ಹಂಚಿಕೊಳ್ಳಲಾಗುತ್ತದೆ' ಎಂದು ಅವರು ಹೇಳಿದ್ದಾರೆ.

'ಪ್ರದರ್ಶನ ವೀಕ್ಷಿಸಲು ಬರುವ ಸಾರ್ವಜನಿಕರು ಸಿದ್ಧ ಸಿರಿಧಾನ್ಯ ಉತ್ಪನ್ನಗಳು, ಉಪ್ಪಿನಕಾಯಿ, ಚಟ್ನಿಪುಡಿ, ಪುಳಿಯೊಗರೆ ಮಿಶ್ರಣ, ಸಾಂಬಾರು ಪುಡಿ, ಚಿಕ್ಕಿ, ಒಣಹಣ್ಣು ಲಡ್ಡು, ಗಾಣದ ಎಣ್ಣೆ, ಖಾರದ ಪುಡಿ, ರಾಗಿ ಮಾಲ್ಟ್, ಹುರಿಹಿಟ್ಟು, ಬಿಸ್ಕತ್ತುಗಳು, ತೆಂಗು ಆಧಾರಿತ ಉತ್ಪನ್ನಗಳು, ಜೋಳದ ರೊಟ್ಟಿ, ಸಾವಯವ ಬೆಲ್ಲ, ಬಾಕಾಹು, ಗಿಣ್ಣು ಸೇರಿದಂತೆ ಮೊದಲಾದ ಗುಣಮಟ್ಟದ ಆಹಾರ ಉತ್ಪನ್ನಗಳನ್ನು ಖರೀದಿಸಬಹುದು' ಎಂದು ಸಿ.ಎನ್. ಶಿವಪ್ರಕಾಶ್ ತಿಳಿಸಿದ್ದಾರೆ.

ಕಾಲೇಜು ಚುನಾವಣೆ: ಅಧ್ಯಯನಕ್ಕೆ ಸಮಿತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕಾಲೇಜುಗಳಲ್ಲಿ ವಿದ್ಯಾರ್ಥಿ ಚುನಾವಣೆ ನಡೆಸುವ ಕುರಿತು ಸಾಧಕ, ಬಾಧಕಗಳ ಬಗ್ಗೆ ಅಧ್ಯಯನ ನಡೆಸಿ, ವರದಿ ನೀಡಲು ಸಮಿತಿ ರಚಿಸಲಾಗುವುದು' ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಹೇಳಿದರು.

'ಹಿಂದೆ ವಿದ್ಯಾರ್ಥಿ ಚುನಾವಣೆಗಳಿಂದ ನಾಯಕತ್ವ ಬೆಳೆಸಲು ಸಾಧ್ಯವಾಗಿತ್ತು. ನಾನು ಅಂತಿಮ ವರ್ಷದ ಪದವಿಯಲ್ಲಿ ಇದ್ದಾಗಲೇ ಸ್ಥಳೀಯ ಸಂಸ್ಥೆ ಚುನಾವಣೆಯಲ್ಲಿ ಸ್ಪರ್ಧಿಸಲು ಟಿಕೆಟ್ ಸಿಕ್ಕಿತು. ಕಾಂಗ್ರೆಸ್ ಪಕ್ಷದ ಹಲವು ನಾಯಕರು ವಿದ್ಯಾರ್ಥಿ ಹೋರಾಟದಿಂದಲೇ ಬಂದವರು. ಆದರೆ, ವಿದ್ಯಾರ್ಥಿ ಚುನಾವಣೆಗಳಲ್ಲಿ ಅಪರಾಧ ಚಟುವಟಿಕೆಗಳು ನಡೆಯುತ್ತಿದ್ದವು. ಅವುಗಳನ್ನು ನಿಯಂತ್ರಿಸುವ ಅಗತ್ಯವಿದೆ' ಎಂದು ಸುದ್ದಿಗಾರರಿಗೆ ತಿಳಿಸಿದರು.

'ಕಾನೂನು ಬ್ಯಾಂಕ್': 'ಮತ ಕಳವು ಪ್ರಕರಣಗಳನ್ನು ತಡೆಯಲು ರಕ್ತ ನಿಧಿ ಮಾದರಿಯಲ್ಲಿ 224 ವಿಧಾನಸಭಾ ಕ್ಷೇತ್ರದಲ್ಲೂ ಕನಿಷ್ಠ 10 ವಕೀಲರಿರುವ ಕಾನೂನು ಬ್ಯಾಂಕ್ ಸ್ಥಾಪಿಸಲಾಗುವುದು' ಎಂದು ಮಾಹಿತಿ ನೀಡಿದರು.

ನಗರದಲ್ಲಿ ಇಂದು

ಮಕ್ಕಳ ವಚನ ಮೇಳ: ಅತಿಥಿಗಳು: ಸಿದ್ಧೇಶ್ ನಾಗೇಂದ್ರ, ಎಸ್. ಪಿನಾಕಪಾಣಿ, ಬಿ.ಎಸ್. ಪುಟ್ಟರಾಜು, ಗಂಗಾಂಬಿಕಾ ಮಲ್ಲಿಕಾರ್ಜುನ್, ಬಸವನಗೌಡ, ಆಯೋಜನೆ: ವಚನ ಜ್ಯೋತಿ ಬಳಗ, ಸ್ಥಳ: ಕಲಾಗ್ರಾಮ, ಮಲ್ಲತ್ತಹಳ್ಳಿ, ಬೆಳಿಗ್ಗೆ 9

ಉಚಿತ ಆರೋಗ್ಯ ಶಿಬಿರ: ಆಯೋಜನೆ ಮತ್ತು ಸ್ಥಳ: ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕೆ.ಆರ್. ಪುರ, ಬೆಳಿಗ್ಗೆ 10

ಕಿಶೋರ ಸಂಭ್ರಮ–2025: ಉದ್ಘಾಟನೆ: ಕೆ.ಇ. ರಾಧಾಕೃಷ್ಣ, ಅಧ್ಯಕ್ಷತೆ: ಕೆ. ಮೋಹನ್ ದೇವ್ ಆಳ್ವ, ಅತಿಥಿ: ವೃಷಾಂಕ ಭಟ್, ಬಾಲಾಧ್ಯಕ್ಷತೆ: ಹರ್ಷಿತಾ ಕೆ., ಆಯೋಜನೆ ಮತ್ತು ಸ್ಥಳ: ಅಖಿಲ ಕರ್ನಾಟಕ ಮಕ್ಕಳ ಕೂಟ, ಆರ್. ಕಲ್ಯಾಣಮ್ಮ ಮಕ್ಕಳ ಆಟದ ಮೈದಾನ, ಕೋಟೆ, ಬೆಳಿಗ್ಗೆ 10

'ಭಾಷೆ, ಸಂಸ್ಕೃತಿ ಮತ್ತು ಜಾಗತಿಕ ಶಾಂತಿ: ಶಾಂತಿಯುತ ಜಗತ್ತಿಗಾಗಿ ಸಂವಾದ' ಅಂತರರಾಷ್ಟ್ರೀಯ ಸಮ್ಮೇಳನ: ಉದ್ಘಾಟನೆ: ಎಫ್. ಫೆಡೆಲ್, ರಾಜೇಂದ್ರ ಚೆನ್ನಿ, ಅತಿಥಿಗಳು: ಬಿ. ರಮೇಶ್, ಆಯೋಜನೆ: ಡಾ. ಮನಮೋಹನ್ ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾಲಯ, ಸ್ಥಳ: ಜ್ಞಾನಜ್ಯೋತಿ ಸಭಾಂಗಣ, ಸೆಂಟ್ರಲ್ ಕಾಲೇಜಿನ ಆವರಣ, ಬೆಳಿಗ್ಗೆ 10.30

ಯುವ ಸಂಸತ್ತು ಅಧಿವೇಶನ: ಅತಿಥಿಗಳು: ಯು.ಟಿ. ಖಾದರ್, ಬೈರತಿ ಸುರೇಶ್, ನಸ್ರೀನ್ ತಾಜ್, ಮಕ್ಸೂದ್ ಇಮ್ರಾನ್, ಅಬ್ದುಲ್ ವಾಜಿದ್, ಆಯೋಜನೆ: ಇಸ್ಲಾಮಿಕ್ ಇನ್ಫಾರ್ಮೇಶನ್ ಸೆಂಟರ್, ಸ್ಥಳ: ಕಬೀರ್ ಐಎನ್‌ಡಿ ಪಿಯು ಕಾಲೇಜು, ಆರ್.ಟಿ. ನಗರ, ಬೆಳಿಗ್ಗೆ 11

'ಶಾಲೆಯ ಅಂಗಳದಲ್ಲಿ ತಾರಾಲಯ' ಡಿಜಿಟಲ್ ಮೊಬೈಲ್ ಪ್ಲಾನೆಟೇರಿಯಂ ಯೋಜನೆಗೆ ಚಾಲನೆ: ಸಿದ್ದರಾಮಯ್ಯ, ಉಪಸ್ಥಿತಿ: ಎನ್.ಎಸ್. ಬೋಸರಾಜು, ಆಯೋಜನೆ: ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ, ಸ್ಥಳ: ವಿಧಾನಸೌಧದ ಬೃಹತ್ ಮೆಟ್ಟಿಲುಗಳು, ಬೆಳಿಗ್ಗೆ 11

ರಾಷ್ಟ್ರಕವಿ ಕುವೆಂಪು ಅವರ ಐದು ದಿನಗಳ ರಾಜ್ಯಮಟ್ಟದ ನಾಟಕೋತ್ಸವ: 'ಶ್ರೀಮನ್ಮೂಕವಾಗಿತ್ತು' ನಾಟಕ ಪ್ರದರ್ಶನ: ಅಮರೇಶ್ವರ ವಿಜಯ ನಾಟಕ ಮಂಡಳಿ, ಸ್ಥಳ: ಎಚ್. ತಿಮ್ಮೇಗೌಡ ಸಭಾಂಗಣ, ವಿದ್ಯಾನಿಕೇತನ ಪಬ್ಲಿಕ್ ಶಾಲೆ, ಸುಂಕದಕಟ್ಟೆ, ಮಧ್ಯಾಹ್ನ 1.30

'ಸಂವಿಧಾನ' ಕುರಿತ ಎರಡನೇ ರಾಜ್ಯಮಟ್ಟದ ಪ್ರಬಂಧ ಸ್ಪರ್ಧೆ ಬಹುಮಾನ ವಿತರಣೆ: ಸತೀಶ್ ಜಾರಕಿಹೊಳಿ, ಅಧ್ಯಕ್ಷತೆ: ಎಚ್.ಎನ್. ನಾಗಮೋಹನದಾಸ್, ಅತಿಥಿ: ಬಿ.ಸಿ. ನಾಗೇಂದ್ರ ಕುಮಾರ್, ಶ್ರೀಹರಿ ಎ.ವಿ., ಆಯೋಜನೆ: ಸಂವಿಧಾನ ಓದು ಅಭಿಯಾನ–ಕರ್ನಾಟಕ, ಸ್ಥಳ: ಎಂಜಿನಿಯರ್ ಭವನ, ಲೋಕೋಪಯೋಗಿ ಇಲಾಖೆಯ ಆವರಣ, ಕೆ.ಆರ್. ವೃತ್ತ, ನೃಪತುಂಗ ರಸ್ತೆ, ಮಧ್ಯಾಹ್ನ 3

'ಸುಭದ್ರಾ ಪರಿಣಯ' ನಾಟಕ ಪ್ರದರ್ಶನ: ಆಯೋಜನೆ: ಶ್ರೀ ಸಾಯಿ ಕಲಾವೃಂದ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಮಧ್ಯಾಹ್ನ 3

ಡಾಕ್ಟರೇಟ್ ಪದವಿ ಪ್ರದಾನ: ಥಾವರಚಂದ್ ಗೆಹಲೋತ್, ಸ್ವೀಕರಿಸುವವರು: ಯು.ಟಿ. ಖಾದರ್, ಆಯೋಜನೆ: ಬೆಂಗಳೂರು ವಿಶ್ವವಿದ್ಯಾಲಯ, ಸ್ಥಳ: ಬ್ಯಾಂಕ್ವೆಟ್ ಹಾಲ್, ರಾಜಭವನ, ಸಂಜೆ 4

'ತೀ.ನಂ.ಶ್ರೀ ವಿಮರ್ಶಾಲೋಕ' ಉಪನ್ಯಾಸ: ಎಚ್. ದಂಡಪ್ಪ, ಅಧ್ಯಕ್ಷತೆ: ಬೈರಮಂಗಲ ರಾಮೇಗೌಡ, ಆಯೋಜನೆ ಮತ್ತು ಸ್ಥಳ: ಬಿ.ಎಂ.ಶ್ರೀ ಪ್ರತಿಷ್ಠಾನ, ಎನ್.ಆರ್. ಕಾಲೊನಿ, ಸಂಜೆ 5

ಕರ್ನಾಟಕ ರಾಜ್ಯೋತ್ಸವ: ಭಾಗವಹಿಸುವವರು: ಪದ್ಮಿನಿ ನಾಗರಾಜ್, ಗಾಯನ: ಸುಧೀಂದ್ರ, ಸುಮಲತಾ ಮಂಜುನಾಥ್, ವೈಜಯಂತಿ ದಿವೇಕರ್, ನಿಶಿತಾ ಪ್ರಸಾದ್, ನೃತ್ಯ ಪ್ರದರ್ಶನ: ಭರತನಾಟ್ಯಾಂಜಲಿ ನಾಟ್ಯ ಶಾಲೆ ವಿದ್ಯಾರ್ಥಿಗಳು, ಆಯೋಜನೆ: ಆರೋಹಣ, ಸ್ಥಳ: ಪ್ರಯೋಗ ಸ್ಟುಡಿಯೊ–ಥಿಯೇಟರ್, ಬನಶಂಕರಿ ಮೂರನೇ ಹಂತ, ಸಂಜೆ 5.30

ಅಭಿನಂದನಾ ಸಮಾರಂಭ: ಉದ್ಘಾಟನೆ: ನಲ್ಲೂರು ಪ್ರಸಾದ್, ಅತಿಥಿಗಳು: ಸಲೀಂ, ಮಹೇಶ್ ಸುಖದಾರೆ, ಪಿ. ತ್ಯಾಗರಾಜ್, ಕೆ.ಎಂ. ನಾರಾಯಣ, ಶ್ರೀನಿವಾಸ ಹುಚ್ಚಯ್ಯ, 'ಉತ್ತಮ ಸಹಕಾರಿಗಳು' ಪ್ರಶಸ್ತಿ ಸ್ವೀಕರಿಸುವವರು: ಸಿ.ವಿ. ಬಾಲಗಂಗಾಧರ್, ಆಯೋಜನೆ: ದಿ. ಹನುಮಂತನಗರ ಸಹಕಾರಿ ಬ್ಯಾಂಕ್, ಸ್ಥಳ: ಅಶ್ವಥ್ ಕಲಾಭವನ, ಎನ್.ಆರ್. ಕಾಲೊನಿ, ಸಂಜೆ 6



ಹೂಡಿಕೆಯಲ್ಲಿ ಜಾಣತನದ ನಿಯಮವೆಂದರೆ, ಇತರರು ಯಾವಾಗ ತಮ್ಮ ಷೇರುಗಳನ್ನು ಮಾರಾಟ ಮಾಡುತ್ತಾರೋ, ಆಗ ಖರೀದಿಸಬೇಕು, ಯಾವಾಗ ಇತರರು ಖರೀದಿ ಮಾಡುತ್ತಾರೋ ಆಗ ಮಾರಬೇಕು
ಜೊನಾಥನ್ ಸ್ಯಾಕ್ಸ್, ಬರಹಗಾರ

ದುಡ್ಡಿನಂಥಾ ಮಾತು

ಫ್ಲೆಕ್ಸಿಕ್ಯಾಪ್ vs ಮಲ್ಟಿಕ್ಯಾಪ್

• ಅಪರ್ಣಾ ಶಂಕರ್

ಹೂಡಿಕೆಯ ಜಗತ್ತಿನಲ್ಲಿ ಬೇರೆ ಬೇರೆ ಮಾರುಕಟ್ಟೆ ಬಂಡವಾಳ ವರ್ಗಕ್ಕೆ ಸೇರಿದ (ಅಂದರೆ, ಮಿಡ್‌ಕ್ಯಾಪ್, ಸ್ಮಾಲ್‌ಕ್ಯಾಪ್ ಮತ್ತು ಲಾರ್ಜ್‌ಕ್ಯಾಪ್) ಕಂಪನಿಗಳಲ್ಲಿ ಹೂಡಿಕೆ ಮೊತ್ತವನ್ನು ಹಂಚಿಕೆ ಮಾಡುವುದು ದೀರ್ಘಾವಧಿಯಲ್ಲಿ ಸಂಪತ್ತು ಸೃಷ್ಟಿಸಲು ಮಹತ್ವದ್ದಾಗುತ್ತದೆ. ಹೂಡಿಕೆ ಮೊತ್ತವನ್ನು ಭಿನ್ನ ವರ್ಗಗಳ ಕಂಪನಿಗಳಲ್ಲಿ ತೊಡಗಿಸುವ ಫಂಡ್‌ಗಳ ಪೈಕಿ ಫ್ಲೆಕ್ಸಿಕ್ಯಾಪ್ ಮತ್ತು ಮಲ್ಟಿಕ್ಯಾಪ್ ಫಂಡ್‌ಗಳು ಭಿನ್ನವಾಗಿ ನಿಲ್ಲುತ್ತವೆ. ಮೇಲ್ನೋಟಕ್ಕೆ ಈ ಎರಡೂ ಬಗೆಯ ಫಂಡ್‌ಗಳು ಒಂದೇ ರೀತಿ ಕಂಡರೂ, ಅವು ಅನುಸರಿಸುವ ತತ್ತ್ವ ಬಹಳ ಭಿನ್ನ. ಈ ಎರಡೂ ಬಗೆಯ ಫಂಡ್‌ಗಳು ಭಿನ್ನ ಬಗೆಯ ಹೂಡಿಕೆದಾರರಿಗೆ ಹಾಗೂ ಭಿನ್ನವಾದ ಮಾರುಕಟ್ಟೆ ಸ್ಥಿತಿಗಳಿಗೆ ಸರಿಹೊಂದುತ್ತವೆ.

ರಚನೆಯಲ್ಲಿನ ವ್ಯತ್ಯಾಸ: ಈ ಎರಡು ಬಗೆಯ ಮ್ಯೂಚುವಲ್ ಫಂಡ್‌ಗಳು ಹೂಡಿಕೆದಾರರ ಹಣವನ್ನು ಮಾರುಕಟ್ಟೆಯ ಭಿನ್ನ ವಲಯಗಳಲ್ಲಿ ಹೇಗೆ ತೊಡಗಿಸಬೇಕು ಎಂಬುದಕ್ಕೆ ಸಂಬಂಧಿಸಿದ ನಿಯಮಗಳ ಚೌಕಟ್ಟಿನಲ್ಲೇ ಮುಖ್ಯವಾದ ವ್ಯತ್ಯಾಸ ಇದೆ. ಫ್ಲೆಕ್ಸಿಕ್ಯಾಪ್ ಫಂಡ್‌ನಲ್ಲಿ ಹೂಡಿಕೆದಾರರ ಹಣವನ್ನು ಲಾರ್ಜ್‌ಕ್ಯಾಪ್, ಮಿಡ್‌ಕ್ಯಾಪ್ ಮತ್ತು ಸ್ಮಾಲ್‌ಕ್ಯಾಪ್ ವಲಯದ ಷೇರುಗಳಲ್ಲಿ ತೊಡಗಿಸುವ ವಿಚಾರದಲ್ಲಿ ನಿಧಿ ನಿರ್ವಾಹಕರಿಗೆ ಸಂಪೂರ್ಣ ಸ್ವಾತಂತ್ರ್ಯ ಇರುತ್ತದೆ. ಇಲ್ಲಿ ಅವರಿಗೆ ಯಾವುದೇ ಒಂದು ವಲಯದಲ್ಲಿ ಕನಿಷ್ಠ ಇಂತಿಷ್ಟು ಪ್ರಮಾಣದಲ್ಲಿ ಅಥವಾ ಗರಿಷ್ಠ ಇಂತಿಷ್ಟು ಪ್ರಮಾಣದವರೆಗೆ ಮಾತ್ರ ಹಣ ತೊಡಗಿಸಬೇಕು ಎಂಬ ನಿರ್ಬಂಧ ಇರುವುದಿಲ್ಲ. ಮಾರುಕಟ್ಟೆ ಮೌಲ್ಯ, ಕಂಪನಿಗಳ ಗಳಿಕೆಯ ಮುನ್ನೋಟ ಹಾಗೂ ಆರ್ಥಿಕ ಬದಲಾವಣೆಗಳನ್ನು ಆಧರಿಸಿ ಹೂಡಿಕೆಯಲ್ಲಿ ಮಾರ್ಪಾಡು ತರಲು ನಿಧಿ ನಿರ್ವಾಹಕರಿಗೆ ಸ್ವಾತಂತ್ರ್ಯ ಇರುತ್ತದೆ.

ಆದರೆ ಮಲ್ಟಿಕ್ಯಾಪ್ ಫಂಡ್‌ಗಳು ಈ ರೀತಿ ಅಲ್ಲ. ಇಲ್ಲಿ ಭಾರತೀಯ ಷೇರುಪೇಟೆ ನಿಯಂತ್ರಣ ಮಂಡಳಿಯ (ಸೆಬಿ) ನಿಯಮಗಳ ಅನ್ವಯ, ಲಾರ್ಜ್‌ಕ್ಯಾಪ್, ಮಿಡ್‌ಕ್ಯಾಪ್ ಹಾಗೂ ಸ್ಮಾಲ್‌ಕ್ಯಾಪ್ ವರ್ಗದ ಷೇರುಗಳಲ್ಲಿ ಕನಿಷ್ಠ ತಲಾ ಶೇಕಡ 25ರಷ್ಟು ಮೊತ್ತವನ್ನು ತೊಡಗಿಸಬೇಕಾಗುತ್ತದೆ. ಇನ್ನುಳಿದ ಶೇ 25ರಷ್ಟು ಮೊತ್ತವನ್ನು ನಿಧಿ ನಿರ್ವಾಹಕರು ತಮ್ಮ ವಿವೇಚನೆ ಬಳಸಿ ತೊಡಗಿಸಬಹುದು. ಬೇರೆ ಬೇರೆ ವರ್ಗದ ಷೇರುಗಳಲ್ಲಿ ನಿರ್ದಿಷ್ಟ ಪ್ರಮಾಣದ ಹಣವನ್ನು ಕಡ್ಡಾಯವಾಗಿ ತೊಡಗಿಸಬೇಕು ಎಂಬ ನಿಯಮವು ಎಲ್ಲ ಸಂದರ್ಭಗಳಲ್ಲಿಯೂ ಮಾರುಕಟ್ಟೆಯ ಎಲ್ಲ ವರ್ಗಗಳ ಕಂಪನಿಗಳಲ್ಲಿ ಸಮತೋಲನದ ಹೂಡಿಕೆಯನ್ನು ಖಾತರಿಪಡಿಸುತ್ತದೆ.

ಹೂಡಿಕೆಯ ಹಿಂದೆ ತಾತ್ತ್ವಿಕತೆ: ಫ್ಲೆಕ್ಸಿಕ್ಯಾಪ್ ಫಂಡ್‌ಗಳಲ್ಲಿ ಹೂಡಿಕೆಯ ಕುರಿತಾದ ತೀರ್ಮಾನ ತೆಗೆದುಕೊಳ್ಳುವ ಸಂಪೂರ್ಣ ಸ್ವಾತಂತ್ರ್ಯ ನಿಧಿ ನಿರ್ವಾಹಕರಿಗೆ ಇರುತ್ತದೆ. ನಿಧಿ ನಿರ್ವಾಹಕರು ನಡೆಸುವ ಅಧ್ಯಯನ, ಅವರು ಅರ್ಥ ವ್ಯವಸ್ಥೆಯ ಬಗ್ಗೆ ಹೊಂದಿರುವ ಮುನ್ನೋಟ, ಬಂಡವಾಳ ಮಾರುಕಟ್ಟೆಯ ಭಿನ್ನ ವರ್ಗಗಳಿಗೆ ಸೇರಿದ ಷೇರುಗಳಲ್ಲಿ ಸಿಗಬಹುದಾದ ಲಾಭದ ಬಗ್ಗೆ ಅವರು ಹೊಂದಿರುವ ಗ್ರಹಿಕೆ ಆಧರಿಸಿ ಫಂಡ್‌ನ ಪೋರ್ಟ್‌ಫೋಲಿಯೊ ರೂಪುಗೊಳ್ಳುತ್ತದೆ. ಹೂಡಿಕೆಯ ವಿಚಾರದಲ್ಲಿ ಇರುವ ಸ್ವಾತಂತ್ರ್ಯದ ಕಾರಣದಿಂದಾಗಿ, ಹೂಡಿಕೆ ಮೊತ್ತವು ಒಂದು ಅಥವಾ ಎರಡು ವರ್ಗಗಳಿಗೆ ಸೇರಿದ



ಷೇರುಗಳಲ್ಲಿ ಹೆಚ್ಚು ವಿನಿಯೋಗ ಆಗಬಹುದು.

ಉದಾಹರಣೆಗೆ ಹೇಳುವುದಾದರೆ, ಮಾರುಕಟ್ಟೆಯಲ್ಲಿ ಚಂಚಲತೆ ಹೆಚ್ಚಿದ್ದಾಗ ಲಾರ್ಜ್‌ಕ್ಯಾಪ್ ಫಂಡ್‌ಗಳಲ್ಲಿ ಹೆಚ್ಚು ಮೊತ್ತ ವಿನಿಯೋಗ ಆಗಬಹುದು. ಮಾರುಕಟ್ಟೆಯಲ್ಲಿ ಬೆಳವಣಿಗೆ ಹೆಚ್ಚು ಕಾಣುವ ಸಂದರ್ಭಗಳಲ್ಲಿ ಹೂಡಿಕೆ ಮೊತ್ತವು ಮಿಡ್‌ಕ್ಯಾಪ್ ಹಾಗೂ ಸ್ಮಾಲ್‌ಕ್ಯಾಪ್ ವರ್ಗದ ಷೇರುಗಳಲ್ಲಿ ಜಾಸ್ತಿ ವಿನಿಯೋಗ ಆಗಬಹುದು. ಆದರೆ, ಹೂಡಿಕೆಯಲ್ಲಿ ವೈವಿಧ್ಯ ಇರಬೇಕು ಎಂದು ಬಯಸುವವರಿಗೆ ಮಲ್ಟಿಕ್ಯಾಪ್ ಫಂಡ್‌ಗಳು ಹೆಚ್ಚು ಇಷ್ಟವಾಗಬಹುದು. ಈ ಬಗೆಯ ಫಂಡ್‌ಗಳು ಬಂಡವಾಳ ಮಾರುಕಟ್ಟೆಯ ಎಲ್ಲ ವಲಯಗಳಲ್ಲಿ ಹಣ ತೊಡಗಿಸುತ್ತವೆ, ಮಿಡ್‌ಕ್ಯಾಪ್ ಹಾಗೂ ಸ್ಮಾಲ್‌ಕ್ಯಾಪ್ ವರ್ಗದ ಕಂಪನಿಗಳಲ್ಲಿ ಕೂಡ ಹಣ ತೊಡಗಿಸುತ್ತವೆ. ಇದೇ ಸಂದರ್ಭದಲ್ಲಿ ಅವು ಲಾರ್ಜ್‌ಕ್ಯಾಪ್ ವಲಯದ ಕಂಪನಿಗಳಲ್ಲಿಯೂ ಅರ್ಥಪೂರ್ಣ ಪ್ರಮಾಣದಲ್ಲಿ ಹಣ ಹೂಡಿಕೆ ಮಾಡಿರುತ್ತವೆ. ಇಲ್ಲಿ ನಿಧಿ ನಿರ್ವಾಹಕರು ಕೆಲವೊಂದಿಷ್ಟು ತೀರ್ಮಾನಗಳನ್ನು ತಾವೇ ತೆಗೆದುಕೊಳ್ಳುತ್ತಾರಾದರೂ, ನಿಗದಿತವಾದ ಹೂಡಿಕೆ ಚೌಕಟ್ಟಿನ ವ್ಯಾಪ್ತಿಯನ್ನು ಮೀರುವುದಿಲ್ಲ.

ಪೋರ್ಟ್‌ಫೋಲಿಯೊ ಹೇಗಿರುತ್ತದೆ?: ಫ್ಲೆಕ್ಸಿಕ್ಯಾಪ್ ಫಂಡ್‌ಗಳ ವಿಚಾರದಲ್ಲಿ ಹೂಡಿಕೆಗೆ ಬಹಳ ನಿರ್ಬಂಧಗಳು ಇರುವುದಿಲ್ಲವಾದ ಕಾರಣದಿಂದಾಗಿ, ಅವು ಒಂದೇ ವರ್ಗದ ಕಂಪನಿಗಳ ಷೇರುಗಳಲ್ಲಿ ಹೆಚ್ಚಿನ ಮೊತ್ತವನ್ನು ತೊಡಗಿಸಬಹುದು. ಉದಾಹರಣೆಗೆ, ಮಾರುಕಟ್ಟೆಯು ಬಹಳ ಚಂಚಲವಾಗಿರುವ ಸಂದರ್ಭಗಳಲ್ಲಿ ಈ ಬಗೆಯ ಫಂಡ್‌ಗಳು ಲಾರ್ಜ್‌ಕ್ಯಾಪ್ ಕಂಪನಿಗಳಲ್ಲಿ ಶೇಕಡ 70ರಿಂದ ಶೇ 80ರಷ್ಟು ಹಣ ತೊಡಗಿಸಬಹುದು.

ಆರ್ಥಿಕ ಸ್ಥಿತಿಯು ಬಹಳ ಅನುಕೂಲಕರವಾದ ಸಂದರ್ಭದಲ್ಲಿ ಅವು ಮಿಡ್‌ಕ್ಯಾಪ್ ಹಾಗೂ ಸ್ಮಾಲ್‌ಕ್ಯಾಪ್ ಕಂಪನಿಗಳಲ್ಲಿ ಹೆಚ್ಚಿನ ಮೊತ್ತ ಹಂಚಿಕೆ ಮಾಡಬಹುದು. ಬದಲಾವಣೆಗೆ ಇರುವ ಈ ಅವಕಾಶವು ಚಂಚಲತೆ ಹೆಚ್ಚಿರುವ ಸಂದರ್ಭಗಳಲ್ಲಿ, ಹೂಡಿಕೆಯ ಹಣ ಕರಗುವ ಅಪಾಯವನ್ನು ತಗ್ಗಿಸುತ್ತದೆ. ಅಲ್ಲದೆ, ಹೂಡಿಕೆಗೆ ಹೊಸ ಅವಕಾಶಗಳು ಬಂದಾಗ ಅದನ್ನು ತಕ್ಷಣ ಬಳಸಿಕೊಳ್ಳಲು ನೆರವಾಗುತ್ತದೆ.

ಆದರೆ ಮಲ್ಟಿಕ್ಯಾಪ್ ಫಂಡ್‌ಗಳು ಹೂಡಿಕೆಯ ವಿಚಾರದಲ್ಲಿ ಸಮತೋಲನವನ್ನು ಕಾಯ್ದುಕೊಳ್ಳುತ್ತವೆ. ಬಂಡವಾಳ ಮಾರುಕಟ್ಟೆಯ ಯಾವುದೇ ಒಂದು ವರ್ಗದ ಕಂಪನಿಗಳು ಹೂಡಿಕೆಯಲ್ಲಿ ಹೆಚ್ಚಿನ ಪ್ರಾಧಾನ್ಯ ಪಡೆಯದಂತೆ, ನಿಗದಿತ ಮಿತಿಗಿಂತ ಹೆಚ್ಚಿನ ಪಾಲನ್ನು ಪಡೆಯದಂತೆ ನೋಡಿಕೊಳ್ಳುತ್ತವೆ. ಈ ಸಮತೋಲನದ ನಡೆಯು ಯಾವುದೇ ಒಂದು ವಲಯಕ್ಕೆ ಅತಿಯಾದ ಪ್ರಮಾಣದಲ್ಲಿ ಹಣದ ಹೂಡಿಕೆ ಆಗದಂತೆ ನೋಡಿಕೊಳ್ಳುತ್ತದೆ. ಆದರೆ, ಒಂದು ವರ್ಗದ ಷೇರುಗಳ ಮೌಲ್ಯವು ಬಹಳ ಹೆಚ್ಚಾದರೆ ಅದರಿಂದ ಸಿಗಬಹುದಾದ ಲಾಭದ ಪ್ರಮಾಣ ಕೂಡ ಮಿತಿಯಲ್ಲಿ ಇರುತ್ತದೆ.

ಹೂಡಿಕೆಯ ಅವಧಿ ಮತ್ತು ಲಾಭದ ಬಗೆ: ಈ ಎರಡು ಬಗೆಯ ಫಂಡ್‌ಗಳಲ್ಲಿ ಇರುವ ಈ ವ್ಯತ್ಯಾಸಗಳು ಇವು ದೀರ್ಘಾವಧಿಯಲ್ಲಿ ನೀಡುವ ಲಾಭದ ಪ್ರಮಾಣದ ಮೇಲೆಯೂ ಪರಿಣಾಮ ಬೀರುತ್ತವೆ. ಫ್ಲೆಕ್ಸಿಕ್ಯಾಪ್ ಫಂಡ್‌ಗಳನ್ನು ಮಧ್ಯಮ ಅವಧಿಯಾದ 3ರಿಂದ 4 ವರ್ಷಗಳನ್ನು ಗಮನದಲ್ಲಿ ಇರಿಸಿಕೊಂಡು ಆಯ್ಕೆ ಮಾಡಿಕೊಳ್ಳಬಹುದು. ಏಕೆಂದರೆ, ಈ ಫಂಡ್‌ಗಳು ಹೂಡಿಕೆದಾರರ ಹಣವನ್ನು ಬಹಳ ಕ್ರಿಯಾಶೀಲವಾಗಿ ತೊಡಗಿಸುವುದರಿಂದಾಗಿ, ಮಾರುಕಟ್ಟೆಯಲ್ಲಿ ಆಗುವ ಬದಲಾವಣೆಗಳು ಹಾಗೂ ಅಲ್ಲಿನ ಚಂಚಲತೆಯನ್ನು ಪರಿಣಾಮಕಾರಿಯಾಗಿ ನಿರ್ವಹಿಸಲು ಸಾಧ್ಯವಾಗುತ್ತದೆ.

ಮಲ್ಟಿಕ್ಯಾಪ್ ಫಂಡ್‌ಗಳು ದೀರ್ಘಾವಧಿಯಲ್ಲಿ, ಅಂದರೆ 5ರಿಂದ 6 ವರ್ಷಗಳ ಅಥವಾ ಅದಕ್ಕಿಂತ ಹೆಚ್ಚಿನ ಹೂಡಿಕೆಯ ಅವಧಿಯಲ್ಲಿ ನಿಜಕ್ಕೂ ಹೆಚ್ಚಿನ ಪ್ರಯೋಜನ ತಂದುಕೊಡಬಲ್ಲವು. ಇಷ್ಟು ದೀರ್ಘ ಅವಧಿಗೆ ಹಣ ತೊಡಗಿಸಿದಾಗ ಸ್ಮಾಲ್‌ಕ್ಯಾಪ್ ಮತ್ತು ಮಿಡ್‌ಕ್ಯಾಪ್ ವರ್ಗದ ಷೇರುಗಳ ಮೌಲ್ಯವರ್ಧನೆಯ ಸಾಧ್ಯತೆಯು ಹೆಚ್ಚಿನ ಮಟ್ಟದಲ್ಲಿರುತ್ತದೆ. ಮಾರುಕಟ್ಟೆಯ ಹೆಚ್ಚಿನ ವಲಯಗಳಲ್ಲಿ ಹಣ ತೊಡಗಿಸುವುದರಿಂದ, ಪ್ರವರ್ಧಮಾನಕ್ಕೆ ಬರುತ್ತಿರುವ ಕಂಪನಿಗಳಿಂದ ಹೆಚ್ಚಿನ ಮಟ್ಟದಲ್ಲಿ ಲಾಭ ಮಾಡಿಕೊಳ್ಳಲು ಸಂಯಮ ಬೇಕು. ಈ ಬಗೆಯ ಹೂಡಿಕೆಯು ದೀರ್ಘಾವಧಿಯಲ್ಲಿ ಸಂಪತ್ತು ಸೃಷ್ಟಿಯನ್ನು ಅರ್ಥಪೂರ್ಣವಾಗಿ ಹೆಚ್ಚಿಸಬಲ್ಲದು.

ಇಷ್ಟೆಲ್ಲ ಹೇಳಿದ ನಂತರವೂ, ಹೂಡಿಕೆ ಮಾಡುವ ವ್ಯಕ್ತಿಯು ಎಷ್ಟರಮಟ್ಟಿಗೆ ರಿಸ್ಕ್ ತೆಗೆದುಕೊಳ್ಳಬಲ್ಲ, ಎಷ್ಟು ಅವಧಿಗೆ ಹೂಡಿಕೆ ಮುಂದುವರಿಸಬಲ್ಲ, ಮಾರುಕಟ್ಟೆಯ ಏರಿಳಿತಗಳನ್ನು ಎಷ್ಟರಮಟ್ಟಿಗೆ ತಾಳಿಕೊಳ್ಳಬಲ್ಲ ಎಂಬುದನ್ನು ಆಧರಿಸಿ ಫಂಡ್ ಆಯ್ಕೆ ಮಾಡಬೇಕಾಗುತ್ತದೆ. ಈ ಎರಡೂ ಬಗೆಯ ಫಂಡ್‌ಗಳಲ್ಲಿ ಹೂಡಿಕೆಯನ್ನು ಶಿಸ್ತಿನಿಂದ, ಅಧ್ಯಯನದ ಮೂಲಕ ನಿರ್ವಹಿಸಿದರೆ ಹೂಡಿಕೆದಾರರಿಗೆ ದೇಶದ ಬಂಡವಾಳ ಮಾರುಕಟ್ಟೆಗಳ ವಿಕಾಸದ ಪ್ರಕ್ರಿಯೆಯ ಭಾಗವಾಗಲು ಅವಕಾಶ ಸಿಗುತ್ತದೆ. ಅಲ್ಲದೆ, ಅವರಿಗೆ ಸಂಪತ್ತು ಸೃಷ್ಟಿಯ ತಮ್ಮ ಗುರಿಗೆ ಇನ್ನಷ್ಟು ಹತ್ತಿರವಾಗಲು ಸಾಧ್ಯವಾಗುತ್ತದೆ.

ಲೇಖಕಿ ದಿ ವೆಲ್ತ್ ಕಂಪನಿ ಮ್ಯೂಚುವ್‌ಲ್ ಫಂಡ್‌ನ ಈಕ್ವಿಟಿ ವಿಭಾಗದ ಮುಖ್ಯ ಹೂಡಿಕೆ ಅಧಿಕಾರಿ

ಹೂಡಿಕೆದಾರರಿಗೆ ಯಾವುದು ಸೂಕ್ತವಾಗಬಹುದು?

ಯಾವುದೇ ವಯೋಮಾನಕ್ಕೆ ಸೇರಿದವರಿಗೆ ಹಾಗೂ ಮೊದಲ ಬಾರಿಗೆ ಹೂಡಿಕೆ ಆರಂಭಿಸುತ್ತಿರುವವರಿಗೆ ಫ್ಲೆಕ್ಸಿಕ್ಯಾಪ್ ಫಂಡ್‌ಗಳು ಹೆಚ್ಚು ಉತ್ತಮ. ಈ ಬಗೆಯ ಫಂಡ್‌ಗಳ ಮೂಲಕ ಹಣ ತೊಡಗಿಸಿದಾಗ, ಮಾರುಕಟ್ಟೆಯ ಅಪಾಯಗಳನ್ನು ಸಕ್ರಿಯವಾಗಿ ನಿರ್ವಹಿಸುವುದರ ಪ್ರಯೋಜನ ಅವರಿಗೆ ಸಿಗುತ್ತದೆ. ಈ ಬಗೆಯ ಫಂಡ್‌ಗಳನ್ನು ನಿರ್ವಹಿಸುವವರು ಹೂಡಿಕೆಯ ಪ್ರಮಾಣವನ್ನು ಮಾರುಕಟ್ಟೆಯ ಪರಿಸ್ಥಿತಿಯನ್ನು ಆಧರಿಸಿ ಬದಲಾಯಿಸುವ ಕೆಲಸ ಮಾಡುತ್ತಾರೆ. ಈ ವರ್ಗದ ಫಂಡ್‌ಗಳು ಹೊಸ ಹೂಡಿಕೆದಾರರಿಗೆ ಷೇರುಪೇಟೆ ಹೂಡಿಕೆಯನ್ನು ಅದರಲ್ಲಿನ ಚಂಚಲತೆಗೆ ಹೆಚ್ಚು ಒಡ್ಡಿಕೊಳ್ಳದೆಯೇ, ಮುಂದುವರಿಸಲು ನೆರವಾಗುತ್ತವೆ.

ಮಲ್ಟಿಕ್ಯಾಪ್ ಫಂಡ್‌ಗಳು ಭಿನ್ನ. ಇವು ಬಂಡವಾಳ ಮಾರುಕಟ್ಟೆಯ ವಿಭಿನ್ನ ವರ್ಗಗಳ ಕಂಪನಿಗಳಲ್ಲಿ ಹಣ ತೊಡಗಿಸುತ್ತವೆ; ಹೆಚ್ಚು ವೈವಿಧ್ಯದಿಂದ ಕೂಡಿದ ಹೂಡಿಕೆ ಬಯಸುವವರಿಗೆ ಇವು ಸರಿಹೊಂದುತ್ತವೆ. ಮಿಡ್‌ಕ್ಯಾಪ್ ಹಾಗೂ ಸ್ಮಾಲ್‌ಕ್ಯಾಪ್ ಕಂಪನಿಗಳಲ್ಲಿ ಈ ವರ್ಗದ ಫಂಡ್‌ಗಳು ಹಣ ತೊಡಗಿಸುತ್ತವೆಯಾದ ಕಾರಣದಿಂದಾಗಿ ಅಲ್ಪಾವಧಿಯಲ್ಲಿ ಒಂದಿಷ್ಟು ಏರಿಳಿತಗಳು ಇಲ್ಲಿ ಕಾಣುತ್ತದೆಯಾದರೂ, ಬಹಳ ಉತ್ತಮ ಗುಣಮಟ್ಟದ ಅಧ್ಯಯನ ಆಧರಿಸಿ ಷೇರುಗಳನ್ನು ಆಯ್ಕೆ ಮಾಡಿದ್ದಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಲಾಭ ತಂದುಕೊಡುವ ಅವಕಾಶ ಈ ಬಗೆಯ ಫಂಡ್‌ಗಳಲ್ಲಿ ಇರುತ್ತದೆ.


ಯುವ ಹೂಡಿಕೆದಾರರಿಗೆ, ಹೊಸಬರಿಗೆ ಕೂಡ, ಮಲ್ಟಿಕ್ಯಾಪ್ ಫಂಡ್‌ಗಳು ಹೆಚ್ಚು ಆಸಕ್ತಿ ಮೂಡಿಸಬಹುದು. ಹೆಚ್ಚಿನ ಅವಧಿಗೆ ಹೂಡಿಕೆ ಮಾಡಲು ಅವರಿಗೆ ಇರುವ ಅವಕಾಶದ ಕಾರಣಕ್ಕೆ, ಹೆಚ್ಚಿನ ರಿಸ್ಕ್ ತೆಗೆದುಕೊಳ್ಳಲು ಅವರಿಗೆ ಇರುವ ಸಾಮರ್ಥ್ಯದ ಕಾರಣಕ್ಕೆ ಅವರು ಈ ವರ್ಗದ ಫಂಡ್‌ಗಳ ಮೂಲಕ ಸ್ಮಾಲ್‌ಕ್ಯಾಪ್ ಕಂಪನಿಗಳ ದೀರ್ಘಾವಧಿ ಬೆಳವಣಿಗೆ ಸಾಧ್ಯತೆಯ ಲಾಭ ಪಡೆಯಲು ಸೂಕ್ತರಾಗುತ್ತಾರೆ. ಇದೇ ಹೊತ್ತಿನಲ್ಲಿ ಅವರಿಗೆ ಲಾರ್ಜ್‌ಕ್ಯಾಪ್ ಕಂಪನಿಗಳಲ್ಲಿನ ಸ್ಥಿರತೆಯ ಪ್ರಯೋಜನ ಕೂಡ ದಕ್ಕುತ್ತಿರುತ್ತದೆ.

ಹೂಡಿಕೆದಾರರು ಈಕ್ವಿಟಿ ವಿಭಾಗಕ್ಕೆ ನಿಗದಿ ಮಾಡುವ ಮೊತ್ತದಲ್ಲಿ ಈ ಎರಡೂ ವರ್ಗದ ಮ್ಯೂಚುವಲ್ ಫಂಡ್‌ಗಳು ಮಹತ್ವದ ಪಾತ್ರ ವಹಿಸುತ್ತವೆ. ವೃತ್ತಿಪರ ನಿರ್ವಹಣೆಯ, ಬಂಡವಾಳ ಮಾರುಕಟ್ಟೆಯ ಸ್ಥಿತಿಗೆ ಅನುಗುಣವಾಗಿ ಹೊಂದಾಣಿಕೆ ಸಾಧ್ಯವಾಗುವ ಹೂಡಿಕೆಯನ್ನು ಬಯಸುವವರಿಗೆ ಫ್ಲೆಕ್ಸಿಕ್ಯಾಪ್ ಫಂಡ್‌ಗಳು ಹೂಡಿಕೆಯ ಪ್ರಮುಖ ಮಾರ್ಗವಾಗಬಲ್ಲವು. ವಿವಿಧ ವರ್ಗಗಳಿಗೆ ಸೇರಿದ ಕಂಪನಿಗಳ ಬೆಳವಣಿಗೆಯಲ್ಲಿ ನಂಬಿಕೆ ಇರುವವರಿಗೆ ಮಲ್ಟಿಕ್ಯಾಪ್ ಫಂಡ್‌ಗಳು ಪೂರಕ ಹೂಡಿಕೆಯಾಗಿ ಒದಗಿಬರಬಲ್ಲವು.

ಎಸ್‌ಐಪಿ ಮೂಲಕ ಎಷ್ಟೆಲ್ಲ ಹಣ ಹೂಡಿಕೆ ಆಗುತ್ತಿದೆ ಗೊತ್ತೇ?

ದೇಶದ ಷೇರು ಮಾರುಕಟ್ಟೆಗಳು ಕಳೆದ ಒಂದು ವರ್ಷದಲ್ಲಿ ದೊಡ್ಡ ಏರಿಕೆಯನ್ನೇನೂ ದಾಖಲಿಸಿಲ್ಲ. ಆದರೆ ಇದು ಷೇರು ಮಾರುಕಟ್ಟೆಯಲ್ಲಿ ಹೂಡಿಕೆ ಮಾಡುವವರ ಉತ್ಸಾಹಕ್ಕೆ ತಣ್ಣೀರು ಎರಚುವ ಕೆಲಸವನ್ನೇನೂ ಮಾಡಿಲ್ಲ ಎಂಬುದನ್ನು ಅಂಕಿ–ಅಂಶಗಳು ಹೇಳುತ್ತಿವೆ.

ಈ ವರ್ಷದ ಅಕ್ಟೋಬರ್‌ನಲ್ಲಿ ಎಸ್‌ಐಪಿ ಮೂಲಕ ಆಗಿರುವ ಹೂಡಿಕೆಯ ಮೊತ್ತವು ಕಳೆದ ವರ್ಷದ ಅಕ್ಟೋಬರ್‌ನಲ್ಲಿ ಆಗಿದ್ದ ಹೂಡಿಕೆಗಿಂತ ಹೆಚ್ಚಿದೆ. ಎಸ್‌ಐಪಿ ಮೂಲಕ ಹೂಡಿಕೆ ಆಗುವ ಸರಾಸರಿ ಮೊತ್ತದಲ್ಲಿ ಏರಿಕೆ ಕಂಡುಬಂದಿದೆ.



(ಮಾಹಿತಿ: ಜಿಯೋಜಿತ್ ಇನ್ವೆಸ್ಟ್‌ಮೆಂಟ್ ಸರ್ವಿಸಸ್‌ನ ಜಿಯೋಜಿತ್ ಇನ್‌ಸೈಟ್ಸ್ ವರದಿ)

ರಿಲಯನ್ಸ್ ಇಂಡಸ್ಟ್ರೀಸ್ ಲಿಮಿಟೆಡ್

Reliance Industries Limited

ಬ್ರೋಕರೇಜ್ ಮಾತು

ರಿಲಯನ್ಸ್ ಇಂಡಸ್ಟ್ರೀಸ್ ಲಿಮಿಟೆಡ್‌ನ (ಆರ್‌ಐಎಲ್) ಷೇರಿನ ಮೌಲ್ಯ ₹1,765ಕ್ಕೆ ತಲುಪಲಿದೆ ಎಂದು ಬ್ರೋಕರೇಜ್ ಕಂಪನಿ ಮೋತಿಲಾಲ್ ಓಸ್ವಾಲ್ ಫೈನಾನ್ಶಿಯಲ್ ಸರ್ವಿಸಸ್ ಹೇಳಿದೆ.

ಪ್ರಸಕ್ತ ಆರ್ಥಿಕ ವರ್ಷದ ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ಕಂಪನಿಯ ತೆರಿಗೆ, ಬಡ್ಡಿ, ಸಾಲ ತೀರುವಳಿ (ಇಬಿಐಟಿಡಿಎ) ನಂತರದ ಆದಾಯವು, ಜೂನ್ ತ್ರೈಮಾಸಿಕಕ್ಕೆ ಹೋಲಿಸಿದರೆ ಶೇ 5ರಷ್ಟು ಹೆಚ್ಚಳವಾಗಿದ್ದು, ₹45,900 ಕೋಟಿ ಆಗಿದೆ. ರಿಟೇಲ್ ಮತ್ತು ಜಿಯೊ ವ್ಯವಹಾರದಲ್ಲಿನ ಏರಿಕೆ ಹೆಚ್ಚಳಕ್ಕೆ ಕಾರಣ ಎಂದು ತಿಳಿಸಿದೆ.

ಹಬ್ಬದ ಋತು ಅಂಗವಾಗಿ ಹೆಚ್ಚಿದ ಬೇಡಿಕೆ ಮತ್ತು ಜಿಎಸ್‌ಟಿ ದರ ಪರಿಷ್ಕರಣೆ ಮತ್ತು ಕ್ವಿಕ್ ಕಾಮರ್ಸ್‌ನಲ್ಲಿನ ಉತ್ತಮ ಪ್ರಗತಿಯಿಂದ ರಿಟೇಲ್ ವ್ಯವಹಾರದ ವರಮಾನವು ಕಳೆದ ಆರ್ಥಿಕ ವರ್ಷದ ಇದೇ ಅವಧಿಗೆ ಹೋಲಿಸಿದರೆ ಶೇ 19ರಷ್ಟು ಹೆಚ್ಚಳವಾಗಿದೆ. ರಿಲಯನ್ಸ್ ಜಿಯೊ 83 ಲಕ್ಷ 5ಜಿ ಚಂದಾದಾರರನ್ನು ಸೇರ್ಪಡೆ ಮಾಡಿಕೊಂಡಿದೆ.

ಕಂಪನಿಯ ತೈಲ–ರಾಸಾಯನಿಕ ವಹಿವಾಟಿನ ಗಳಿಕೆಯು, ಜೂನ್ ತ್ರೈಮಾಸಿಕಕ್ಕೆ ಹೋಲಿಸಿದರೆ ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ಶೇ 3ರಷ್ಟು ಏರಿಕೆಯಾಗಿದೆ. ರಿಟೇಲ್ ಮತ್ತು ಜಿಯೊ ವ್ಯವಹಾರವು ಸುಸ್ಥಿರ ಬೆಳವಣಿಗೆ ಕಾಣುವ ವಿಶ್ವಾಸವನ್ನು ಕಂಪನಿಯ ಆಡಳಿತ ಮಂಡಳಿ ಹೊಂದಿದೆ ಎಂದು ಮೋತಿಲಾಲ್ ಓಸ್ವಾಲ್ ಹೇಳಿದೆ.

2024–25ರಿಂದ 2027–28ರ ಆರ್ಥಿಕ ವರ್ಷದವರೆಗೆ ರಿಲಯನ್ಸ್ ಇಂಡಸ್ಟ್ರೀಸ್‌ನ ತೆರಿಗೆ ನಂತರದ ಲಾಭದ ಸಂಯುಕ್ತ ವಾರ್ಷಿಕ ಹೆಚ್ಚಳದ ಪ್ರಮಾಣವು (ಸಿಎಜಿಆರ್) ಶೇ 11ರಷ್ಟಿರಲಿದೆ ಎಂದು ಅಂದಾಜಿಸಿದೆ. ಬುಧವಾರದ ವಹಿವಾಟಿನ ಅಂತ್ಯದ ವೇಳೆಗೆ ಕಂಪನಿಯ ಷೇರಿನ ಮೌಲ್ಯ ₹1,569.75 ಆಗಿದೆ.

(ಬ್ರೋಕರೇಜ್ ಕಂಪನಿಗಳು ನೀಡುವ ವಿವರ, ಮಾಹಿತಿಗೆ ಪತ್ರಿಕೆ ಹೊಣೆಯಲ್ಲ)

ಎಸ್ಸೆಸ್ಸೆಲ್ಸಿ ಪರೀಕ್ಷೆ ದಿಕ್ಸೂಚಿ | ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ–ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ ದ್ವಿತೀಯ ಭಾಷೆ ಇಂಗ್ಲಿಷ್ ವ್ಯಾಕರಣ ಮಾದರಿ ಪ್ರಶ್ನೋತ್ತರಗಳನ್ನು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಶಂಕರನಾರಾಯಣ ರಾವ್, ನಿವೃತ್ತ ಇಂಗ್ಲಿಷ್ ಅಧ್ಯಾಪಕ

ಇಂಗ್ಲಿಷ್

Prose The Concert


11. Match the following:


	A	B	
	Who discouraged the girl		Ustab Allah Rakha
The person	Who made the request	was	Pandit Ravi Shankar
	Who gave the consent finally		the girl, Smita
	Who suggested the time of concert		the moustached man

Ans:
1. The person who discouraged the girl was the mustached man.
2. The person who made the request was the girl, Smita.
3. The person who gave the consent finally was Pandit Ravi Shankar.
4. The person who suggested the time of the concert was Ustad Allah Rakha.

Self Assessment

Task 1: Complete the crossword with the help of the following clues. Across and Down. Refer to the dictionary for any help.






Clues Across
1. To make a sound louder (7)
7. A short unit in music, or part of a pub (3)
8. A lot of musicians who play together (9)
11. A kind of dance popular in the 1950's (5) – (given in the crossword)
13 To call off. To give up something that was planned (6)
14. We'll begin the work _________ Thursday (preposition) (2)
15. Top rock stars _______________ a lot of money (Verb) (4)
16. A collective word used to describe trumpets, trombones, etc (5)
17. A song sung by two people (4)
18. If you want to record a song, you should make _________________of a good studio. (3)

Clues Down
1. Preposition (2)
2. It is not stereo (4)
3. A long playing record (2) - (given in the crossword)
4. Music and painting are examples of this (3)
5. The maestro keeps looking at it, as he conducts the orchestra (6)
6. Another name for the word 'Instrument' (5)
7. The most famous pop group of all time (7) - (given in the crossword)
9. Musical entertainment to audience (7)
10. It might be a C.D., or else a 'vinyl'. It repeats the voice when desired. (6)
12. A flutist plays, but a vocalist .... (5)

Ans



Note:- Clues Down
5. The maestro keeps looking at it, as he conducts the orchestra (6)... Answer for this Qution is - **CHARTS**

(Contd........)

ಎಸ್ಸೆಸ್ಸೆಲ್ಸಿ ಗಣಿತ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

Biology

PRINCIPLES OF INHERITANCE AND VARIATION

15. Colour blindness is a sex-linked disease. It is due to X-chromosome. Normal parents have three normal daughters and one colour blind son. What is the reason for it? Ten possible reasons are given. Find out which are correct.
(i) It is an autosomal linked inheritance.
(ii) It is a sex-linked inheritance.
(iii) Father is a carrier.
(iv) Mother is a carrier
(v) Son acquired character from mother.
(vi) Son acquired character from father.
(vii) Daughter is heterozygous for colour blindness.
(viii) Daughter is homozygous for colour blindness.
(ix) Daughter is heterozygous and homozygous for normal vision.
(x) In future the family may have normal sons.

Ans:- (ii) It is a sex-linked inheritance.
(iv) Mother is a carrier
(v) Son acquired character from mother.
(vii) Daughter is heterozygous for colour blindness(50%).
(x) In future the family may have normal sons.


16. (i) Fill in the blanks:-
T.H. Morgan discovered the process of ...... and defined the linear arrangement of ...... in the chromosome.
Ans:- recombination (crossing over) , genes.

(ii) Fill in the blanks:-
(a) Mutation can be defined as .... variation.
(b) Mutation leads to evolution of ...... of a gene.
(c) Genes expressed only in homozygous state are ....
(d) When both the alleles of a gene are expressed, it is ....
(e) Gene which is most frequent is .... type.

Ans:- (a) somatic or germline
(b) allele
(c) recessive
(d) co-dominance
(e) wild


17. Define polypoidy.
Ans:- Polyploidy - is the increase in number of genomes or chromosome sets beyond the normal diploid condition, e.g., 3N, 4N, 5N, 6N.

18. Inheritance patterns of flower colour in garden pea and snapdragon differ. Why is the difference observed? Explain the difference with the help of crosses in their inheritance patterns.
Ans. In case of garden pea plant, red/violet/purple flower colour is dominant over white coloured flower. As a result, the hybrid comes to have only red flower.




The trait for white flower colour, being recessive, is unable to express its effect. It is case of **complete dominance.**

In case of Snapdragon (*Antirrhinum*), the trait of red coloured flower is not completely dominant over the trait of white coloured flower. As a result, both the traits express their effects so that the hybrid has pink flowers.



It is a case of **incomplete dominance.**

19. Give some reasons which explain that haemophilia is –
(a) sex linked
(b) Caused by the X – linked gene
With the information given below –
Haemophilia is sex-linked inheritance condition in humans where a simple cut causes non stop bleeding.
The following pedigree chart shows the inheritance of haemophilia in a family.



Ans:- (a) Sex linked
The trait appears only in male offsprng despite its absence in father. The proportion is not for autosomal recessive (3 : 1 for both the sexes). The only possibility is that it is sex linked and that the mother is carrier.

(b) Caused by X – linked gene
The trait is X – linked as males are hemizygous for it and the recessive X – linked trait gets expressed in them. Further, the males receive their X – chromosome from the mother. Therefore, a recessive X–linked trait which remains unexpressed in females, finds expression in males. For appearance of the trait in females, father must have the trait while the mother should be carrier. Usually haemophilic females die at the time of birth.

(Cont.......)

ಡಿಕೆಶಿ ಯಾವತ್ತೂ ಒಕ್ಕಲಿಗ ನಾಯಕ ಆಗಲಿಲ್ಲ: ಅಶೋಕ

ಹೊಸಪೇಟೆ (ವಿಜಯನಗರ): 'ಡಿ.ಕೆ. ಶಿವಕುಮಾರ್ ಯಾವತ್ತೂ ಒಕ್ಕಲಿಗ ನಾಯಕರಾಗಲಿಲ್ಲ. ಕುಕ್ಕರ್ ಬಾಂಬ್‌ನವರನ್ನು ಅವರು ಬ್ರದರ್ ಎಂದು ಕರೆದವರು. ಅಂಥವರನ್ನು ನಾವು ಒಕ್ಕಲಿಗ ನಾಯಕ ಎಂದು ಒಪ್ಪಿಕೊಳ್ಳುವುದಿಲ್ಲ' ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್. ಅಶೋಕ ಬುಧವಾರ ಇಲ್ಲಿ ಹೇಳಿದರು.

ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ಸಿದ್ದರಾಮಯ್ಯ ಮುಂದುವರಿಯಬೇಕೆ ಅಥವಾ ಡಿ.ಕೆ.ಶಿವಕುಮಾರ್ ಸಿ.ಎಂ ಆಗುವರೇ ಎಂದು ಸ್ಪಷ್ಟಪಡಿಸಬೇಕು. ದಲಿತ ನಾಯಕರಿಗೆ ಅವಕಾಶ ಇದೆಯೋ ಎಂಬುದನ್ನು ಹೇಳಬೇಕು' ಎಂದು ಹೇಳಿದರು.

ಅಶೋಕರ ಒಕ್ಕಲಿಗ 'ಬ್ಯಾಡ್ಜ್' ಕಳುಹಿಸುವೆ–ಡಿಕೆಶಿ: 'ಒಕ್ಕಲಿಗ ನಾಯಕನೆಂದು ಎಂದೂ ಹೇಳಿಲ್ಲ. ಒಕ್ಕಲಿಗನಾಗಿ ಹುಟ್ಟಿ, ಕಾಂಗ್ರೆಸ್ ನಾಯಕನಾಗಿ ಬೆಳೆದಿದ್ದೇನೆ' ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿದರು.

ಬೆಂಗಳೂರಿನಲ್ಲಿ ಸುದ್ದಿಗಾರರ ಜತೆ ಮಾತನಾಡಿದ ಅವರು, 'ಅಶೋಕ ಅವರೇ ಒಕ್ಕಲಿಗ ನಾಯಕ ಬ್ಯಾಡ್ಜ್ ಹಾಕಿಕೊಂಡಿದ್ದಾರೆ. ಬೇಕಾದರೆ ನಾನೂ ಬ್ಯಾಡ್ಜ್ ಕಳುಹಿಸಿಕೊಡುತ್ತೇನೆ. ಸದಾನಂದ ಗೌಡ ಸೇರಿದಂತೆ ಬಿಜೆಪಿಗರಿಗೆ ಜಾತಿ, ಧರ್ಮದ್ದೇ ಚಿಂತೆ' ಎಂದರು.

'ವಿಧಾನಸಭೆ ವಿಸರ್ಜಿಸಿ ಚುನಾವಣೆ ಎದುರಿಸಿ'

ಡಿ.ಕೆ.ಶಿವಕುಮಾರ್ ನೇತೃತ್ವದಲ್ಲೇ ಚುನಾವಣೆ ಎದುರಿಸೋಣ: ರಾಜಣ್ಣ

ಪ್ರಜಾವಾಣಿ ವಾರ್ತೆ

ಚಿಕ್ಕನಾಯಕನಹಳ್ಳಿ: 'ನಾಯಕತ್ವ ಗೊಂದಲ ಬಗೆಹರಿಸಬೇಕಾದರೆ ವಿಧಾನಸಭೆ ವಿಸರ್ಜಿಸಿ ಡಿ.ಕೆ. ಶಿವಕುಮಾರ್ ನೇತೃತ್ವದಲ್ಲೇ ಚುನಾವಣೆ ಎದುರಿಸೋಣ' ಎಂದು ಶಾಸಕ ಕೆ.ಎನ್. ರಾಜಣ್ಣ ಬುಧವಾರ ಇಲ್ಲಿ ಸಲಹೆ ನೀಡಿದರು.

ಸುದ್ದಿಗಾರರೊಂದಿಗೆ ಮಾತನಾಡಿ, 'ಶಿವಕುಮಾರ್ ನೇತೃತ್ವದಲ್ಲಿ ಚುನಾವಣೆ ಮಾಡೋಣ. ಬಹುಮತ ಬಂದರೆ ಅವರೇ ಐದು ವರ್ಷ ಮುಖ್ಯಮಂತ್ರಿಯಾಗಲಿ' ಎಂದು ಪುನರುಚ್ಚರಿಸಿದರು.

'ಮುಖ್ಯಮಂತ್ರಿ ಸ್ಥಾನದಲ್ಲಿ ಸಿದ್ದರಾಮಯ್ಯ ಮುಂದುವರಿಯಬೇಕು.



ರಾಜಣ್ಣ

'ಇಲ್ಲವಾದರೆ ಜಿ.ಪರಮೇಶ್ವರ ಅವರನ್ನು ಮುಖ್ಯಮಂತ್ರಿ ಮಾಡಬೇಕು' ಎಂದು ಆಗ್ರಹಿಸಿದರು.

'ಕಾಂಗ್ರೆಸ್ ಶಾಸಕಾಂಗ ಸಭೆಯಲ್ಲಿ ಸಿದ್ದರಾಮಯ್ಯ ಅವರನ್ನು ಆಯ್ಕೆ ಮಾಡಲಾಗಿದೆ. ಬದಲಾವಣೆ ಮಾಡುವುದಿದ್ದರೆ ಸಿಎಲ್‌ಪಿ ಸಭೆಯಲ್ಲೇ ನಿರ್ಧಾರವಾಗಲಿ. ಸಿದ್ದರಾಮಯ್ಯ ರಾಜೀನಾಮೆ ಕೊಡಬೇಕು ಎಂದು ಯಾರೂ ಹೇಳಿಲ್ಲ. 30–30 ತಿಂಗಳು ಅಧಿಕಾರ ಹಂಚಿಕೆ ಒಪ್ಪಂದವಾಗಿದ್ದರೆ ಎಂದು ಸುಮ್ಮನೆ ಕೆಲವರು ಹೇಳುತ್ತಿದ್ದಾರೆ' ಎಂದರು.

ಗೊಂದಲ ಬಗೆಹರಿಸಿ, ಸರ್ಕಾರ ನಡೆಸಿ: ವಿಜಯೇಂದ್ರ

ಬೆಂಗಳೂರು: 'ಸಿದ್ದರಾಮಯ್ಯ ಮತ್ತು ಡಿ.ಕೆ.ಶಿವಕುಮಾರ್ ಅವರು ಮುಖ್ಯಮಂತ್ರಿ ಬದಲಾವಣೆ ವಿಷಯದಲ್ಲಿನ ಗೊಂದಲ ಬಗೆಹರಿಸಿಕೊಂಡು, ಜನರ ಸಮಸ್ಯೆಗಳನ್ನು ಬಗೆಹರಿಸುವ ಗಮನ ಕೊಡಬೇಕು' ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಆಗ್ರಹಿಸಿದರು.

ಬುಧವಾರ ಸುದ್ದಿಗಾರರ ಜತೆ ಮಾತನಾಡಿದ ಅವರು, 'ಒಂದು ತಿಂಗಳಿನಿಂದ ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿ ಮತ್ತು ಸಚಿವರು ದೆಹಲಿಯಲ್ಲೇ ಮೊಕ್ಕಾಂ ಹೂಡಿದ್ದಾರೆ. ರಾಜ್ಯದಲ್ಲಿ ಆಡಳಿತ ವ್ಯವಸ್ಥೆ ಕುಸಿದುಬಿದ್ದಿದೆ' ಎಂದರು.

'ರಾಜ್ಯದ ಜನರ, ರೈತರ, ಕಬ್ಬು ಬೆಳೆಗಾರರ ಸಮಸ್ಯೆಗಳನ್ನು ಬಗೆಹರಿಸುವ ಬಗ್ಗೆ ಸರ್ಕಾರಕ್ಕೆ ಆಸಕ್ತಿ ಇದ್ದಂತಿಲ್ಲ. ಎಲ್ಲರೂ ನಾಲ್ಕು ದಿನ ದೆಹಲಿಯಲ್ಲಿ, ಮೂರು ದಿನ ರಾಜ್ಯದಲ್ಲಿ ಇದ್ದರೆ ಸರ್ಕಾರ ಹೇಗೆ ನಡೆಯುತ್ತದೆ.

ಹೀಗಾಗಿಯೇ, ವಿಧಾನಸಭೆಯನ್ನು ವಿಸರ್ಜನೆ ಮಾಡಿ ಚುನಾವಣೆಗೆ ಹೋಗಿ ಎಂದು ಸವಾಲು ಹಾಕಿದ್ದೆ' ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

'ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರಿಗೆ ರಾಜಕಾರಣದಲ್ಲಿ 50 ವರ್ಷಗಳ ಅನುಭವವಿದೆ. ಸಿದ್ದರಾಮಯ್ಯ ಮತ್ತು ಡಿ.ಕೆ.ಶಿವಕುಮಾರ್ ಅವರ ಜಗಳದಲ್ಲಿ ಖರ್ಗೆ ಅಂತಹವರೂ ಅಸಹಾಯಕರಾಗಿದ್ದಾರೆ. ಸಿದ್ದರಾಮಯ್ಯ ಮತ್ತು ಶಿವಕುಮಾರ್ ಅವರು ಬೆಳಗಾವಿ ಅಧಿವೇಶನಕ್ಕೆ ಬರುವುದಕ್ಕೆ ಮುನ್ನ ಈ ಗೊಂದಲಗಳನ್ನು ಬಗೆಹರಿಸಿಕೊಂಡು ಬರಲಿ' ಎಂದರು.

'ಜನರು ನಮ್ಮನ್ನು ವಿರೋಧ ಪಕ್ಷದ ಸ್ಥಾನದಲ್ಲಿ ಕೂರಿಸಿದ್ದಾರೆ. ನಾವು ಆ ಕೆಲಸವನ್ನು ಅಚ್ಚುಕಟ್ಟಾಗಿ ಮಾಡುತ್ತಿದ್ದೇವೆ' ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ವದಂತಿಗೆ 2 ದಿನದಲ್ಲಿ ತೆರೆ: ರಾಯರೆಡ್ಡಿ

ಕೊಪ್ಪಳ: 'ಮುಖ್ಯಮಂತ್ರಿ ಬದಲಾವಣೆ ಕುರಿತ ಚರ್ಚೆಗೆ ಪಕ್ಷದ ಹಿತದೃಷ್ಟಿಯಿಂದ ಎರಡು ದಿನಗಳಲ್ಲಿ ತೆರೆ ಬೀಳಲಿದೆ' ಎಂದು ಮುಖ್ಯಮಂತ್ರಿಗಳ ಆರ್ಥಿಕ ಸಲಹೆಗಾರ ಬಸವರಾಜ ರಾಯರಡ್ಡಿ ಹೇಳಿದರು.

'ನಾಲ್ಕು ಗೋಡೆಗಳ ನಡುವೆ ನಡೆದ ಚರ್ಚೆ ನನಗೆ ಗೊತ್ತಿಲ್ಲ. ಷರತ್ತು ಅಥವಾ ಒಪ್ಪಂದದ ಬಗ್ಗೆ ನಮ್ಮ ಮುಂದೆ ಯಾರೂ ಹೇಳಿಲ್ಲ' ಎಂದು ಬುಧವಾರ ಇಲ್ಲಿ ಪ್ರತಿಕ್ರಿಯಿಸಿದರು. 'ಮುಖ್ಯಮಂತ್ರಿ ಆಗುತ್ತೇನೆ ಎಂದು ಡಿ.ಕೆ. ಶಿವಕುಮಾರ್ ಎಲ್ಲಿಯಾದರೂ ಹೇಳಿದ್ದಾರೆಯೇ' ಎಂದು ಕೇಳಿದರು.

'ನಮ್ಮವರ ಮನಸ್ಸು ಖರ್ಗೆಗೆ ಅರ್ಥವಾಗುತ್ತೆ'

ವಿಜಯಪುರ: 'ದಲಿತರನ್ನು ಮುಖ್ಯಮಂತ್ರಿ ಮಾಡಬೇಕು ಎಂಬ ಬಗ್ಗೆ ನಾನು ಪ್ರತಿಕ್ರಿಯಿಸುವುದಿಲ್ಲ. ನಮ್ಮವರೇ ಆದ ಮಲ್ಲಿಕಾರ್ಜುನ ಖರ್ಗೆ ಎಐಸಿಸಿ ಅಧ್ಯಕ್ಷರಿದ್ದಾರೆ. ಅವರಿಗೆ ನಮ್ಮವರ (ದಲಿತರ) ಮನಸ್ಸು ಅರ್ಥವಾಗುತ್ತದೆ' ಎಂದು ಗೃಹ ಸಚಿವ ಜಿ.ಪರಮೇಶ್ವರ ಇಲ್ಲಿ ಹೇಳಿದರು. 'ನಮ್ಮ ಪಕ್ಷದಲ್ಲಿ ಹೈಕಮಾಂಡ್ ಸಂಸ್ಕೃತಿ ಇದೆ. ಪಕ್ಷದ ಹೈಕಮಾಂಡ್ ನಿರ್ಣಯವೇ ಅಂತಿಮ. ಅದರಂತೆಯೇ ನಡೆಯುತ್ತೇವೆ' ಎಂದರು.

ಎರಡ್ಮೂರು ದಿನದಲ್ಲಿ ಒಳ್ಳೆ ಸುದ್ದಿ: ಶಾಸಕ

ರಾಮನಗರ: 'ರಾಜ್ಯದಲ್ಲಿ ಪಕ್ಷವನ್ನು ಅಧಿಕಾರಕ್ಕೆ ತಂದಿರುವ ನಮ್ಮ ನಾಯಕ ಡಿ.ಕೆ.ಶಿವಕುಮಾರ್ ಅವರಿಗೂ ಕೂಲಿ ಕೊಡಬೇಕು. 2–3 ದಿನಗಳಲ್ಲಿ ಒಳ್ಳೆಯ ಸುದ್ದಿ ಬರುವ ವಿಶ್ವಾಸವಿದೆ. ನಾಯಕರು ಒಳ್ಳೆಸುದ್ದಿ ಸಿಗಲಿದೆ ಎಂದಿದ್ದಾರೆ' ಎಂದು ಶಾಸಕ ಎಚ್.ಎ.ಇಕ್ಬಾಲ್ ಹುಸೇನ್ ಹೇಳಿದರು.

ನಗರದಲ್ಲಿ ಬುಧವಾರ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, 'ಬೆಂಗಳೂರಿಗೆ ತುರ್ತಾಗಿ ಬರುವಂತೆ ಡಿಸಿಎಂ ಸಾಹೇಬ್ರು ಕರೆದಿದ್ದಾರೆ. ಅಲ್ಲಿ ಶಾಸಕರ ಸಭೆ ಮಾಡುತ್ತಾರೋ ಅಥವಾ ಮಾತುಕತೆ ನಡೆಸುತ್ತಾರೊ ಗೊತ್ತಿಲ್ಲ' ಎಂದರು.

ಬೆಳಗಾವಿ: ಕೃಷ್ಣಮೃಗಗಳ ಸಾವು 15 ದಿನದಲ್ಲಿ ವರದಿಗೆ ನಿರ್ದೇಶನ

ನವದೆಹಲಿ: ಬೆಳಗಾವಿ ಸಮೀಪದ ಭೂತರಾಮನ ಹಟ್ಟಿಯಲ್ಲಿರುವ ರಾಣಿ ಚನ್ನಮ್ಮ ಕಿರು ಮೃಗಾಲಯದಲ್ಲಿ 31 ಕೃಷ್ಣಮೃಗಗಳು ಮೃತಪಟ್ಟಿರುವ ಬಗ್ಗೆ 15 ದಿನಗಳಲ್ಲಿ ಸಮಗ್ರ ವರದಿ ಸಲ್ಲಿಸಬೇಕು ಎಂದು ಕೇಂದ್ರ ಮೃಗಾಲಯ ಪ್ರಾಧಿಕಾರ ನಿರ್ದೇಶನ ನೀಡಿದೆ.

ಅರಣ್ಯ ಇಲಾಖೆಯ ಮುಖ್ಯ ವನ್ಯಜೀವಿ ವಾರ್ಡನ್ (ಪಿಸಿಸಿಎಫ್) ಅವರಿಗೆ ಬುಧವಾರ ಪತ್ರ ಬರೆದಿರುವ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಡಾ.ವಿ.ಕ್ಲೆಮೆಂಟ್ ಬೆನ್, 'ಈ ಘಟನೆಯ ಬಗ್ಗೆ ಸ್ವತಂತ್ರ ತನಿಖೆಗೆ ಆಗ್ರಹಿಸಿ ಪ್ರಾಧಿಕಾರಕ್ಕೆ ದೂರು ಸಲ್ಲಿಕೆಯಾಗಿದೆ. ಹೀಗಾಗಿ, ಕೃಷ್ಣಮೃಗಗಳ ಸಾವಿನ ನೈಜ ಕಾರಣಗಳ ಬಗ್ಗೆ ಸಮಗ್ರ ವರದಿ ಸಲ್ಲಿಸಬೇಕು' ಎಂದು ಸೂಚಿಸಿದ್ದಾರೆ.

ಈ ಘಟನೆ ಬಗ್ಗೆ ಪ್ರಾಧಿಕಾರಕ್ಕೆ ಇದೇ 18ರಂದು ದೂರು ನೀಡಿದ್ದ ಪ್ರಮೋದ್ ಎಂ.ಪಿ ಎಂಬುವವರು, 'ಗಳಲೆ ರೋಗದಿಂದ ಕೃಷ್ಣಮೃಗಗಳು ಸತ್ತಿವೆ ಎಂದು ಅರಣ್ಯ ಇಲಾಖೆಯ ಅಧಿಕಾರಿಗಳು ತಿಳಿಸಿದ್ದಾರೆ. ಅಧಿಕಾರಿಗಳ ನಿರ್ಲಕ್ಷ್ಯವೇ ಈ ಘಟನೆಗೆ ಕಾರಣ. ಈ ಬಗ್ಗೆ ಸಮಗ್ರ ತನಿಖೆ ಆಗಬೇಕು' ಎಂದಿದ್ದರು.

'ಕರ್ನಾಟಕದ ಬೇರೆ ಮೃಗಾಲಯಗಳಲ್ಲಿ ಆರೋಗ್ಯ ಸಲಹಾ ಸಮಿತಿ ಇದೆ. ಆದರೆ, ಇಲ್ಲಿನ ಮೃಗಾಲಯದಲ್ಲಿ ಈ ಸಮಿತಿಯನ್ನೇ ರಚಿಸಿಲ್ಲ. ಜತೆಗೆ, ಬ್ಯಾಕ್ಟೀರಿಯಾ ಸೋಂಕು ಹರಡುತ್ತಿರುವುದು ಬೆಂಗಳೂರಿನ ತಜ್ಞರು ತಿಳಿಸಿದ ಬಳಿಕ ಹಿಂದೆಯೇ ಮುನ್ನೆಚ್ಚರಿಕೆ ನೀಡಿದ್ದರು. ಆದರೂ ಅಧಿಕಾರಿಗಳು ನಿರ್ಲಕ್ಷಿಸಿದ್ದಾರೆ. ಗಂಭೀರ ಲೋಪಕ್ಕೆ ಕಾರಣರಾದ ಅಧಿಕಾರಿಗಳ ವಿರುದ್ಧ ಶಿಸ್ತುಕ್ರಮ ಕೈಗೊಳ್ಳಬೇಕು' ಎಂದು ಒತ್ತಾಯಿಸಿದ್ದರು.

ಸರ್ಕಾರಿ ಗೌರವದೊಂದಿಗೆ ಅಂತ್ಯಕ್ರಿಯೆ

ರಾಮದುರ್ಗ (ಬೆಳಗಾವಿ): ಕಲಬುರಗಿ ಜಿಲ್ಲೆ ಜೇವರ್ಗಿ ಬಳಿ ಮಂಗಳವಾರ ಅಪಘಾತದಲ್ಲಿ ಮೃತಪಟ್ಟ ಐಎಎಸ್ ಅಧಿಕಾರಿ ಮಹಾಂತೇಶ ಬೀಳಗಿ, ಮತ್ತು ಇನ್ನೂ ಮೂವರ ಸಾಮೂಹಿಕ ಅಂತ್ಯಕ್ರಿಯೆ, ಇಲ್ಲಿ ಬೀಳಗಿ ಅವರ ತೋಟದಲ್ಲಿ ಸರ್ಕಾರಿ ಗೌರವದೊಂದಿಗೆ ನೆರವೇರಿತು.

ಬಣಗಾರ ಸಮುದಾಯದಲ್ಲಿ ಶವ ಹೂಳುವ ಪದ್ಧತಿ ಇದೆ. ಆದರೆ, ಅಪಘಾತದ ಕಾರಣ ಮಹಾಂತೇಶ ಬೀಳಗಿ (51), ಸಹೋದರ ಸಂಬಂಧಿಗಳಾದ ಶಂಕರ ಬೀಳಗಿ (55), ವೀರಣ್ಣ ಬೀಳಗಿ (53) ಮತ್ತು ಈರಣ್ಣ ಶಿರಸಂಗಿ (50) ಅವರ ಶವಗಳಿಗೆ ಅಗ್ನಿಸ್ಪರ್ಶ ಮಾಡಲಾಯಿತು. ಮಹಾಂತೇಶ, ಶಂಕರ ಹಾಗೂ ವೀರಣ್ಣ ಅವರು ಸ್ಥಳದಲ್ಲೇ ಮೃತಪಟ್ಟಿದ್ದರು. ಆಸ್ಪತ್ರೆಗೆ ದಾಖಲಾಗಿದ್ದ ಈರಣ್ಣ ಚಿಕಿತ್ಸೆಗೆ ಸ್ಪಂದಿಸದೇ ಕೊನೆಯುಸಿರೆಳೆದರು. ನಾಲ್ವರ ಶವಗಳನ್ನೂ ಪ್ರತ್ಯೇಕ ಆಂಬುಲೆನ್ಸ್‌ನಲ್ಲಿ ತರಲಾಯಿತು.

ಮೃತದೇಹಗಳನ್ನು ರಾಮದುರ್ಗ ಪಟ್ಟಣಕ್ಕೆ ತರುತ್ತಿದ್ದಂತೆಯೇ ಸಂಬಂಧಿಕರು, ಊರಿನ ಜನರ ಆಕ್ರಂದನ ಮುಗಿಲುಮುಟ್ಟಿತು. ಮಹಾಂತೇಶ ಅವರ ಅಭಿಮಾನಿಗಳು, ಶಿಷ್ಯರು ಹಾಗೂ ವಿವಿಧ ಇಲಾಖೆಗಳ ಅಧಿಕಾರಿಗಳು ಅಪಾರ ಸಂಖ್ಯೆಯಲ್ಲಿ ಸೇರಿದ್ದರು.

ಪಟ್ಟಣದ ಪಂಚಗಟ್ಟಿಮಠ ಶಾಲಾ ಆವರಣದಲ್ಲಿ ಅಂತಿಮದರ್ಶನಕ್ಕೆ ವ್ಯವಸ್ಥೆ ಆಗಿತ್ತು. ಮಹಾಂತೇಶ ಅವರ ಅಣ್ಣ ಸಿದ್ದರಾಮಪ್ಪ ಅಗ್ನಿಸ್ಪರ್ಶ ಮಾಡಿದರು. ಮಹಾಂತೇಶ ಅವರ ಪತ್ನಿ ರೇಖಾ, ಪುತ್ರಿ ಚೈತನ್ಯ, ವಿಧಾನಸಭೆ ಮುಖ್ಯ ಸಚೇತಕ ಅಶೋಕ ಪಟ್ಟಣ, ಮಾಜಿ ಶಾಸಕ ಮಹಾದೇವಪ್ಪ ಯಾದವಾಡ ಸೇರಿದಂತೆ ಶಾಲಾ ಮಕ್ಕಳೂ ಅಂತಿಮಯಾತ್ರೆಯಲ್ಲಿ ಪಾಲ್ಗೊಂಡರು. ಕುಶಾಲ ತೋಪು ಹಾರಿಸಿ ಪೊಲೀಸರು ಗೌರವ ನಮನ ಸಲ್ಲಿಸಿದರು.

ನಿಧನ ವಾರ್ತೆ

ಮಾಜಿ ಶಾಸಕ ಶಿವಶರಣಪ್ಪಗೌಡ ಪಾಟೀಲ

ಯಲಬುರ್ಗಾ (ಕೊಪ್ಪಳ ಜಿಲ್ಲೆ): ಯಲಬುರ್ಗಾ ಕ್ಷೇತ್ರದ ಕಾಂಗ್ರೆಸ್ ಪಕ್ಷದ ಮಾಜಿ ಶಾಸಕ, ಶಿವಶರಣಪ್ಪಗೌಡ ಪಾಟೀಲ (82) ಬುಧವಾರ ತುಮಕೂರಿನಲ್ಲಿ ನಿಧನರಾದರು.




ಮೃತರಿಗೆ ಪತ್ನಿ, ನಾಲ್ವರು ಪುತ್ರರು ಹಾಗೂ ಒಬ್ಬ ಪುತ್ರಿ ಇದ್ದಾರೆ.

ಶಿವಶರಣಗೌಡ 1989ರಲ್ಲಿ ಹಾಗೂ 1996ರ ಉಪಚುನಾವಣೆಯಲ್ಲಿ ಪರಾಭವಗೊಂಡು 1999ರಲ್ಲಿ ಮೂರನೇ ಬಾರಿಗೆ ಸ್ಪರ್ಧಿಸಿ ಚುನಾಯಿತರಾಗಿದ್ದರು.

ಯಲಬುರ್ಗಾ ಪಟ್ಟಣದ ಅವರ ನಿವಾಸದಲ್ಲಿ ಗುರುವಾರ ಬೆಳಿಗ್ಗೆ ಪಾರ್ಥಿವ ಶರೀರದ ದರ್ಶನಕ್ಕೆ ವ್ಯವಸ್ಥೆ ಮಾಡಲಾಗಿದೆ. ನಂತರ ಸ್ವಗ್ರಾಮ ತಾಲ್ಲೂಕಿನ ಹುಣಸಿಹಾಳ ಗ್ರಾಮದಲ್ಲಿ ಸಂಜೆ 4ಕ್ಕೆ ಅಂತ್ಯಕ್ರಿಯೆ ನೆರವೇರಲಿದೆ ಎಂದು ಕುಟುಂಬದವರು ತಿಳಿಸಿದ್ದಾರೆ.

ನಿಟ್ಟೂರು ಶೀನಪ್ಪ ಸುವರ್ಣ


ಉಡುಪಿ: ಯಕ್ಷಗಾನ ಭಾಗವತ ನಿಟ್ಟೂರು ಶೀನಪ್ಪ ಸುವರ್ಣ (79) ಬುಧವಾರ ನಿಧನರಾದರು.



ಅವರಿಗೆ ಪತ್ನಿ, ಪುತ್ರ ಹಾಗೂ ಇಬ್ಬರು ಪುತ್ರಿಯರು ಇದ್ದಾರೆ. ಐದು ದಶಕಗಳ ಕಾಲ ಯಕ್ಷಗಾನ ಭಾಗವತರಾಗಿ ಕಾರ್ಯನಿರ್ವಹಿಸಿದ್ದರು.

ಕಂದಾವರ ರಘುರಾಮ ಶೆಟ್ಟಿ

ಕುಂದಾಪುರ (ಉಡುಪಿ): ಯಕ್ಷಗಾನ ಪ್ರಸಂಗಕರ್ತ ಕಂದಾವರ ರಘುರಾಮ ಶೆಟ್ಟಿ (89) ಬುಧವಾರ ನೂಜಾಡಿಯ ಮನೆಯಲ್ಲಿ ನಿಧನರಾದರು.



ಅವರಿಗೆ ಪತ್ನಿ, ಇಬ್ಬರು ಪುತ್ರಿಯರು, ಪುತ್ರ ಇದ್ದಾರೆ.

ವಿದ್ಯಾರ್ಥಿಯಾಗಿದ್ದಾಗಲೇ ಮಕ್ಕಳ ಯಕ್ಷಗಾನದಲ್ಲಿ ಕಾರ್ಯನಿರ್ವಹಿಸಿದ್ದರು. ವೃತ್ತಿಯಲ್ಲಿ ಶಿಕ್ಷಕರಾಗಿದ್ದರು. ಬಡಗುತಿಟ್ಟಿನ ಯಕ್ಷಗಾನ ಶೈಲಿಯ ಪ್ರಸಂಗ ರಚನೆಯಲ್ಲಿ 'ಕಂದಾವರ ಶೈಲಿ' ಎನ್ನುವ ಅನ್ವರ್ಥ ಸಂಪಾದಿಸಿಕೊಂಡಿದ್ದರು.

ಶ್ರೀದೇವಿ ಬನಶಂಕರಿ, ಶೂದ್ರ ತಪಸ್ವಿನಿ, ರತಿ ರೇಖಾ ಸೇರಿದಂತೆ 38ಕ್ಕೂ ಹೆಚ್ಚು ಯಕ್ಷಗಾನ ಕೃತಿಗಳು ಹಾಗೂ ಏಳು ಮಕ್ಕಳ ನಾಟಕಗಳನ್ನು ರಚಿಸಿದ್ದಾರೆ. ಕರ್ನಾಟಕ ಯಕ್ಷಗಾನ ಅಕಾಡೆಮಿ ಪ್ರಶಸ್ತಿ ಸೇರಿದಂತೆ ಅನೇಕ ಪ್ರಶಸ್ತಿಗಳು ಅವರಿಗೆ ದೊರೆತಿವೆ.

ಚಿಟಿಕೆ ಸುದ್ದಿ

‘ವಾಟರ್ ಬೆಲ್ ಬಾರಿಸುವ ಸುತ್ತೋಲೆ ಹೊರಡಿಸಿ’

ಬೆಂಗಳೂರು: ‘ರಾಜ್ಯ ಎಲ್ಲ ಸರ್ಕಾರಿ, ಅನುದಾನಿತ ಮತ್ತು ಅನುದಾನರಹಿತ ಶಾಲೆಗಳಲ್ಲಿ ಮಕ್ಕಳಿಗೆ ನೀರು ಕುಡಿಯುವಂತೆ ನೆನಪಿಸಲು ‘ವಾಟರ್ ಬೆಲ್’ ಬಾರಿಸಬೇಕು. ಈ ಬಗ್ಗೆ ಶಿಕ್ಷಣ ಇಲಾಖೆ ಸುತ್ತೋಲೆ ಹೊರಡಿಸಬೇಕು’ ಎಂದು ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಅಧ್ಯಕ್ಷ ಶಶಿಧರ ಕೋಸಂಬೆ ತಿಳಿಸಿದ್ದಾರೆ.

ಈ ಬಗ್ಗೆ ಶಾಲಾ ಶಿಕ್ಷಣ ಇಲಾಖೆಯ ಆಯುಕ್ತರಿಗೆ ಪತ್ರ ಬರೆದಿರುವ ಅವರು, ‘ಮಕ್ಕಳಲ್ಲಿ ಆಗಾಗ ನೀರು ಕುಡಿಯಬೇಕೆಂಬ ಅರಿವು ಇರುವುದಿಲ್ಲ. ಮಕ್ಕಳ ಆರೋಗ್ಯದ ಹಿತದೃಷ್ಟಿಯಿಂದ ಶಾಲೆಗಳಲ್ಲಿ ನೀರು ಕುಡಿಯುವುದನ್ನು ನೆನಪಿಸಲು ನೀರಿನ ಗಂಟೆ ಬಾರಿಸಬೇಕು. ಇದು ಮಕ್ಕಳ ದೇಹದ ಉಷ್ಣತೆಯನ್ನು ನಿಯಂತ್ರಿಸುವುದರ ಜೊತೆಗೆ ಆಹಾರ ಜೀರ್ಣಿಸಿಕೊಳ್ಳಲು ಸಹಾಯಕ ವಾಗುತ್ತದೆ. ಆದ್ದರಿಂದ ಎಲ್ಲ ಶಾಲೆಗಳಲ್ಲಿ ನೀರಿನ ಗಂಟೆ ಬಾರಿಸುವ ನಿಯಮ ಅನುಷ್ಠಾನಗೊಳಿಸುವ ಸುತ್ತೋಲೆಯನ್ನು ಹೊರಡಿಸಬೇಕು’ ಎಂದು ಮನವಿ ಮಾಡಿದ್ದಾರೆ.

‘ಖರೀದಿ ಕೇಂದ್ರಗಳನ್ನು ಪ್ರಾರಂಭಿಸಿ’

ಬೆಂಗಳೂರು: ಪ್ರತಿ ಬಾರಿ ಮುಂಗಾರು ಹಾಗೂ ಹಿಂಗಾರು ಬೆಳೆಗಳು ಕಟಾವಿಗೆ ಬಂದಾಗ ಕನಿಷ್ಠ ಬೆಂಬಲ ಬೆಲೆಯಲ್ಲಿ ಖರೀದಿ ಕೇಂದ್ರಗಳನ್ನು ತೆರೆಯಲು ಹಿಂದೇಟು ಹಾಕುವ ಸರ್ಕಾರದ ನಡೆಯನ್ನು ಖಂಡಿಸಿ ಡಿ. 8ರಂದು ಬೆಳಗಾವಿ ಸುವರ್ಣಸೌಧಕ್ಕೆ ಮುತ್ತಿಗೆ ಹಾಕಲಾಗುವುದು’ ಎಂದು ಕರ್ನಾಟಕ ರಾಜ್ಯ ರೈತ ಸಂಘದ ಅಧ್ಯಕ್ಷ ಕೋಡಿಹಳ್ಳಿ ಚಂದ್ರಶೇಖರ್ ತಿಳಿಸಿದರು.

ಬುಧವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಪ್ರತಿ ವರ್ಷದ ಈ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಲು ರಾಜ್ಯ ಸರ್ಕಾರ ಕನಿಷ್ಠ ₹10 ಸಾವಿರ ಕೋಟಿ ಅನುದಾನ ಮೀಸಲಿಡಬೇಕು. ಸದ್ಯ ರಾಜ್ಯ ಸರ್ಕಾರ ಮೆಕ್ಕೆಜೋಳ ಖರೀದಿ ಮಾಡದ ಕಾರಣ ರೈತರು ಕ್ವಿಂಟಲ್‌ಗೆ ₹1,600ರಿಂದ ₹1,800ಕ್ಕೆ ಮಾರಾಟ ಮಾಡುತ್ತಿದ್ದಾರೆ. ಬೆಂಬಲ ಬೆಲೆ ಅಡಿಯಲ್ಲಿ ಕೇಂದ್ರ ಸರ್ಕಾರ ಪ್ರತಿ ಕ್ವಿಂಟಲ್ ಮೆಕ್ಕೆಜೋಳಕ್ಕೆ ₹2,400 ನಿಗದಿಪಡಿಸಿದೆ. ಇದರಿಂದ ರೈತರಿಗೆ ₹700ರಿಂದ ₹800 ನಷ್ಟವಾಗುತ್ತಿದೆ. ಇದರ ಜೊತೆಗೆ ಹೆಸರು, ತೊಗರಿ, ಭತ್ತ, ರಾಗಿ, ಈರುಳ್ಳಿ, ಬೆಳ್ಳುಳ್ಳಿ ಬೆಳೆಗಳ ಖರೀದಿ ಕೇಂದ್ರಗಳನ್ನು ಕೂಡಲೇ ಪ್ರಾರಂಭಿಸಬೇಕು’ ಎಂದು ಆಗ್ರಹಿಸಿದರು.

‘ಶಾಲೆ ಮುಚ್ಚುವ ಚಿಂತನೆ ಕೈಬಿಡಿ’

ಬೆಂಗಳೂರು: ‘ಗ್ರಾಮ ಪಂಚಾಯಿತಿಗಳಲ್ಲಿ ಕೆಪಿಎಸ್ ಶಾಲೆಗಳನ್ನು ಪ್ರಾರಂಭಿಸಿರುವ ಗುರಿ ಹೊಂದಿರುವ ಸರ್ಕಾರ, ರಾಜ್ಯದಲ್ಲಿರುವ 40 ಸಾವಿರ ಸರ್ಕಾರಿ ಶಾಲೆಗಳನ್ನು ಮುಚ್ಚಲು ಮುಂದಾಗಿದೆ’ ಎಂದು ಆಲ್ ಇಂಡಿಯಾ ಡೆಮಾಕ್ರಟಿಕ್ ಸ್ಟೂಡೆಂಟ್ ಆರ್ಗನೈಸೇಷನ್ (ಎಐಡಿಎಸ್‌ಒ) ಆರೋಪಿಸಿದೆ.

ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಎಐಡಿಎಸ್‌ಒನ ರಾಜ್ಯ ಘಟಕದ ಅಧ್ಯಕ್ಷೆ ಅಶ್ವಿನಿ ಕೆ.ಎಸ್., ‘ರಾಜ್ಯದಲ್ಲಿ ಒಂದೇ ಒಂದು ಶಾಲೆಯನ್ನು ಮುಚ್ಚುವುದಿಲ್ಲ ಎಂಬ ಹೇಳಿಕೆಗಳು ಸತ್ಯಕ್ಕೆ ದೂರವಾಗಿದೆ. ಮೊದಲ ಹಂತದಲ್ಲಿ 800 ಸರ್ಕಾರಿ ಶಾಲೆಗಳನ್ನು ಕೆಪಿಎಸ್ ಶಾಲೆಗಳೆಂದು ಗುರುತಿಸಲಾಗಿದೆ. ಶಾಲೆಗಳ ಅಭಿವೃದ್ಧಿಯ ಹೆಸರಿನಲ್ಲಿ ಬಡ ಮಕ್ಕಳಿಂದ ಶಾಶ್ವತವಾಗಿ ಶಿಕ್ಷಣವನ್ನು ಕಸಿದುಕೊಳ್ಳುತ್ತಿದೆ’ ಎಂದು ದೂರಿದರು.

‘ಮಾತು ಉಳಿಸಿಕೊಳ್ಳದ ರಾಜ್ಯ ಸರ್ಕಾರ’

‘ಸಂಯುಕ್ತ ಹೋರಾಟ–ಕರ್ನಾಟಕ’ ಸಮಿತಿಯಿಂದ ರಾಜಧಾನಿಯಲ್ಲಿ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜನಸಾಮಾನ್ಯರು ಎದುರಿಸುತ್ತಿರುವ 15 ಸಮಸ್ಯೆಗಳಿಗೆ ಪರಿಹಾರ ಕಲ್ಪಿಸುವಂತೆ ಆಗ್ರಹಿಸಿ ‘ಸಂಯುಕ್ತ ಹೋರಾಟ– ಕರ್ನಾಟಕ’ ಸಮಿತಿಯಿಂದ ಸ್ವಾತಂತ್ರ್ಯ ಉದ್ಯಾನದಲ್ಲಿ ಬುಧವಾರ ಪ್ರತಿಭಟನೆ ನಡೆಯಿತು.

ಕೇಂದ್ರ–ರಾಜ್ಯ ಸರ್ಕಾರಗಳ ರೈತ–ಕಾರ್ಮಿಕ ವಿರೋಧಿ ನೀತಿಗಳನ್ನು ಪ್ರತಿಭಟನಕಾರರು ಖಂಡಿಸಿದರು. ‘ಬೆಂಗಳೂರು ಚಲೋ’ಗೆ ರಾಜ್ಯದ ವಿವಿಧ ಭಾಗದಿಂದ ಹೋರಾಟಗಾರರು ಹಾಗೂ ರೈತರು ಬಂದಿದ್ದರು. ಘೋಷಣೆ ಕೂಗಿ ಆಕ್ರೋಶ ಹೊರಹಾಕಿದರು.

ಕರ್ನಾಟಕ ಜನಶಕ್ತಿ ಅಧ್ಯಕ್ಷ ನೂರ್ ಶ್ರೀಧರ್ ಮಾತನಾಡಿ, ‘ರಾಜ್ಯದಲ್ಲಿ ಸಮಸ್ಯೆಗಳ ಹಾಗೂ ಮನೆಹಾಳು ಯೋಜನೆಗಳ ಪಟ್ಟಿ ಬೆಳೆಯುತ್ತಲೇ ಇದೆ. ಆದರೆ, ಪರಿಹಾರ ಮಾತ್ರ ಸಿಗುತ್ತಿಲ್ಲ’ ಎಂದು ಹೇಳಿದರು.

‘ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ, ಬಿಜೆಪಿ ಜಾರಿ ಮಾಡಿರುವ ಎಲ್ಲ ಜನವಿರೋಧಿ ಕಾನೂನುಗಳನ್ನು ರದ್ದು ಮಾಡುತ್ತೇವೆಂದು ಸಿದ್ದರಾಮಯ್ಯ ಅವರು ಭರವಸೆ ನೀಡಿದ್ದರು. ಆದರೆ, ಕೊಟ್ಟ ಮಾತು ಉಳಿಸಿಕೊಂಡಿಲ್ಲ, ಇದು ಗ್ಯಾರಂಟಿ ಸರ್ಕಾರ ಅಲ್ಲ’ ಎಂದು ಆಕ್ರೋಶ ಹೊರಹಾಕಿದರು.

ರೈತ ಸಂಘದ ಮುಖಂಡ ಎಚ್.ಆರ್. ಬಸವರಾಜಪ್ಪ ಮಾತನಾಡಿ, ‘ರಾಮನಗರ ಜಿಲ್ಲಾಧಿಕಾರಿ ಮತ್ತು ಕೋಲಾರ ಅರಣ್ಯಾಧಿಕಾರಿಗಳು ರೈತರೊಂದಿಗೆ ಸಂಯಮದಿಂದ ವರ್ತಿಸಬೇಕು. ಅವರ ವರ್ತನೆ ಅದೇ ರೀತಿಯಲ್ಲಿ ಮುಂದುವರಿದರೆ ಆಯಾ ಜಿಲ್ಲೆಗಳಲ್ಲಿ ಬೃಹತ್ ಹೋರಾಟ ನಡೆಸಲಾಗುವುದು’ ಎಂದು ಎಚ್ಚರಿಸಿದರು.

ಪ್ರಾಧ್ಯಾಪಕ ಬಾಬು ಮ್ಯಾಥ್ಯು ಮಾತನಾಡಿ, ‘ಸಂವಿಧಾನವನ್ನು ನಾಶ ಪಡಿಸುವ ಹಲವು ಹುನ್ನಾರಗಳನ್ನು ನಡೆಸಲಾಗುತ್ತಿದೆ. ಸಂವಿಧಾನ ನಂಬಿಕೊಂಡಿರುವ ರೈತರು–ಕಾರ್ಮಿಕರ ಏಕತೆ ಮುರಿಯುವ ಯತ್ನ ನಡೆಯುತ್ತಿದೆ. ಸಾಮಾನ್ಯ ಜನರ ಮೇಲೆ ದೌರ್ಜನ್ಯದ ಜೊತೆಗೆ, ಬಂಡವಾಳಶಾಹಿ ವ್ಯವಸ್ಥೆಯಲ್ಲಿ ದೊಡ್ಡ ಬದಲಾವಣೆ ನಡೆಯುತ್ತಿದೆ’ ಎಂದು ಹೇಳಿದರು.

‘ಕಾರ್ಮಿಕ ಕಾಯ್ದೆಗಳು ಸಾಕಷ್ಟು ಅಮಾನವೀಯವಾಗಿವೆ. ಇನ್ನು ಮುಂದೆ ಕಾರ್ಮಿಕರು ಕಾನೂನಾತ್ಮಕ ಹೋರಾಟ ಮಾಡಲು ಸಾಧ್ಯವಿಲ್ಲ. ಹೋರಾಟ ಮಾಡಿದರೆ, ಅದು ಕಾನೂನು ಬಾಹಿರ ಆಗುತ್ತದೆ. ಕಾರ್ಮಿಕ ಸಂಘಟನೆಗಳು ನಿಷೇಧ ಆಗುತ್ತವೆ’ ಎಂದು ಎಚ್ಚರಿಸಿದರು.

ಹೋರಾಟದಲ್ಲಿ ಬಡಗಲಪುರ ನಾಗೇಂದ್ರ, ಯು.ಬಸವರಾಜು, ಮೀನಾಕ್ಷಿ ಸುಂದರಂ, ಕುಮಾರ್ ಸಮತಳ, ಕೆ.ವಿ.ಭಟ್, ವರಲಕ್ಷ್ಮಿ, ಮೈತ್ರೇಯಿ, ಟಿ.ಯಶವಂತ, ಸುಷ್ಮಾ ಪಾಲ್ಗೊಂಡಿದ್ದರು.

ಪ್ರತಿಭಟನೆಯ ಬಳಿಕ ರೈತರು ಹಾಗೂ ಹೋರಾಟಗಾರರನ್ನು ಒಳಗೊಂಡ ನಿಯೋಗ ಮುಖ್ಯಮಂತ್ರಿ ಅವರನ್ನು ಭೇಟಿ ಮಾಡಿ ಮನವಿ ಸಲ್ಲಿಸಿತು.



ಜನಸಾಮಾನ್ಯರು ಎದುರಿಸುತ್ತಿರುವ 15 ಸಮಸ್ಯೆಗಳಿಗೆ ಪರಿಹಾರ ಕಲ್ಪಿಸುವಂತೆ ಆಗ್ರಹಿಸಿ ‘ಸಂಯುಕ್ತ ಹೋರಾಟ– ಕರ್ನಾಟಕ’ ಸಮಿತಿ ಸದಸ್ಯರು ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನದಲ್ಲಿ ಬುಧವಾರ ಪ್ರತಿಭಟನೆ ನಡೆಸಿ, ಕಾರ್ಮಿಕ–ರೈತ ವಿರೋಧಿ ಕಾಯ್ದೆಗಳಿಗೆ ಸಂಬಂಧಿಸಿದ ಪ್ರತಿಗಳನ್ನು ಸುಟ್ಟು ಹಾಕಿದರು – ಪ್ರಜಾವಾಣಿ ಚಿತ್ರ

ಹಕ್ಕೊತ್ತಾಯಗಳು

- ಕೇಂದ್ರ ಸರ್ಕಾರದ ನಾಲ್ಕು ಕಾರ್ಮಿಕ ಸಂಹಿತೆಗಳು ಮತ್ತು ಶ್ರಮ ಶಕ್ತಿ ನೀತಿ–2025 ರದ್ದುಪಡಿಸಬೇಕು
- ಬಗರ್‌ಹುಕುಂ ಜಮೀನು ಸಾಗುವಳಿ ರೈತರಿಗೆ ಭೂಮಿ ಮಂಜೂರು ಮಾಡಬೇಕು
- ದೇವನಹಳ್ಳಿ ಭೂಸ್ವಾಧೀನ ರದ್ದು ಘೋಷಣೆಯನ್ನು ತಕ್ಷಣವೇ ಗೆಜೆಟ್‌ನಲ್ಲಿ ಪ್ರಕಟಿಸಬೇಕು
- ಅರಣ್ಯವಾಸಿಗಳನ್ನು ಒಕ್ಕಲೆಬ್ಬಿಸುವ ಆತಂಕದಿಂದ ಪಾರು ಮಾಡಬೇಕು
- ಎಲ್ಲ ಆದಿವಾಸಿ, ಅರಣ್ಯವಾಸಿಗಳಿಗೆ ಭೂಮಿಹಕ್ಕು ನೀಡಬೇಕು
- ಸರ್ಜಾಪುರ ಹೋಬಳಿಯ ಆಂದೇನಹಳ್ಳಿ, ಮುತ್ತೇನಲ್ಲೂರು, ಸೊಳ್ಳೆಪುರ ಗ್ರಾಮಗಳಲ್ಲಿ ಫಲವತ್ತಾದ ಜಮೀನು ಸ್ವಾಧೀನ ಕೈಬಿಡಬೇಕು
- ಕನಿಷ್ಠ ಬೆಂಬಲ ಬೆಲೆಯಲ್ಲಿ ಮೆಕ್ಕೆಜೋಳ ಖರೀದಿಸಬೇಕು

ಸುದ್ದಿ 2 ನಿಮಿಷ

ನಾಳೆ ಉಡುಪಿಗೆ ಪ್ರಧಾನಿ ಭೇಟಿ

ಉಡುಪಿ: ಇಲ್ಲಿನ ಶ್ರೀಕೃಷ್ಣ ಮಠಕ್ಕೆ ಇದೇ 28ರಂದು ಪ್ರಧಾನಿ ನರೇಂದ್ರ ಮೋದಿ ಭೇಟಿ ನೀಡುವರು ಎಂದು ಪರ್ಯಾಯ ಪುತ್ತಿಗೆ ಮಠಾಧೀಶ ಸುಗುಣೇಂದ್ರ ತೀರ್ಥ ಸ್ವಾಮೀಜಿ ಬುಧವಾರ ತಿಳಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಅವರು, ಮಧ್ಯಾಹ್ನ 12ಕ್ಕೆ ಪ್ರಧಾನಿಯವರು ಕೃಷ್ಣಮಠಕ್ಕೆ ಬರಲಿದ್ದು, ಮೊದಲು ಕನಕದಾಸರಿಗೆ ಪುಷ್ಪಾರ್ಚನೆ ಮಾಡುವರು. ಬಳಿಕ ಕನಕನ ಕಿಂಡಿಗೆ ಹೊದಿಸಿರುವ ಚಿನ್ನದ ಕವಚ, ಸುವರ್ಣ ತೀರ್ಥ ಮಂಟಪ ಅನಾವರಣಗೊಳಿಸುವರು ಎಂದು ಹೇಳಿದರು.

ಶ್ರೀಕೃಷ್ಣ, ಮುಖ್ಯಪ್ರಾಣ ದೇವರು, ಸುವರ್ಣ ಪಾದುಕೆಯ ದರ್ಶನ ಮಾಡಲಿದ್ದಾರೆ. ಸರ್ವಜ್ಞ ಪೀಠ, ಗೋಶಾಲೆ ದರ್ಶನ ಮಾಡಿದ ಬಳಿಕ ಅವರು ಗೀತಾಮಂದಿರಕ್ಕೆ ಭೇಟಿ ನೀಡುವರು. ಅಲ್ಲಿ ಲಘು ಉಪಾಹಾರ ಸೇವಿಸುವರು. ಬಳಿಕ ಸಭಾಕಾರ್ಯಕ್ರಮದಲ್ಲಿ ಪಾಲ್ಗೊಂಡು ಲಕ್ಷ ಕಂಠ ಗೀತಾ ಕಾರ್ಯಕ್ರಮದ ನಿಮಿತ್ತ ಭಗವದ್ಗೀತೆಯ 18ನೇ ಅಧ್ಯಾಯದ ಕೊನೆಯ ಕೆಲವು ಶ್ಲೋಕಗಳನ್ನು ಪಠಿಸುವರು. ಮೋದಿಯವರು ಕೋಟಿ ಗೀತಾ ಲೇಖನ ಯಜ್ಞದ ದೀಕ್ಷೆಯನ್ನೂ ಪಡೆಯುವರು ಎಂದರು.

ಕಾರ್ಯಕ್ರಮಕ್ಕೆ ಅಷ್ಟಮಠದ ಸ್ವಾಮೀಜಿಗಳಿಗೆ ಆಹ್ವಾನ ನೀಡಿದ್ದೇವೆ ಎಂದರು.

ದತ್ತ ಜಯಂತಿಗೆ ಚಾಲನೆ



ಚಿಕ್ಕಮಗಳೂರು: ವಿಎಚ್‌ಪಿ, ಬಜರಂಗದಳ, ಶ್ರೀರಾಮ ಸೇನೆಯಿಂದ ಹಮ್ಮಿಕೊಂಡಿರುವ ದತ್ತ ಜಯಂತಿ ಅಂಗವಾಗಿ ಮಾಲಾಧಾರಣೆಗೆ ಬುಧವಾರ ಚಾಲನೆ ದೊರೆಯಿತು.

ಕಾಮಧೇನು ಗಣಪತಿ ದೇಗುಲದಲ್ಲಿ ದತ್ತಾತ್ರೇಯ ಸ್ವಾಮಿಗೆ ಪೂಜೆ ನೆರವೇರಿಸಲಾಯಿತು. ವಿಧಾನಪರಿಷತ್ ಸದಸ್ಯ ಸಿ.ಟಿ. ರವಿ, ಶ್ರೀರಾಮ ಸೇನೆ ಸಂಸ್ಥಾಪಕ ಪ್ರಮೋದ್ ಮುತಾಲಿಕ್ ಹಾಗೂ ನೂರಾರು ಕಾರ್ಯ-ಕರ್ತರಿಗೆ ಮಾಲಾಧಾರಣೆ ನಡೆಯಿತು.

ಒಂಬತ್ತು ದಿನ ದತ್ತ ಜಯಂತಿ ಕಾರ್ಯಕ್ರಮಗಳು ನಡೆಯಲಿವೆ. ಡಿ.2ರಂದು ಅನಸೂಯ ಜಯಂತಿ, 3ರಂದು ಚಿಕ್ಕಮಗಳೂರು ನಗರದಲ್ಲಿ ಶೋಭಾಯಾತ್ರೆ, 4ರಂದು ದತ್ತ ಪಾದುಕೆ ದರ್ಶನವನ್ನು ದತ್ತ ಮಾಲಾಧಾರಿಗಳು ಮಾಡಲಿದ್ದಾರೆ.

ಮುನ್ನೆಚ್ಚರಿಕೆಯಾಗಿ ಮುಳ್ಳಯ್ಯನಗಿರಿ ಸುತ್ತಮುತ್ತಲ ಪ್ರವಾಸಿ ತಾಣಗಳಿಗೆ ಪ್ರವಾಸಿಗರ ಭೇಟಿಗೆ ಜಿಲ್ಲಾಡಳಿತ ಡಿ.1ರ ಬೆಳಿಗ್ಗೆ 6ರಿಂದ ಡಿ.5ರ ಬೆಳಿಗ್ಗೆ 10 ಗಂಟೆ ತನಕ ನಿರ್ಬಂಧಿಸಿದೆ.

‘ಸಂವಿಧಾನ ಜಾಗೃತಿ’ ಈ ಹೊತ್ತಿನ ತುರ್ತು’

‘ಪ್ರಜಾವಾಣಿ’– ಸಮಾಜ ಕಲ್ಯಾಣ ಇಲಾಖೆಯ ಸಹಯೋಗದಲ್ಲಿ ಅಭಿಯಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಮೂಲಭೂತ ಹಕ್ಕು ಮತ್ತು ಕರ್ತವ್ಯಗಳ ಬಗ್ಗೆ ಜನರಿಗೆ ತಿಳಿಸಿ, ಪ್ರಜಾಪ್ರಭುತ್ವದಲ್ಲಿ ಜನರ ಭಾಗವಹಿಸುವಿಕೆಯನ್ನು ಹೆಚ್ಚಿಸಲು ಸಂವಿಧಾನದ ಬಗ್ಗೆ ಜಾಗೃತಿ ಮೂಡಿಸುವುದು ಇಂದಿನ ತುರ್ತು’ ಎಂದು ಸಮಾಜ ಕಲ್ಯಾಣ ಸಚಿವ ಎಚ್.ಸಿ.ಮಹದೇವಪ್ಪ ಹೇಳಿದರು.

‘ಪ್ರಜಾವಾಣಿ’ ಮತ್ತು ‘ಡೆಕ್ಕನ್ ಹೆರಾಲ್ಡ್’ ಪತ್ರಿಕೆಗಳು ಸಮಾಜ ಕಲ್ಯಾಣ ಇಲಾಖೆಯ ಸಹಯೋಗದಲ್ಲಿ ಆರಂಭಿಸಿರುವ ‘ಸಂವಿಧಾನವೇ ಬೆಳಕು’ ಅಭಿಯಾನಕ್ಕೆ ಬುಧವಾರ ಚಾಲನೆ ನೀಡಿ ಅವರು ಮಾತನಾಡಿದರು.

‘ಸರ್ಕಾರಗಳು ಇಲ್ಲದೇ ಇದ್ದ ಸಂದರ್ಭದಲ್ಲೂ ಪ್ರಜಾಪ್ರಭುತ್ವ ನಡೆಯುತ್ತದೆ. ಆದರೆ ಮಾಧ್ಯಮಗಳು ಇಲ್ಲದೆ ಪ್ರಜಾಪ್ರಭುತ್ವ ಕಾರ್ಯ ನಿರ್ವಹಿಸದು ಎಂದು ಅಮೆರಿಕದ ಅಧ್ಯಕ್ಷರಾಗಿದ್ದ ಥಾಮಸ್ ಜಾಫರ್‌ಸನ್ ಹೇಳಿದ್ದರು. ಪ್ರಜಾಪ್ರಭುತ್ವಕ್ಕೆ ಅಪಾಯ ಎದುರಾದಾಗಲೆಲ್ಲಾ ‘ಪ್ರಜಾವಾಣಿ’ ಮತ್ತು ‘ಡೆಕ್ಕನ್ ಹೆರಾಲ್ಡ್’ ಪತ್ರಿಕೆಗಳು, ಪ್ರಜಾಪ್ರಭುತ್ವವನ್ನು ಬಲಪಡಿಸಲು ಕಾರ್ಯನಿರ್ವಹಿಸಿವೆ’ ಎಂದರು.

‘ಜನರ ಧ್ವನಿಯಾಗಿ ಮಹಾತ್ಮ ಗಾಂಧಿ ಅವರು ಪತ್ರಿಕೆ ತರುತ್ತಿದ್ದರೆ, ಧ್ವನಿಯಿಲ್ಲದವರ ಧ್ವನಿಯಾಗಿ ಬಾಬಾಸಾಹೇಬ ಅಂಬೇಡ್ಕರ್ ಅವರು ಪತ್ರಿಕೆ ನಡೆಸುತ್ತಿದ್ದರು. ಈ ಎರಡೂ ಉದ್ದೇಶಗಳನ್ನು ಒಳಗೊಂಡು, ಪ್ರಜಾವಾಣಿ ಮತ್ತು ಡೆಕ್ಕನ್ ಹೆರಾಲ್ಡ್ ಪತ್ರಿಕೆಗಳು ಕಾರ್ಯನಿರ್ವಹಿಸಿವೆ. ವಾಕ್ ಸ್ವಾತಂತ್ರ್ಯವನ್ನು ದುರುಪಯೋಗ ಮಾಡಿಕೊಳ್ಳದೆ, ಪ್ರಜಾಪ್ರಭುತ್ವದ ರಕ್ಷಣೆಗೆ ದುಡಿದಿವೆ’ ಎಂದರು.

‘ಪ್ರಜಾಪ್ರಭುತ್ವಕ್ಕೆ ಈಗ ಅಪಾಯ ಎದುರಾಗಿದೆ. ಕೇಂದ್ರ ಸರ್ಕಾರವು ಎಲ್ಲ ರಾಜ್ಯಗಳನ್ನು ಸಮಾನವಾಗಿ ಕಾಣದೆ ಒಕ್ಕೂಟ ವ್ಯವಸ್ಥೆಗೆ ಧಕ್ಕೆ ತರುತ್ತಿರುವ ಈ ಹೊತ್ತಿನಲ್ಲಿ, ಈ ಎರಡು ಪತ್ರಿಕೆಗಳು ‘ಸಂವಿಧಾನವೇ ಬೆಳಕು’ ಕಾರ್ಯಕ್ರಮ ಆರಂಭಿಸಿರುವುದು ಸ್ವಾಗತಾರ್ಹ. ಪ್ರಜಾ ಪ್ರಭುತ್ವ ಯಶಸ್ವಿಯಾಗಬೇಕಾದರೆ, ಜನರ ಭಾಗವಹಿಸುವಿಕೆ ಅತ್ಯಗತ್ಯ. ಈ ನಿಟ್ಟಿನಲ್ಲಿ ಈ ಕಾರ್ಯಕ್ರಮವು ಯಶಸ್ವಿಯಾಗಲಿ’ ಎಂದು ಹೇಳಿದರು.

‘ಸಮೃದ್ಧ, ಸೌಹಾರ್ದ ಮತ್ತು ಭ್ರಾತೃತ್ವ ಭಾರತವನ್ನು ರೂಪಿಸಬೇಕು ಎಂಬುದು ಅಂಬೇಡ್ಕರ್ ಅವರು ಕನಸಾಗಿತ್ತು. ದೇಶದ ಎಲ್ಲ ಪ್ರಜೆಗಳಿಗೆ ಅವರ ಹಕ್ಕು ಮತ್ತು ಹೊಣೆಗಾರಿಕೆಗಳ ಬಗ್ಗೆ ಅರಿವು ಮೂಡಿದಾಗಲಷ್ಟೇ ಇದು ಸಾಧ್ಯವಾಗುತ್ತದೆ. ಈ ನಿಟ್ಟಿನಲ್ಲಿ ‘ಸಂವಿಧಾನವೇ ಬೆಳಕು’ ಕಾರ್ಯಕ್ರಮವು ಅತ್ಯಂತ ಮಹತ್ವದ್ದು’ ಎಂದರು.




‘ಸಂವಿಧಾನವೇ ಬೆಳಕು’ ಅಭಿಯಾನಕ್ಕೆ ಸಚಿವ ಎಚ್‌ಸಿ.ಮಹದೇವಪ್ಪ ಬುಧವಾರ ಚಾಲನೆ ನೀಡಿದರು.(ಎಡದಿಂದ) ದಿ ಪ್ರಿಂಟರ್ಸ್ ಮೈಸೂರು ಪ್ರೈವೆಟ್ ಲಿಮಿಟೆಡ್‌ನ (‘ಪ್ರಜಾವಾಣಿ’ ಮತ್ತು ‘ಡೆಕ್ಕನ್ ಹೆರಾಲ್ಡ್’ ಪತ್ರಿಕಾ ಸಮೂಹ) ಸಿಒಒ ಕಿರಣ್ ಸುಂದರ್ ರಾಜನ್, ನಿರ್ದೇಶಕಿ ಕೆ.ಟಿ ಸೌಭಾಗ್ಯ ಲಕ್ಷ್ಮಿ, ‘ಪ್ರಜಾವಾಣಿ’ ಕಾರ್ಯನಿರ್ವಾಹಕ ಸಂಪಾದಕ ರವೀಂದ್ರ ಭಟ್ಟ ಮತ್ತು ಕೆಪಿಸಿಸಿ ಉಪಾಧ್ಯಕ್ಷ ಎಂ.ಸಿ. ವೇಣುಗೋಪಾಲ್ ಪಾಲ್ಗೊಂಡಿದ್ದರು –ಪ್ರಜಾವಾಣಿ ಚಿತ್ರ

ಪ್ರಾಧ್ಯಾಪಕ ವಿರುದ್ಧ ಎಫ್‌ಐಆರ್

ಚಿಕ್ಕಮಗಳೂರು: ಸರ್ಕಾರಿ ವೈದ್ಯಕೀಯ ಕಾಲೇಜಿನ ಪ್ರಾಧ್ಯಾಪಕರೊಬ್ಬರು ಮೆಸೇಜ್ ಕಳುಹಿಸಿ ಕಿರುಕುಳ ನೀಡುತ್ತಿದ್ದಾರೆ ಎಂದು ವಿದ್ಯಾರ್ಥಿನಿಯೊಬ್ಬರು ಗ್ರಾಮಾಂತರ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ. ಪ್ರಾಧ್ಯಾಪಕ ಡಾ.ಗಂಗಾಧರ ವಿರುದ್ಧ ಪ್ರಕರಣ ದಾಖಲಾಗಿದೆ. ತನಿಖೆ ನಡೆಸಲಾಗುತ್ತಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಸೈಲ್‌ಗೆ ಕುವೆಂಪು ರಾಷ್ಟ್ರೀಯ ಪುರಸ್ಕಾರ

ಶಿವಮೊಗ್ಗ: ಕುಪ್ಪಳಿಯ ರಾಷ್ಟ್ರಕವಿ ಕುವೆಂಪು ಪ್ರತಿಷ್ಠಾನದಿಂದ ಕೊಡಮಾಡುವ 2025ನೇ ಸಾಲಿನ ‘ಕುವೆಂಪು ರಾಷ್ಟ್ರೀಯ ಪುರಸ್ಕಾರ’ಕ್ಕೆ ಕೊಂಕಣಿ ಮತ್ತು ಮರಾಠಿ ಬರಹಗಾರ ಮಹಾಬಲೇಶ್ವರ ಸೈಲ್ ಆಯ್ಕೆಯಾಗಿದ್ದಾರೆ.



ಮಹಾಬಲೇಶ್ವರ ಸೈಲ್

ಪುರಸ್ಕಾರವು ₹5 ಲಕ್ಷ ನಗದು ಹಾಗೂ ಬೆಳ್ಳಿಯ ಪದಕ ಒಳಗೊಂಡಿದೆ. ಪ್ರಶಸ್ತಿ ಪ್ರದಾನ ಸಮಾರಂಭ ಕುವೆಂಪು ಅವರ ಜನ್ಮದಿನವಾದ ಡಿ. 29ರಂದು ಕುಪ್ಪಳಿಯಲ್ಲಿ ನಡೆಯಲಿದೆ ಎಂದು ಪ್ರತಿಷ್ಠಾನದ ಪ್ರಕಟಣೆ ತಿಳಿಸಿದೆ.

ಪರಿಚಯ: ಮಹಾಬಲೇಶ್ವರ ಸೈಲ್ ಮೂಲತಃ ಉತ್ತರ ಕನ್ನಡ ಜಿಲ್ಲೆ ಮಾಜಾಳಿ ಬಳಿಯ ಶೆಜೆಬಾಗ್ ಗ್ರಾಮದವರು. ಭಾರತೀಯ ಸೇನೆಯಲ್ಲಿ, ವಿಶ್ವಸಂಸ್ಥೆಯ ಶಾಂತಿಪಾಲನಾ ಪಡೆಯಲ್ಲಿ ಸೇವೆ ಸಲ್ಲಿಸಿದ್ದಾರೆ. ನಿವೃತ್ತಿಯ ನಂತರ ಗೋವಾದಲ್ಲಿ ಅರಣ್ಯ, ಪೊಲೀಸ್ ಹಾಗೂ ಅಂಚೆ ಇಲಾಖೆಗಳಲ್ಲೂ ಸೇವೆ ಸಲ್ಲಿಸಿ ಸದ್ಯ ಅಲ್ಲಿಯೇ ನೆಲಸಿದ್ದಾರೆ.

ಸೈಲ್ ಅವರ ಕಾದಂಬರಿ ‘ಹಾವಟಣ್’ಗೆ ಪ್ರತಿಷ್ಠಿತ ಸರಸ್ವತಿ ಸಮ್ಮಾನ ಪುರಸ್ಕಾರ ದೊರೆತಿದೆ. ಇವರ ‘ತರಂಗಂ’ ಕಥಾ ಸಂಕಲನಕ್ಕೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಗೋವಾ ಸರ್ಕಾರದ ಸಾಹಿತ್ಯ ಪ್ರಶಸ್ತಿಗಳು ದೊರೆತಿವೆ.

12ನೇ ದಿನಕ್ಕೆ ಕಾಲಿರಿಸಿದ ಧರಣಿ ಸತ್ಯಾಗ್ರಹ

ಲಕ್ಷ್ಮೇಶ್ವರ (ಗದಗ ಜಿಲ್ಲೆ): ಮೆಕ್ಕೆಜೋಳ ಖರೀದಿಗೆ ಕೇಂದ್ರ ತೆರೆಯಲು ಆಗ್ರಹಿಸಿ ನಡೆದಿರುವ ರೈತರ ಅಹೋರಾತ್ರಿ ಧರಣಿ ಸತ್ಯಾಗ್ರಹ ಬುಧವಾರ 12ನೇ ದಿನಕ್ಕೆ ಕಾಲಿರಿಸಿತು.

‘ನಾವು ಮೆಕ್ಕೆಜೋಳ ಬೆಳೆದಿದ್ದೇವೆ’ ಎಂದು ಸರ್ಕಾರಕ್ಕೆ ಹೇಳುವ ಉತಾರ ಚಳವಳಿಯನ್ನು ಬೆಳಿಗ್ಗೆಯಿಂದ ಮಧ್ಯಾಹ್ನದವರೆಗೆ ನಡೆಸಿದರು.

ಪಾಲಾ-ಬಾದಾಮಿ ಹೆದ್ದಾರಿಯಲ್ಲಿ ವಾಹನ ಸಂಚಾರವನ್ನು ತಡೆದು, ರೈತರು ಪ್ರತಿಭಟನೆ ನಡೆಸಿದರು. ಮುಳಗುಂದ ಮತ್ತು ಲಕ್ಷ್ಮೇಶ್ವರದಲ್ಲೂ ರೈತರು ರಸ್ತೆ ತಡೆ ನಡೆಸಿದರು.

ರೈತ ಮುಖಂಡ ರವಿಕಾಂತ ಅಂಗಡಿ ಮಾತನಾಡಿ, ‘ಆದಷ್ಟು ಬೇಗ ಖರೀದಿ ಕೇಂದ್ರ ಆರಂಭಿಸಿ, ಸರ್ಕಾರವು ರೈತರ ನೆರವಿಗೆ ಮುಂದಾಗಬೇಕು’ ಎಂದರು.

ಸಂವಿಧಾನ ದಿನ: ಸುರಪುರದಲ್ಲಿ ಗಲಾಟೆ

ಪ್ರಜಾವಾಣಿ ವಾರ್ತೆ

ಸುರಪುರ: ಸಂವಿಧಾನ ದಿನಾಚರಣೆ ನಿಮಿತ್ತ ತಾಲ್ಲೂಕು ಆಡಳಿತ ಬುಧವಾರ ಏರ್ಪಡಿಸಿದ್ದ ಮೆರವಣಿಗೆ ವೇಳೆ ಶಾಸಕ ರಾಜಾ ವೇಣುಗೋಪಾಲನಾಯಕ, ತಹಶೀಲ್ದಾರ್ ಎಚ್.ಎ. ಸರಕಾವಸ್ ಅವರು ಅಂಬೇಡ್ಕರ್ ಪುತ್ಥಳಿಗೆ ಮಾಲಾರ್ಪಣೆ ಮಾಡುವ ವೇಳೆ ಗಲಾಟೆ ನಡೆದಿದೆ.

ಅಂಬೇಡ್ಕರ್ ವೃತ್ತದ ಹಿಂದುಗಡೆ ಇರುವ ಸರ್ಕಾರಿ ಜಮೀನಿನಲ್ಲಿ ಅಂಬೇಡ್ಕರ್ ಹೆಸರಿನಲ್ಲಿ ಗ್ರಂಥಾಲಯ ಇತರ ಚಟುವಟಿಕೆಗಳಿಗಾಗಿ ಭೂಮಿ ಮಂಜೂರು ಕೋರಿ 99 ದಿನದಿಂದ ಹೋರಾಟ ಸಮಿತಿ ಧರಣಿ ನಡೆಸುತ್ತಿದೆ. ಸೌಜನ್ಯಕ್ಕೂ ಧರಣಿ ಸ್ಥಳಕ್ಕೆ ಭೇಟಿ ನೀಡಿಲ್ಲ ಎಂದು ಹೋರಾಟ ಸಮಿತಿ ಸದಸ್ಯರು ತಹಶೀಲ್ದಾರ್ ಅವರಿಗೆ ತಡೆಯೊಡ್ಡಿದರು.

> ಭೂಮಿ ಮಂಜೂರಾತಿ ನನ್ನ ಕೈಯಲಿಲ್ಲ. ಅದು ಕಾನೂನಿಗೆ ಬಿಟ್ಟ ವಿಷಯ. ಕಾನೂನಿಗಿಂತ ದೊಡ್ಡವರು ಯಾರೂ ಇಲ್ಲ. ಎಲ್ಲರೂ ಕಾನೂನನ್ನು ಗೌರವಿಸಬೇಕು
> **ರಾಜಾ ವೇಣುಗೋಪಾಲನಾಯಕ**
> ಶಾಸಕ

ಅಷ್ಟೊತ್ತಿಗಾಗಲೇ ಶಾಸಕರು ವೃತ್ತದ ಒಳಗೆ ಹೋಗಿ ಅಂಬೇಡ್ಕರ್ ಪುತ್ಥಳಿಗೆ ಮಾಲಾರ್ಪಣೆ ಮಾಡಿದ್ದರು. ಆಗ ಗಲಾಟೆ ಅರಂಭವಾಯಿತು. ತಹಶೀಲ್ದಾರ್ ಅವರನ್ನು ಒಳಗೆ ಬಿಡುವಂತೆ ಶಾಸಕರು ಮಾಡಿದ ಮನವಿಗೆ ಹೋರಾಟಗಾರರು ಸ್ಪಂದಿಸಲಿಲ್ಲ.

ಆಗ ತಳ್ಳಾಟ, ನೂಕಾಟ ಆರಂಭವಾಯಿತು. ಪೊಲೀಸರು ಪರಿಸ್ಥಿತಿ ನಿಯಂತ್ರಿಸಿದರು. ಕೊನೆಗೆ ತಹಶೀಲ್ದಾರ್ ಅವರನ್ನು ವೃತ್ತದ ಒಳಗೆ ಬಿಡಲಾಯಿತು. ಕರ್ತವ್ಯಕ್ಕೆ ಅಡ್ಡಿಪಡಿಸಿರುವ ಹಿನ್ನೆಲೆಯಲ್ಲಿ 9 ಜನರ ವಿರುದ್ಧ ಸುರಪುರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ದೇಶದ ಅಗ್ರೇಸರ: ನ್ಯಾ.ನಾಗಪ್ರಸನ್ನ ದಾಖಲೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಹೈಕೋರ್ಟ್ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರು ಆರು ವರ್ಷಗಳಲ್ಲಿ ವಿವಿಧ ನಮೂನೆಗಳ 22 ಸಾವಿರ ಪ್ರಕರಣಗಳನ್ನು ವಿಲೇವಾರಿ ಮಾಡಿರುವ ದೇಶದ ಮೊದಲ ಹೈಕೋರ್ಟ್ ನ್ಯಾಯಮೂರ್ತಿ ಎಂಬ ಹೆಗ್ಗಳಿಕೆಗೆ ಭಾಜನರಾಗಿದ್ದಾರೆ.



ಎಂ.ನಾಗಪ್ರಸನ್ನ

ನ್ಯಾ.ನಾಗಪ್ರಸನ್ನ ಅವರು ಬುಧವಾರಕ್ಕೆ (ನ.26) ಹೈಕೋರ್ಟ್ ನ್ಯಾಯಮೂರ್ತಿಯಾಗಿ ಆರು ವರ್ಷಗಳನ್ನು ಪೂರೈಸಿದ ಬೆನ್ನಲ್ಲೇ ಈ ದಾಖಲೆ ನಿರ್ಮಿಸಿದ ಕರ್ನಾಟಕ ಹೈಕೋರ್ಟ್‌ನ ಮೊದಲಿಗರು ಎನಿಸಿದ್ದಾರೆ. 22 ಸಾವಿರ ತೀರ್ಪುಗಳಲ್ಲಿ 985 ಸೂಚಿತ (ರಿಪೋರ್ಟೆಡ್) ತೀರ್ಪುಗಳಾಗಿ ದಾಖಲಾಗಿವೆ.

ಚಂಪಾಷಷ್ಠಿ ಸಂಭ್ರಮ



ದಕ್ಷಿಣ ಕನ್ನಡ ಜಿಲ್ಲೆಯ ಕುಕ್ಕೆ ಶ್ರೀ ಸುಬ್ರಹ್ಮಣ್ಯ ದೇವಸ್ಥಾನದಲ್ಲಿ ಬುಧವಾರ ಚಂಪಾಷಷ್ಠಿ ಜಾತ್ರಾ ಮಹೋತ್ಸವ ಅಂಗವಾಗಿ ಮಹಾರಥೋತ್ಸವ ಜರುಗಿತು

ಮುರುಘಾ ಶರಣರು ಸೇರಿ ಮೂವರು ಖುಲಾಸೆ

ಒಂದನೇ ಪುಟದಿಂದ...

ಮಧ್ಯಾಹ್ನದ ವೇಳೆಗೆ ನ್ಯಾಯಾಲಯದ ಕೊಠಡಿ ಕಿಕ್ಕಿರಿದು ತುಂಬಿತ್ತು. ಮಧ್ಯಾಹ್ನ 3 ಗಂಟೆ ವೇಳೆಗೆ ನ್ಯಾಯಾಧೀಶರು ಆದೇಶ ಪ್ರಕಟಿಸಿದರು. ಆದೇಶ ಪ್ರಕಟಗೊಳ್ಳುತ್ತಿದ್ದಂತೆಯೇ ಮುರುಘಾ ಶರಣರು ಯಾವುದೇ ಪ್ರತಿಕ್ರಿಯೆ ನೀಡದೆ ದಾವಣಗೆರೆಯ ವಿರಕ್ತ ಮಠದತ್ತ ತೆರಳಿದರು. ಶರಣರ ಆಪ್ತರು, ಅನುಯಾಯಿಗಳು ಸಿಹಿ ಹಂಚಿ ಸಂಭ್ರಮಿಸಿದರು.

ವಿಚಾರಣೆಯ ಹಾದಿ: ‘ಮುರುಘಾ ಶರಣರು ನಮ್ಮ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ್ದಾರೆ’ ಎಂದು ಆರೋಪಿಸಿ ಇಬ್ಬರು ಬಾಲಕಿಯರು ಮೈಸೂರಿನ ನಜರ್‌ಬಾದ್ ಪೊಲೀಸ್ ಠಾಣೆಯಲ್ಲಿ 2022ರ ಆ. 26ರಂದು ದೂರು ದಾಖಲಿಸಿದ್ದರು. ನಂತರ ಪೊಲೀಸರು ಶರಣರನ್ನು 2022ರ ಸೆ.1ರಂದು ಬಂಧಿಸಿದ್ದರು. ಸದ್ಯ ಈ ಪ್ರಕರಣದಿಂದ ಇವರು ಖುಲಾಸೆಗೊಂಡಿದ್ದಾರೆ.

‘ತಮ್ಮಿಬ್ಬರು ಹೆಣ್ಣುಮಕ್ಕಳ ಮೇಲೆ ಮುರುಘಾ ಶರಣರು ಲೈಂಗಿಕ ದೌರ್ಜನ್ಯ ಎಸಗಿದ್ದಾರೆ’ ಎಂದು ಆರೋಪಿಸಿ 2022ರ ಅಕ್ಟೋಬರ್ 13ರಂದು ಮಠದ ಅಡುಗೆ ಸಹಾಯಕಿ ಮೈಸೂರಿನ ನಜರ್‌ಬಾದ್ ಠಾಣೆಯಲ್ಲೇ ದೂರು ನೀಡಿದ್ದರು. ಇದು 2ನೇ ಪೋಕ್ಸೊ ಪ್ರಕರಣ.

ಪ್ರಕರಣ ಮೈಸೂರಿನಿಂದ ಚಿತ್ರದುರ್ಗ ಗ್ರಾಮಾಂತರ ಠಾಣೆಗೆ ವರ್ಗಾವಣೆಯಾಗಿತ್ತು. ಮೊದಲ ಪ್ರಕರಣದಲ್ಲಿ ಪೊಲೀಸರು 2022ರ ಅಕ್ಟೋಬರ್ 27ರಂದು ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿದ್ದರು. ನಂತರ ಹೈಕೋರ್ಟ್ 2023 ನವೆಂಬರ್ 8ರಂದು ಶರಣರಿಗೆ ಷರತ್ತುಬದ್ಧ ಜಾಮೀನು ನೀಡಿತ್ತು. ಇನ್ನೊಂದು ಪ್ರಕರಣದಲ್ಲಿ ಆರೋಪಿಗಳು ಬಂಧನಕ್ಕೀಡಾದರೂ, ಸಂಜೆಯೇ ಹೈಕೋರ್ಟ್ ಸೂಚನೆ ಮೇರೆಗೆ ಬಿಡುಗಡೆ ಮಾಡಲಾಗಿತ್ತು.

ಜಾಮೀನು ರದ್ದತಿ ಕೋರಿ ಸಂತ್ರಸ್ತೆಯರು ಸುಪ್ರೀಂ ಕೋರ್ಟ್ ಮೆಟ್ಟಿಲೇರಿದ್ದರು. ಸಾಕ್ಷಿಗಳ ವಿಚಾರಣೆ ಮುಗಿಯುವವರೆಗೂ ಆರೋಪಿಗಳನ್ನು ಬಂಧಿಸಬೇಕು, ವರ್ಷದೊಳಗೆ ವಿಚಾರಣೆ ಪೂರ್ಣಗೊಳಿಸಬೇಕು ಎಂದು ಸುಪ್ರೀಂ ಕೋರ್ಟ್ ಸೂಚಿಸಿತ್ತು. ಶರಣರು 2024ರ ಮೇ 27ರಂದು ನ್ಯಾಯಾಲಯದ ಎದುರು ಶರಣಾಗಿದ್ದರು. ಅಲ್ಲಿಂದ ಆರಂಭವಾದ ಸುದೀರ್ಘ ವಿಚಾರಣೆ ಅಕ್ಟೋಬರ್ 18ಕ್ಕೆ ಪೂರ್ಣಗೊಂಡಿತ್ತು.

‘1 ವರ್ಷದೊಳಗೆ ವಿಚಾರಣೆ ಪೂರ್ಣಗೊಳಿಸುವುದು ಕಷ್ಟಸಾಧ್ಯ ಎಂಬ ನಿರ್ಧಾರಕ್ಕೆ ಬಂದಿದ್ದ ನ್ಯಾಯಾಧೀಶರು, 2 ತಿಂಗಳು ಹೆಚ್ಚುವರಿ ಸಮಯ ಪಡೆದಿದ್ದರು. ಅದೇ ಅವಧಿಯಲ್ಲಿ ವಿಚಾರಣೆ ಮುಗಿಸಿ ಆದೇಶ ಪ್ರಕಟಿಸಿದ್ದಾರೆ. ಸುಪ್ರೀಂ ಕೋರ್ಟ್ ಸೂಚನೆಯಂತೆ ವಿಚಾರಣೆ ನಡೆದ ಕಾರಣ ಇಡೀ ಪ್ರಕ್ರಿಯೆ ಮಹತ್ವ ಪಡೆದುಕೊಂಡಿತ್ತು’ ಎಂದು ವಕೀಲರು ತಿಳಿಸಿದರು.

‘ಆರೋಪ ಸಾಬೀತಿಗೆ ಪುರಾವೆ ಕೊರತೆ’

‘ಮುರುಘಾ ಮಠದ ಮಾಜಿ ಆಡಳಿತಾಧಿಕಾರಿ, ಮಾಜಿ ಶಾಸಕ ಎಸ್.ಕೆ. ಬಸವರಾಜನ್ ಹಾಗೂ ಅವರ ಕುಟುಂಬ ಸದಸ್ಯರು ಆಸ್ತಿಗಾಗಿ ಮುರುಘಾ ಶರಣರ ವಿರುದ್ಧ ಷಡ್ಯಂತ್ರ ನಡೆಸಿದ್ದರು. ಮೈಸೂರಿನ ಎನ್‌ಜಿಒ ಸಹಾಯ ಪಡೆದು ಬಾಲಕಿಯರಿಗೆ ತರಬೇತಿ ನೀಡಿ ದೂರು ಕೊಡಿಸಲಾಗಿತ್ತು ಎಂಬ ವಿಷಯವನ್ನು ಕೋರ್ಟ್ ಗಮನಕ್ಕೆ ತರಲಾಗಿತ್ತು. ಬಹುತೇಕ ಆರೋಪಗಳಿಗೆ ಪುರಾವೆ ಇಲ್ಲದ ಕಾರಣ ಶರಣರು ಆರೋಪ ಮುಕ್ತರಾಗಿದ್ದಾರೆ’ ಎಂದು ಆರೋಪಿಗಳ ಪರ ವಕೀಲ ಕೆ.ಬಿ.ಕೆ.ಸ್ವಾಮಿ ಅವರು ಸುದ್ದಿಗಾರರಿಗೆ ತಿಳಿಸಿದರು.

‘ಲೈಂಗಿಕ ದೌರ್ಜನ್ಯ ನಡೆದ ನಂತರ ದೂರು ನೀಡುವವರೆಗೆ ಬಾಲಕಿಯರು ಎಲ್ಲಿದ್ದರು ಎಂಬ ಪ್ರಶ್ನೆಗೆ ತನಿಖೆಯಲ್ಲಿ ಉತ್ತರ ಸಿಕ್ಕಿಲ್ಲ. ಖಾಸಗಿ ಕೋಣೆಗೆ ಬಾಲಕಿಯರನ್ನು ಶರಣರು ಕರೆದೊಯ್ಯು-ತ್ತಿದ್ದರು ಎಂಬ ಆರೋಪಕ್ಕೆ ಸಿಸಿಟಿವಿ ಕ್ಯಾಮೆರಾ ದೃಶ್ಯಾವಳಿ ಸಿಕ್ಕಿಲ್ಲ. ಈ ಅಂಶಗಳನ್ನು ಕೋರ್ಟ್ ಪರಿಗಣಿಸಿದೆ’ ಎಂದರು.

ಈ ಕುರಿತು ಪ್ರತಿಕ್ರಿಯೆ ಪಡೆಯಲು ಮಠದ ಮಾಜಿ ಆಡಳಿತಾಧಿಕಾರಿ ಎಸ್.ಕೆ.ಬಸವರಾಜನ್ ಅವರಿಗೆ ಕರೆ ಮಾಡಿದರೂ ಅವರು ಸ್ವೀಕರಿಸಲಿಲ್ಲ.

‘ಒಂದಷ್ಟು ದಿನ ಮೌನವಾಗಿರುವೆ’

ದಾವಣಗೆರೆ: ಕೋರ್ಟ್ ಆದೇಶದ ಬಳಿಕ ಚಿತ್ರದುರ್ಗದಿಂದ ನಗರದ ಜಯದೇವ ವೃತ್ತದಲ್ಲಿರುವ ಶಿವಯೋಗಿ ಮಂದಿರಕ್ಕೆ ಸಂಜೆ ಬಂದ ಶಿವಮೂರ್ತಿ ಮುರುಘಾ ಶರಣರು, ಅಲ್ಲಿರುವ ಅಥಣಿ ಶಿವಯೋಗಿ ಸ್ವಾಮೀಜಿ ಹಾಗೂ ಜಯದೇವ ಸ್ವಾಮೀಜಿ ಅವರ ಗದ್ದುಗೆ, ಪುತ್ಥಳಿಗೆ ಮಾಲಾರ್ಪಣೆ ಮಾಡಿದರು.

ಮಾಧ್ಯಮ ಸಿಬ್ಬಂದಿ ಬಂದ ಕೂಡಲೇ ‘ಸಂವಿಧಾನ ದಿನದ ಶುಭಾಶಯಗಳು’ ಎಂದು ಶುಭ ಕೋರಿದರು. ನಂತರ ಸುದ್ದಿಗಾರರ ಪ್ರಶ್ನೆಗಳಿಗೆ ‘ಒಂದಷ್ಟು ದಿನ ಮೌನ ಕಾಪಾಡಿಕೊಳ್ಳಬೇಕಿದೆ. ಮಾತನಾಡುವ ಸಂದರ್ಭ ಕಡಿಮೆ ಇದೆ. ಪತ್ರಿಕಾಗೋಷ್ಠಿ ಕರೆದು ಮಾಹಿತಿ ಹಂಚಿಕೊಳ್ಳುವೆ’ ಎಂದು ಹೇಳಿದರು. ಸುದ್ದಿಗಾರರ ಎಲ್ಲ ಪ್ರಶ್ನೆಗಳಿಗೂ ‘ನೋ ಕಮೆಂಟ್ಸ್’ ಎಂದಷ್ಟೇ ಪ್ರತಿಕ್ರಿಯಿಸಿದರು.

ಶರಣರು ಬಂದಾಗ ಮಠದ ಆವರಣದಲ್ಲಿದ್ದ ಭಕ್ತರು ಜೈಕಾರ ಕೂಗಿದರು. ಶರಣರು ಆಗಮಿಸಿದ ಬಳಿಕ ಸ್ಥಳದಲ್ಲಿದ್ದ ಮುಖಂಡರು ಜೈಕಾರ ಕೂಗದಂತೆ ತಡೆದರು. ಕೆಲವರು ಸಿಹಿ ಹಂಚಿ ಸಂಭ್ರಮಿಸಿದರು.

ಆರೋಪಿ ಬಂಧನ, ಮೂವರು ಅಮಾನತು • ಆರು ಜನರ ವಿರುದ್ಧ ಎಫ್‌ಐಆರ್

ಹಾಸ್ಟೆಲ್‌ನಲ್ಲೇ ಬಾಲಕಿಗೆ ಪ್ರಸವ

ಪ್ರಜಾವಾಣಿ ವಾರ್ತೆ

ಕೊಪ್ಪಳ: ಹತ್ತನೇ ತರಗತಿ ಓದುತ್ತಿದ್ದ ಬಾಲಕಿ, ಜಿಲ್ಲೆಯ ಕುಕನೂರು ತಾಲ್ಲೂಕಿನ ಗ್ರಾಮವೊಂದರ ಡಿ. ದೇವರಾಜ ಅರಸ್ ಮೆಟ್ರಿಕ್ ಪೂರ್ವ ಬಾಲಕಿಯರ ವಸತಿ ನಿಲಯದ ಶೌಚಾಲಯದಲ್ಲಿ ಬುಧವಾರ ಮಗುವಿಗೆ ಜನ್ಮ ನೀಡಿದ್ದಾಳೆ.

ಬಾಲಕಿ ಗರ್ಭಿಣಿಯಾಗಲು ಕಾರಣವಾದ ಆರೋಪದ ಮೇಲೆ ಯಲಬುರ್ಗಾ ತಾಲ್ಲೂಕಿನ ತಲ್ಲೂರು ಗ್ರಾಮದ ಯುವಕ ಹನುಮನಗೌಡ ಬತ್ತಿ ಎಂಬಾತನನ್ನು ಬಂಧಿಸಲಾಗಿದೆ.

ಬಾಲಕಿ ರಕ್ಷಣೆಗೆ ನಿಗಾ ವಹಿಸದ ಹಾಸ್ಟೆಲ್ ಮೇಲ್ವಿಚಾರಕಿ ಶಶಿಕಲಾ ಹಿರೇಮಠ, ಅಡುಗೆ ಕೆಲಸಗಾರರಾಗಿದ್ದ ಪಾರ್ವತಿ ಕುದಿರಿಮೋತಿ ಹಾಗೂ ಪ್ರಿಯಾಂಕಾ ಸಿಂಧೋಗಿ ಅವರನ್ನು ಅಮಾನತು ಮಾಡಲಾಗಿದೆ.

> ಆರು ಜನರ ವಿರುದ್ಧ ಎಫ್‌ಐಆರ್ ದಾಖಲಿಸಲಾಗಿದೆ. ಕರ್ತವ್ಯ ಲೋಪ ಕಂಡುಬಂದ ಶಿಕ್ಷಕರು ಹಾಗೂ ವೈದ್ಯಾಧಿಕಾರಿಗಳನ್ನು ಪೊಲೀಸರು ವಿಚಾರಣೆಗೆ ಒಳಪಡಿಸಿದ್ದಾರೆ
> **ಮಹಾಂತಸ್ವಾಮಿ ಪೂಜಾರ**
> ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ

ಆರೋಪಿ ಹನುಮನಗೌಡ, ಶಶಿಕಲಾ, ಶಿಕ್ಷಕರಾದ ಪ್ರಭಾಕರ ಭಜಂತ್ರಿ, ಯಂಕಪ್ಪ ಪೂಜಾರ, ರಾಷ್ಟ್ರೀಯ ಬಾಲ ಸ್ವಾಸ್ಥ್ಯ ಕಾರ್ಯಕ್ರಮದ ಕುಕನೂರು ತಂಡದ ವೈದ್ಯಾಧಿಕಾರಿಗಳಾದ ಭರತೇಶ ಹಿರೇಮಠ ಹಾಗೂ ಸಬೀಯಾ ಅವರ ಮೇಲೆ ಎಫ್‌ಐಆರ್ ದಾಖಲಾಗಿದೆ.

ವಸತಿ ನಿಲಯವಿರುವ ಗ್ರಾಮದ ಶಾಲೆಯಲ್ಲಿ ಎಂಟನೇ ತರಗತಿಯಿಂದಲೇ ಓದುತ್ತಿರುವ ಬಾಲಕಿಗೆ ಆರೋಪಿ ಮೊದಲಿನಿಂದಲೂ ಪರಿಚಿತನಾಗಿದ್ದ.

‘ಹನುಮನಗೌಡ ನನ್ನನ್ನು ಪ್ರೀತಿಸುತ್ತಿದ್ದ. ಮದುವೆ ಆಗುವುದಾಗಿ ಹೇಳಿ ಶಾಲೆ ಬಿಟ್ಟ ನಂತರ ಹಲವು ಬಾರಿ ಲೈಂಗಿಕ ಸಂಪರ್ಕ ಮಾಡಿದ್ದಾನೆ ಎಂದು ಬಾಲಕಿ ಹೇಳಿಕೆ ನೀಡಿದ್ದಾಳೆ. ಬುಧವಾರ ಬೆಳಿಗ್ಗೆ ಬಾಲಕಿಗೆ ವಿಪರೀತ ಹೊಟ್ಟೆನೋವು ಕಾಣಿಸಿಕೊಂಡಿತ್ತು. ಶೌಚಾಲಯಕ್ಕೆ ತೆರಳಿದಾಗ ಅಲ್ಲಿಯೇ ಹೆರಿಗೆಯಾಗಿದೆ’ ಎಂದು ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ಮಹಾಂತಸ್ವಾಮಿ ಪೂಜಾರ ನೀಡಿದ ದೂರಿನ ಮೇರೆಗೆ ಕುಕನೂರು ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ವೈದ್ಯರ ಮೇಲೂ ಎಫ್‌ಐಆರ್

ವಸತಿ ನಿಲಯಗಳ ಮಕ್ಕಳ ಆರೋಗ್ಯದ ಮೇಲೆ ನಿಗಾ ವಹಿಸಲು ರಾಷ್ಟ್ರೀಯ ಬಾಲ ಸ್ವಾಸ್ಥ್ಯ ಕಾರ್ಯಕ್ರಮದ ಅಡಿ ಪ್ರತಿ ತಿಂಗಳು ಆರೋಗ್ಯ ತಪಾಸಣೆ ಮಾಡಲಾಗುತ್ತದೆ. ಈಗ ಪ್ರಸವವಾಗಿರುವ ಬಾಲಕಿ ಆರೋಗ್ಯ ತಪಾಸಣೆಯನ್ನು 2 ತಿಂಗಳ ಹಿಂದೆ ಮಾಡಲಾಗಿದ್ದು, ಬಾಲಕಿ ಗರ್ಭಿಣಿ ಆಗಿರುವುದನ್ನು ವೈದ್ಯಾಧಿಕಾರಿಗಳು ಪತ್ತೆ ಹಚ್ಚಿಲ್ಲ. ಆದ್ದರಿಂದ, ಕರ್ತವ್ಯ ಲೋಪದ ಮೇಲೆ ಇಬ್ಬರು ವೈದ್ಯಾಧಿಕಾರಿಗಳ ಮೇಲೂ ಎಫ್‌ಐಆರ್ ದಾಖಲಾಗಿದೆ.

‘ಕರ್ತವ್ಯ ಪಾಲನೆಯೇ ಆದ್ಯತೆಯಾಗಲಿ’

ಸಂವಿಧಾನ ದಿನಾಚರಣೆ ಅಂಗವಾಗಿ ದೇಶದ ನಾಗರಿಕರಿಗೆ ಪ್ರಧಾನಿ ಮನವಿ: ರಾಷ್ಟ್ರನಿರ್ಮಾಣದಲ್ಲಿ ಕೈಜೋಡಿಸಲು ಕರೆ

ನವದೆಹಲಿ (ಪಿಟಿಐ): ‘ಸದೃಢ ಪ್ರಜಾಪ್ರಭುತ್ವದ ಅಡಿಪಾಯವಾಗಿರುವ ಸಾಂವಿಧಾನಿಕ ಕರ್ತವ್ಯಗಳ ಪಾಲನೆಯೇ ದೇಶದ ಪ್ರಜೆಗಳ ಪರಮೋಚ್ಚ ಆದ್ಯತೆಯಾಗಬೇಕು’ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದರು.

ಸಂವಿಧಾನ ದಿನದ ಅಂಗವಾಗಿ ದೇಶದ ನಾಗರಿಕರಿಗೆ ಅವರು ಬಹಿರಂಗ ಪತ್ರ ಬರೆದಿದ್ದಾರೆ. ಸಂಸತ್ತಿನ ಸೆಂಟ್ರಲ್ ಹಾಲ್‌ನಲ್ಲಿ ಬುಧವಾರ ನಡೆದ ಸಂವಿಧಾನ ದಿನಾಚರಣೆಯಲ್ಲಿ ಮಾತನಾಡಿದ ಅವರು, ‘ನನ್ನ ದೇಶ ನನಗೆ ಬಹಳಷ್ಟು ನೀಡಿದೆ ಎಂಬ ಧನ್ಯತಾಭಾವದಿಂದ ನಾವು ಕರ್ತವ್ಯಗಳನ್ನು ನಿರ್ವಹಿಸಬೇಕು. ಕರ್ತವ್ಯ ಪಾಲನೆಯಿಂದ ಹಕ್ಕುಗಳಿಗೆ ಮಹತ್ವ ಬರುತ್ತದೆ ಎಂದು ಮಹಾತ್ಮ ಗಾಂಧೀಜಿ ಹೇಳಿದ್ದಾರೆ. ಸಾಂವಿಧಾನಿಕ ಕರ್ತವ್ಯಗಳನ್ನು ನಿರ್ವಹಿಸಿದಾಗ ದೇಶದ ಸಾಮಾಜಿಕ, ಆರ್ಥಿಕ ಅಡಿಪಾಯವೂ ಬಲಗೊಳ್ಳುತ್ತದೆ. ಆ ಮೂಲಕ ರಾಷ್ಟ್ರನಿರ್ಮಾಣಕ್ಕೆ ನಮ್ಮ ಕೊಡುಗೆಯನ್ನು ನೀಡಬೇಕು’ ಎಂದರು.

‘ಪ್ರತಿ ವರ್ಷ ನವೆಂಬರ್ 26ರಂದು, 18 ವರ್ಷ ಪೂರೈಸಿರುವ, ಮೊದಲ ಬಾರಿ ಮತದಾನ ಮಾಡಿದ ಯುವ ಮತದಾರರನ್ನು ಕಾಲೇಜುಗಳಲ್ಲಿ ಸನ್ಮಾನಿಸುವ ಮೂಲಕ ಸಂವಿಧಾನದ ದಿನವನ್ನು ಸಂಭ್ರಮದಿಂದ ಆಚರಿಸಬೇಕು’ ಎಂದು ಹೇಳಿದರು.

ಸಂವಿಧಾನ ರಚನೆಯಲ್ಲಿ ರಾಜೇಂದ್ರ ಪ್ರಸಾದ್ ಮತ್ತು ಬಿ.ಆರ್. ಅಂಬೇಡ್ಕರ್ ಮತ್ತಿತರರ ಕೊಡುಗೆ ಮಹತ್ವದ್ದು. ಅದರಂತೆ ಸ್ವಾತಂತ್ರ್ಯ ಸಂಗ್ರಾಮದಲ್ಲಿ ವಲ್ಲಭಭಾಯಿ ಪಟೇಲ್, ಬಿರ್ಸಾ ಮುಂಡಾ, ಮಹಾತ್ಮಾ ಗಾಂಧಿ ಅವರ ನಾಯಕತ್ವವೂ ಅನನ್ಯವಾದುದು ಎಂದು ಸ್ಮರಿಸಿದರು.

‘ಈ ಮಹಾನ್ ವ್ಯಕ್ತಿಗಳು ಸಾಗಿಬಂದ ಹಾದಿ ಮತ್ತು ಅವರು ನಿರ್ಮಿಸಿರುವ ಮೈಲಿಗಲ್ಲುಗಳು ನಮಗೆ ನಮ್ಮ ಸಾಂವಿಧಾನಿಕ ಕರ್ತವ್ಯಗಳನ್ನು ನೆನಪಿಸುತ್ತವೆ. ಸಂವಿಧಾನದ 51ಎ ವಿಧಿಯಲ್ಲಿ ಪ್ರಾಥಮಿಕ ಕರ್ತವ್ಯಗಳ ಕುರಿತು ವಿವರಿಸಲಾಗಿದೆ. ‘ವಿಕಸಿತ ಭಾರತ’ದತ್ತ ನಾವು ಹೆಜ್ಜೆ ಹಾಕುವಾಗ, ಕರ್ತವ್ಯ ಪಾಲನೆಯೇ ನಮ್ಮ ಆದ್ಯತೆಯಾಗಬೇಕು. ಇದು ದೇಶದ ಮುಂದಿನ ಹಲವು ತಲೆಮಾರುಗಳ ಬದುಕನ್ನು ರೂಪಿಸುತ್ತದೆ’ ಎಂದರು.

‘ನಮ್ಮ ಪ್ರತಿಯೊಂದು ಕಾರ್ಯದಲ್ಲೂ ರಾಷ್ಟ್ರೀಯ ಹಿತಾಸಕ್ತಿ ಇದ್ದಾಗ ಅದು ನಮ್ಮ ಸಂವಿಧಾನವನ್ನು ಬಲಪಡಿಸುತ್ತದೆ. ಆ ಮೂಲಕ ಸಂವಿಧಾನದ ನಿರ್ಮಾತೃಗಳು ಕಂಡ ಕನಸು ನನಸಾಗುತ್ತದೆ’ ಎಂದು ಪ್ರಧಾನಿ ಹೇಳಿದರು.

ವಿವಿಧ ದೇಶಗಳ ನ್ಯಾಯಾಧೀಶರು ಭಾಗಿ: ಸುಪ್ರೀಂ ಕೋರ್ಟ್‌ನಲ್ಲಿ ಬುಧವಾರ ನಡೆದ ಸಂವಿಧಾನ ದಿನ ಆಚರಣೆಯಲ್ಲಿ, ಭೂತಾನ್‌ನ ಮುಖ್ಯ ನ್ಯಾಯಮೂರ್ತಿ ಲ್ಯೋಂಪೊ ನೋರ್ಬೂ ತ್ಸೇರಿಂಗ್, ಕೀನ್ಯಾದ ಮುಖ್ಯ ನ್ಯಾಯಮೂರ್ತಿ ಮಾರ್ಥಾ ಕೆ. ಕೂಮಿ, ಮಾರಿಷಸ್‌ನ ಮುಖ್ಯ ನ್ಯಾಯಮೂರ್ತಿ ರೆಹನಾ ಬೀಬಿ ಮುಂಗ್ಲಿ ಗುಲ್ಬುಲ್ ಮತ್ತು ಶ್ರೀಲಂಕಾದ ಮುಖ್ಯ ನ್ಯಾಯಮೂರ್ತಿ ಪ್ರೀತಿ ಪದ್ಮನ್ ಸುರಸೇನ ಭಾಗವಹಿಸಿದ್ದರು.

> ವಸಾಹತುಶಾಹಿ ಮನಸ್ಥಿತಿಯನ್ನು ತ್ಯಜಿಸಿ, ರಾಷ್ಟ್ರೀಯ ಚಿಂತನೆಯನ್ನು ಮೈಗೂಡಿಸಿಕೊಳ್ಳಲು ಸಂವಿಧಾನ ಮಾರ್ಗದರ್ಶಿಯಾಗಿದೆ
> **ದ್ರೌಪದಿ ಮುರ್ಮು,** ರಾಷ್ಟ್ರಪತಿ

> ಸಂವಿಧಾನವನ್ನು ಅಕ್ಷರಶಃ ಪಾಲಿಸಿದರೆ ಭಾರತವು 2047ರ ವೇಳೆಗೆ ಅಭಿವೃದ್ಧಿ ಹೊಂದಿದ ದೇಶವಾಗಿ ಹೊರಹೊಮ್ಮಲಿದೆ
> **ಓಂ ಬಿರ್ಲಾ,** ಲೋಕಸಭೆ ಸ್ಪೀಕರ್

> ಸಂವಿಧಾನದ ಮೂಲ ತತ್ವಗಳಾದ ನ್ಯಾಯ, ಸಮಾನತೆ, ಸ್ವಾತಂತ್ರ್ಯ, ಜಾತ್ಯತೀತೆ, ಸಮಾಜವಾದ, ಸಹೋದರತ್ವ ರಕ್ಷಿಸಿ, ಪ್ರಜಾಪ್ರಭುತ್ವದ ಸ್ವಾತಂತ್ರ್ಯ ಎತ್ತಿ ಹಿಡಿಯಬೇಕು
> **ಮಲ್ಲಿಕಾರ್ಜುನ ಖರ್ಗೆ,** ಎಐಸಿಸಿ ಅಧ್ಯಕ್ಷ

> ಸಂವಿಧಾನದ ಆತ್ಮವು ಭಾರತವು ಒಂದೇ ಎಂದು ಸಾಬೀತುಪಡಿಸಿದೆ. ಇದು ಶಾಶ್ವತವಾಗಿ ಮುಂದುವರಿಯಲಿದೆ. ವಿಕಸಿತ ಭಾರತಕ್ಕಾಗಿ ಕೈಜೋಡಿಸಿ
> **ಪಿ. ರಾಧಾಕೃಷ್ಣನ್,** ಉಪರಾಷ್ಟ್ರಪತಿ

> ಸಂವಿಧಾನದ ಪಾವಿತ್ರ್ಯ ಎತ್ತಿಹಿಡಿಯುವಲ್ಲಿ ನ್ಯಾಯಾಂಗದ ಪಾತ್ರ ಮಹತ್ವದ್ದು. ಕೋರ್ಟ್‌ಗಳು ಸಂವಿಧಾನದ ಕಾವಲುಗಾರ ಇದ್ದಂತೆ
> **ಸೂರ್ಯಕಾಂತ್,** ಸುಪ್ರೀಂಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ



ಸಂಸತ್ತಿನ ಸೆಂಟ್ರಲ್ ಹಾಲ್‌ನಲ್ಲಿ ಸಂವಿಧಾನ ದಿನ ಕಾರ್ಯಕ್ರಮದಲ್ಲಿ ಕೇಂದ್ರ ಸಚಿವರಾದ ರಾಜನಾಥ್ ಸಿಂಗ್, ನಿತೀನ್ ಗಡ್ಕರಿ, ನಿರ್ಮಲಾ ಸೀತಾರಾಮನ್ ಸೇರಿದಂತೆ ಹಲವು ಸಚಿವರು, ಸಂಸದರು ಭಾಗವಹಿಸಿದ್ದರು – ಪಿಟಿಐ ಚಿತ್ರ

ಪ್ರಧಾನಿ ತಮ್ಮ ಕರ್ತವ್ಯಗಳನ್ನು ಪಾಲಿಸುತ್ತಿದ್ದಾರಾ?

ಪ್ರಧಾನಿ ಮೋದಿ ಅವರು ದೇಶದ ಜನರಿಗಾಗಿ ತಮ್ಮ ಕರ್ತವ್ಯಗಳನ್ನು ಪಾಲಿಸುತ್ತಿದ್ದಾರೆಯೇ ಎಂದು ಕಾಂಗ್ರೆಸ್ ಪ್ರಶ್ನಿಸಿದೆ. ‘ಸಂವಿಧಾನವನ್ನು ಪಾಲಿಸುವುದು, ಅದರ ಅನ್ವಯ ನಡೆದುಕೊಳ್ಳುವುದು, ದೇಶ, ಭಾಷೆ, ಜಾತಿ, ಪ್ರಾದೇಶಿಕ ಭಿನ್ನತೆಗಳನ್ನು ಮೀರಿ ದೇಶದ ಜನರಲ್ಲಿ ಮಾನವೀಯತೆ, ವೈಜ್ಞಾನಿಕ ಮನೋಭಾವ, ಸಾಮರಸ್ಯ, ಸಹೋದರತೆ ಮೂಡಿಸುವುದು ಪ್ರಧಾನಿಯಾಗಿ ಮೋದಿ ಅವರು ಪಾಲಿಸಬೇಕಿರುವ ನಾಲ್ಕು ಪ್ರಾಥಮಿಕ ಸಾಂವಿಧಾನಿಕ ಕರ್ತವ್ಯ. ಆದರೆ, ಇದನ್ನು ಅವರು ಪಾಲಿಸುತ್ತಿರುವುದು ಸಂಶಯಾಸ್ಪದ’ ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಂ ರಮೇಶ್ ‘ಎಕ್ಸ್’ನಲ್ಲಿ ಹೇಳಿದ್ದಾರೆ.

‘ಪ್ರಧಾನಿ ನರೇಂದ್ರ ಮೋದಿ ಮತ್ತು ಗೃಹ ಸಚಿವ ಅಮಿತ್ ಶಾ ಅವರು ಅತ್ಯಂತ ವ್ಯವಸ್ಥಿತವಾಗಿ ಸಂವಿಧಾನದ ತತ್ವಗಳನ್ನು ಬುಡಮೇಲು ಮಾಡುತ್ತಿದ್ದಾರೆ. ಸಂವಿಧಾನದ ಮೇಲೆ ದಾಳಿ ನಡೆಸಿ ಅದನ್ನು ದುರ್ಬಲ ಗೊಳಿಸಲು ಆರ್‌ಎಸ್‌ಎಸ್ ಯತ್ನಿಸುತ್ತಿದ್ದು, ಇದಕ್ಕೆ ಪ್ರಧಾನಿ ಮತ್ತು ಗೃಹ ಸಚಿವರು ಚುಕ್ಕಾಣಿ ಹಿಡಿದಿದ್ದಾರೆ ಎಂದು ಕಾಂಗ್ರೆಸ್ ಆರೋಪಿಸಿದೆ.

ನ.26ರಂದು ಸಂವಿಧಾನ ದಿನ ಆಚರಿಸುವ ಬದಲು ‘ಸಂವಿಧಾನ ರಕ್ಷಣಾ ದಿನ’ ಆಚರಿಸಲಾಗುವುದು. ‘ಸಂವಿಧಾನ ರಚನೆಯಲ್ಲಿ ಆರ್‌ಎಸ್‌ಎಸ್‌ಗೆ ಯಾವುದೇ ಪಾತ್ರ ಇಲ್ಲ’ ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಂ ರಮೇಶ್ ಹೇಳಿದ್ದಾರೆ.

‘ಬಡವರ ಗುರಾಣಿ’

‘ಸಂವಿಧಾನವು ಬಡವರ ಗುರಾಣಿ’ ಎಂದಿರುವ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ, ‘ಸಂವಿಧಾನದ ಮೇಲೆ ಯಾವುದೇ ದಾಳಿಗೆ ಅವಕಾಶ ಕೊಡುವುದಿಲ್ಲ’ ಎಂದು ಶಪಥ ಮಾಡುವಂತೆ ದೇಶದ ಜನರನ್ನು ಒತ್ತಾಯಿಸಿದ್ದಾರೆ. ‘ಸಂವಿಧಾನದ ಮೇಲೆ ನಡೆಯುವ ಯಾವುದೇ ದಾಳಿಯ ವಿರುದ್ಧ ಎದ್ದು ನಿಲ್ಲುವ ಮೊದಲ ವ್ಯಕ್ತಿ ನಾನು’ ಎಂದೂ ಅವರು ಹೇಳಿದ್ದಾರೆ.

‘ಸಂವಿಧಾನವು ಕೇವಲ ಒಂದು ಪುಸ್ತಕವಲ್ಲ. ಇದು ದೇಶದ ಪ್ರತಿಯೊಬ್ಬ ಪ್ರಜೆಗೂ ಲಭಿಸಿರುವ ಪವಿತ್ರ ವಾಗ್ದಾನ. ಯಾವುದೇ ಜಾತಿ, ಧರ್ಮ, ಭಾಷೆ, ಪ್ರದೇಶಕ್ಕೆ ಸೇರಿದವರಿರಲಿ, ಬಡವನಿರಲಿ, ಶ್ರೀಮಂತನೇ ಆಗಿರಲಿ ಎಲ್ಲರಿಗೂ ಸಮಾನತೆ, ಗೌರವ ಮತ್ತು ನ್ಯಾಯ ಸಿಗುತ್ತದೆ ಎಂಬ ಭರವಸೆಯನ್ನು ಸಂವಿಧಾನ ಒದಗಿಸಿದೆ’ ಎಂದು ಅವರು ‘ಎಕ್ಸ್’ನಲ್ಲಿ ಪೋಸ್ಟ್ ಮಾಡಿದ್ದಾರೆ.

ಅಸ್ಸಾಂನಲ್ಲಿ ಬಹುಪತ್ನಿತ್ವ ನಿಷೇಧ ಮಸೂದೆ ಮಂಡನೆ

ಗುವಾಹಟಿ (ಪಿಟಿಐ): ಅಸ್ಸಾಂ ಮುಖ್ಯಮಂತ್ರಿ ಹಿಮಂತ್ ಬಿಸ್ವಾ ಶರ್ಮಾ ಅವರು ಮಂಗಳವಾರ ವಿಧಾನಸಭೆಯಲ್ಲಿ ಬಹು ಪತ್ನಿತ್ವ ನಿಷೇಧ ಮಸೂದೆಯನ್ನು ಮಂಡನೆ ಮಾಡಿದ್ದಾರೆ. ಬಹುಪತ್ನಿತ್ವವನ್ನು ಅಪರಾಧ ಎಂದು ಪರಿಗಣಿಸಿ ಏಳು ವರ್ಷದವರೆಗೆ ಜೈಲು ಮತ್ತು ದಂಡ ವಿಧಿಸುವ ಅವಕಾಶಗಳನ್ನು ಮಸೂದೆಯಲ್ಲಿ ಕಲ್ಪಿಸಲಾಗಿದೆ.




ಪರಿಶಿಷ್ಟ ಪಂಗಡ(ಎಸ್‌ಟಿ) ಮತ್ತು 6ನೇ ಪರಿಚ್ಛೇದದ (ಶೆಡ್ಯೂಲ್) ಅಡಿ ಬರುವ ಪ್ರದೇಶಗಳನ್ನು ಈ ಮಸೂದೆಯ ವ್ಯಾಪ್ತಿಯಿಂದ ಹೊರಗಿಡಲಾಗಿದೆ. ‘ಅಸ್ಸಾಂನಲ್ಲಿ ಬಹುಪತ್ನಿತ್ವವನ್ನು ನಿಷೇಧಿಸುವ ಮಸೂದೆ–2025’ ಅನ್ನು ಗೃಹ ಖಾತೆಯನ್ನೂ ಹೊಂದಿರುವ ಮುಖ್ಯಮಂತ್ರಿ ಬಿಸ್ವಾ ಶರ್ಮಾ ಮಂಡಿಸಿದರು. ಗಾಯಕ ಜುಬೀನ್ ಗರ್ಗ್ ಸಾವು ಪ್ರಕರಣದ ಚರ್ಚೆ ನಂತರ ವಿರೋಧ ಪಕ್ಷಗಳ ಸದಸ್ಯರು ಸಭಾತ್ಯಾಗ ಮಾಡಿದ್ದರು. ಹೀಗಾಗಿ ಮಸೂದೆ ಮಂಡಿಸುವಾಗ ಕಾಂಗ್ರೆಸ್, ಸಿಪಿಎಂ, ರಾಯ್ ಜೋರ್ ದಳದ ಶಾಸಕರು ಹಾಜರಿರಲಿಲ್ಲ.

‘ಬಹುಪತ್ನಿತ್ವ ವಿವಾಹಗಳನ್ನು ತೊಲಗಿಸುವ ಉದ್ದೇಶವನ್ನು ಮಸೂದೆ ಹೊಂದಿದೆ. ಈಗಾಗಲೇ ವೈವಾಹಿಕ ಜೀವನ ನಡೆಸುತ್ತಿರುವ ವ್ಯಕ್ತಿ ಇನ್ನೊಂದು ಮದುವೆ ಆಗುವುದು, ಕಾನೂನುಬದ್ಧವಾಗಿ ವಿಚ್ಛೇದನ ಪಡೆಯದೇ ಇರುವ, ಮದುವೆ ರದ್ದಾಗದೇ ಇರುವ ಆತ/ಆಕೆಯ ಜೊತೆ ವೈವಾಹಿಕ ಜೀವನ ನಡೆಸುವುದನ್ನು ಮಸೂದೆಯು ಬಹುಪತ್ನಿತ್ವ ಎಂದು ಪರಿಗಣಿಸುತ್ತದೆ’ ಎಂದು ಮಸೂದೆಯಲ್ಲಿ ತಿಳಿಸಲಾಗಿದೆ.

ಭಯೋತ್ಪಾದನೆ ವಿರುದ್ಧ ಶೂನ್ಯ ಸಹಿಷ್ಣುತೆ ನೀತಿ: ಅಮಿತ್ ಶಾ

ಮುಂಬೈ/ನವದೆಹಲಿ (ಪಿಟಿಐ): ‘ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಸರ್ಕಾರವು ಭಯೋತ್ಪಾದನೆ ವಿರುದ್ಧ ಶೂನ್ಯ ಸಹಿಷ್ಣುತೆ ನೀತಿ ಅನುಸರಿಸುತ್ತಿದೆ. ಭಾರತ ಕೈಗೊಂಡಿರುವ ಭಯೋತ್ಪಾದನೆ ವಿರೋಧಿ ಹೋರಾಟವನ್ನು ವಿಶ್ವವೇ ಮೆಚ್ಚಿದ್ದು, ವ್ಯಾಪಕ ಬೆಂಬಲ ವ್ಯಕ್ತವಾಗುತ್ತಿದೆ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಬುಧವಾರ ಹೇಳಿದರು.



ಮುಂಬೈ ಮೇಲಿನ ಭಯೋತ್ಪಾದಕ ದಾಳಿಗೆ 17ನೇ ವರ್ಷ ಸಂದ ಪ್ರಯುಕ್ತ, ಹುತಾತ್ಮರಾದ ಭದ್ರತಾ ಸಿಬ್ಬಂದಿಗೆ ಗೌರವ ಸಲ್ಲಿಸಿ ಅವರು ಈ ಮಾತು ಹೇಳಿದ್ದಾರೆ. ‘ಭಯೋತ್ಪಾದನೆಯು ಒಂದು ದೇಶಕ್ಕೆ ಮಾತ್ರ ಶಾಪವಲ್ಲ. ಅದು ಇಡೀ ಮಾನವ ಕುಲಕ್ಕೇ ಶಾಪವಾಗಿ ಪರಿಣಮಿಸಿದೆ’ ಎಂದೂ ಶಾ ಹೇಳಿದ್ದಾರೆ.

ಮಹಾರಾಷ್ಟ್ರ ಮುಖ್ಯಮಂತ್ರಿ ದೇವೇಂದ್ರ ಫಡಣವೀಸ್ ಅವರು ಕೂಡ, ಮುಂಬೈನ ಪೊಲೀಸ್ ಕೇಂದ್ರ ಕಚೇರಿಯಲ್ಲಿ ನಡೆದ ಸಂಸ್ಮರಣೆ ಕಾರ್ಯಕ್ರಮದಲ್ಲಿ ಹುತಾತ್ಮ ಸಿಬ್ಬಂದಿಯ ಸ್ಮಾರಕಗಳಿಗೆ ಹೂಗುಚ್ಛವಿರಿಸಿ, ಗೌರವ ಸಲ್ಲಿಸಿದರು.

ರಾಷ್ಟ್ರಪತಿ ಸಂದೇಶ: ಮುಂಬೈ ಮೇಲಿನ ದಾಳಿಗೆ 17 ವರ್ಷ ಸಂದ ಸಂದರ್ಭದಲ್ಲಿ, ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಕೂಡ ಹುತಾತ್ಮರಿಗೆ ಗೌರವ ಸಲ್ಲಿಸಿದ್ದಾರೆ.

‘ಭಯೋತ್ಪಾದನೆ ವಿರುದ್ಧ ಹೋರಾಡಲು ಎಲ್ಲ ನಾಗರಿಕರು ದೃಢಸಂಕಲ್ಪ ಮಾಡಬೇಕು’ ಎಂದು ಅವರು ‘ಎಕ್ಸ್’ನಲ್ಲಿ ಪೋಸ್ಟ್ ಮಾಡಿದ್ದಾರೆ.



ಮುಂಬೈ ಭಯೋತ್ಪಾದಕ ದಾಳಿಗೆ 17ನೇ ವರ್ಷ ಸಂದ ಪ್ರಯುಕ್ತ ಜಮ್ಮುವಿನಲ್ಲಿ ವಿದ್ಯಾರ್ಥಿಗಳು ಹುತಾತ್ಮ ಭದ್ರತಾ ಸಿಬ್ಬಂದಿಗೆ ಗೌರವ ಸಲ್ಲಿಸಿದರು – ಪಿಟಿಐ ಚಿತ್ರ

ಚಿಟಿಕೆ ಸುದ್ದಿ


ಪದ್ಮಕುಮಾರ್ ಎಸ್‌ಐಟಿ ವಶಕ್ಕೆ

ಕೊಲ್ಲಂ(ಕೇರಳ) (ಪಿಟಿಐ): ತಿರುವಾಂಕೂರು ದೇವಸ್ವಂ ಮಂಡಳಿ(ಟಿಡಿಬಿ) ಮಾಜಿ ಅಧ್ಯಕ್ಷ, ಸಿಪಿಎಂ ನಾಯಕ ಎ. ಪದ್ಮಕುಮಾರ್ ಅವರನ್ನು, ಕೇರಳದ ನ್ಯಾಯಾಲಯವು ಎರಡು ದಿನಗಳ ಕಾಲ ಶಬರಿಮಲೆ ಅಯ್ಯಪ್ಪ ದೇವಾಲಯದ ಚಿನ್ನ ಕಳವು ಪ್ರಕರಣದ ತನಿಖೆ ನಡೆಸುತ್ತಿರುವ ವಿಶೇಷ ತನಿಖಾ ತಂಡದ(ಎಸ್‌ಐಟಿ) ವಶಕ್ಕೆ ಬುಧವಾರ ನೀಡಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ದೇವಾಲಯದ ಗರ್ಭಗುಡಿಯ ದ್ವಾರದ ಚೌಕಟ್ಟಿಗೆ ಲೇಪಿಸಿದ್ದ ಚಿನ್ನ ಕಳವಾದ ಪ್ರಕರಣದ ಸಂಬಂಧ ವಿಚಾರಣೆ ನಡೆಸಲು ಪದ್ಮಕುಮಾರ್ ಅವರನ್ನು ವಶಕ್ಕೆ ನೀಡುವಂತೆ ಕೋರಿ ಎಸ್‌ಐಟಿ ಸಲ್ಲಿಸಿದ್ದ ಅರ್ಜಿಯನ್ನು ವಿಜಿಲೆನ್ಸ್ ಪ್ರಕರಣಗಳ ವಿಶೇಷ ನ್ಯಾಯಾಲಯ ಪುರಸ್ಕರಿಸಿದೆ. ವಿಚಾರಣೆ ಮುಗಿಸಿ ಗುರುವಾರ ಸಂಜೆ ಅವರನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಬೇಕು ಎಂದು ನ್ಯಾಯಾಲಯ ಹೇಳಿದೆ.

ಕಾರ್ ಬಾಂಬರ್‌ಗೆ ಆಶ್ರಯ: ಬಂಧನ

ನವದೆಹಲಿ (ಪಿಟಿಐ): ಐತಿಹಾಸಿಕ ಕೆಂಪುಕೋಟೆ ಬಳಿ ಸ್ಫೋಟಗೊಂಡ ಸ್ಫೋಟಕ ತುಂಬಿದ್ದ ಕಾರನ್ನು ಚಲಾಯಿಸುತ್ತಿದ್ದ ಡಾ. ಉಮರ್ ನಬಿಗೆ ಆಶ್ರಯ ನೀಡಿದ್ದ ಆರೋಪದ ಮೇರೆಗೆ ಎನ್‌ಐಎ ಫರೀದಾಬಾದ್ ನಿವಾಸಿಯನ್ನು ಬಂಧಿಸಿದೆ.



ಬಾಂಬ್ ಸ್ಫೋಟಕ್ಕೂ ಮುನ್ನ ಉಮರ್‌ಗೆ ಆಶ್ರಯ ನೀಡಿದ್ದ ಫರೀದಾಬಾದ್‌ನ ಧೌಜ್ ನಿವಾಸಿ ಸೋಯಬ್ ಎಂಬುವವರನ್ನು ಬಂಧಿಸಲಾಗಿದೆ ಎಂದು ರಾಷ್ಟ್ರೀಯ ತನಿಖಾ ಸಂಸ್ಥೆಯ (ಎನ್‌ಐಎ) ವಕ್ತಾರರು ಹೇಳಿದ್ದಾರೆ.

ಜಮ್ಮು ಮತ್ತು ಕಾಶ್ಮೀರ ಪೊಲೀಸರು ಭೇದಿಸಿದ ‘ವೈಟ್ ಕಾಲರ್’ ಭಯೋತ್ಪಾದನೆ ಪ್ರಕರಣದಲ್ಲಿ ಎನ್‌ಐಎ ಬಂಧಿಸಿದ ಏಳನೇ ಆರೋಪಿ ಸೋಯಬ್.

‘ರಾಜ್ಯದ ಅಸ್ಮಿತೆ ಕುಂದಿಸುವ ಕ್ರಮ’

ಸಂಸತ್ತಿನಲ್ಲಿ ‘ವಂದೇ ಮಾತರಂ’ ನಿಷೇಧ: ಮಮತಾ ಆಕ್ಷೇಪ

ಕೋಲ್ಕತ್ತ (ಪಿಟಿಐ): ‘ಸಂಸತ್ತಿನ ಒಳಗೆ ‘ಜೈ ಹಿಂದ್’ ಮತ್ತು ‘ವಂದೇ ಮಾತರಂ’ ಎಂದು ಹೇಳುವುದನ್ನು ನಿಷೇಧಿಸಲಾಗಿದೆ ಎಂಬ ಬಗ್ಗೆ ಕೆಲ ಮಾಧ್ಯಮಗಳ ವರದಿ ನೋಡಿದೆ. ಇದು ಕಳವಳಕಾರಿ. ರಾಜ್ಯದ ಅಸ್ಮಿತೆಯನ್ನು ಕುಂದಿಸುವ ಕ್ರಮವೇ ಇದು’ ಎಂದು ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರು ಪ್ರಶ್ನಿಸಿದರು.

‘ಸಂವಿಧಾನ ದಿನ’ದ ಅಂಗವಾಗಿ ಇಲ್ಲಿ ಡಾ. ಬಿ.ಆರ್. ಅಂಬೇಡ್ಕರ್ ಅವರ ಪ್ರತಿಮೆಗೆ ಮಾಲಾರ್ಪಣೆ ಮಾಡಿ ಮಾತನಾಡಿ, ‘ಇದು ನಿಜವೇ ಇಲ್ಲವೇ ಎಂಬುದು ನನಗೆ ಗೊತ್ತಿಲ್ಲ. ಇದರ ಸತ್ಯಾಸತ್ಯತೆ ಬಗ್ಗೆ ಸಂಸದರಿಗೆ ಕೇಳುತ್ತೇನೆ’ ಎಂದು ಅವರು ಹೇಳಿದರು.

‘ವಂದೇ ಮಾತರಂ’ ನಮ್ಮ ರಾಷ್ಟ್ರೀಯ ಗೀತೆ ಎಂಬುದನ್ನು ನಾವು ಮರೆಯಬಾರದು. ಇದನ್ನು ನಮ್ಮ ಸ್ವಾತಂತ್ರ್ಯ ಹೋರಾಟಗಾರರು ಸ್ವಾತಂತ್ರ್ಯ ಹೋರಾಟದಲ್ಲಿ ಬಳಸುತ್ತಿದ್ದರು. ಇದನ್ನು ಮರೆಯುವುದು ಹೇಗೆ? ಬಂಗಾಳದ ಅಸ್ಮಿತೆಯನ್ನು ಹಾಳು ಮಾಡಲು ಹೋರಟಿದ್ದಾರೆಯೇ?’ ಎಂದರು.

‘ಪಶ್ಚಿಮ ಬಂಗಾಳವು ಭಾರತದ ಅವಿಭಾಜ್ಯ ಅಂಗವೇ ಆಗಿದೆ. ಪ್ರಜಾಪ್ರಭುತ್ವ, ಜಾತ್ಯತೀತ, ಏಕತೆ ಮತ್ತು ದೇಶದ ವೈವಿಧ್ಯಕ್ಕಾಗಿ ಬಂಗಾಳವು ಎಂದಿಗೂ ಹೋರಾಟ ನಡೆಸಿದೆ ಎಂಬುದನ್ನು ಹೇಳುವುದಕ್ಕೆ ನಮಗೆ ಹೆಮ್ಮೆ ಇದೆ’ ಎಂದರು. ‘ವಂದೇ ಮಾತರಂ’ ಗೀತೆಯನ್ನು ಪಶ್ಚಿಮ ಬಂಗಾಳದ ಬಂಕಿಮ್ ಚಂದ್ರ ಚಟ್ಟೋಪಾಧ್ಯಾಯ ಅವರು 1870ರಲ್ಲಿ ರಚಿಸಿದ್ದರು.

2024ರಿಂದಲೇ ಇದೆ ನಿಯಮ



ಮಮತಾ ಬ್ಯಾನರ್ಜಿ

ಸಂಸತ್ತಿನ ಒಳಗೆ ಮತ್ತು ಆವರಣದಲ್ಲಿ ‘ಜೈ ಹಿಂದ್’ ಮತ್ತು ‘ವಂದೇ ಮಾತರಂ’ ಅನ್ನು ಹೇಳುವಂತಿಲ್ಲ ಎಂದು 2024ರಲ್ಲಿ ರಾಜ್ಯಸಭಾ ಸಚಿವಾಲಯವು ಸಂಸದರಿಗೆ ಹೇಳಿತ್ತು. ಸಂಸತ್ತಿನ ಘನತೆಯನ್ನು ಮತ್ತು ಸಭ್ಯತೆಯನ್ನು ಕಾಪಾಡಲು ಇವುಗಳನ್ನು ಹೇಳುವಂತಿಲ್ಲ ಎಂದು ಸಚಿವಾಲಯ ಹೇಳಿತ್ತು. ‘ರಾಜ್ಯಸಭಾ ಸದಸ್ಯರ ಕೈಪಿಡಿ’ಯಲ್ಲಿ ಈ ಬಗ್ಗೆ ಉಲ್ಲೇಖವಿದೆ. 2024ರ ಅಧಿವೇಶನಕ್ಕೂ ಮೊದಲು ಈ ಕೈಪಿಡಿಯನ್ನು ಸಂಸದರಿಗೆ ನೀಡಲಾಗಿತ್ತು.

‘ರಾಷ್ಟ್ರೀಯ ನ್ಯಾಯಾಂಗ ನೀತಿ ಅಗತ್ಯ’

ನವದೆಹಲಿ(ಪಿಟಿಐ): ‘ದೇಶದ ನ್ಯಾಯಾಲಯಗಳು ನೀಡುವ ತೀರ್ಪುಗಳು ಸ್ಪಷ್ಟವಾಗಿರಬೇಕು ಹಾಗೂ ಸಮತೋಲನದಿಂದ ಕೂಡಿರುವುದನ್ನು ಖಾತ್ರಿಪಡಿಸುವುದಕ್ಕಾಗಿ ಏಕರೂಪದ ರಾಷ್ಟ್ರೀಯ ನ್ಯಾಯಾಂಗ ನೀತಿಯೊಂದನ್ನು ರೂಪಿಸುವ ಅಗತ್ಯ ಇದೆ’ ಎಂದು ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಸೂರ್ಯ ಕಾಂತ್ ಬುಧವಾರ ಪ್ರತಿಪಾದಿಸಿದರು.

ಸುಪ್ರೀಂ ಕೋರ್ಟ್ ವಕೀಲರ ಸಂಘ(ಎಸ್‌ಸಿಬಿಎ) ಹಮ್ಮಿಕೊಂಡಿದ್ದ ಸಂವಿಧಾನ ದಿನ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ‘ನ್ಯಾಯಾಲಯಗಳು ಮನಸ್ಸಿಗೆ ಬಂದಂತೆ ತೀರ್ಪು ನೀಡುವುದನ್ನು ತಪ್ಪಿಸಲು ಇಂತಹ ನೀತಿಯಿಂದ ಸಾಧ್ಯವಾಗಲಿದೆ’ ಎಂದು ಹೇಳಿದ್ದಾರೆ.

‘ದೇಶದಲ್ಲಿ 25 ಹೈಕೋರ್ಟ್‌ಗಳು ಹಾಗೂ ಹಲವು ಪೀಠಗಳಿವೆ. ಇವು ಭಿನ್ನ ನಿಲುವುಗಳನ್ನು ತಳೆದು, ತೀರ್ಪು ನೀಡುವುದನ್ನು ತಡೆಯಬೇಕಿದೆ. ಈ ಕಾರಣಕ್ಕೆ, ರಾಷ್ಟ್ರೀಯ ನೀತಿಯೊಂದನ್ನು ರೂಪಿಸಲು ಈಗ ಕಾಲ ಪಕ್ವವಾಗಿದೆ’ ಎಂದೂ ಅವರು ಹೇಳಿದರು.

ಸಂಕ್ಷಿಪ್ತ ಸುದ್ದಿ

‘ಅತ್ಯಾಚಾರ ದೂರು ಹಿಂಪಡೆಯಲು ಬೆದರಿಕೆ’

ಕೋಲ್ಕತ್ತ (ಪಿಟಿಐ): ಕಸ್ಬಾ ಕಾನೂನು ಕಾಲೇಜಿನಲ್ಲಿ ಮಗಳ ಮೇಲೆ ನಡೆದ ಸಾಮೂಹಿಕ ಅತ್ಯಾಚಾರ ಪ್ರಕರಣಕ್ಕೆ ಸಂಬಂಧಿಸಿದಂತೆ ನೀಡಿರುವ ದೂರನ್ನು ಹಿಂಪಡೆಯುವಂತೆ ಅನಾಮಧೇಯರಿಬ್ಬರು ಬೆದರಿಕೆ ಹಾಕಿದ್ದಾರೆ ಎಂದು ಸಂತ್ರಸ್ತೆಯ ತಂದೆ ದೂರು ನೀಡಿದ್ದಾರೆ.

ಬೆದರಿಕೆ ಆರೋಪಕ್ಕೆ ಸಂಬಂಧಿಸಿದಂತೆ ಬರೂಯಿಪುರ ಠಾಣೆಯಲ್ಲಿ ಪ್ರಕರಣ ದಾಖಲಿಸಿದ್ದು, ತನಿಖೆ ಆರಂಭಿಸಲಾಗಿದೆ ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ‘ದ್ವಿಚಕ್ರ ವಾಹನದಲ್ಲಿ ಬಂದ ಇಬ್ಬರು ದೂರು ಹಿಂಪಡೆಯಲು ಹೇಳಿ ಬೆದರಿಸಿದರು’ ಎಂದು ಅವರು ದೂರಿನಲ್ಲಿ ತಿಳಿಸಿದ್ದಾರೆ.

ದಕ್ಷಿಣ ಕೊಲ್ಕತ್ತದ ಕಾನೂನು ಕಾಲೇಜಿನಲ್ಲಿ ಜೂನ್ 25ರಂದು ತನ್ನ ಮೇಲೆ ಸಾಮೂಹಿಕ ಅತ್ಯಾಚಾರ ನಡೆದಿದೆ ಎಂದು ಪ್ರಥಮ ವರ್ಷದ ವಿದ್ಯಾರ್ಥಿನಿ ಪೊಲೀಸರಿಗೆ ದೂರು ನೀಡಿದ್ದರು. ಪ್ರಕರಣದ ಸಂಬಂಧ ನಾಲ್ವರು ಆರೋಪಿಗಳ ವಿರುದ್ಧ ಆರೋಪಪಟ್ಟಿ ಸಲ್ಲಿಸಲಾಗಿದೆ. ಆರೋಪಿಗಳೆಲ್ಲರೂ ಸದ್ಯ ಜಾಮೀನಿನ ಮೇಲೆ ಬಿಡುಗಡೆಯಾಗಿದ್ದಾರೆ.

‘ಒಂದು ದೇಶ, ಒಂದು ಕಾನೂನು ಅಗತ್ಯ’

ನವದೆಹಲಿ (ಪಿಟಿಐ): ‘ಒಂದು ದೇಶ, ಒಂದು ಕಾನೂನು ಇಂದಿನ ಅತ್ಯಗತ್ಯವಾಗಿದೆ’ ಎಂದು ಕೇಂದ್ರದ ಮಾಜಿ ಸಚಿವ, ಬಿಜೆಪಿಯ ಮುಖಂಡ ಮುಖ್ತಾರ್ ಅಬ್ಬಾಸ್ ನಖ್ವಿ ಬುಧವಾರ ಇಲ್ಲಿ ಪ್ರತಿಪಾದಿಸಿದರು.

‘ಏಕರೂಪ ನಾಗರಿಕ ಸಂಹಿತೆಯು ಇಡೀ ದೇಶಕ್ಕೆ ಅನ್ವಯವಾಗುವಂಥದ್ದು. ಇದು ಯಾವುದೇ ನಿರ್ದಿಷ್ಟ ಸಮುದಾಯವನ್ನು ಗುರಿಯಾಗಿಸಿ ಕೊಂಡಿಲ್ಲ’ ಎಂದರು.

ಸಂವಿಧಾನ ದಿನದ ಅಂಗವಾಗಿ ಭಾರತ್ ಮಂಟಪದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಮಾತನಾಡಿದ ನಖ್ವಿ, ‘ಸಂವಿಧಾನದ ಬಲವರ್ಧನೆಗೆ ಏಕರೂಪ ನಾಗರಿಕ ಸಂಹಿತೆ ಅನಿವಾರ್ಯವಾಗಿದೆ’ ಎಂದು ಹೇಳಿದರು.

ಸ್ಫೋಟಕವಿದ್ದ ರಾಕೆಟ್ ಪತ್ತೆ

ಇಂಫಾಲ (ಪಿಟಿಐ): ಮಣಿಪುರದ ಚುರಾಚಾಂದಪುರ ಜಿಲ್ಲೆಯಿಂದ ಸುಮಾರು 40 ಕೆ.ಜಿ ಸ್ಫೋಟಕವನ್ನು ಹೊಂದಿರುವ ಹೆಚ್ಚು ದೂರ ಕ್ರಮಿಸಬಲ್ಲ ರಾಕೆಟ್ ಅನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಪೊಲೀಸರು ಬುಧವಾರ ತಿಳಿಸಿದ್ದಾರೆ.

ಗೆಲ್ಮೋಲ್ ಗ್ರಾಮದಲ್ಲಿ ಭದ್ರತಾ ಪಡೆಗಳು ಮಂಗಳವಾರ ನಡೆಸಿದ ಕಾರ್ಯಾಚರಣೆಯಲ್ಲಿ ಇದನ್ನು ವಶಪಡಿಸಿಕೊಳ್ಳಲಾಗಿದೆ. ರಾಕೆಟ್ ಜೊತೆಗೆ ಉಡಾವಣಾ ಸ್ಟ್ಯಾಂಡ್ ಮತ್ತು ಬ್ಯಾಟರಿಯನ್ನು ಕೂಡಾ ವಶಪಡಿಸಿಕೊಳ್ಳಲಾಗಿದೆ ಎಂದು ಅವರು ಹೇಳಿದ್ದಾರೆ. ಜಿಲ್ಲೆಯ ಗೆಲ್‌ಬಂಗ್ ಕಾಡಿನಿಂದ ಹಲವಾರು ಶಸ್ತ್ರಾಸ್ತ್ರಗಳನ್ನು ವಶಪಡಿಸಿಕೊಳ್ಳಲಾಗಿದೆ.

ಸರ್ಕಾರದ ಯೋಜನೆ: ತಕ್ಷಣದ ಪರಿಹಾರವಾಗಿ ತಲಾ ₹50 ಸಾವಿರ ವಿತರಣೆ

ಛತ್ತೀಸಗಢ: 41 ನಕ್ಸಲರ ಶರಣಾಗತಿ

ಬಿಜಾಪುರ (ಛತ್ತೀಸಗಡ): ಭೂಗತರಾಗಿದ್ದವರ ಸುಳಿವು ನೀಡಿದವರಿಗಾಗಿ ₹1.19 ಕೋಟಿ ಬಹುಮಾನ ಘೋಷಿಸಲ್ಪಟ್ಟಿದ್ದ 32 ಮಂದಿ ಸೇರಿದಂತೆ ಒಟ್ಟು 41 ನಕ್ಸಲರು ಬುಧವಾರ ಶರಣಾಗಿದ್ದಾರೆ.

ಶರಣಾಗತಿ ಮತ್ತು ಪುನರ್ವಸತಿಗೆ ಸಂಬಂಧಿಸಿದಂತೆ ಸರ್ಕಾರವು ಘೋಷಿಸಿರುವ ಹೊಸ ನೀತಿಯಡಿ 12 ಮಹಿಳೆಯರು ಸೇರಿದಂತೆ ನಕ್ಸಲ್ ಕಾರ್ಯಕರ್ತರು ಜಿಲ್ಲೆಯಲ್ಲಿ ಶರಣಾಗಿದ್ದಾರೆ ಎಂದು ಪೊಲೀಸ್ ವರಿಷ್ಠಾಧಿಕಾರಿ ಜಿತೇಂದ್ರ ಕುಮಾರ್ ಯಾದವ್ ತಿಳಿಸಿದ್ದಾರೆ.

ಪಂಡ್ರು ಹಪ್ಕಾ ಅಲಿಯಾಸ್ ಮೋಹನ್ (37), ಬಂಡಿ ಹಪ್ಕಾ (35), ಲಕ್ಕು ಕೊರ್ಸಾ (37), ಬದ್ರು ಪುನೆಮ್ (35), ಸುಖ್ರಾಮ್ ಹೆಮ್ಲಾ (27), ಮಂಜುಳಾ ಹೆಮ್ಲಾ (25), ಮಂಗಳಿ ಮಾಡ್ವಿ ಅಲಿಯಾಸ್ ಶಾಂತಿ (29), ಜೈರಾಮ್ ಕಡಿಯಾಮ್ (28), ಪಾಂಡೊ ಮಡ್ಕಾಂ ಅಲಿಯಾಸ್ ಚಾಂದನಿ ಶರಣಾದವರಲ್ಲಿ ಪ್ರಮುಖರು. ಇವರ ಪತ್ತೆಗಾಗಿ ತಲಾ ₹8 ಲಕ್ಷ ಬಹುಮಾನ ಘೋಷಿಸಲಾಗಿತ್ತು.

ಉಳಿದವರಲ್ಲಿ ಮೂವರ ಸುಳಿವಿಗೆ ತಲಾ ₹5ಲಕ್ಷ, 12 ನಕ್ಸಲರಿಗೆ ತಲಾ ₹2 ಲಕ್ಷ, ಎಂಟು ಕಾರ್ಯಕರ್ತರ ಸುಳಿವು ನೀಡಿದವರಿಗೆ ತಲಾ ₹1ಲಕ್ಷ ಬಹುಮಾನವನ್ನು ಪೊಲೀಸರು ಪ್ರಕಟಿಸಿದ್ದರು.

ಶರಣಾದ ಪ್ರತಿಯೊಬ್ಬರಿಗೂ ತಕ್ಷಣದ ಪರಿಹಾರವಾಗಿ ತಲಾ ₹50 ಸಾವಿರ ನೀಡಲಾಯಿತು.

ನಕ್ಸಲ್ ಪರ ಘೋಷಣೆ: ವಿದ್ಯಾರ್ಥಿ ಸಂಘ ಆಕ್ಷೇಪ


ನವದೆಹಲಿ (ಪಿಟಿಐ): ‘ಇಂಡಿಯಾ ಗೇಟ್ ಬಳಿ ಮಾಲಿನ್ಯ ವಿರೋಧಿ ಪ್ರತಿಭಟನೆ ಸಂಘಟಿಸಲು ನೆರವು ನೀಡಲಾಗಿದೆ ಮತ್ತು ಈ ಪ್ರತಿಭಟನೆಯಲ್ಲಿ ಮಾವೋವಾದಿ ಪರ ಘೋಷಣೆಗಳನ್ನು ಕೂಗಲಾಗಿದೆ’ ಎಂಬ ದೆಹಲಿ ಪೊಲೀಸರ ಆರೋಪವನ್ನು ಜವಾಹರ್‌ಲಾಲ್ ನೆಹರೂ ವಿಶ್ವವಿದ್ಯಾಲಯದ ವಿದ್ಯಾರ್ಥಿ ಸಂಘ(ಜೆಎನ್‌ಯು–ಎಸ್‌ಯು) ಅಲ್ಲಗಳೆದಿದೆ.

ಎಫ್‌ಐಆರ್‌ನಲ್ಲಿರುವ ಆರೋಪಗಳು ಸುಳ್ಳು ಮತ್ತು ದುರುದ್ದೇಶಪೂರಿತ ಎಂದು ವಿದ್ಯಾರ್ಥಿ ಸಂಘ ಹೇಳಿದೆ. ನ.23ರಂದು ಇಂಡಿಯಾ ಗೇಟ್ ಬಳಿ ನಡೆದ ಪ್ರತಿಭಟನೆಯ ಆಯೋಜಕರು ನಾವಲ್ಲ, ಇದರಲ್ಲಿ ನಾವು ಭಾಗವಹಿಸಿಲ್ಲ’ ಎಂದು ದೆಹಲಿ ಪೊಲೀಸರಿಗೆ ಹಲವು ಬಾರಿ ಹೇಳಿದ್ದೇವೆ. ಆದರೆ, ಎಫ್‌ಐಆರ್‌ನಲ್ಲಿ ವಿದ್ಯಾರ್ಥಿ ಒಕ್ಕೂಟವನ್ನು ಸೇರ್ಪಡೆ ಮಾಡಿರುವ ಪೊಲೀಸರ ನಡೆಯ ಬಗ್ಗೆ ಅನುಮಾನ ಮೂಡುತ್ತಿದೆ’ ಎಂದು ಆಕ್ಷೇಪ ವ್ಯಕ್ತಪಡಿಸಿದೆ. ಪ್ರತಿಭಟನೆ ವೇಳೆ ‘ಮಾಡವಿ ಹಿಡ್ಮಾ ಅಮರ್ ರಹೇ’ ‘ಹಿಡ್ಮಾಗೆ ಲಾಲ್ ಸಲಾಂ’ ಎಂಬ ಘೋಷಣೆಗಳನ್ನು ಕೂಗಲಾಗಿದೆ ಎಂದು ಎಫ್‌ಐಆರ್‌ನಲ್ಲಿ ಹೇಳಲಾಗಿದೆ. ಘಟನೆಗೆ ಸಂಬಂಧಿಸಿದಂತೆ ಪೊಲೀಸರು ಇದುವರೆಗೆ 22 ಜನರನ್ನು ಬಂಧಿಸಿದ್ದಾರೆ.

ಹಿಡ್ಮಾ ಪರ ಘೋಷಣೆ ಕೂಗಿದ್ದು ಹಿಮಖಂಡ್ ಮತ್ತು ಭಗತ್‌ಸಿಂಗ್ ಛಾತ್ರಾ ಏಕ್ತಾ ಮಂಚ್ ಎಂದು ಈ ಪ್ರತಿಭಟನೆಯಲ್ಲಿ ಭಾಗವಹಿಸಿದ್ದ ‘ಎಸ್‌ಎಫ್‌ಎಸ್’ ಸಂಘಟನೆ ಹೇಳಿದೆ.

ಅಭಿಮತದ ವಿಳಾಸ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75 ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 editpage@prajavani.co.in

ಅಭಿಮತ



ಸುಭಾಷಿತ


ತಾಳ–ಮೇಳ ರಹಿತ ತಕರಾರಿನ ದಾಂಪತ್ಯ,
ಎಣ್ಣೆಸೀಗೆಯಂತೆ ಅಪಥ್ಯ.

– ಕೆ.ಎಸ್. ನಿಸಾರ್ ಅಹಮದ್

ಸಂಪಾದಕೀಯ

ಜೆಡಿಎಸ್–25: ಸಾಧ್ಯತೆಗಳಿಗೆ ಬೆನ್ನು ಇನ್ನೂ ಇದೆ ಹೊಸಹುಟ್ಟಿನ ಅವಕಾಶ

ಕರ್ನಾಟಕದ ಅಸ್ಮಿತೆ, ಸ್ಥಳೀಯ ಹಕ್ಕುಗಳಿಗೆ ಆದ್ಯತೆ ಹಾಗೂ ಕನ್ನಡಿಗರ ಹಿತಾಸಕ್ತಿ ಕಾಪಾಡುವ ಬದ್ಧತೆಯೊಂದಿಗೆ ತನ್ನ ಆರಂಭಿಕ ದಿನಗಳಲ್ಲಿ ಭರವಸೆಯ ಹೊನ್ನಕಿರಣಗಳನ್ನು ಜೆಡಿಎಸ್ (ಜನತಾದಳ ಜಾತ್ಯತೀತ) ಮೂಡಿಸಿತ್ತು. ಒಂದು ಪ್ರಾದೇಶಿಕ ಪಕ್ಷದ ಚರಿತ್ರೆಯೊಳಗೆ ಮಹತ್ತು ಎನಿಸಿರುವ 25 ವಸಂತಗಳನ್ನು ಜೆಡಿಎಸ್ ಪೂರೈಸಿದೆ. ಒಂದು ಕಾಲದಲ್ಲಿ ಹೆಮ್ಮರವಾಗಿ ರಾಷ್ಟ್ರೀಯ ಪಕ್ಷವೆಂಬ ಹಮ್ಮು ಬೆಳೆಸಿಕೊಂಡಿದ್ದ ಕಾಂಗ್ರೆಸ್‌ಗೆ ಸಡ್ಡುಹೊಡೆದಂತೆ ಒಡಮೂಡಿದ ಜನತಾ ಪರಿವಾರ ನಂತರ ದೇಶವನ್ನೇ ಆಳಿದ್ದು ಇತಿಹಾಸ. 1977ರಿಂದ ಸತತವಾಗಿ ವಿಘಟನೆಯ ಮಹಾಹೊಡೆತಕ್ಕೆ ಸಿಕ್ಕಿ ಜನತಾ ಪರಿವಾರ ಛಿದ್ರಗೊಂಡಿತು. ‘ಜನತಾ’ ಹೆಸರನ್ನೇ ಉಳಿಸಿಕೊಂಡು, ಆಯಾ ರಾಜ್ಯಗಳ ನೇತಾರರ ಪಕ್ಷವಾಗಿ ಸೀಮಿತ ಪರಿಧಿಯೊಳಗೆ ಈಗ ತನ್ನ ಅಸ್ತಿತ್ವವನ್ನು ಉಳಿಸಿಕೊಂಡಿದೆ. ಕರ್ನಾಟಕದ ರಾಜಕೀಯ ಚರಿತ್ರೆಯನ್ನು ನೋಡಿದರೆ ಜನತಾ ಪಕ್ಷ, ಸಮಾಜವಾದಿ ಜನತಾದಳ, ಜನತಾದಳ, ಜನತಾದಳ ಸಂಯುಕ್ತ, ಜನತಾದಳ ಜಾತ್ಯತೀತ, ಅಖಿಲ ಭಾರತ ಪ್ರಗತಿಪರ ಜನತಾದಳ, ಹೀಗೆ ವಿದಳಗಳಾಗಿ ವಿಭಜನೆಗೊಳ್ಳುತ್ತಲೇ ಸಾಗಿ ಬಂದಿದೆ. 1999ರಲ್ಲಿ ಸ್ಥಾಪನೆಯಾದ ಜೆಡಿಎಸ್, 2000 ಇಸವಿಯ ನವೆಂಬರ್ 24ರಂದು ಅಧಿಕೃತವಾಗಿ ನೋಂದಣಿಯಾಯಿತು. ಬೆಳ್ಳಿಹಬ್ಬದ ಸಡಗರದಲ್ಲಿರುವ ಈ ಪಕ್ಷ 25 ವರ್ಷಗಳಲ್ಲಿ ವಸಂತವನ್ನೇನೂ ಕಂಡಿಲ್ಲ. 2004ರಲ್ಲಿ ಎನ್. ಧರಂಸಿಂಗ್ ನೇತೃತ್ವದ ಮೈತ್ರಿ ಸರ್ಕಾರದಲ್ಲಿ ಆಗ ಜೆಡಿಎಸ್ ಮುಂದಾಳಾಗಿದ್ದ ಸಿದ್ದರಾಮಯ್ಯ ಉಪ ಮುಖ್ಯಮಂತ್ರಿಯಾಗಿದ್ದರು. ಬಳಿಕ ಎರಡು ಬಾರಿ ಎಚ್.ಡಿ. ಕುಮಾರಸ್ವಾಮಿ ಅವರಿಗೆ ಮುಖ್ಯಮಂತ್ರಿಯಾಗುವ ಯೋಗ ದಕ್ಕಿತೇ ಹೊರತು, ಸ್ವಂತ ಬಲದ ಮೇಲೆ ಅಧಿಕಾರ ರಚಿಸುವ ಜನಾದೇಶ ಸಿಗಲಿಲ್ಲ. ಬೇಲಿಯ ಮೇಲೆ ಕುಳಿತು ಫಸಲು ತೆಗೆಯುವ ಅಭ್ಯಾಸಕ್ಕೆ ಒಗ್ಗಿಕೊಂಡ ನಾಯಕರು, ತಳಮಟ್ಟದಲ್ಲಿ ಪಕ್ಷವನ್ನು ಸಂಘಟಿಸಲು ಅಗತ್ಯವಾದ ಕಾರ್ಯತಂತ್ರ ಹೆಣೆಯಲಿಲ್ಲ. ಎರಡನೇ ಹಂತದ ನಾಯಕತ್ವವನ್ನು ಬೆಳೆಸುವ ಗೋಜಿಗೂ ಹೋಗಲಿಲ್ಲ. ಇಂತಹ ಹೊತ್ತಿನೊಳಗೆ, ಬೆಳ್ಳಿಹಬ್ಬದ ಆಚರಣೆ ಎಂಬುದು ಪಕ್ಷ ನಡೆದು ಬಂದ ಹಾದಿಯ ಆತ್ಮಾವಲೋಕನ, ಭವಿಷ್ಯದಲ್ಲಿ ಪಕ್ಷದ ಪುನರುತ್ಥಾನದ ಹೊಸ ದಾರಿಗಳ ಅನ್ವೇಷಣೆಗೆ ವೇದಿಕೆ ಆಗಬೇಕಿತ್ತು. ಆದರೆ, ದೇವೇಗೌಡ, ಕುಮಾರಸ್ವಾಮಿಯವರ ಹೊಗಳಿಕೆ, ಅನ್ಯ ಪಕ್ಷಕ್ಕೆ ಹಾರಿ ನೆಲೆ ಕಂಡುಕೊಂಡವರ ಹೀಗಳಿಕೆಗಷ್ಟೇ ಸೀಮಿತವಾಗಿಬಿಟ್ಟಿತು.



ಜಾತ್ಯತೀತ ಜನತಾದಳ ಬೆಳ್ಳಿಹಬ್ಬ ಆಚರಿಸಿಕೊಳ್ಳುತ್ತಿದೆ. ಕನ್ನಡಿಗರ ಆಶೋತ್ತರಗಳಿಗೆ ಸ್ಪಂದಿಸಲು ವಿಫಲವಾದುದರ ಬಗ್ಗೆ ಆತ್ಮವಿಮರ್ಶೆಗೆ ಇದು ಸಕಾಲ.

ಕಾಂಗ್ರೆಸ್‌ನ ದಬ್ಬಾಳಿಕೆಗೆ ಎದುರಾಗಿ, ರಾಜ್ಯದ ಹಿತಾಸಕ್ತಿಯನ್ನು ಕಾಪಾಡುವ ಸಂಕಲ್ಪದಿಂದ ಹುಟ್ಟಿಕೊಂಡ ಪ್ರಾದೇಶಿಕ ಪಕ್ಷಗಳು ಈಗಲೂ ಅನೇಕ ರಾಜ್ಯಗಳಲ್ಲಿ ಪ್ರಬಲವಾಗಿಯೇ ಇವೆ. ದಶಕದ ಈಚೆಗೆ ಕಾಂಗ್ರೆಸ್ ಸ್ಥಾನವನ್ನು ಆಕ್ರಮಿಸಿಕೊಂಡ ಬಿಜೆಪಿಗೆ ಸವಾಲು ಒಡ್ಡುವಂತೆ ಕೆಲವು ರಾಜ್ಯಗಳ ರಾಜಕೀಯ ಪಕ್ಷಗಳು ತಮ್ಮ ಬಲವನ್ನು ಕ್ರೋಡೀಕರಿಸಿಕೊಂಡು ಅಧಿಕಾರ ನಡೆಸುತ್ತಿವೆ. ಅಧಿಕಾರಕ್ಕಾಗಿ ಯಾವುದೇ ಪಕ್ಷದ ಜತೆಗಾದರೂ ಹೊಂದಾಣಿಕೆ ಮಾಡಿಕೊಳ್ಳುವ ಪ್ರವೃತ್ತಿಯನ್ನು ಅನೇಕ ಪ್ರಾದೇಶಿಕ ಪಕ್ಷಗಳು ಮಾಡಿಕೊಂಡೇ ಬಂದಿವೆ. ಜೆಡಿಎಸ್ ಕೂಡ ಇದಕ್ಕೆ ಭಿನ್ನವಲ್ಲ. ಅಧಿಕಾರಕ್ಕಾಗಿ ಯಾವುದೇ ಪಕ್ಷದ ಜತೆಗೆ ಹೋಗುವ ಅವಕಾಶವಾದಿತನವೇ ಜೆಡಿಎಸ್‌ಗೆ ಮುಳುವಾಗಿದೆ. ಕರ್ನಾಟಕದಲ್ಲಿ ಅಸ್ತಿತ್ವಕ್ಕೆ ಬಂದಾಗ ಪ್ರಬಲ ಪ್ರಾದೇಶಿಕ ಪಕ್ಷವಾಗಿ ಬೆಳೆಯುವ ಎಲ್ಲ ಸಾಮರ್ಥ್ಯ ತೋರಿಸಿದ್ದ ಜೆಡಿಎಸ್ ಈಗ, ರಾಷ್ಟ್ರೀಯ ಪಕ್ಷಗಳನ್ನೇ ತನ್ನ ಅಧಿಕಾರಕ್ಕೆ ಊರುಗೋಲಾಗಿ ಮಾಡಿಕೊಂಡಿದೆ; ಕುಟುಂಬ ರಾಜಕಾರಣವನ್ನೇ ಹೊದ್ದುಕೊಂಡು ಕುಳಿತಿದೆ ಹಾಗೂ ಅದು ಅಂತಿಮ ಅನಿವಾರ್ಯ ಸ್ಥಿತಿ ಎಂದು ಪಕ್ಷದ ವರಿಷ್ಠರು ಈಗಲೂ ಪ್ರತಿಪಾದಿಸುವುದುಂಟು.

ಕರ್ನಾಟಕದಲ್ಲಿ ಪ್ರಾದೇಶಿಕ ಪಕ್ಷ ಕಟ್ಟುವ ಅನೇಕ ಪ್ರಯತ್ನಗಳು ನಡೆದಿವೆ. ಆದರೆ, ಅದರಲ್ಲಿ ಗೆದ್ದವರು ಕಡಿಮೆ. ನಿಜಲಿಂಗಪ್ಪ, ದೇವರಾಜ ಅರಸು, ಬಂಗಾರಪ್ಪ, ರಾಮಕೃಷ್ಣ ಹೆಗಡೆ, ಯಡಿಯೂರಪ್ಪ, ರೈತ ಸಂಘಟನೆ ನೇತಾರ ಪ್ರೊ. ಎಂ.ಡಿ. ನಂಜುಂಡಸ್ವಾಮಿ ಅವರಂತಹ ಪ್ರಭಾವಿಗಳೂ ಪ್ರಾದೇಶಿಕ ಪಕ್ಷ ಕಟ್ಟುವ ಯತ್ನ ಮಾಡಿ ಸೋತಿದ್ದಾರೆ. ಈಗಿನ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಎಬಿಪಿಜೆಡಿ ಕಟ್ಟಿ, ಅದನ್ನು ಮಧ್ಯದಲ್ಲೇ ಕೈಬಿಟ್ಟವರು. ಹಾಗೆಂದು, ಕರ್ನಾಟಕದಲ್ಲಿ ಪ್ರಾದೇಶಿಕ ಪಕ್ಷಕ್ಕೆ ನೆಲೆ ಇಲ್ಲ ಎಂದರ್ಥವಲ್ಲ. ರಾಜ್ಯದ ಜನರ ಭಾವನೆ, ನಾಡು–ನುಡಿ ಕುರಿತ ನೈಜ ಕಳಕಳಿ, ಸಂಘಟನೆಯ ಚಾಣಾಕ್ಷ ತಂತ್ರಗಾರಿಕೆ ಅನುಸರಿಸಿದರೆ ಯಶಸ್ಸು ಈಗಲೂ ಇದೆ. ರಾಷ್ಟ್ರೀಯ ಪಕ್ಷಗಳು ರಾಜ್ಯಗಳನ್ನು ತಮ್ಮ ಸಾಮಂತರಂತೆ, ರಾಜ್ಯದ ಘಟಕವನ್ನು ಅಡಿಯಾಳಂತೆ ಭಾವಿಸಿ ‘ಬುಲಾವ್’ ಪದ್ಧತಿಯನ್ನು ಚಾಲ್ತಿಯಲ್ಲಿಟ್ಟುಕೊಂಡೇ ಬಂದಿವೆ. ಪ್ರಾದೇಶಿಕ ಪಕ್ಷ ಬಲಿಷ್ಠವಾಗಿದ್ದರೆ ನಾಡು–ನಾಡವರ ಹಿತ ಕಾಪಾಡುವಲ್ಲಿ ಬದ್ಧತೆ ತೋರಲು ಸಾಧ್ಯ. ಜೆಡಿಎಸ್‌ಗೆ ಇಂತಹ ಅವಕಾಶದ ಬಾಗಿಲು ಈಗಲೂ ತೆರೆದಿದೆ. ತನ್ನ ಚಿಹ್ನೆಯಾದ ತೆನೆಯ ಕಾಳುಗಳನ್ನು ರಾಜ್ಯದಾದ್ಯಂತ ಹೊಲ–ಗದ್ದೆಗಳಲ್ಲಿ ಉದುರಿಸಿ, ಬೆಳೆವಂತೆ ಮಾಡಿದರಷ್ಟೇ ಅದಕ್ಕೆ ಭವಿಷ್ಯ ಇದೆ. ಇದರ ಜತೆಗೆ, ಕುಟುಂಬ ರಾಜಕಾರಣದ ಪೊರೆ ಕಳಚಿ, ಜೆಡಿಎಸ್‌ನ ವೈಶಿಷ್ಟ್ಯಗಳಾದ ಪ್ರಾದೇಶಿಕತೆ, ಕರ್ನಾಟಕದ ಅಸ್ಮಿತೆ, ಜಾತ್ಯತೀತತೆಯ ಗರಿಗಳನ್ನು ಮತ್ತೆ ಮುಡಿಗೇರಿಸಿ, ಆತ್ಮದ ನುಡಿಗಾನವಾಗಿ ಮಾಡಿಕೊಂಡಾಗಷ್ಟೇ ಹೊಸ ದಾರಿಗಳು ತೆರೆದು ಬೆಳಕಿನ ರೇಖೆಗಳು ಚಿಮ್ಮಿ ಬಂದಾವು.

ಜಾಲತಾಣ

ಸಮಷ್ಟಿ ನೆಲೆಯತ್ತ...



ನಾನು, ನನ್ನದು ಎಂಬಂಥ ವ್ಯಕ್ತಿಕೇಂದ್ರಿತ ಭಾವಗಳೇ ಪ್ರಧಾನವಾಗಿರುವ ನಮ್ಮ ದೇಶದಲ್ಲಿ ‘ನಾವು, ನಮ್ಮದು’ ಎಂಬಂಥ ಸಮೂಹನಿಷ್ಠ ಭಾವವನ್ನು ನಿಧಾನವಾಗಿಯಾದರೂ ಮೂಡಿಸುತ್ತಿರುವ ಸಂವಿಧಾನದ ಇದುವರೆಗಿನ ಸಾಧನೆ ಸಣ್ಣದೇನಲ್ಲ.

ಪುರುಷೋತ್ತಮ ಬಿಳಿಮಲೆ, ಲೇಖಕ, ‘ಫೇಸ್‌ಬುಕ್’ನಿಂದ

ಕಿಡಿನುಡಿ



ರಾಜ್ಯದಲ್ಲಿ ಕಾಂಗ್ರೆಸ್ ಸತ್ತೇ ಹೋಗಿದೆ. ಅದರ ಹೆಣ ಹೊರುವ ಕೆಲಸವನ್ನು ಈಗ ಸಿ.ಎಂ ಮಾಡುತ್ತಿದ್ದಾರೆ. ಸಿ.ಎಂ. ಬದಲಾವಣೆ ಎಂದರೆ ಹೆಣವನ್ನು ಮುಂದೆ ಹೊರುವುದು ಯಾರು ಎಂಬ ಪ್ರಶ್ನೆ ಮಾತ್ರ. ಸದ್ಯ ತಲೆಗೊಳ್ಳಿ ಹಿಡಿಯುವ ವ್ಯಕ್ತಿಗೆ ಹುಡುಕಾಡುತ್ತಿದ್ದಾರಷ್ಟೆ.

ಆರ್. ಅಶೋಕ, ವಿಧಾನಸಭೆ ವಿರೋಧ ಪಕ್ಷದ ನಾಯಕ

25 ವರ್ಷಗಳ ಹಿಂದೆ

ಸೋಮವಾರ, 27-11-2000

• **ನೀರಾವರಿ ಯೋಜನೆ: ಕೇಂದ್ರದ ಒಪ್ಪಿಗೆಗೆ ಯತ್ನ**

ಬಳ್ಳಾರಿ, ನ. 26– ರಾಜ್ಯದ ಹತ್ತು ನೀರಾವರಿ ಯೋಜನೆಗಳಿಗೆ ಕೇಂದ್ರ ಸರ್ಕಾರದಿಂದ ಅನುಮತಿ ಪಡೆಯಲು ಪ್ರಯತ್ನಿಸಲಾಗುತ್ತಿದೆ ಎಂದು ಭಾರಿ ನೀರಾವರಿ ಸಚಿವ ಎಚ್.ಕೆ. ಪಾಟೀಲ್ ಅವರು, ಇಂದು ಇಲ್ಲಿ ಹೇಳಿದರು.

ತುಂಗಾ ಮೇಲ್ದಂಡೆ, ಮಾರ್ಕಂಡೇಯ, ಹಿಪ್ಪರಗಿ, ವರಾಹಿ, ಸಿಂಗಟಲೂರು ಮುಂತಾದ ಅನೇಕ ಯೋಜನೆಗಳಿಗೆ ಕೇಂದ್ರದಿಂದ ಅನುಮತಿ ಸಿಗಬೇಕಿದೆ. ಕೆಲವಕ್ಕೆ ಅರಣ್ಯ, ಕೆಲವಕ್ಕೆ ಪರಿಸರ ವಿಚಾರದಲ್ಲಿ ಅನುಮತಿ ದೊರೆಯಬೇಕಿದೆ ಎಂದರು.

• **ದಸಂಸ ಕಾರ್ಯಕರ್ತನ ಹತ್ಯೆ**

ಬೆಂಗಳೂರು, ನ. 26– ಹೊಸಕೋಟೆ ತಾಲ್ಲೂಕಿನ ಚೆನ್ನಾಪುರದಲ್ಲಿ ಹಾಡುಹಗಲೇ ಕಾಂಗ್ರೆಸ್ ಕಾರ್ಯಕರ್ತ ಹಾಗೂ ದಲಿತ ಸಂಘರ್ಷ ಸಮಿತಿಯ ಉಪಾಧ್ಯಕ್ಷ ಮುನಿಸ್ವಾಮಿ (50) ಎಂಬುವರನ್ನು ರಾಜಕೀಯ ವೈಷಮ್ಯದಿಂದ ಕೊಚ್ಚಿ ಕೊಲೆ ಮಾಡಲಾಗಿದೆ.

75 ವರ್ಷಗಳ ಹಿಂದೆ

ಸೋಮವಾರ, 27-11-1950

• **ಸಂಪ್ರದಾಯದ ಪುನರುಕ್ತಿ**

ನವದೆಹಲಿ, ನ. 26– ಭಾರತ ಪಾರ್ಲಿಮೆಂಟ್ ಸಭಾಧ್ಯಕ್ಷರಾದ ಜಿ.ವಿ. ಮಾವಳಣಕರರು ಸದಸ್ಯರಿಗೆ ಇಂದು ಜ್ಞಾಪಿಸಿದ ಸಭೆಯ ಸಂಪ್ರದಾಯಗಳು ಈ ರೀತಿ ಇವೆ:

ಸಭಾಧ್ಯಕ್ಷರು ಎದ್ದು ನಿಂತಿರುವಾಗ ಮೊದಲನೆಯದಾಗಿ ಯಾವ ಸದಸ್ಯರೇ ಆಗಲಿ ಓಡಾಡಕೂಡದು ಅಥವಾ ಎದ್ದುನಿಲ್ಲಕೂಡದು. ಎರಡನೆಯದಾಗಿ ಯಾವೊಬ್ಬ ಸದಸ್ಯರೇ ಆಗಲಿ ಎದ್ದು ನಿಂತು ಮಾತನಾಡುತ್ತಿರುವಾಗ ಒಬ್ಬರಿಗೂ ಮತ್ತೊಬ್ಬರಿಗೂ ನಡುವೆ ಸರಾಗವಾಗಿ ಅಡ್ಡ ಹಾಯಬಾರದು. ಮೂರನೆಯದಾಗಿ ಸದಸ್ಯರು ತಂತಮ್ಮನ್ನೇ ಉದ್ದೇಶಿಸಿ ಮಾತನಾಡುವ ಬದಲು ಅಧ್ಯಕ್ಷರನ್ನು ಉದ್ದೇಶಿಸಿ ಮಾತನಾಡಬೇಕು.

ಲಿಂಗಸೂಕ್ಷ್ಮ ಕುರುಡಾದೊಡೆ...





ವಿಶ್ಲೇಷಣೆ

ಸಮೀರಾ ಗೌಡ
ಕಿರಣ್ ಗಾಜನೂರು

> ಹೆಣ್ಣು ಭಾಗಿಯಾದ ಅಪರಾಧ ಕೃತ್ಯಗಳು ಅತಿರಂಜಿತವಾಗಿ ಹಾಗೂ ನಾಟಕೀಯವಾಗಿ ವರದಿಯಾಗುವುದು ಏಕೆ? ಲಿಂಗಸೂಕ್ಷ್ಮ ವೈಚಾರಿಕತೆಯ ಕೊರತೆಯನ್ನು ಸೂಚಿಸುವ ಇಂಥ ಬೆಳವಣಿಗೆಗಳ ನಡುವೆಯೇ, ಪುರುಷಪ್ರಧಾನ ಸಮಾಜದ ಚೌಕಟ್ಟಿನಲ್ಲಿ ಬಿರುಕು ಮೂಡಿಸುವ ಹಾಗೂ ಗಂಡಿನ ನೆರಳಿನಿಂದ ಹೊರಬರುವ ಹೆಣ್ಣಿನ ಪ್ರಯತ್ನಗಳು ನಡೆಯುತ್ತಿವೆ.

ರಾಷ್ಟ್ರೀಯ ಅಪರಾಧಗಳ ದಾಖಲೆ ಬ್ಯೂರೊದ (ಎನ್‌ಸಿಆರ್‌ಬಿ) ಇತ್ತೀಚಿನ ವರದಿಯ ಪ್ರಕಾರ, ಭಾರತದಲ್ಲಿ ವಾರ್ಷಿಕ ಸರಾಸರಿ 4,48,211 ಮಹಿಳೆಯರ ಮೇಲಿನ ದೌರ್ಜನ್ಯದ ಪ್ರಕರಣಗಳು ದಾಖಲಾಗುತ್ತಿವೆ. ಅವುಗಳಲ್ಲಿ 1,33,676 ಪ್ರಕರಣಗಳು ಭಾರತೀಯ ದಂಡ ಸಂಹಿತೆ ‘ಸೆಕ್ಷನ್ 498ಎ’ ಅಡಿಯಲ್ಲಿ ದಾಖಲಾಗುತ್ತಿವೆ. ಇದರ ಅರ್ಥ, ಪ್ರತಿವರ್ಷ ಸುಮಾರು ಒಂದೂವರೆ ಲಕ್ಷ ವಿವಾಹಿತ ಮಹಿಳೆಯರು ಪತಿ ಅಥವಾ ಸಂಬಂಧಿಕರ ಕಡೆಯಿಂದ ದೌರ್ಜನ್ಯಕ್ಕೆ ಒಳಗಾಗುತ್ತಿದ್ದಾರೆ.

ಹೆಣ್ಣಿನ ಮೇಲೆ ನಡೆಯುವ ದೌರ್ಜನ್ಯದ ಸಾಲು ಸಾಲು ಘಟನೆಗಳ ನಡುವೆ, ಹೆಣ್ಣಿನಿಂದ ಗಂಡಿನ ಮೇಲೆ ನಡೆಯುವ ದೌರ್ಜನ್ಯದ ಘಟನೆಗಳೂ ಆಗಾಗ ವರದಿಯಾಗುತ್ತವೆ. ಆ ವರದಿಗಳು, ‘ಪತ್ನಿಯಿಂದ ಪತಿಯ ಹತ್ಯೆ’, ‘ಪತಿಗೆ ಮೋಸಮಾಡಿ ಓಡಿಹೋದ ಪತ್ನಿ’– ಹೀಗೆ, ರೋಚಕ ಶೀರ್ಷಿಕೆಯಲ್ಲಿ ಪ್ರಕಟಗೊಂಡು ಜನರ ಗಮನಸೆಳೆಯುತ್ತವೆ. ಇಂಥ ಸುದ್ದಿಗಳು ಸುದ್ದಿವಾಹಿನಿ ಹಾಗೂ ಸಾಮಾಜಿಕ ಜಾಲತಾಣಗಳಲ್ಲಿ ಹೆಚ್ಚಿನ ಜನರ ಗಮನಸೆಳೆಯುತ್ತವೆ. ಇವೆಲ್ಲವೂ ಅಪರಾಧ ಪ್ರಕರಣಗಳೇ ಹೌದು. ಆದರೆ, ಮಹಿಳೆಯರ ಮೇಲಿನ ದೌರ್ಜನ್ಯ ಪ್ರಕರಣಗಳಿಗಿಂತ, ಮಹಿಳೆ ಭಾಗಿಯಾದ ದೌರ್ಜನ್ಯದ ಪ್ರಕರಣಗಳು ಮಾಧ್ಯಮಗಳನ್ನು ಹೆಚ್ಚು ಸೆಳೆಯುತ್ತಿರುವುದು, ಕಿರುತೆರೆಯ ಕಾರ್ಯಕ್ರಮಗಳಿಗೆ ಕಂಟೆಂಟ್ ಆಗಿ ಬಳಕೆಯಾಗುತ್ತಿರುವುದು, ಸಾಮಾಜಿಕ ಜಾಲತಾಣದ ರೀಲ್‌ಗಳ ರೂಪದಲ್ಲಿ ಸಮುದಾಯವನ್ನು ವೇಗವಾಗಿ ತಲಪುತ್ತಿರುವುದು ಕುತೂಹಲಕರ.

ಇದಕ್ಕೆಪೂರಕ ಎನ್ನುವಂತೆ ಪ್ರಾಧ್ಯಾಪಕಿಯೊಬ್ಬರು ಮಾತಿನ ನಡುವೆ, ‘ನೋಡಿ, ನಮ್ಮ ಊರು ಎಷ್ಟೊಂದು ಬದಲಾಗಿದೆ; ಹೆಣ್ಣುಮಕ್ಕಳು ಎಷ್ಟು ಮುಂದುವರಿದಿದ್ದಾರೆ; ನಮ್ಮ ನಗರದ ನೈತಿಕತೆ ಅಧಃಪತನಕ್ಕೆ ಇಳಿಯುತ್ತಿದೆ, ಹಿಂದೆ ಹೀಗೆ ಇರಲಿಲ್ಲ’ ಎಂದು ತಮ್ಮ ಆತಂಕ ತೋಡಿಕೊಂಡರು. ಅವರ ಮಾತು ಹಾಗೂ ಮಹಿಳೆಯರು ಭಾಗಿಯಾದ ಅಪರಾಧ ಕೃತ್ಯಗಳ ಬಗೆಗಿನ ಸಮಾಜದ ಕುತೂಹಲದ ಹಿನ್ನೆಲೆಯಲ್ಲಿ ಪ್ರಶ್ನೆಗಳು ಕಾಡತೊಡಗಿದವು. ಸಾಹಿತ್ಯ ಮತ್ತು ಸಮಾಜ ವಿಜ್ಞಾನಗಳ ವಿದ್ಯಾರ್ಥಿಗಳಾದ ನಮಗೆ, ದೃಶ್ಯ ಮಾಧ್ಯಮಗಳ ‘ಪತ್ನಿಯಿಂದ ಪತಿಯ ಹತ್ಯೆ’ ಎನ್ನುವಂಥ ಅತಿರಂಜಿತ ಸುದ್ದಿ ಹಾಗೂ ‘ನಗರದ ನೈತಿಕತೆಗೆ ಏನಾಗಿದೆ’ ಎನ್ನುವ ಪ್ರಾಧ್ಯಾಪಕಿಯ ಆತಂಕವನ್ನು ಬಿಡಿ ಬಿಡಿ ಪ್ರಕರಣಗಳಾಗಿ ನೋಡಬೇಕೋ ಅಥವಾ ನಮ್ಮ ಸಮಾಜದಲ್ಲಿ ಘಟಿಸುತ್ತಿರುವ ಪ್ರಮುಖ ಸಾಮಾಜಿಕ ವಿದ್ಯಮಾನದ ರೂಪದಲ್ಲಿ ನೋಡಬೇಕೋ ಎನ್ನುವ ತಾತ್ವಿಕ ಸವಾಲೊಂದು ಎದುರಾಗಿತ್ತು.

ಈ ಪ್ರಕರಣಗಳನ್ನು ಬಿಡಿ ಬಿಡಿಯಾಗಿ ನೋಡಿ, ಇತರ ಅಪರಾಧ ಪ್ರಕರಣಗಳಂತೆ ಇವುಗಳೂ ‘ಅಪರಾಧಪ್ರಕರಣಗಳು’, ಇವುಗಳನ್ನುನಿಯಂತ್ರಿಸಲು ಕಾನೂನು ಸರಿಯಾಗಿ ಜಾರಿಗೊಳ್ಳಬೇಕು, ಅಪರಾಧಿಗಳಿಗೆ ಕಠಿಣ ಶಿಕ್ಷೆಯಾಗಬೇಕು, ಆ ಮೂಲಕ ಸಮಾಜದಲ್ಲಿ ನೈತಿಕತೆಯನ್ನು ಪುನರ್ ಸ್ಥಾಪಿಸಬೇಕು ಎಂಬ ಮಾದರಿಯ ವಾದಗಳು ಮತ್ತು ಅವುಗಳನ್ನು ಮಂಡಿಸುವವರ ಕಾಳಜಿಗಳನ್ನು ನಾವು ಸಂಪೂರ್ಣವಾಗಿ ಅಲ್ಲಗಳೆಯಲಾಗುವುದಿಲ್ಲ. ಆದರೆ, ಈ ಮಾದರಿಯ ಪ್ರಕರಣಗಳನ್ನು ಮಾಧ್ಯಮಗಳು ಮಂಡಿಸುತ್ತಿರುವ ರೀತಿ ಹಾಗೂ ಇಂಥ ವಿದ್ಯಮಾನಗಳ ಕುರಿತು ವ್ಯಕ್ತವಾಗುತ್ತಿರುವ ಏಕಮುಖ ಕಾನೂನಾತ್ಮಕ, ನೈತಿಕ ಕಾಳಜಿಯನ್ನು ಪೋಷಿಸುತ್ತಿರುವ ಗ್ರಹಿಕೆ ಯಾವುದು ಎನ್ನುವ ಪ್ರಶ್ನೆಯನ್ನು ನಾವು ಕೇಳಿಕೊಳ್ಳಬೇಕಾಗಿದೆ. ಈ ಸಾಧ್ಯತೆಯನ್ನು ವಿಶ್ಲೇಷಿಸುವ ಮತ್ತು ಪರಿಹಾರಗಳನ್ನು ಹುಡುಕುವ ಸಮಾಜಶಾಸ್ತ್ರೀಯ ಪ್ರಯತ್ನಗಳನ್ನೂ ನಾವು ಮಾಡಬೇಕಾಗಿದೆ.

ದೆಹಲಿಯ ಬೀದಿಗಳಲ್ಲೊಮ್ಮೆ ಓಡಾಡುತ್ತಿದ್ದ ಸಮಾಜಶಾಸ್ತ್ರಜ್ಞೆ ಪೆಟ್ರೀಷಿಯಾ ಉಬೆರಾಯ್ ಅವರ ಗಮನವನ್ನು, ರಸ್ತೆಯಲ್ಲಿ ಚಲಿಸುತ್ತಿದ್ದ ಲಾರಿಯ ಹಿಂದೆ ಬರೆದ ‘ಬ್ಯೂಟಿಫುಲ್ ವೈಫ್, ಡೇಂಜರ್ ಲೈಫ್’ ಎನ್ನುವ ಬರಹ ಸೆಳೆಯಿತು. ಅದರ ಬಗ್ಗೆ ಯೋಚಿಸಿದ ಅವರಿಗೆ– ಆ ಸಾಲುಗಳನ್ನು ಲಾರಿಯ ಮೇಲೆ ಬರೆದವನು/ಬರೆಸಿದವನು ವಿದ್ಯಾವಂತ ಆಗಿಲ್ಲದೆ ಇರುವ ಸಾಧ್ಯತೆ ಹೆಚ್ಚಾಗಿದ್ದರೂ, ‘ಸುಂದರ ಹೆಂಡತಿ’ಯ ಕುರಿತು ಒಂದು ಧೋರಣೆ ಹೊಂದಿದ್ದಾನೆ, ಅಥವಾ ‘ಸುಂದರ ಹೆಂಡತಿ ಅಪಾಯ ತರುತ್ತಾಳೆ’ ಎನ್ನುವ ನಿಲುವಿಗೆ ಸಮ್ಮತಿ ಸೂಚಿಸುತ್ತಿದ್ದಾನೆ; ಆ ಹೇಳಿಕೆಯನ್ನು ಲಾರಿಯ ಹಿಂದೆ ಬರೆಯುವ ಮೂಲಕ ತನ್ನ ಅಭಿಪ್ರಾಯವನ್ನು ಅಧಿಕೃತಗೊಳಿಸುತ್ತಿದ್ದಾನೆ ಅನ್ನಿಸಿತು. ಭಾರತೀಯ ಸಮಾಜದಲ್ಲಿ ಗಂಡಸರು ಹೀಗೆ ಏಕೆ ಯೋಚಿಸುತ್ತಾರೆ ಎನ್ನುವ ಪ್ರಶ್ನೆ ಅವರನ್ನು ಕಾಡತೊಡಗಿತು. ನಂತರ ತಮ್ಮ ಚಿಂತನೆಗಳನ್ನವರು, ‘ಫ್ರೀಡಂ ಅಂಡ್ ಡೆಸ್ಟಿನಿ: ಜೆಂಡರ್ ಫ್ಯಾಮಿಲಿ ಅಂಡ್ ಪಾಪ್ಯುಲರ್ ಕಲ್ಚರ್ ಇನ್ ಇಂಡಿಯಾ’ ಎನ್ನುವ ಪ್ರಬಂಧದಲ್ಲಿ ದಾಖಲಿಸಿದರು; ಲಾರಿಯೊಂದರ ಹಿಂಬದಿ ಬರಹ, ಪ್ರೌಢ ಸಮಾಜಶಾಸ್ತ್ರೀಯ ಶೋಧವಾಗಿ ಬದಲಾಯಿತು.

ತಮ್ಮ ಬರಹದಲ್ಲಿ ಪೆಟ್ರೀಷಿಯಾ ಅವರು, ‘ಪ್ರಸ್ತುತ ಆಧುನಿಕತೆ ಪ್ರತಿಪಾದಿಸುವ ವೈಯಕ್ತಿಕ ಸ್ವಾಯತ್ತತೆ, ಆಯ್ಕೆಯ ಸ್ವಾತಂತ್ರ್ಯ ಹಾಗೂ ಪ್ರಣಯ–ಪ್ರೀತಿಯ ಪರಿಭಾಷೆಗಳು ಭಾರತೀಯ ಸಾಂಪ್ರದಾಯಿಕ ಸಾಮಾಜಿಕ ನೀತಿಯೊಂದಿಗೆ ನಿರಂತರ ಸಂಘರ್ಷದಲ್ಲಿವೆ’ ಎನ್ನುವ ಸಂಗತಿಯನ್ನು ಪ್ರಸ್ತಾಪಿಸುತ್ತಾರೆ. ಒಂದು ಕಡೆ, ಆಧುನಿಕತೆ ಮಹಿಳೆಯಲ್ಲಿ ವೈಯಕ್ತಿಕ ಸ್ವಾತಂತ್ರ್ಯ ಮತ್ತು ಆಯ್ಕೆಯ ಹಕ್ಕಿನ ಕುರಿತು ಅರಿವು ತುಂಬುತ್ತಿದೆ. ಮತ್ತೊಂದು ಕಡೆ, ಮಹಿಳೆಯ ಕುರಿತ ನಮ್ಮ ಸಾಮಾಜಿಕ ನೀತಿಗಳು ಸಾಂಪ್ರದಾಯಿಕ ಕೌಟುಂಬಿಕ ಮೌಲ್ಯರಚನೆಯನ್ನು ಆಕೆಯ ಮೇಲೆ ಹೇರುತ್ತಿವೆ ಎನ್ನುವುದನ್ನು ಗುರ್ತಿಸಿದ್ದಾರೆ. ‘ವರ್ತಮಾನದ ಮಹಿಳೆಯ ಅರಿವು–ಅಲೋಚನೆ ಆಧುನಿಕವಾಗಿದ್ದರೂ, ಆಕೆ ಬದುಕನ್ನು ಸಾಂಪ್ರದಾಯಿಕವಾಗಿಯೇ ಕಲ್ಪಿಸಿಕೊಳ್ಳಬೇಕಾದ ವಿಚಿತ್ರ ದ್ವಂದ್ವವೊಂದಕ್ಕೆ ಸಿಲುಕಿದ್ದಾಳೆ’ ಎನ್ನುವ ವಾದವನ್ನು ಪೆಟ್ರೀಷಿಯಾ ಮಂಡಿಸಿದ್ದಾರೆ.

1990ರ ದಶಕದ ನಂತರ ಭಾರತದಲ್ಲಿ ಜರುಗಿದ ಆರ್ಥಿಕ ಉದಾರೀಕರಣ ನಮ್ಮ ಕುಟುಂಬ ಮತ್ತು ಸಾಮಾಜಿಕ ಜೀವನದ ಮೇಲೆ ಸಾಕಷ್ಟು ಪರಿಣಾಮ ಬೀರಿದೆ. ಈ ವಿದ್ಯಮಾನದಿಂದ ಹುಟ್ಟಿದ ‘ನವ ಮಧ್ಯಮವರ್ಗದ ಮಹಿಳೆ ತಕ್ಕಮಟ್ಟಿಗೆ ಆರ್ಥಿಕ ಸ್ವಾವಲಂಬನೆ ಸಾಧಿಸುತ್ತಿದ್ದಾಳೆ. ಈ ಬೆಳವಣಿಗೆ ಆಕೆಗೆ ಕೌಟುಂಬಿಕ ದೌರ್ಜನ್ಯ ಹಾಗೂ ಏಕಮುಖ ವೈವಾಹಿಕ ಸಂಬಂಧಗಳನ್ನು ಪ್ರಶ್ನಿಸುವ ಚೈತನ್ಯ ನೀಡಿದೆ ಎನ್ನುವುದು ಪೆಟ್ರೀಷಿಯಾ ಅವರ ವಿಶ್ಲೇಷಣೆ. ಇದಕ್ಕೆ ಪೂರಕ ಎನ್ನುವಂತೆ ಲೋಕಮತ್‌ನಲ್ಲಿ ಪ್ರಕಟವಾದ (ಫೆಬ್ರುವರಿ 1, 2025ರ ಸಂಚಿಕೆ) ಅಂತರರಾಷ್ಟ್ರೀಯ ಅಧ್ಯಯನ ವರದಿ, ಬಹುತೇಕ ಮಹಿಳೆಯರು ಸಾಂಪ್ರದಾಯಿಕ ಕೌಟುಂಬಿಕ ಪಾತ್ರದ ಬದುಕಿಗಿಂತ ವೃತ್ತಿಬದುಕನ್ನು ಪ್ರಸ್ತುತ ಆಯ್ಕೆ ಮಾಡಿಕೊಳ್ಳುತ್ತಿದ್ದಾರೆ ಎನ್ನುತ್ತಿದೆ. ಹೆಣ್ಣುಮಕ್ಕಳ ವಿವಾಹ ಕುರಿತಾದ ಜಾಗತಿಕ ಸಮೀಕ್ಷೆಯ ಸಂಶೋಧನೆಯಲ್ಲಿ ತೊಡಗಿರುವ ಮಾರ್ಗನ್ ಸ್ಟಾನ್ಲಿ ಅವರ ವರದಿಯ ಪ್ರಕಾರ, 2030ರ ಹೊತ್ತಿಗೆ ವಿಶ್ವದಾದ್ಯಂತ 25ರಿಂದ 44 ವರ್ಷದೊಳಗಿನ ಸುಮಾರು ಶೇ 45ರಷ್ಟು ಹೆಣ್ಣುಮಕ್ಕಳು ಮಕ್ಕಳಿಲ್ಲದ ಒಂಟಿ ಬದುಕನ್ನು ಆಯ್ಕೆ ಮಾಡಿಕೊಳ್ಳಲಿದ್ದಾರೆ. ಈ ಅಂಶ ನಮ್ಮ ಕೌಟುಂಬಿಕ ಮತ್ತು ಸಾಮಾಜಿಕ ರಚನೆಗಳಲ್ಲಿ ಆಮೂಲಾಗ್ರ ಬದಲಾವಣೆಗೆ ಕಾರಣವಾಗಬಹುದು.

ಹೆಣ್ಣುಮಕ್ಕಳು ಮದುವೆಯಾಗುವ ಬದಲು ಒಂಟಿಯಾಗಿ ಬದುಕಲು ಏಕೆ ಬಯಸುತ್ತಿದ್ದಾರೆ ಎನ್ನುವ ಪ್ರಶ್ನೆಯನ್ನು ಕುರಿತು ಯೋಚಿಸಿದರೆ, ಅದು ಅವರ ಆಯ್ಕೆಯ ಬದಲಾಗಿ– ಸಾಂಪ್ರದಾಯಿಕ ಕೌಟುಂಬಿಕ ವ್ಯವಸ್ಥೆಯ ರಚನೆ, ಅಲ್ಲಿನ ಪುರುಷ ಪ್ರಾಧಾನ್ಯದ ಏಕಮುಖ ತೀರ್ಮಾನಗಳು, ಅದರ ಭಾಗವಾದ ದೌರ್ಜನ್ಯಗಳ ಭಾಗವಾಗಲು ಆಕೆ ಸಿದ್ಧಳಿಲ್ಲ ಎನ್ನುವುದು– ಇವೆಲ್ಲ ನಮ್ಮೆದುರು ನಿಲ್ಲುತ್ತವೆ.

ಬದಲಾದ ಕಾಲಮಾನದಲ್ಲಿ ಮಹಿಳೆ ತನ್ನದೇ ಆಯ್ಕೆಯ ಹಕ್ಕನ್ನು ತುಸು ಮಾತ್ರ ಚಲಾಯಿಸಲು ಪ್ರಯತ್ನಿಸುತ್ತಿದ್ದಾಳೆ. ಆ ಸಣ್ಣಪ್ರಯತ್ನವೇ ಶತಮಾನಗಳ ಕಾಲ ಸಾಂಪ್ರದಾಯಿಕ ಕೌಟುಂಬಿಕ ವ್ಯವಸ್ಥೆಯನ್ನು ಹೆಣ್ಣಿನ ಮೇಲೆ ಹೇರಿದ್ದ ಸಮಾಜಕ್ಕೆ ಸವಾಲಾಗಿ ಬದಲಾಗಿದೆ ಹಾಗೂ ಅದರ ಭಾಗವಾಗಿಯೇ ನಾವು ‘ಸುಂದರಿ ಹೆಂಡತಿಯಿಂದ ಜೀವಕ್ಕೆ ಅಪಾಯಕರ’ ಎನ್ನುವ ಅರ್ಥದ ಬರಹವನ್ನೂ, ಹೆಣ್ಣು ಭಾಗಿಯಾದ ಅಪರಾಧ ಕೃತ್ಯಗಳ ಅತಿರಂಜಿತ ಹಾಗೂ ನಾಟಕೀಯ ವರದಿಗಳನ್ನೂ ಗುರ್ತಿಸಬೇಕಾಗಿದೆ. ಪೆಟ್ರೀಷಿಯಾ ಉಬೆರಾಯ್ ಸಹ ತಮ್ಮ ಲೇಖನದಲ್ಲಿ, ವರ್ತಮಾನದ ಪುರುಷ ಪ್ರಾಧಾನ್ಯ ನಿರೂಪಿತ ಜನಪ್ರಿಯ ಸಂಸ್ಕೃತಿ (ಪಾಪ್ಯುಲರ್ ಕಲ್ಚರ್) ಮಹಿಳೆಯ ಕುರಿತಾದ ಸಾಂಪ್ರದಾಯಿಕ ಚಿತ್ರಣವನ್ನೇ ಸಿನಿಮಾ, ಧಾರಾವಾಹಿ, ರಿಯಾಲಿಟಿ ಶೋಗಳ ಮೂಲಕ ಗಟ್ಟಿಗೊಳಿಸುತ್ತಿರುವುದು ಈ ಮಾದರಿಯ ವರ್ತನೆಗೆ ಕಾರಣ ಎನ್ನುವ ವಿಶ್ಲೇಷಣೆಯನ್ನು ಮುಂದಿಟ್ಟಿದ್ದಾರೆ.

ಇಂತಹ ಸಮಯದಲ್ಲಿ ಒಂದು ಸಮಾಜವಾಗಿ ನಮ್ಮ ಮುಂದಿರುವ ಆಯ್ಕೆ, ಹೆಣ್ಣಿಗೆ ಇರುವ ನೈಸರ್ಗಿಕ ಆಯ್ಕೆಯ ಸ್ವಾತಂತ್ರ್ಯವನ್ನು ಖಾತರಿಪಡಿಸುವ ಸಾಮಾಜಿಕ ಸ್ಥಿತಿಯನ್ನು ನಿರ್ಮಿಸುವುದಾಗಿದೆ. ಶಿಕ್ಷಣ, ಸಂಗಾತಿಯ ಆಯ್ಕೆ, ಮದುವೆ ಸೇರಿದಂತೆ ಯಾವುದೇ ವಿಷಯದಲ್ಲಿ ಆಕೆಯ ಆಯ್ಕೆಯ ಹಕ್ಕನ್ನು ಗೌರವಿಸುವುದರ ಜೊತೆಗೆ, ಆ ಆಯ್ಕೆಯ ನೈತಿಕ ಹೊಣೆಗಾರಿಕೆಯನ್ನು ನಿಭಾಯಿಸುವ ಕೌಶಲ ಹಾಗೂ ಅವಕಾಶವನ್ನು ಕಲ್ಪಿಸಿಕೊಡಬೇಕಿದೆ. ಇದು ಸಾಧ್ಯವಾಗುವುದು, ಹೆಣ್ಣು–ಗಂಡು ಇಬ್ಬರಿಗೂ ಲಿಂಗಸೂಕ್ಷ್ಮತೆ ಮತ್ತು ಲಿಂಗಸಮಾನತೆ ಕುರಿತ ದೀರ್ಘಾವಧಿಯ ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಅರಿವು ದೊರೆತಾಗ ಮಾತ್ರ.



ವಾಚಕರ ವಾಣಿ

‘ಕೇಣಿ’ ಬಂದರಿನ ತೆರೆಮರೆಯ ವೃತ್ತಾಂತ

ಅಂಕೋಲಾ ತಾಲ್ಲೂಕಿನ ಕೇಣಿಯಲ್ಲಿ ಸರ್ವಋತು ಆಳಸಮುದ್ರ ಗ್ರೀನ್‌ಫೀಲ್ಡ್ ಬಂದರು ನಿರ್ಮಿಸಲು ಉದ್ದೇಶಿಸಲಾಗಿದೆ. ಇದನ್ನು ಆಕ್ಷೇಪಿಸಿ ಅಂಕೋಲಾ ಬಂದ್ ಕೂಡ ನಡೆದಿದೆ. ವಾಣಿಜ್ಯ ಬಂದರು ನಿರ್ಮಾಣವಾದರೆ ಎಲ್ಲವೂ ಮುಳುಗಿಹೋಗಲಿದೆ ಎನ್ನುವುದು ಸ್ಥಳೀಯರ ಆತಂಕ. ಆದರೆ, ಮಂಗಳೂರಿನಲ್ಲಿ ಹಾಗೂ ಪಕ್ಕದ ಗೋವಾದ ವಾಸ್ಕೋದಲ್ಲಿ ಬಂದರು ನಿರ್ಮಾಣವಾದಾಗ ಏನೂ ಮುಳುಗಿಹೋಗಿಲ್ಲ! ಬಂದರು ನಿರ್ಮಾಣ ಕುರಿತು ಸರ್ಕಾರ ಹಾಗೂ ಸ್ಥಳೀಯ ಆಡಳಿತವು ಜನರಿಗೆ ಸರಿಯಾಗಿ ವಿವರಿಸಿಲ್ಲ. ಮೀನುಗಾರರು ಮತ್ತು ಮೀನು ತಿನ್ನುವವರ ಮಕ್ಕಳು ಇಂದು ಒಂದೇ ಶಿಕ್ಷಣ ಸಂಸ್ಥೆಯಲ್ಲಿ ಓದುತ್ತಿದ್ದಾರೆ. ಎಂಜಿನಿಯರಿಂಗ್, ವೈದ್ಯಕೀಯ ಶಿಕ್ಷಣದಲ್ಲಿ ಪದವಿ ಪಡೆಯುತ್ತಿದ್ದಾರೆ. ಆದರೆ ಮೀನುಗಾರಿಕೆ ಮಾಡಲು ಬೇರೆ ರಾಜ್ಯದ, ಸಮುದ್ರದ ಪರಿಚಯವೇ ಇಲ್ಲದ ಜಾರ್ಖಂಡ್, ಉತ್ತರಾಖಂಡ, ಬಿಹಾರದ ಜನರು ಬರುತ್ತಿದ್ದಾರೆ. ಇದಕ್ಕೆ ಉತ್ತರಿಸುವವರು ಯಾರು?

ಚಂದ್ರಕಾಂತ ನಾಮಧಾರಿ, ಅಂಕೋಲಾ

ಅಪರಾಧ ಕೃತ್ಯ: ರಕ್ಷಕರೇ ಭಕ್ಷಕರಾದರೆ...

ಬೆಂಗಳೂರಿನಲ್ಲಿ ಸಿಎಂಎಸ್ ಏಜೆನ್ಸಿಯ ವಾಹನ ಅಡ್ಡಗಟ್ಟಿ ನಡೆದ ನಗದು ದರೋಡೆ ಹಿಂದೆ ಓರ್ವ ಕಾನ್‌ಸ್ಟೆಬಲ್ ಕೈವಾಡ ಇರುವುದು ಬಯಲಾಗಿದೆ. ದಾವಣಗೆರೆಯಲ್ಲಿ ಇಬ್ಬರು ಪೊಲೀಸ್ ಸಬ್ ಇನ್‌ಸ್ಪೆಕ್ಟರ್‌ಗಳು ಚಿನ್ನಾಭರಣ ಸುಲಿಗೆ ಮಾಡಿರುವುದು ವರದಿಯಾಗಿದೆ. ಪಿಎಸ್‌ಐ ನೇಮಕ ಹಗರಣದಲ್ಲಿ ಹಿರಿಯ ಐಪಿಎಸ್ ಅಧಿಕಾರಿಯೇ ಭಾಗಿಯಾಗಿದ್ದು, ಆ ಪ್ರಕರಣ ವಿಚಾರಣೆ ಹಂತದಲ್ಲಿದೆ. ಇವೆಲ್ಲ ಪ್ರಕರಣಗಳು ಗೃಹ ಇಲಾಖೆಯ ವೈಫಲ್ಯಕ್ಕೆ ಕನ್ನಡಿ ಹಿಡಿದಿವೆ. ಅಪರಾಧ ಪ್ರಕರಣಗಳಲ್ಲಿ ಪೊಲೀಸ್ ಸಿಬ್ಬಂದಿ ನೇರವಾಗಿ ಭಾಗಿಯಾಗುತ್ತಿರುವುದು ಆತಂಕಕಾರಿ. ಈ ಪ್ರಕರಣಗಳನ್ನು ಗಮನಿಸಿದರೆ, ಪೊಲೀಸ್ ತರಬೇತಿ ಕೇಂದ್ರಗಳಲ್ಲಿ ನಿಜವಾಗಿ ಏನು ಕಲಿಸಲಾಗುತ್ತಿದೆ ಎನ್ನುವ ಅನುಮಾನ ಕಾಡದಿರದು. ಸದ್ಯ ರಾಜ್ಯ ಪೊಲೀಸ್ ಇಲಾಖೆಯಲ್ಲಿ ‘ಬೇಲಿಯೇ ಎದ್ದು ಹೊಲ ಮೇಯುವ’ ಸ್ಥಿತಿ ಸೃಷ್ಟಿಯಾಗಿದೆ. ಬೆಕ್ಕಿನ ಕೊರಳಿಗೆ ಗಂಟೆ ಕಟ್ಟುವವರು ಯಾರು ಎನ್ನುವುದೇ ಯಕ್ಷಪ್ರಶ್ನೆ.

ಚಂದ್ರಕುಮಾರ್ ಡಿ., ಬೆಂಗಳೂರು

ಜವರಾಯನ ಯಾಮಾರಿಸಲಾಗದು!

ಹೆಲ್ಮೆಟ್ ಧರಿಸದೇ ದ್ವಿಚಕ್ರ ವಾಹನ ಚಲಾಯಿಸುವ ಕೆಲವು ಸವಾರರು ಸಿ.ಸಿ. ಟಿ.ವಿ ಕ್ಯಾಮೆರಾ ಕಣ್ಣಿಗೆ ಬೀಳದಂತೆ ವಾಹನದ ಸಂಖ್ಯಾಫಲಕವನ್ನು ಬ್ಯಾಗ್, ದುಪ್ಪಟ ಅಥವಾ ಕೈಗಳಿಂದ ಮರೆಮಾಚಿ ಜಾಣತನ ಮೆರೆಯುತ್ತಿದ್ದಾರೆ. ಇಂತಹ ವಾಹನ ಸವಾರರು ಪೊಲೀಸರನ್ನು ಯಾಮಾರಿಸಬಹುದು; ಆದರೆ, ಜವರಾಯನನ್ನು ಯಾಮಾರಿಸಲಾಗದು!

ಪಿ.ಜೆ. ರಾಘವೇಂದ್ರ, ಮೈಸೂರು

ಅಗಲಿದ ಜನಪರ ಅಧಿಕಾರಿಗೆ ಶ್ರದ್ಧಾಂಜಲಿ

ಸರ್ಕಾರಿ ಅಧಿಕಾರಿಗಳು ಜನಮಾನಸದಲ್ಲಿ ಉಳಿಯಬೇಕಾದರೆ ಸಮಾಜಮುಖಿ ಕೆಲಸಗಳ ಮೂಲಕ ಗುರ್ತಿಸಿಕೊಳ್ಳಬೇಕು. ರಸ್ತೆ ಅಪಘಾತದಲ್ಲಿ ದುರಂತ ಸಾವು ಕಂಡ ಐಎಎಸ್ ಅಧಿಕಾರಿ ಮಹಾಂತೇಶ್ ಬೀಳಗಿ ಅವರು ಇದಕ್ಕೆ ನಿದರ್ಶನ. ದಾವಣಗೆರೆ ಜಿಲ್ಲಾಧಿಕಾರಿ ಆಗಿದ್ದಾಗ ಇತರ ಜಿಲ್ಲಾಧಿಕಾರಿಗಳಂತೆ ಸೇವೆ ಸಲ್ಲಿಸಿದ್ದರೆ ಅವರೊಬ್ಬ ಸಾಮಾನ್ಯ ಅಧಿಕಾರಿಯಾಗಿರುತ್ತಿದ್ದರು. ಬಡಕುಟುಂಬದಲ್ಲಿ ಜನಿಸಿದ್ದ ಅವರು, ಜವಾರಿ ಭಾಷೆ ಮೂಲಕವೇ ಸಾರ್ವಜನಿಕರಿಗೆ ಹತ್ತಿರವಾದರು. ಜಿಲ್ಲೆಯಲ್ಲಿ ಕೋವಿಡ್ ಪರಿಸ್ಥಿತಿಯನ್ನು ಯಶಸ್ವಿಯಾಗಿ ನಿಭಾಯಿಸಿದ್ದು ಅವರ ಹೆಗ್ಗಳಿಕೆ. ಪ್ರೇರಣಾದಾಯಕ ಮಾತುಗಳಿಂದ ಯುವಜನರಿಗೆ ಸ್ಫೂರ್ತಿ ಆಗಿದ್ದವರನ್ನು ವಿಧಿ ಬಹುಬೇಗ ತನ್ನೆಡೆಗೆ ಕರೆದುಕೊಂಡಿದ್ದು ದೌರ್ಭಾಗ್ಯವೇ ಸರಿ.

ತಿಮ್ಮೇಶ ಮುಸ್ಟೂರು, ಜಗಳೂರು

ಖಾಲಿ ಹುದ್ದೆಗಳನ್ನು ತುಂಬಲು ನಿರಾಸಕ್ತಿ

ರಾಜ್ಯದಲ್ಲಿ ಮೂರು ಲಕ್ಷಕ್ಕೂ ಹೆಚ್ಚು ಸರ್ಕಾರಿ ಹುದ್ದೆಗಳು ಖಾಲಿ ಇವೆ. ಲೆಕ್ಕಪರಿಶೋಧನಾ ಇಲಾಖೆಯ ಎ.ಸಿ ಮತ್ತು ಎ.ಓ ಹುದ್ದೆ, ಅಪೆಕ್ಸ್ ಬ್ಯಾಂಕಿನ ಸಹಾಯಕರ ಹುದ್ದೆ ನೇಮಕಾತಿಗೆ ಲಿಖಿತ ಪರೀಕ್ಷೆ ನಡೆದು 8–10 ತಿಂಗಳೇ ಕಳೆದರೂ ಅಂತಿಮ ಫಲಿತಾಂಶ ಪ್ರಕಟಿಸಿಲ್ಲ. ‘ಭರ್ತಿ’ ಇರುವ ಸಿ.ಎಂ ಹುದ್ದೆಯ ಹೋರಾಟದಲ್ಲಿ ತೋರುತ್ತಿರುವ ಆಸಕ್ತಿ, ಚರ್ಚೆ, ಆತುರ ವಿವಿಧ ಇಲಾಖೆಗಳಲ್ಲಿ ಖಾಲಿ ಇರುವ ಹುದ್ದೆಗಳ ಭರ್ತಿಗೆ ತೋರದಿರುವುದು ವಿಪರ್ಯಾಸ. ರಾಜ್ಯ ಸರ್ಕಾರವು ಗ್ಯಾರಂಟಿ ಯೋಜನೆಗಳ ಜಾರಿ ಹಾಗೂ ಅವುಗಳಿಗೆ ಅನುದಾನ ಹೊಂದಿಸುವುದರಲ್ಲಿಯೇ ಮುಳುಗಿದೆ. ಯುವಜನರ ಹಿತವನ್ನು ಕಡೆಗಣಿಸಿದೆ.

ಎಸ್.ಎನ್. ರಮೇಶ್, ಮಂಡ್ಯ

ಬೋಧನಾ ಅನುಭವಕ್ಕೆ ಅರ್ಹತೆ ಏನು?

ಹೈಕೋರ್ಟ್ ಆದೇಶದಂತೆ ರಾಜ್ಯದ ಸರ್ಕಾರಿ ಪದವಿ ಕಾಲೇಜುಗಳಿಗೆ ಅತಿಥಿ ಉಪನ್ಯಾಸಕರ ನೇಮಕಾತಿ ನಡೆಯುತ್ತಿರುವುದು ಸರಿಯಷ್ಟೆ. ಆದರೆ, ಕಾಲೇಜು ಶಿಕ್ಷಣ ಇಲಾಖೆಯ ಆಯುಕ್ತರು ದಿಢೀರ್ ಆದೇಶ ಹೊರಡಿಸಿ, ಅಂಗವಿಕಲ ಅಭ್ಯರ್ಥಿಗಳಿಗೆ ಪ್ರಾಶಸ್ತ್ಯ ನೀಡಿ ನೇಮಕಾತಿ ನಡೆಸುವಂತೆ ಸೂಚಿಸಿರುವುದು ಅಚ್ಚರಿಗೆ ಕಾರಣವಾಗಿದೆ. ಹಾಗಾದರೆ, ಶೈಕ್ಷಣಿಕ ಅರ್ಹತೆಗಿಂತ ಅಂಗವಿಕಲತೆಯಷ್ಟೆ ಅರ್ಹತೆಯೇ? ಬೋಧನಾ ಅನುಭವಕ್ಕೆ ಯಾವುದೇ ಮಾನ್ಯತೆ ಇಲ್ಲವೇ? ಈ ರೀತಿಯ ನೇಮಕಾತಿಯನ್ನು ನ್ಯಾಯಸಮ್ಮತ ಎನ್ನಬಹುದೇ? ಮೂವತ್ತು ವರ್ಷಗಳ ಹಿಂದೆಯೇ ಯುಜಿಸಿ ನಿಯಮಗಳ ಪ್ರಕಾರ ಅರ್ಹತೆ ಪಡೆದಿರುವ ನೂರಾರು ಅಭ್ಯರ್ಥಿಗಳು, ಇತ್ತೀಚೆಗೆ ಶಿಕ್ಷಣ ಮುಗಿಸಿರುವ ಅಭ್ಯರ್ಥಿಗಳೊಂದಿಗೆ ಅತಿಥಿ ಉಪನ್ಯಾಸಕರ ಹುದ್ದೆಗಳಿಗೆ ಪೈಪೋಟಿ ನಡೆಸಬೇಕಿದೆ. ಇದು ಕರ್ನಾಟಕದಲ್ಲಿ ಉನ್ನತ ಶಿಕ್ಷಣ ವ್ಯವಸ್ಥೆಯು ಕೊಳೆತು ನಾರುತ್ತಿರುವುದರ ಸಂಕೇತ.

ರಾಜಶೇಖರ ಮೂರ್ತಿ, ಎಚ್.ಡಿ. ಕೋಟೆ

ಚುರುಮುರಿ



ಅಗೋಚರ ಹೈಕಮಾಂಡ್!

• ಗುರು ಪಿ.ಎಸ್.

‘ಯಾರು ತಾವು?’ ಆಕಾಶದಲ್ಲಿ ಮಾರ್ದನಿಸಿದ ಧ್ವನಿ ಕೇಳಿ ಬೆಚ್ಚಿದಂತೆ ಎದ್ದ ಮುದ್ದಣ್ಣ.

‘ನಾನು ಹೈಕಮಾಂಡ್’ ಆಕರ್ಷಕ ಧ್ವನಿ ಗರ್ಜಿಸಿತು.

‘ಧ್ವನಿ ಅಷ್ಟೇ ಕೇಳಿಸುತ್ತಿದೆ. ದೇಹವೆಲ್ಲಿ?’ ಕೇಳಿದ ಮುಖ್ಯಮಂತ್ರಿ ಹುದ್ದೆ ಆಕಾಂಕ್ಷಿ ಮುದ್ದಣ್ಣ.

‘ನನ್ನ ಧ್ವನಿ ಕೇಳುತ್ತದೆ. ನನಗೆ ಯಾವುದೇ ಆಕಾರವಿಲ್ಲ ಎಂಬುದು ನಿನಗೆ ಗೊತ್ತಿಲ್ಲವೇ?’ ನುಲಿಯಿತು ಹೈಕಮಾಂಡ್.

‘ಎರಡೂವರೆ ವರ್ಷಗಳಾಗಿ ಎಷ್ಟು ದಿನಗಳಾದವು, ಎಲ್ಲವನ್ನೂ ನಾನೇ ನೆನಪಿಸಬೇಕೇ?’ ಮುದ್ದಣ್ಣನ ಧ್ವನಿ ಗಡುಸಾಗತೊಡಗಿತು.

‘ಏಕೆ ಹೀಗೆ ವರ್ತಿಸುತ್ತಿದ್ದೀರಿ? ನಿಮ್ಮ ಮಾತು ಬಿರುಸಾಗುತ್ತಿದೆ...’

‘ನನ್ನ ಸೂಚನೆಯನ್ನು ನೀವು ಪಾಲಿಸುತ್ತಿಲ್ಲವಲ್ಲ’

‘ಎಲ್ಲರೆದುರು ನಾನು ಹೈಕಮಾಂಡ್ ಸೂಚನೆ ಪಾಲಿಸುತ್ತೇನೆ ಎಂದು ಹೇಳುತ್ತೀರಿ. ಇಲ್ಲಿ ನೋಡಿದರೆ ನನಗೇ ಸೂಚನೆ ಕೊಡುತ್ತಿದ್ದೀರಿ’ ಕೇಳಿತು ಹೈಕಮಾಂಡ್.

‘ನಾನು ಹಾಗೆ ಹೇಳುತ್ತೇನೆ. ಆದರೆ, ಸೂಚನೆ ಪಾಲಿಸಬೇಕಾದವರು ನೀವು’.

‘ನಾನು ಮೊದಲೇ ಹೇಳಿದೆನಲ್ಲ. ನಾನು ನಿರಾಕಾರ. ಆಕಾಶದಲ್ಲಷ್ಟೇ ನನ್ನ ಅಧಿಕಾರ’ ಅಸಹಾಯಕ ದನಿಯಲ್ಲಿ ಹೇಳಿತು ಹೈಕಮಾಂಡ್.

‘ಮತ್ತೆ ನಮ್ಮ ಸಿಎಂ ಹೇಳಿದರು. ಹೈಕಮಾಂಡ್ ಹೇಳಿದಂತೆ ನಾವಿಬ್ಬರೂ ಕೇಳುತ್ತೇವೆ ಅಂತ. ಅವರಿಗೆ ಏನು ಭರವಸೆ ಕೊಟ್ಟಿದ್ದೀರಿ ನೀವು’ ಮುದ್ದಣ್ಣ ಕೆರಳಿದ.

‘ಇಲ್ಲ, ಇಲ್ಲ. ಅವರಿಗೂ ಭರವಸೆ ಕೊಟ್ಟಿಲ್ಲ. ಅವರು ನನ್ನ ಮಾತು ಕೇಳುವುದೂ ಇಲ್ಲ. ನಿಮ್ಮಂತೆ ಅವರೂ ನನ್ನ ಹೆಸರು ಬಳಸಿಕೊಂಡಿದ್ದಾರಷ್ಟೇ’.

‘ನಿಮಗಿಂತ ನಮ್ಮ ಎದುರಿನ ಪಕ್ಷದ ಹೈಕಮಾಂಡೇ ಬೆಟರ್ ಅನಿಸುತ್ತೆ’.

ಜೋರಾಗಿ ನಕ್ಕ ಹೈಕಮಾಂಡ್, ‘ನನಗಾದರೂ ಮುಖ್ಯಮಂತ್ರಿ ಹುದ್ದೆ ಯಾರಿಗೆ ನೀಡಬೇಕು ಅನ್ನೋ ಚಿಂತೆ. ಆದರೆ, ನಿಮ್ಮ ರಾಜ್ಯದಲ್ಲಿ ಅವರ ಪಕ್ಷದ ಅಧ್ಯಕ್ಷರ ಬಗ್ಗೆಯೇ ಅವರಿಗೆ ನಿರ್ಧಾರ ತೆಗೆದುಕೊಳ್ಳೋಕಾಗ್ತಿಲ್ಲ’ ಎಂದಿತು.

‘ನಮ್ಮ ಪಕ್ಷದ್ದಾದರೂ ಇನ್ನೇನು, ಪಕ್ಷದ ರಾಷ್ಟ್ರೀಯ ಅಧ್ಯಕ್ಷರೇ ನಾನು ಹೈಕಮಾಂಡ್‌ಗೆ ಕೇಳಬೇಕು ಅಂತಾರಲ್ಲ’ ಎಂದು ನಕ್ಕ ಮುದ್ದಣ್ಣ.

‘ನಾನು ನಿರಾಕಾರ ಅಂತ ಅದಕ್ಕೇ ಹೇಳಿದ್ದು’ ಎಂದು ಮೌನವಾಯಿತು ಹೈಕಮಾಂಡ್ ಧ್ವನಿ!

ಸಂಗತ

‘ವಂದೇ ಮಾತರಂ’ ಗೀತೆಯ ಕಥೆ–ವ್ಯಥೆ

ದೇಶಪ್ರೇಮ ಹಾಗೂ ಸ್ವಾತಂತ್ರ್ಯದ ಸ್ಫೂರ್ತಿಯನ್ನು ಪರಿಣಾಮಕಾರಿಯಾಗಿ ಕಟ್ಟಿಕೊಡುವ ‘ವಂದೇ ಮಾತರಂ’ ಗೀತೆಗೆ ಈಗ 150 ವರ್ಷ ತುಂಬಿದ ಸಂಭ್ರಮ.

• ಸಿ.ಎನ್. ರಾಮಚಂದ್ರನ್

ಕಾದಂಬರಿಯೊಂದರಲ್ಲಿ ಬರುವ ಗೀತೆಯೊಂದು 150 ವರ್ಷಗಳ ನಂತರವೂ ಪ್ರಸ್ತುತವಾಗಿದ್ದು, ಅದು ವಾದ–ವಿವಾದಗಳಿಗೆ ಕಾರಣವಾಗುತ್ತದೆ ಎನ್ನುವುದೇ ಸಾಹಿತ್ಯಲೋಕದಲ್ಲಿ ಒಂದು ಅದ್ಭುತ. ಇಷ್ಟೇ ಅಲ್ಲದೆ, ಆ ಗೀತೆಯ 150ನೇ ವಾರ್ಷಿಕೋತ್ಸವದ ಉದ್ಘಾಟನೆ ಪ್ರಧಾನಮಂತ್ರಿಗಳಿಂದ ಆಗುತ್ತದೆ; ಮತ್ತು ಪ್ರಧಾನಮಂತ್ರಿಗಳು ಈ ಗೀತೆ ವರ್ಷವಿಡೀ ಎಲ್ಲಾ ಶಾಲೆಗಳಲ್ಲಿಯೂ ಹಾಡಲ್ಪಡಬೇಕು ಎಂದು ಹೇಳುತ್ತಾರೆ. ಹೀಗೆ ವಿಶೇಷ ಗೌರವವನ್ನು ಪಡೆಯುವ ಆ ಗೀತೆ ಭಾರತದಲ್ಲಿ ಚಿರಪರಿಚಿತವಾದ ‘ವಂದೇ ಮಾತರಂ’.

ಸ್ವಾತಂತ್ರ್ಯ ಪೂರ್ವದಲ್ಲಿ ಬಂಕಿಮಚಂದ್ರ ಚಟರ್ಜಿಯವರು ಬಂಗಾಳದಲ್ಲಿ ಬಹು ವಿಜೃಂಭಣೆಯಿಂದ ನಡೆಯುವ ದುರ್ಗಾಪೂಜೆಯಿಂದ ಪ್ರಭಾವಿತರಾಗಿ, ನವೆಂಬರ್ 7, 1875ರಲ್ಲಿ ಈ ಹಾಡನ್ನು ಬರೆದರು; ನಂತರ ಅದು ಅವರ ‘ಆನಂದಮಠ’ ಎಂಬ ಕಾದಂಬರಿಯಲ್ಲಿ ಬಳಕೆಯಾಯಿತು. ಕಾದಂಬರಿಯ ಕೊನೆಯಲ್ಲಿ ಈ ಗೀತೆ ಸನ್ಯಾಸಿಗಳಿಂದ ಹಾಡಲ್ಪಡುತ್ತದೆ.

ಆರು ಚರಣಗಳಿರುವ ‘ವಂದೇ ಮಾತರಂ’ ಗೀತೆಯು ದೇಶವನ್ನು ತಾಯಿಯಂತೆ ಕಾಣುತ್ತದೆ. ಮೊದಲ ಎರಡು ಚರಣಗಳು ಆ ತಾಯಿಯ ಪ್ರಾಕೃತಿಕ ಸೌಂದರ್ಯವನ್ನು ಮನೋಜ್ಞವಾಗಿ ವರ್ಣಿಸಿದರೆ, ಮೂರನೆಯ ಚರಣವು ಅವಳ ಮಕ್ಕಳ ಅಗಾಧ ಸಂಖ್ಯೆಯನ್ನು ಹಾಗೂ ಶೌರ್ಯವನ್ನು ಭಾವಪೂರ್ಣವಾಗಿ ವರ್ಣಿಸುತ್ತದೆ (‘ನೀನು ಅಬಲೆಯಲ್ಲ; ನಿನ್ನನ್ನು ರಕ್ಷಿಸಲು 70 ದಶಲಕ್ಷ ಕೈಗಳು ಕತ್ತಿ ಹಿಡಿದು ಮೇಲೇಳುತ್ತವೆ’). ನಾಲ್ಕನೆಯ ಚರಣವು ಜ್ಞಾನ, ಧರ್ಮ ಮತ್ತು ಕಲೆಗಳು ತಾಯಿನಾಡಿನಲ್ಲಿಯೇ ನೆಲೆಗೊಂಡಿವೆ ಮತ್ತು ಎಲ್ಲ ದೇವಾಲಯಗಳಲ್ಲಿ ಪೂಜಿಸಲ್ಪಡುವುದು ಆ ತಾಯಿಯ ಮೂರ್ತಿಯೇ ಎಂದು ಮಂಡಿಸುತ್ತದೆ. ಕೊನೆಯಲ್ಲಿ ತಾಯಿನಾಡೇ ದುರ್ಗೆ, ಲಕ್ಷ್ಮಿ ಮತ್ತು ಸರಸ್ವತಿ; ಅಥವಾ ಧರ್ಮ, ಹೃದಯ, ಮತ್ತು ಪ್ರಾಣ ಎಂದು ಕೊಂಡಾಡುತ್ತದೆ. ಒಟ್ಟಾರೆಯಾಗಿ ಹೇಳಬೇಕಾದರೆ, ಬಂಕಿಮರ ದೃಷ್ಟಿಯಲ್ಲಿ, ಬಹುಮುಖೀ ಪರಾಕ್ರಮದ ಹಾಗೂ ದೈವಿಕಗುಣಗಳಿರುವ ಶಕ್ತಿಯೇ ತಾಯಿನಾಡು.



ಸ್ವಾತಂತ್ರ್ಯ ಹೋರಾಟದ ಕಾಲದಲ್ಲಿ ಇಡೀ ದೇಶದ ಸರಿಸುಮಾರು ಎಲ್ಲಾ ಕಾರ್ಯಕ್ರಮಗಳ ಪ್ರಾರಂಭದಲ್ಲಿ ಈ ಗೀತೆ ಹಾಡಲ್ಪಡುತ್ತಿತ್ತು. ಇದರಲ್ಲಿ ಬರುವ ‘ರಿಪು’ (ಶತ್ರು) ಅಂದು ಈ ದೇಶವನ್ನು ಆಳುತ್ತಿದ್ದ ಬ್ರಿಟಿಷರಿಗೆ ಅನ್ವಯವಾಗುತ್ತಿತ್ತು. ಆದರೆ, ಆರು ಭಾಗಗಳಿರುವ ಈ ಗೀತೆಯಲ್ಲಿ ‘ಮೂರನೆಯ ಭಾಗದಿಂದ ಕೊನೆಯವರೆಗೂ ಒಂದು ಧರ್ಮದ (ಹಿಂದೂ ಧರ್ಮದ) ಪ್ರತಿಮೆ–ಪ್ರತೀಕಗಳು ಬರುತ್ತವೆ (ದುರ್ಗೆಯ ಪ್ರತಿಮೆ; ಮಾತೃಭೂಮಿಯನ್ನು ‘ನೀನೇ ಲಕ್ಷ್ಮಿ; ನೀನೇ ಸರಸ್ವತಿ’ ಎಂಬ ವರ್ಣನೆ; ಇತ್ಯಾದಿ); ಒಟ್ಟಾರೆಯಾಗಿ, ಈ ಗೀತೆ ವಿಗ್ರಹಾರಾಧನೆಯನ್ನು ಪ್ರೋತ್ಸಾಹಿಸುತ್ತದೆ ಹಾಗೂ ಇದು ‘ಪ್ರಚ್ಛನ್ನವಾಗಿ’ ಹಿಂದೂ ರಾಷ್ಟ್ರೀಯತೆಯನ್ನು ದೇಶಪ್ರೇಮದ ಹೆಸರಿನಲ್ಲಿ ಹರಡುತ್ತಿದೆ– ಎಂಬ ಕಾರಣವನ್ನು ಕೊಟ್ಟು ಮುಸ್ಲಿಮರು ಈ ಗೀತೆಯನ್ನು ಹಾಡಕೂಡದು ಎಂದು ಮುಸ್ಲಿಂ ಲೀಗ್ 1937ರಲ್ಲಿ, ತನ್ನ ಲಕ್ನೋ ಅಧಿವೇಶನದಲ್ಲಿ ಠರಾವು ಹೊರಡಿಸಿತು. ಹಿಂದೂಗಳಲ್ಲದ ಸ್ವಾತಂತ್ರ್ಯ ಹೋರಾಟಗಾರರಿಗೆ ಈ ಗೀತೆಯನ್ನು ಸಾರ್ವಜನಿಕವಾಗಿ ಪ್ರಸ್ತುತಪಡಿಸುವುದು ಮುಜುಗರ ಉಂಟು ಮಾಡುತ್ತದೆ’ ಎಂದು ಅನೇಕ ಹಿಂದೂ ನಾಯಕರಿಗೂ ಅನಿಸುತ್ತಿತ್ತು. ಪರಿಣಾಮತಃ, 1937ರಲ್ಲಿ ನಡೆದ ಕಾಂಗ್ರೆಸ್ ವರ್ಕಿಂಗ್ ಕಮಿಟಿಯಲ್ಲಿ, ಟ್ಯಾಗೋರರ ಸಲಹೆಯಂತೆ, ಸಾರ್ವಜನಿಕ ಸಭೆ–ಸಮಾರಂಭಗಳಲ್ಲಿ ಈ ಕವನದ ಮೊದಲ ಎರಡು ಭಾಗಗಳನ್ನು ಮಾತ್ರ ಹಾಡಬೇಕು ಎಂಬ ನಿರ್ಣಯವನ್ನು ಕೈಗೊಳ್ಳಲಾಯಿತು. ಅಂದಿನಿಂದ ‘ವಂದೇ ಮಾತರಂ’ ಗೀತೆಯು ರಾಜಕೀಯ ಕ್ಷೇತ್ರವನ್ನು ಪ್ರವೇಶಿಸಿತು ಹಾಗೂ ಅದು ‘ಹಿಂದೂಗಳ/ ಹಿಂದೂ ಧರ್ಮಕ್ಕೆ ಸೇರಿದ ಗೀತೆ’ ಎಂಬ ಭಾವನೆ ಎಲ್ಲೆಡೆ ಹರಡಿತು.

ರಾಜಕೀಯ ಸ್ಪರ್ಶದಿಂದಾಗಿ, ಈ ಗೀತೆ ಸ್ವಾತಂತ್ರ್ಯ ಹೋರಾಟವನ್ನೇ ಇಬ್ಭಾಗ ಮಾಡಿತು: ಸ್ವಾತಂತ್ರ್ಯ ನಿಕಟ ಪೂರ್ವದಲ್ಲಿ ಹಾಗೂ ಸ್ವಾತಂತ್ರ್ಯಾನಂತರ ನಡೆಯುತ್ತಿದ್ದ ಹಿಂದೂ-ಮುಸ್ಲಿಂ ಕೋಮುಗಲಭೆಗಳಲ್ಲಿ, ಒಂದು ಕೋಮಿನವರು ಮತ್ತೊಂದು ಕೋಮಿನವರನ್ನು ಪುರಸ್ಕರಿಸಲು ಅಥವಾ ತಿರಸ್ಕರಿಸಲು ಈ ಗೀತೆಯನ್ನು ಹಾಡುತ್ತಿದ್ದರು ಅಥವಾ ಹಾಡುವುದನ್ನು ನಿಷೇಧಿಸುತ್ತಿದ್ದರು. ಈ ನೆನಪುಗಳ ಕಾರಣದಿಂದ, ಸ್ವಾತಂತ್ರ್ಯಾನಂತರ ಈ ಗೀತೆಯನ್ನು ‘ನ್ಯಾಷನಲ್ ಸಾಂಗ್’ ಎಂದು ಗೌರವಿಸಿದರೂ ಸರ್ಕಾರಿ ಕಾರ್ಯಕ್ರಮಗಳಲ್ಲಿ ಹಾಡುವುದು ಕಡ್ಡಾಯವಾಗಲಿಲ್ಲ; ಆ ಗೌರವ ‘ಜನಗಣಮನ’ ಗೀತೆಗೆ ಸಂದಿತು; ಹಾಗೂ ‘ವಂದೇ ಮಾತರಂ’ ಗೀತೆಯನ್ನು ಪ್ರಸ್ತುತಪಡಿಸುವುದು ಅಥವಾ ಬಿಡುವುದು ಕಾರ್ಯಕ್ರಮವನ್ನು ಆಯೋಜಿಸಿದ್ದವರ ಆಯ್ಕೆಗೆ ಬಿಡಲಾಯಿತು. ಇಂದೂ ಕೂಡ ಆಳುವವರಿಗೆ ಈ ಗೀತೆಯನ್ನು ಕುರಿತು ಒಂದು ಬಗೆಯ ಅಳುಕು ಇದ್ದೇ ಇದೆ ಎಂದು ಕಾಣುತ್ತದೆ; ಪ್ರಾಯಃ, ಈ ಕಾರಣದಿಂದಲೇ ಗೀತೆಯ 150ನೇ ವರ್ಷದ ಸಂಭ್ರಮವನ್ನು ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಯಾವ ಸಾರ್ವಜನಿಕ ಕಾರ್ಯಕ್ರಮದ ಮೂಲಕವೂ ತೋರಿಸಲಿಲ್ಲ.

ಸುಶ್ರಾವ್ಯವಾಗಿ ಹಾಡಲು ಅನುವಾಗುವ, ಬೆಂಗಾಲಿ–ಸಂಸ್ಕೃತ ಭಾಷೆಯಲ್ಲಿರುವ, ಪ್ರಾರಂಭದಿಂದ ಕೊನೆಯವರೆಗೂ ಎದ್ದು ಕಾಣುವ ಮೆಚ್ಚುಗೆ–ಗೌರವ–ಪ್ರೀತಿ ಭಾವನೆಗಳ ಸಂಗಮವಾಗಿರುವ, ಗಾಂಧೀಜಿಯವರಿಗೆ ತುಂಬಾ ಆಪ್ತವಾಗಿದ್ದ ಹಾಗೂ ಒಂದು ಸಫಲ ಕಾಣ್ಕೆಯಾಗಿರುವ ‘ವಂದೇ ಮಾತರಂ’ ಗೀತೆಗೆ ರಾಜಕೀಯ ಕಾರಣಗಳಿಗಾಗಿ ಮತೀಯ ಬಣ್ಣ ಬಂದದ್ದು ದುರದೃಷ್ಟಕರ.

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. To know more about The Printers (Mysore) Private Ltd, visit www.printersmysore.com.

ನ್ಯಾಯಾಂಗ ಬದಲಾಗಬೇಕಿದೆ ನಿಂದನೆ ಪರಿಭಾಷೆ

ದೇಶದ ನ್ಯಾಯಾಂಗದ ಆಡಳಿತದ ಪರಿಭಾಷೆಯಲ್ಲಿ ಕೆಳ ಹಂತದ ಸಿಬ್ಬಂದಿಯನ್ನು ಸಂಬೋಧಿಸಲು ಬಳಕೆಯಲ್ಲಿರುವ ಕೆಲವು ಪದಗಳು ನಿಂದನಾತ್ಮಕವಾಗಿದ್ದು, ಅವುಗಳು ಮನುಷ್ಯನ ಘನತೆಗೆ ಧಕ್ಕೆ ತರುತ್ತಿವೆ. ವಸಾಹತುಶಾಹಿ, ಊಳಿಗಮಾನ್ಯ ಮತ್ತು ಜಾತಿ ಪದ್ಧತಿಗೆ ಸಂಬಂಧಿಸಿದ ಶ್ರೇಣೀಕರಣದ ನಿಯಮಗಳು ನ್ಯಾಯಾಂಗದ ನಿಂದನಾತ್ಮಕ ವೃತ್ತಿಸೂಚಕಗಳ ಹುಟ್ಟಿಗೆ ಕಾರಣವಾಗಿವೆ. ಅವು ಸಂವಿಧಾನದ ಒಳಗೊಳ್ಳುವ ಮತ್ತು ಮೇಲುಕೀಳುರಹಿತ ವ್ಯವಸ್ಥೆ ನಿರ್ಮಾಣದ ಆಶಯಕ್ಕೆ ವಿರುದ್ಧವಾಗಿವೆ. ಹಾಗಾಗಿ, ಅವುಗಳ ಬದಲಾಗಿ ಮನುಷ್ಯನ ಘನತೆಯನ್ನು ಕಾಪಾಡುವ, ಗೌರವಿಸುವ ಪದಗಳನ್ನು ಬಳಸಬೇಕು ಎಂದು ಸುಪ್ರೀಂ ಕೋರ್ಟ್‌ನ ಸಂಶೋಧನೆ ಮತ್ತು ಯೋಜನಾ ಕೇಂದ್ರದ ಇತ್ತೀಚಿನ ವರದಿ ಹೇಳಿದೆ

ಕೋರ್ಟ್‌ಗಳ ಆಡಳಿತದಲ್ಲಿ ಬಳಕೆಯಲ್ಲಿರುವ ಅವಹೇಳನಕಾರಿ ಪದಗಳ ಬಗ್ಗೆ 'ಸುಪ್ರೀಂ' ವರದಿ

ಪ್ರಜಾವಾಣಿ ವಾರ್ತೆ

ಸಂವಿಧಾನದ ಆಶಯಗಳು ಮತ್ತು ತತ್ವಗಳಿಗೆ ವಿರುದ್ಧವಾಗಿ ದೇಶದ ನ್ಯಾಯಾಂಗ ವ್ಯವಸ್ಥೆಯಲ್ಲಿ ಕೆಲವು ನಿಂದನಾತ್ಮಕ ವೃತ್ತಿಸೂಚಕ ಪದಗಳು ಬಳಕೆಯಲ್ಲಿರುವುದರ ಬಗ್ಗೆ ಸುಪ್ರೀಂ ಕೋರ್ಟ್‌ನ ವರದಿಯೊಂದು ಗಮನ ಸೆಳೆದಿದೆ. ನ್ಯಾಯಾಂಗದಲ್ಲಿ ಅಸಮಾನತೆಯ ಭಾಷೆ ಬಳಕೆಯಲ್ಲಿದೆ ಎಂದು ಸುಪ್ರೀಂ ಕೋರ್ಟ್‌ನ ಸಂಶೋಧನೆ ಮತ್ತು ಯೋಜನಾ ಕೇಂದ್ರದ ವರದಿ ಅಭಿಪ್ರಾಯಪಟ್ಟಿದೆ. ಸುಪ್ರೀಂ ಕೋರ್ಟ್ ಮತ್ತು 25 ಹೈಕೋರ್ಟ್‌ಗಳ ಸೇವಾ ಸೇವಾ ನಿಯಮಗಳು, ಚಾರಿತ್ರಿಕ ದಾಖಲೆಗಳು, ನ್ಯಾಯಶಾಸ್ತ್ರ ಇತ್ಯಾದಿಗಳನ್ನು ಅಧ್ಯಯನ ಮಾಡಿ ವರದಿಯಲ್ಲಿ ವಿವಿಧ ಅವಹೇಳನಕಾರಿ ವೃತ್ತಿಸೂಚಕ ಪದಗಳನ್ನು ಪಟ್ಟಿ ಮಾಡಲಾಗಿದೆ.

ಸಂವಿಧಾನವು ಪ್ರತಿಯೊಬ್ಬ ಭಾರತೀಯನಿಗೂ ಸಮಾನತೆ, ಭ್ರಾತೃತ್ವ ಮತ್ತು ಘನತೆಯನ್ನು ಖಾತರಿಪಡಿಸುತ್ತದೆ. ಆದರೆ, ಸುಪ್ರೀಂ ಕೋರ್ಟ್, ಹೈಕೋರ್ಟ್‌ಗಳಲ್ಲಿ ಆಡಳಿತಾತ್ಮಕವಾಗಿ ಬಳಸಲಾಗುತ್ತಿರುವ ಕೆಲವು ವೃತ್ತಿಸೂಚಕ ಪದಗಳು ಅದಕ್ಕೆ ಧಕ್ಕೆ ತರುವಂತಿವೆ. ಈ ಪದಗಳು ದೇಶದಲ್ಲಿ ಆಳವಾಗಿ ಬೇರುಬಿಟ್ಟಿರುವ ವಸಾಹತುಶಾಹಿ ಮತ್ತು ಜಾತಿ ಶ್ರೇಣೀಕರಣದ ಫಲವಾಗಿದ್ದು, ಇವುಗಳ ಸಾಂಸ್ಥಿಕ ಬಳಕೆಯು ಅಸ್ತಿತ್ವದಲ್ಲಿರುವ ಶ್ರೇಣೀಕೃತ ಸಾಮಾಜಿಕ ಸಂರಚನೆಯನ್ನು ಬಲಪಡಿಸುತ್ತಿದೆ.

> ವರದಿಯ ಪ್ರಕಾರ, 1973ರ ಕರ್ನಾಟಕ ಹೈಕೋರ್ಟ್ (ಸೇವೆಗಳು ಮತ್ತು ನೇಮಕಾತಿ ಷರತ್ತುಗಳು) ಸೇವಾ ನಿಯಮಗಳಲ್ಲಿ ಉಲ್ಲೇಖಿಸಲಾಗಿರುವ ಮನುಷ್ಯನ ಘನತೆಗೆ ಧಕ್ಕೆ ತರುವ ಪದಗಳು: ಕೋರ್ಟ್ ಸರ್ವೆಂಟ್, ಜಮದಾರ್, ಡ್ರೈವರ್, ಧೋಬಿ, ಪ್ಯೂನ್, ದಫ್ತರ್‌ಬಂದ್, ಚೌಕಿದಾರ್, ಮುಚಿ, ಮಾಲಿ

ಆಡಳಿತ ಪರಿಭಾಷೆಯಾಗಿ ಇಂಥ ಪದಗಳನ್ನು ಪದೇ ಪದೇ ಬಳಸುವುದರಿಂದ ಚಾರಿತ್ರಿಕವಾದ ಅಸಮಾನತೆಯನ್ನು ಪುನರ್ ಪ್ರತಿಷ್ಠಾಪಿಸಿದಂತಾಗುತ್ತಿದೆ. ಜತೆಗೆ, 'ಇದು ನ್ಯಾಯಾಂಗ ವ್ಯವಸ್ಥೆಯಲ್ಲಿ ತಪ್ಪಾದ ಗುರುತಿಸುವಿಕೆಗೆ ಕಾರಣವಾಗುತ್ತಿದೆ. ವಿವಿಧ ಹೈಕೋರ್ಟ್‌ಗಳ ಸೇವಾ ನಿಯಮಗಳಲ್ಲೇ ಉಲ್ಲೇಖವಾಗಿರುವ ಈ ಪದಗಳು ಸಂವಿಧಾನದ ತತ್ವಗಳಿಗೆ ವಿರುದ್ಧವಾಗಿದೆ ಎಂದು ವರದಿ ಹೇಳಿದೆ.

ಈ ದಿಸೆಯಲ್ಲಿ ಸುಪ್ರೀಂ ಕೋರ್ಟ್ ಸಂಶೋಧನೆ ಮತ್ತು ಯೋಜನಾ ಕೇಂದ್ರವು, ಕೆಲವು ನಿಂದನಾತ್ಮಕವಾದ ವೃತ್ತಿಸೂಚಕ ಪದಗಳ ನಿಷ್ಪತ್ತಿ, ಬಳಕೆ, ಅರ್ಥವಿಸ್ತಾರವನ್ನು ವಿಶ್ಲೇಷಣೆಗೊಳಪಡಿಸಿದೆ. ನ್ಯಾಯಾಂಗದ ಆಡಳಿತ ಪರಿಭಾಷೆಯಲ್ಲಿ ಹಲಾಲ್‌ಖೋರ್, ಸ್ಕ್ಯಾವೆಂಜರ್, ಪ್ಯೂನ್, ಸೇವಕ ಮುಂತಾದ ಪದಗಳು ಬಳಕೆಯಾಗುತ್ತಿವೆ. ಈ ವೃತ್ತಿಸೂಚಕ ಪದಗಳು ನಿಂದನಾತ್ಮಕವಾಗಿದ್ದು, ಇದು ಸಂವಿಧಾನದ 14, 15, 16, 17, 21 ಮತ್ತು 23ನೇ ವಿಧಿಗಳ ಉಲ್ಲಂಘನೆಯಾಗಿದೆ. ಇವು ಸಂಸ್ಥೆಗಳಲ್ಲಿನ ಅಸಮಾನತೆ ಮತ್ತು ಅಸ್ಪೃಶ್ಯತೆ ಆಚರಣೆಗೆ ಸಂಬಂಧಿಸಿದ ಆಚರಣೆಗಳ ಪ್ರತಿರೂಪವಾಗಿವೆ ಎಂದಿದೆ.

ಆಡಳಿತ ಪರಿಭಾಷೆಯನ್ನು ಸಂವಿಧಾನದ ಭಾಷೆಯೊಂದಿಗೆ, ಆಶಯಗಳೊಂದಿಗೆ ಬೆಸೆಯಬೇಕು. ನ್ಯಾಯಾಂಗದ ಆಶಯಗಳು ಮತ್ತು ಅದರ ಆಚರಣೆಯ ನಡುವಿನ ಅಂತರವನ್ನು ಹೋಗಲಾಡಿಸಬೇಕು. ನ್ಯಾಯಾಂಗದ ಆಡಳಿತ ಪರಿಭಾಷೆಯ ಸ್ವರೂಪ ಮೊದಲ ಹೆಜ್ಜೆಯಾಗಬೇಕು ಎಂದಿರುವ ವರದಿಯು ಈ ನಿಟ್ಟಿನಲ್ಲಿ ಮೊದಲು ಕೆಲವು ವೃತ್ತಿಸೂಚಕ ಪದಗಳನ್ನು ಬದಲಿಸಬೇಕು ಎಂದು ಶಿಫಾರಸು ಮಾಡಿದೆ. ಹೀಗಾಗಿ ಸುಪ್ರೀಂ ಕೋರ್ಟ್ ಮತ್ತು ಹೈಕೋರ್ಟ್‌ಗಳ ಸೇವಾ ನಿಯಮಗಳಲ್ಲಿ ಬದಲಾವಣೆ ಆಗಬೇಕಿದ್ದು, ಹುದ್ದೆ ಆಧಾರಿತ, ಕೆಲಸ ಆಧಾರಿತ ವೃತ್ತಿ ಸೂಚಕಗಳಿಂದ ಹೊರಬರಬೇಕಿದೆ ಎಂದು ಅಭಿಪ್ರಾಯಪಟ್ಟಿರುವ ವರದಿಯು, ನಿಂದನಾತ್ಮಕ ಪದಗಳಿಗೆ ಪರ್ಯಾಯವಾಗಿ ಬಳಸಬಹುದಾದ ಪದಗಳನ್ನು ಪಟ್ಟಿ ಮಾಡಿದೆ.

ನ್ಯಾ. ಗವಾಯಿ ಸೂಚನೆ

ಇತ್ತೀಚೆಗೆ ನಿವೃತ್ತರಾದ ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ (ಸಿಜೆಐ) ಬಿ.ಆರ್. ಗವಾಯಿ ಅವರು, ತಾವು ನಿವೃತ್ತರಾಗುವ ಮುನ್ನ ಈ ವರದಿಯನ್ನು ಎಲ್ಲ ರಾಜ್ಯಗಳ ಹೈಕೋರ್ಟ್‌ಗಳಿಗೂ ಕಳುಹಿಸಿದ್ದಾರೆ. 'ಆಡಳಿತ ಪರಿಭಾಷೆಯನ್ನು ಬದಲಿಸುವುದ ಸಣ್ಣಕ್ರಿಯೆಯ ಮೂಲಕ ನ್ಯಾಯಾಂಗದಲ್ಲಿರುವ ಪ್ರತಿ ವ್ಯಕ್ತಿಯ ಘನತೆ ಮತ್ತು ಗೌರವವನ್ನು ಆತ ಯಾವುದೇ ಹುದ್ದೆಯಲ್ಲಿದ್ದರೂ ಎತ್ತಿಹಿಡಿಯಬೇಕಿದೆ. ಹೀಗಾಗಿ, ಆದಷ್ಟು ಬೇಗ ಸೇವಾ ನಿಯಮಗಳಲ್ಲಿ ತಿದ್ದುಪಡಿ ತರಬೇಕು' ಎಂದು ಸೂಚಿಸಿದ್ದಾರೆ.



ಆಧಾರ: ರಿಫಾರ್ಮಿಂಗ್ ಅಡ್ಮಿನಿಸ್ಟ್ರೇಟಿವ್ ನಾಮನ್‌ಕ್ಲೇಚರ್ ಇನ್ ದ ಇಂಡಿಯನ್ ಜ್ಯುಡೀಷಿಯರಿ; ಎಂಬೆಡ್ಡಿಂಗ್ ಡಿಗ್ನಿಟಿ ಆ್ಯಂಡ್ ಈಕ್ವಾಲಿಟಿ ಇನ್ ಸರ್ವೀಸ್ ರೂಲ್ಸ್

ವರದಿ ಶಿಫಾರಸು ಮಾಡಿರುವ ಪರ್ಯಾಯ ಪದಗಳು

ಹಾಲಿ ಪದ	ಪರ್ಯಾಯ ಪದ
ಬಸ್ತಾ ಬರ್ದಾರ್	ಡಾಕ್ಯುಮೆಂಟ್ ಹ್ಯಾಂಡ್ಲರ್ (ದಾಖಲೆಗಳ ನಿರ್ವಾಹಕ)
ಬಂಡಲ್ ಲಿಫ್ಟರ್	ಮೆಟೀರಿಯಲ್ ಕೋಆರ್ಡಿನೇಟರ್ (ಸಾಮಗ್ರಿ ಸಮನ್ವಯಕಾರ)
ಚೋಬದಾರ್	ಸೆರೆಮೋನಿಯಲ್ ಅಸಿಸ್ಟೆಂಟ್ (ಶಿಷ್ಟಾಚಾರ ಸಹಾಯಕ)
ಚೌಕಿದಾರ್	ಸೆಕ್ಯೂರಿಟಿ ಪರ್ಸನಲ್ (ಭದ್ರತಾ ಸಿಬ್ಬಂದಿ)
ಕೂಲಿ	ಫ್ರೈಟ್ ಅಸಿಸ್ಟೆಂಟ್ (ಸರಕು ಸಹಾಯಕ)
ಕೋರ್ಟ್ ಸರ್ವೆಂಟ್	ಜುಡಿಷಿಯಲ್ ಸಪೋರ್ಟ್ ಸ್ಟಾಫ್ (ನ್ಯಾಯಾಂಗ ನೆರವು ಸಿಬ್ಬಂದಿ)
ಸೈಕಲ್ ಸವಾರ್	ಲಾಜಿಸ್ಟಿಕ್ಸ್ ಅಸಿಸ್ಟೆಂಟ್ (ಸಾಗಣೆ ಸಹಾಯಕ)
ದಫ್ತರಿ/ದಫ್ತರ್‌ಬಂದ್/ ದಫ್ತಾದಾರ್	ರೆಕಾರ್ಡ್ಸ್ ಅಸಿಸ್ಟೆಂಟ್/ಕೋರ್ಟ್ ಕೀಪರ್ (ದಾಖಲೆಗಳ ಸಹಾಯಕ)
ದರಬಾನ್	ಆಕ್ಸೆಸ್ ಕಂಟ್ರೋಲ್ ಆಫೀಸರ್ (ನಿಯಂತ್ರಣಾಧಿಕಾರಿ)
ಧೋಬಿ	ಲಾಂಡ್ರಿ ಆಪರೇಟರ್ (ಬಟ್ಟೆ ನಿರ್ವಾಹಕ)
ಡ್ರೈವರ್	ಟ್ರಾನ್ಸ್‌ಪೋರ್ಟ್ ಅಸಿಸ್ಟೆಂಟ್/ಷೋಫರ್ (ಸಾರಿಗೆ ಸಹಾಯಕ/ಚಾಲಕ)
ಫರಾಶ್/ಫ್ರಾಶ್	ಮೇಂಟೆನೆನ್ಸ್ ಅಸಿಸ್ಟೆಂಟ್/ ಸೂಪರ್‌ವೈಸರ್ (ನಿರ್ವಹಣಾ ಸಹಾಯಕ/ ಕೊಠಡಿಗಳ ಉಸ್ತುವಾರಿ)
ಹಲಾಲ್‌ಖೋರ್	ಸ್ಯಾನಿಟೇಷನ್ ಅಟೆಂಡೆಂಟ್ (ನೈರ್ಮಲ್ಯ ಪಾಲಕ)
ಹಮಾಲ್	ಲಾಜಿಸ್ಟಿಕ್ಸ್ ಸ್ಟಾಫ್ (ಸಾಗಣೆ ಸಿಬ್ಬಂದಿ)
ಹವಿಲ್ದಾರ್	ಸೆಕ್ಯೂರಿಟಿ ಸೂಪರ್‌ವೈಸರ್ (ಭದ್ರತಾ ಉಸ್ತುವಾರಿ)
ಜಮದಾರ್ (ಸಫಾಯಿವಾಲಾ)	ಸೂಪರ್‌ವೈಸರ್ (ಕ್ಲೀನಿಂಗ್ ಸರ್ವೀಸಸ್) (ಸ್ವಚ್ಛತಾ ಸೇವೆಯ ಉಸ್ತುವಾರಿ)
ಜಮದಾರ್	ಆಪರೇಷನ್ಸ್ ಸೂಪರ್‌ವೈಸರ್/ಅಷರ್ (ಕಾರ್ಯಾಚರಣೆ ಉಸ್ತುವಾರಿ/ ದ್ವಾರಾಧಿಕಾರಿ)
ಮಾಲನ್	ಹಾರ್ಟಿಕಲ್ಚರ್ ಅಟೆಂಡೆಂಟ್/ಲಾನ್ ಅಟೆಂಡೆಂಟ್ (ಉದ್ಯಾನ ಪಾಲಕಿ)
ಮಾಲಿ	ಹಾರ್ಟಿಕಲ್ಚರ್ ಅಟೆಂಡೆಂಟ್/ಲಾನ್ ಅಟೆಂಡೆಂಟ್ (ಉದ್ಯಾನ ಪಾಲಕ)
ಮಶಾಲ್ಚಿ	ಕಿಚನ್ ಅಸಿಸ್ಟೆಂಟ್ (ಅಡುಗೆ ಸಹಾಯಕ/ಸಹಾಯಕಿ)
ಮುಲಿಯಾ	ಯುನಿಟ್ ವರ್ಕರ್ (ಕಾರ್ಮಿಕ)
ನಾಯ್ಕ್	ಜುಡಿಷಿಯಲ್ ಪ್ರಾಸೆಸ್ ಅಸಿಸ್ಟೆಂಟ್ (ನ್ಯಾಯಾಂಗ ಪ್ರಕ್ರಿಯೆ ಸಹಾಯಕ)
ಪ್ಯೂನ್/ಆರ್ಡರ್ಲಿ	ಆಫೀಸ್ ಅಸಿಸ್ಟೆಂಟ್/ಕೋರ್ಟ್ ಅಟೆಂಡೆಂಟ್ (ಕಚೇರಿ ಸಹಾಯಕ/ ನ್ಯಾಯಾಲಯ ಪಾಲಕ)
ರೂಮ್ ಬಾಯ್	ಹೌಸ್‌ಕೀಪಿಂಗ್ ಅಟೆಂಡೆಂಟ್ (ಮನೆವಾರ್ತೆ ಪಾಲಕ)
ಸಫಾಯಿವಾಲ/ಸಫಾಯಿ ಕರ್ಮಚಾರಿ	ಕ್ಲೀನಿಂಗ್ ಅಟೆಂಡೆಂಟ್/ಸೂಪರ್‌ವೈಸರ್ (ಸ್ವಚ್ಛತಾ ಪಾಲಕ/ಉಸ್ತುವಾರಿ)
ಸ್ಕ್ಯಾವೆಂಜರ್	ಸ್ಯಾನಿಟೇಷನ್ ಅಟೆಂಡೆಂಟ್ (ನೈರ್ಮಲ್ಯ ಪಾಲಕ)
ಸೇವಕ	ಸರ್ವೀಸ್ ಪರ್ಸನಲ್ (ಸೇವಾ ಸಿಬ್ಬಂದಿ)
ಸ್ವೀಪರ್	ಕ್ಲೀನಿಂಗ್ ಅಟೆಂಡೆಂಟ್/ಸ್ಯಾನಿಟೇಷನ್ ಅಟೆಂಡೆಂಟ್ (ಸ್ವಚ್ಛತಾ/ ನೈರ್ಮಲ್ಯ ಪಾಲಕ/ಪಾಲಕಿ)
ವಾಚ್ ಆ್ಯಂಡ್ ವಾರ್ಡ್	ಸೆಕ್ಯೂರಿಟಿ ಸೂಪರ್‌ವೈಸರ್ (ಭದ್ರತಾ ಉಸ್ತುವಾರಿ)
ವಾಟರ್‌ಮ್ಯಾನ್/ಭಿಶ್ತಿ	ವಾಟರ್ ಸಪ್ಲೈ ಅಸಿಸ್ಟೆಂಟ್ (ನೀರು ಪೂರೈಕೆ ಸಹಾಯಕ)

ವಸಾಹತುಶಾಹಿ ಆಡಳಿತದ ಅವಹೇಳನಕಾರಿ ಪದಗಳು

1 **ಕೋರ್ಟ್ ಸರ್ವೆಂಟ್ (ನ್ಯಾಯಾಲಯ ಸಹಾಯಕ):** ಸುಪ್ರೀಂ ಕೋರ್ಟ್, ಅಲಹಾಬಾದ್, ದೆಹಲಿ, ಗುವಾಹಟಿ, ಕರ್ನಾಟಕ ಮತ್ತು ಮಣಿಪುರ ಹೈಕೋರ್ಟ್‌ಗಳಲ್ಲಿ ಇದರ ಬಳಕೆ ಇದೆ. ಬ್ರಿಟನ್ ಸಾಂವಿಧಾನಿಕ ಚೌಕಟ್ಟಿನಲ್ಲಿ ಈ ಪದ ಬಳಕೆಯ ಇತಿಹಾಸವಿದೆ. ಕಾನೂನಾತ್ಮಕವಾಗಿ ಈ ಪದವು ಸಂವಿಧಾನದಲ್ಲಿ ಹೇಳಲಾದ ಸಮಾನತೆ ಮತ್ತು ಘನತೆಯ ಮಾನದಂಡಗಳಿಗೆ ವಿರುದ್ಧವಾಗಿದೆ

2 **ಚೋಬದಾರ್:** ಬಾಂಬೆ ಹೈಕೋರ್ಟ್, ಗುಜರಾತ್ ಮತ್ತು ಮದ್ರಾಸ್ ಹೈಕೋರ್ಟ್‌ಗಳ ಸೇವಾ ನಿಯಮಗಳಲ್ಲಿ ಈ ಪದವನ್ನು ಕಾಣಬಹುದು. ಚೋಬದಾರ್ ಅಂದರೆ ಬೆಳ್ಳಿಯ ದಂಡವನ್ನು ಹಿಡಿಯುವ ವ್ಯಕ್ತಿ ಮತ್ತು ಪ್ರಭಾವಿ ಅಥವಾ ಉನ್ನತ ಹುದ್ದೆಯನ್ನು ಹೊಂದಿರುವ ವ್ಯಕ್ತಿಯ ಸೇವಕ. ನ್ಯಾಯಾಲಯದಲ್ಲಿ ಇದೀಗ ಶಿಷ್ಟಾಚಾರದ ಭಾಗ. ಅತ್ಯಂತ ಮುಖ್ಯ, ಪ್ರಭಾವಿ ವ್ಯಕ್ತಿಯನ್ನು ಕಾಯುವವನು ಎಂಬ ವಿಶ್ಲೇಷಣೆ ಇರುವುದರಿಂದ ಈ ಪದವು ನಿಂದನಾತ್ಮಕವಾದುದು

3 **ಚೌಕೀದಾರ್:** ಕಾವಲುಗಾರ ಅಥವಾ ಆರೈಕೆದಾರ ಎಂಬುದು ಇದರ ಅರ್ಥ. ಕರ್ನಾಟಕ, ಅಲಹಾಬಾದ್, ಆಂಧ್ರ ಪ್ರದೇಶ, ಬಾಂಬೆ, ಛತ್ತೀಸಗಢ, ಗುವಾಹಟಿ, ಹಿಮಾಚಲ ಪ್ರದೇಶ, ಜಾರ್ಖಂಡ್, ಮಧ್ಯಪ್ರದೇಶ, ಮಣಿಪುರ, ಮೇಘಾಲಯ, ಒಡಿಶಾ, ಪಟ್ನಾ, ಪಂಜಾಬ್ ಮತ್ತು ಹರಿಯಾಣ, ಸಿಕ್ಕಿಂ ಮತ್ತು ಉತ್ತರಾಖಂಡ ಹೈಕೋರ್ಟ್‌ಗಳಲ್ಲಿ ಇದು ಬಳಕೆಯಲ್ಲಿದೆ. ಈ ಪದದ ಮೂಲವು ಯಜಮಾನಿಕೆ ಮತ್ತು ವಶಾಹತುಶಾಹಿ ಕಾಲಕ್ಕೆ ಸೇರಿದ್ದು. ಆ ಕಾಲದಲ್ಲಿ ಜಮೀನ್ದಾರ ಅಥವಾ ಅಧಿಕಾರಿಯ ಆಸ್ತಿಯನ್ನು ಕಾಯುತ್ತಿದ್ದವ ಚೌಕೀದಾರ

4 **ಕೂಲಿ:** ಅಲಹಾಬಾದ್ ಹೈಕೋರ್ಟ್ ಅಧಿಕಾರಿಗಳು ಸಿಬ್ಬಂದಿ ಸೇವಾ ನಿಯಮಗಳಲ್ಲಿ ಇದರ ಉಲ್ಲೇಖ ಇದೆ. ಕೂಲಿ ಪದದ ಮೂಲ ಭಾರತದಲ್ಲಿರುವ ಕೋಲಿ ಜಾತಿ, ತಮಿಳು ಪದ 'ಕುಲಿ' (ಸಂಬಳ ಅಥವಾ ಕಾರ್ಮಿಕ) ಮತ್ತು ಟರ್ಕಿ ಪದ 'ಕುಲಿ'ಯಲ್ಲಿದೆ (ಗುಲಾಮ) ಎಂದು ಹೇಳಲಾಗುತ್ತದೆ. ಈ ಪದವು ದಿನಗೂಲಿ ನೌಕರರನ್ನು ಸೂಚಿಸುತ್ತದೆ. ಆದರೆ, ಇದು ಮನುಷ್ಯರನ್ನು ಘನತೆಯಿಂದ ಕಾಣುವ ಬದಲು, ಅವರ ಶ್ರಮವನ್ನು ಸರಕಿನ ರೀತಿಯಲ್ಲಿ ಬಿಂಬಿಸುತ್ತದೆ

5 **ದರಬಾನ್:** ಬಾಂಬೆ ಹೈಕೋರ್ಟ್, ಕಲ್ಕತ್ತಾ ಹೈಕೋರ್ಟ್, ಗುವಾಹಟಿ ಹೈಕೋರ್ಟ್ ನಿಯಮಗಳಲ್ಲಿ ಇದು ಬಳಕೆಯಲ್ಲಿದೆ. ದರಬಾನ್ ಎಂದರೆ ದ್ವಾರಪಾಲನೆಗಾಗಿ ನಿಯೋಜಿಸಿರುವ ಸೇವಕ ಎಂದರ್ಥ. ಇದು ದಾಸ್ಯದ ವೃತ್ತಿಯಾಗಿರುವುದರಿಂದ ಒಂದು ರೀತಿಯಲ್ಲಿ ಅವಮಾನ ಮಾಡಿದಂತಾಗುತ್ತದೆ

6 **ಹವೀಲ್ದಾರ್:** ಬಾಂಬೆ, ಗುಜರಾತ್ ಮತ್ತು ಆಂಧ್ರ ಪ್ರದೇಶದ ಹೈಕೋರ್ಟ್ ಸೇವಾ ನಿಯಮಗಳಲ್ಲಿ ಇದರ ಉಲ್ಲೇಖ ಇದೆ. ಇದರ ಮೂಲ ಹಿಂದಿಯ ಹವಾಲ್ದಾರ್ ಪದ. ಬ್ರಿಟಿಷರ ಕಾಲದಲ್ಲಿ ಇದು ಸೇನಾ ರ್‍ಯಾಂಕ್‌ನ ಹುದ್ದೆ. ಈಗ ಡಿ ದರ್ಜೆಯ ಹುದ್ದೆಯಾಗಿದೆ

7 **ನಾಯ್ಕ್/ನಾಯಕ್:** ಬಾಂಬೆ, ಗುಜರಾತ್ ಹೈಕೋರ್ಟ್‌ಗಳಲ್ಲಿ ಇದರ ಬಳಕೆ ಇದೆ. ವಿಜಯನಗರ ಆಡಳಿತದಲ್ಲಿ ಚಾಲ್ತಿಯಲ್ಲಿದ್ದ ಪದ. 'ನಾಯಕ'ರು ಸೇನಾ ಮುಖಂಡರು ಮತ್ತು ಆಡಳಿತಗಾರರಾಗಿ ಕಾರ್ಯನಿರ್ವಹಿಸಿದವರು. ಮರಾಠಾ ಸೇನೆಯಲ್ಲೂ ನಾಯ್ಕ್ ಪದ ಬಳಕೆಯಲ್ಲಿತ್ತು. ಅಧಿಕಾರಿಗಳಿಗೆ ನೀಡಲಾಗುತ್ತಿದ್ದ ಪದವಿ ಆಗಿತ್ತು. ಬ್ರಿಟಿಷರ ಆಡಳಿತದಲ್ಲೂ ಇದು ಮುಂದುವರಿದಿತ್ತು. ವಸಾಹತುಶಾಹಿ ಆಡಳಿತದಲ್ಲಿ ಪೊಲೀಸ್ ಮತ್ತು ಸೇನಾ ಹುದ್ದೆಗಳನ್ನು ಬಿಂಬಿಸುವ ಈ ಪದವು ನಾಗರಿಕ–ನ್ಯಾಯಾಂಗ ವ್ಯವಸ್ಥೆಗೆ ಸರಿ ಹೊಂದುವುದಿಲ್ಲ

8 **ಪ್ಯೂನ್:** ಕರ್ನಾಟಕ ಸೇರಿದಂತೆ ಬಹುತೇಕ ಎಲ್ಲ ಹೈಕೋರ್ಟ್‌ಗಳಲ್ಲಿ ಇದನ್ನು ಬಳಸಲಾಗುತ್ತಿದೆ. ಪ್ಯೂನ್ ಎಂದರೆ ದಾಖಲೆಗಳನ್ನು ಕೊಂಡೊಯ್ಯುವ ವ್ಯಕ್ತಿ ಅಥವಾ ಕ್ಲರ್ಕ್ ಸಹಾಯಕ ಎಂದರ್ಥ. ಈ ಪದವು ಶ್ರೇಣೀಕರಣ ಮತ್ತು ಗುಲಾಮಗಿರಿಯನ್ನು ಬಿಂಬಿಸುತ್ತದೆ

9 **ರೂಮ್ ಬಾಯ್:** ಮದ್ರಾಸ್ ಹೈಕೋರ್ಟ್‌ನಲ್ಲಿ ಇದು ಬಳಕೆಯಲ್ಲಿದೆ. ಬ್ರಿಟಿಷರ ಕಾಲದಲ್ಲಿ ಮನೆಕೆಲಸಗಳನ್ನು ಮಾಡುತ್ತಿದ್ದ ಪುರುಷ ಸೇವಕರಿಗೆ ಈ ರೀತಿ ಕರೆಯುತ್ತಿದ್ದರು. ಇದು ಕೂಡ ಸೇವಕತನವನ್ನು ಪ್ರತಿಪಾದಿಸುತ್ತದೆ

10 **ವಾಚ್ ಆ್ಯಂಡ್ ವಾರ್ಡ್:** ಮದ್ರಾಸ್ ಹೈಕೋರ್ಟ್‌ನ ಸೇವಾ ನಿಯಮಗಳಲ್ಲಿ ಇದರ ಉಲ್ಲೇಖ ಇದೆ. ಇಂಗ್ಲೆಂಡ್‌ನಲ್ಲಿ 13ನೇ ಶತಮಾನದಲ್ಲಿ ಹುಟ್ಟಿದ ಪದ ಇದು. ಅಂದರೆ ಭದ್ರತಾ ಸಿಬ್ಬಂದಿ ಅಥವಾ ಕಾವಲುಗಾರ. ಆದರೆ, ಈ ಪದಗಳು ವ್ಯಕ್ತಿಯನ್ನು ಭದ್ರತಾ ವೃತ್ತಿಪರರನ್ನಾಗಿ ಬಿಂಬಿಸುವುದಿಲ್ಲ. ಕಾವಲುಗಾರರನ್ನಾಗಿ ತೋರಿಸುತ್ತದೆ

ಕೀಳು ಕೆಲಸ / ಗುಲಾಮಗಿರಿ ಬಿಂಬಿಸುವ ಪದಗಳು

1 **ಬಸ್ತಾ ಬರ್ದಾರ್/ಬಂಡಲ್ ಲಿಫ್ಟರ್:** ಅಲಹಾಬಾದ್, ರಾಜಸ್ಥಾನ ಮತ್ತು ಉತ್ತರಾಖಂಡ ಹೈಕೋರ್ಟ್ ಸೇವಾ ನಿಯಮಗಳಲ್ಲಿ ಇದರ ಬಳಕೆ ಇದೆ. ನ್ಯಾಯಾಲಯದಲ್ಲಿ ಕಾನೂನು ದಾಖಲೆಗಳು ಸಾಗಣೆ ಮತ್ತು ಅವುಗಳ ನಿರ್ವಹಣೆಯ ಕೆಲಸವನ್ನು ಇದು ವಿವರಿಸುತ್ತದೆ. ಇದು ವ್ಯಕ್ತಿಯೊಬ್ಬನ ಗುರುತನ್ನು ಸಂಪೂರ್ಣವಾಗಿ ಮರೆಮಾಡುತ್ತದೆ. ಬದಲಿಗೆ ಆತ ಮಾಡುವ ಕೆಲಸವನ್ನು ಸೂಚಿಸುತ್ತದೆ. ಇದು ಸಂವಿಧಾನದ ಸಮಾನತೆ, ಘನತೆ ಮತ್ತು ಜೀವನದ ಹಕ್ಕುಗಳಿಗೆ ವಿರುದ್ಧವಾದುದು

2 **ಫರಾಶ್:** ಉತ್ತರ ಭಾರತದ ಬಹುತೇಕ ಎಲ್ಲ ಹೈಕೋರ್ಟ್‌ಗಳ ಸೇವಾ ನಿಯಮಗಳಲ್ಲಿ ಇದರ ಉಲ್ಲೇಖ ಇದೆ. ನ್ಯಾಯಾಲಯಕ್ಕೆ ಸಂಬಂಧಿಸಿದ ಎಲ್ಲ ಬೀಗದ ಕೈಗಳನ್ನು ನಿರ್ವಹಿಸುವ ಅಂದರೆ, ಬೆಳಿಗ್ಗೆ ಬಾಗಿಲು ತೆಗೆಯುವುದು ಸಂಜೆ, ಬಾಗಿಲು ಹಾಕುವ ಜವಾಬ್ದಾರಿ ಹೊಂದಿರುವ ವ್ಯಕ್ತಿಗೆ ಫರಾಶ್ ಎನ್ನಲಾಗುತ್ತದೆ. ಮೊಘಲ್ ಆಡಳಿತದಿಂದ ಬಳಕೆಗೆ ಬಂದ ಪದ ಇದು. ಇದು ಕೂಡ ವ್ಯಕ್ತಿಗಿಂತ ಆತ ನಡೆಸುವ ಕೆಲಸವನ್ನೇ ಪ್ರತಿಪಾದಿಸುತ್ತದೆ

3 **ಮಶಾಲ್ಚಿ:** ಮಣಿಪುರ ಮತ್ತು ಆಂಧ್ರ ಪ್ರದೇಶದ ಹೈಕೋರ್ಟ್ ದಾಖಲೆಗಳಲ್ಲಿ ಬಳಕೆ; ಪಾತ್ರೆ ತೊಳೆಯುವವನು ಮತ್ತು ಬೆಳಕಿನ ದೊಂದಿಗಳನ್ನು ನಿರ್ವಹಿಸುವವನು ಎನ್ನುವ ಅರ್ಥ ಇದೆ. ನ್ಯಾಯಾಂಗದ ಅಧಿಕಾರಿಗಳ ಮನೆಕೆಲಸ ಸಹಾಯಕರಿಗೆ ಬಳಸಲಾಗುವ ಈ ಪದವು ಮಾಲೀಕ, ಸೇವಕ ಎನ್ನುವ ಊಳಿಗಮಾನ್ಯ ಹಾಗೂ ವಸಾಹತುಶಾಹಿ ಧೋರಣೆಯನ್ನು ಪ್ರತಿನಿಧಿಸುತ್ತದೆ

4 **ಹಮಾಲ್ (ಸರಕು ಸಾಗಣೆ ಮಾಡುವವರು):** ಬಾಂಬೆ ಹೈಕೋರ್ಟ್‌ನಲ್ಲಿ ಬಳಕೆ; ಇದು ಸಾಂಕೇತಿಕ ಹಿಂಸೆ ಮತ್ತು ವ್ಯವಸ್ಥೆಯಲ್ಲಿನ ಅಸಮಾನತೆಯನ್ನು ಸೂಚಿಸುತ್ತಿದ್ದು, ಡಾ.ಬಿ. ಆರ್.ಅಂಬೇಡ್ಕರ್ ಅವರು ಹೇಳುವಂತೆ 'ಶ್ರೇಣೀಕರಣ'ದ ಪ್ರತಿಬಿಂಬವಾಗಿದೆ

5 **ಮುಲಿಯಾ (ಕೆಳಹಂತದ ಕೃಷಿ ಕೂಲಿ ಕಾರ್ಮಿಕ):** ಒಡಿಶಾ ಹೈಕೋರ್ಟ್ (ಸಿಬ್ಬಂದಿ ನೇಮಕಾತಿ ಮತ್ತು ಸೇವಾ) ನಿಯಮಗಳು–2019ರ ದಾಖಲೆಯಲ್ಲಿ ಬಳಕೆಯಾಗಿದೆ. ಈ ಪದವನ್ನು ನ್ಯಾಯಾಲಯದಲ್ಲಿ ಬಳಸುವುದರಿಂದ ಉದ್ಯೋಗಿಯ ಸಾಮರ್ಥ್ಯವನ್ನು ಕುಗ್ಗಿಸಿದಂತಾಗುತ್ತದೆ; ಅವರಿಗೆ ಯಾವ ಕೌಶಲವೂ ಇಲ್ಲ ಎನ್ನುವಂತಾಗುತ್ತದೆ

6 **ಸೇವಕ್ (ಸೇವೆ ಮಾಡುವವನು):** ಸಿಕ್ಕಿಂ, ಅಲಹಾಬಾದ್, ಉತ್ತರಾಖಂಡ್ ಹೈಕೋರ್ಟ್‌ಗಳಲ್ಲಿ ಬಳಕೆ; ಸೇವೆ ಮಾಡುವುದು ಎಂದರೆ, ಕಡೆಗಣಿಸಲ್ಪಟ್ಟ ಕೆಲಸಗಳನ್ನು ಮಾಡುವವನು ಎಂಬ ಅರ್ಥ ಇದೆ. ಇದು ಭ್ರಾತೃತ್ವ ಮತ್ತು ಪರಸ್ಪರ ಗೌರವಕ್ಕೆ ಚ್ಯುತಿ ತರುವಂಥ ಪದವಾಗಿದೆ

ಜಾತಿ ಆಧಾರಿತ ನಿಂದನಾತ್ಮಕ ಪದಗಳು

1 **ಧೋಬಿ:** ಕರ್ನಾಟಕ, ತೆಲಂಗಾಣ ಹೈಕೋರ್ಟ್ ಸೇವಾ ನಿಯಮಗಳಲ್ಲಿ ಈ ಪದವನ್ನು ಬಳಸಲಾಗಿದೆ. ಅಗಸ ವೃತ್ತಿ ಮಾಡುವವರನ್ನು ಧೋಬಿ ಎನ್ನಲಾಗುತ್ತದೆ. ಜಾತಿ ಆಧಾರಿತ ಪದವನ್ನು ವೃತ್ತಿಗೆ ಬಳಸುವುದರಿಂದ ಸಂವಿಧಾನದ 14, 15, 17 ಮತ್ತು 21ನೇ ವಿಧಿಗಳನ್ನು ಉಲ್ಲಂಘಿಸಿದಂತೆ ಆಗುತ್ತದೆ

2 **ಹಲಾಲ್‌ಖೋರ್:** ಬಾಂಬೆ ಹೈಕೋರ್ಟ್‌ನಲ್ಲಿ ಇದನ್ನು ಬಳಸಲಾಗುತ್ತಿದೆ. 'ಪ್ರಾಮಾಣಿಕವಾಗಿ ದುಡಿದು ಜೀವನ ನಡೆಸುವವನು' ಎಂಬುದು ಇದರ ಅರ್ಥ. ಇತಿಹಾಸದಲ್ಲಿ ಮ್ಯಾನ್ಯುವಲ್ ಸ್ಕ್ಯಾವೆಂಜಿಂಗ್ ಮತ್ತು ನೈರ್ಮಲ್ಯ ಕಾರ್ಮಿಕರಾಗಿ ದುಡಿಯುತ್ತಿದ್ದ ದಲಿತ ಮುಸ್ಲಿಮರನ್ನು ಹೀಗೆ ಕರೆಯಲಾಗುತ್ತಿತ್ತು

3 **ಮಾಲನ್:** ಈ ಪದವು ಆಂಧ್ರಪ್ರದೇಶ ಹೈಕೋರ್ಟ್‌ನಲ್ಲಿ ಬಳಕೆಯಲ್ಲಿದೆ. 'ಮಾಲಿ' ಪದದ ಮಹಿಳಾ ರೂಪ. ಇದು ಲಿಂಗ ಆಧಾರಿತ ಮತ್ತು ಜಾತಿ ಆಧಾರಿತ ತಾರತಮ್ಯವನ್ನು ಮಾಡುತ್ತದೆ

4 **ಸ್ಕ್ಯಾವೆಂಜರ್:** ಆಂಧ್ರ ಮತ್ತು ಮದ್ರಾಸ್ ಹೈಕೋರ್ಟ್‌ಗಳ ಸೇವಾ ನಿಯಮಗಳಲ್ಲಿ ಇದರ ಉಲ್ಲೇಖ ಇದೆ. ನ್ಯಾಯಾಲಯಗಳ ಶೌಚಾಲಯಗಳನ್ನು ಸ್ವಚ್ಛಗೊಳಿಸುವ, ಕಸ ತೆರವುಗೊಳಿಸುವ ಮತ್ತು ಕಚೇರಿಗಳಲ್ಲಿ ಸ್ವಚ್ಛತೆ ಕಾಪಾಡುವ ವೃತ್ತಿಯಲ್ಲಿರುವವರನ್ನು ಈ ರೀತಿ ಕರೆಯಲಾಗುತ್ತದೆ. ಈ ಪದವು ಮ್ಯಾನ್ಯುವಲ್ ಸ್ಕ್ಯಾವೆಂಜಿಂಗ್ ವೃತ್ತಿಯಲ್ಲಿ ತೊಡಗಿರುವ ವ್ಯಕ್ತಿಯ ಘನತೆಯನ್ನು ಕುಂದಿಸುತ್ತದೆ

ಸಾಮಾಜಿಕ ಗ್ರಹಿಕೆಯ ಪದಗಳು

1 **ಭಿಶ್ತಿ:** ಅಲಹಾಬಾದ್ ಮತ್ತು ಉತ್ತರಾಖಂಡ ಹೈಕೋರ್ಟ್‌ಗಳ ಸೇವಾ ನಿಯಮಗಳಲ್ಲಿ ಇದನ್ನು ಬಳಸಲಾಗಿದೆ. ಇದರ ಅರ್ಥ ಕುಡಿಯುವ ನೀರು ಪೂರೈಸುವವರು. ಇತಿಹಾಸದಲ್ಲಿ ಭಿಶ್ತಿಗಳು ಎಂದರೆ ದಾರಿ ಮಧ್ಯ ಸಿಕ್ಕಿ ಹಾಕಿಕೊಂಡವರಿಗೆ 'ಮಶಾಕ್ಸ್' ಎಂದು ಕರೆಯಲಾಗುವ ಮೇಕೆಯ ಚರ್ಮದಲ್ಲಿ ಮಾಡಿದ ಚೀಲದಲ್ಲಿ ಕುಡಿಯುವ ನೀರು ಪೂರೈಸುತ್ತಿದ್ದವರು. ಈ ಪದವು ಸಕಾರಾತ್ಮಕವಾಗಿದ್ದರೂ ಇದು ಜಾತಿ ಆಧಾರಿತ ವೃತ್ತಿಯನ್ನು ಬಿಂಬಿಸುತ್ತದೆ. ಈ ಕೆಲಸವನ್ನು ದಲಿತ ಸಮುದಾಯವದರೇ ಹೆಚ್ಚಾಗಿ ಮಾಡುತ್ತಿದ್ದರು

2 **ಜಮದಾರ್:** ಬಹುತೇಕ ಎಲ್ಲ ಹೈಕೋರ್ಟ್‌ಗಳಲ್ಲಿ ಇದರ ಬಳಕೆ ಇದೆ. ಈ ಹುದ್ದೆಯಲ್ಲಿ ಇರುವವರಿಗೆ ನಿರ್ದಿಷ್ಟ ಪಾತ್ರ ಮತ್ತು ಜವಾಬ್ದಾರಿಗಳನ್ನು ವ್ಯಾಖ್ಯಾನಿಸಲಾಗಿಲ್ಲ. ಸ್ವಚ್ಛತೆ, ಉಸ್ತುವಾರಿ, ನಿರ್ವಹಣೆ ಸೇರಿದಂತೆ ವಿವಿಧ ಕೆಲಸಗಳನ್ನು ಈ ಹುದ್ದೆಯಲ್ಲಿದ್ದವರು ಮಾಡುತ್ತಾರೆ. ಇತಿಹಾಸದಲ್ಲಿ ಇದು ಅಸ್ಪೃಶ್ಯತೆಯೊಂದಿಗೆ ತಳಕುಹಾಕಿಕೊಂಡಿದ್ದ ಜವಾಬ್ದಾರಿ

ಪದಬಂಧ 6236

ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಈಕೆ ಮಾವನ ಹೆಂಡತಿ (2)
3.ಕೆಡುಕಾಗಲೆಂದು ಬಯಸಿ ಹೇಳುವ ಮಾತು (2)
5.ಹಿಂದಿನಿಂದ ಉಳಿದು ಬಂದ ಪ್ರಾಣಿ ಸಸ್ಯಗಳ ಅವಶೇಷ (5)
6.ಸಂಸ್ಕೃತ ಅಥವಾ ಪ್ರಾಕೃತದಿಂದ ಹುಟ್ಟಿದ ಅಪಭ್ರಂಶ ಶಬ್ದ (3)
7.ಇದು ಮಣ್ಣಿಗೆ ಸಂಬಂಧಿಸಿದ್ದು (3)
8.ಸಮಾಜದ ಎಲ್ಲರಿಗೂ ಸಂಬಂಧಿಸಿದ್ದು (5)
9.ರಾಜಿಗೊಂದು ಪರ್ಯಾಯ ಪದ (3)
10.ಕಡಿದಾದ ಕೊರಕಲು (3)
13.ಉದಾಹರಣೆಯಿಂದ ಕೂಡಿದುದು (5)
14.ರಾತ್ರಿಯನ್ನು ಹೀಗೂ ಹೇಳುತ್ತಾರೆ (2)
15.ಗೆಲುವಿನ ವಿರುದ್ಧ ಪದ (2)

ಮೇಲಿಂದ ಕೆಳಕ್ಕೆ
1.ಎಣಿಕೆಗೆ ಮೀರಿದುದು (4)
2.ತನ್ನ ರಕ್ಷಣೆಗೆ ಅಥವಾ ಇತರರನ್ನು ಹೊಡೆಯಲು ಬಳಸುವ ಸಾಧನ (3)
4.ಸೋಲು ಹೀಗೆ ಬಂದಿದೆ (4)
5.ಅಂತ್ಯ ಅಥವಾ ಕೊನೆ ಎಂದರೂ ಆದೀತು (5)
7.ಈತ ಅಡುಗೆಯಲ್ಲಿ ನುರಿತವನು (5)
9.ಸತ್ತವರನ್ನು ಬದುಕಿಸುವುದೆಂದು ನಂಬಲಾದ ಮೂಲಿಕೆ (4)
11.ಜಲಪಾತವಿಲ್ಲಿ ಕಾಣುತ್ತಿದೆ (4)
12.ಅಪಹಾಸ್ಯ ಮಾಡುವವನು (3)



6235ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಸಹಜಾತ 3.ಮಧುಕರಿ 5.ರಥೋತ್ಸವ 7.ಸುಪುತ್ರ 10.ಉಪಕರಣ 11.ಕವಲು 13.ಣವಾಡಿಕ 16.ಬಂದಿಖಾನೆ 17.ಹಗರಣ

ಮೇಲಿಂದ ಕೆಳಕ್ಕೆ:
2.ಹಗುರ 3.ಮಣ 4.ಕದಪು 6.ವರ್ಗೀಕರಣ 7.ಸುಗುಣ 8.ತ್ರಯೋದಶಿ 9.ಸಮೀಕ್ಷಕ 10.ಉಯಿಲು 12.ವರದಿ 14.ಕಮ್ಮಾರ 15.ಆನೆ

ಸುಡೊಕು 6620

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.


		4	9		2	1		6
1		6					8	
	8			6				5
7								
	5		7	1	4	2		8
4					6			7
2		5		7			6	
	6					8		
8		1	6		3			9

6619 ಸುಡೊಕು

4	3	8	2	1	9	5	6	7
1	2	9	6	5	7	3	4	8
7	6	5	8	4	3	2	9	1
3	4	2	9	6	1	8	7	5
8	7	6	3	2	5	9	1	4
5	9	1	7	8	4	6	3	2
9	1	7	5	3	2	4	8	6
6	5	3	4	7	8	1	2	9
2	8	4	1	9	6	7	5	3

ಅತಿಯಾದ ಬಳಕೆ

ನುಡಿ ಬೆಳಗು



ಪಿ.ಚಂದ್ರಿಕಾ

ನನಗೆ ತಿಳಿದಿರುವ ಏಳೆಂಟು ವರ್ಷ ವಯಸ್ಸಿನ ಹುಡುಗನಿಗೆ ಮಾತು ಬರುವುದಿಲ್ಲ. ಬರುವುದಿಲ್ಲ ಎಂದರೆ ಮಾತೇ ಬರುವುದಿಲ್ಲವೆಂದಲ್ಲ. ಆದರೆ, ಅವನ ಮಾತಿನ ಉಚ್ಚಾರಣೆ ಚೀನಿ, ಜಪಾನಿ ಭಾಷೆಯ ಹಾಗಿರುತ್ತದೆ. ಅವನನ್ನು ನಾನು ಮೊದಲು ನೋಡಿದ್ದು ಎರಡು ವರ್ಷದವನಿದ್ದಾಗ. ಆಗ ಅವನ ವಯಸ್ಸಿಗೆ ತಕ್ಕಂತೆ ಬಾಲ ಭಾಷೆಯಲ್ಲಿ ಅಪ್ಪ, ಅಮ್ಮ, ಕಾರು, ಬಸ್ಸು ಇತ್ಯಾದಿ ಮಾತಾಡುತ್ತಿದ್ದ. ನೋಡಲೂ ತುಂಬಾ ಮುದ್ದಾಗಿದ್ದಾನೆ. ಅವರೂ ವೈದ್ಯರ ಬಳಿ ಕರೆದೊಯ್ದಿದ್ದಾರೆ ಪ್ರಜ್ಞೆ, ಕಿವಿ, ಧ್ವನಿಪೆಟ್ಟಿಗೆ ಎಲ್ಲವೂ ಸರಿಯಾಗಿಯೇ ಇದೆ. ಆದರೂ ಹೀಗೆ ಯಾಕೆ ಎನ್ನುವ ಸಮಸ್ಯೆ ಅವರಿಗೂ ಕಾಡಿದೆ. ನಂತರ ತಜ್ಞ ವೈದ್ಯರ ಬಳಿಗೂ ಕರೆದೊಯ್ದಿದ್ದಾರೆ. ನಾನೂ ಏನಾಯಿತು ಎಂದು ಕೇಳಿದೆ, 'ಇದೆಲ್ಲಾ ಆರಂಭವಾದದ್ದು ಕೋವಿಡ್ ಹೊತ್ತಲ್ಲಿ. ರಸ್ತೆಗೆ ಮಗುವನ್ನು ಬಿಡಲು ಭಯವಾಗುತ್ತಿತ್ತು. ಮಕ್ಕಳ ಜೊತೆ ಬೆರೆಯುವುದು ಆಗುತ್ತಿರಲಿಲ್ಲ ಎನ್ನುವ ಕಾರಣಕ್ಕೆ ಮೊಬೈಲ್ ಕೊಟ್ಟು ಕೂರಿಸುತ್ತಿದ್ದೆವು. ಅದರಲ್ಲಿ ಬರೀ ಕಾರ್ಟೂನ್ ನೋಡುತ್ತಿದ್ದ. 'ತಿಳಿಯದ ಭಾಷೆ, ಅರ್ಥವಾಗದ ಉಚ್ಚಾರಣೆಯನ್ನು ಅನುಕರಿಸಿ ಹುಡುಗ ಹೀಗಾಗಿ ಬಿಟ್ಟಿದ್ದಾನೆ. ಮನುಷ್ಯರ ಸಂಪರ್ಕ ಕಡಿಮೆಯಾಗಿ ಅವನದ್ದೇ ಕಲ್ಪನೆಯ ಲೋಕವನ್ನು ಸೃಷ್ಟಿಸಿಕೊಂಡಿದ್ದಾನೆ. ಅವನಿಗೆ ನೀವು ಅರ್ಥ ಮಾಡಿಸುವುದು ತುಂಬಾ ಕಷ್ಟ' ಎಂದು ವೈದ್ಯರು ಹೇಳಿದ್ರು' ಎಂದರು ಆ ತಂದೆ ತಾಯಿ. ಈಗ ಆ ಹುಡುಗನಿಗೆ ತಜ್ಞರ ಚಿಕಿತ್ಸೆ ಕೊಡಿಸಲಾಗುತ್ತಿದೆಯಾದರೂ ಯಾವುದೂ ಸರಿಯಾಗಿಲ್ಲ. ಪ್ರಪಂಚದ ಕಡೆಗೆ ಗಮನವೂ ಇಲ್ಲ. ಅವನ ಮಾತು ನಡವಳಿಕೆ ಎಲ್ಲವೂ ಸಾಮಾನ್ಯರ ಹಾಗೆ ಇಲ್ಲವೇ ಇಲ್ಲ. ಮೊಬೈಲ್ ಈಗಲೂ ಅವನ ಪ್ರಪಂಚ. ಅದಿಲ್ಲದೇ ಹೋದರೆ ಅವನು ಊಟ ಇರಲಿ; ನಿದ್ದೆ ಕೂಡಾ ಮಾಡುವುದಿಲ್ಲ.

ನನ್ನ ಸ್ನೇಹಿತರೊಬ್ಬರು ಎಡಗೈ ಹೆಬ್ಬೆರಳು ತುಂಬಾ ನೋವು, ಏನೂ ಕೆಲಸ ಮಾಡಲೂ ಆಗುವುದಿಲ್ಲ ಎಂದು ತುಂಬಾ ದಿನಗಳಿಂದ ಹೇಳುತ್ತಲೇ ಇದ್ದರು. ಎಂಥಾ ನೋವು ನಿವಾರಕ ತೆಗೆದುಕೊಂಡರೂ ಅದು ಗುಣವಾಗುತ್ತಿಲ್ಲ, ಫಿಜಿಯೋಥೆರಪಿ ಮಾಡಿಸಿದರೂ ಕಡಿಮೆಯಾಗುತ್ತಿಲ್ಲ. ಅವರದ್ದು ಇನ್ನೊಂದು ಕಥೆ- ಮಲಗುವಾಗ, ಕೂತಾಗ ನಿಂತಾಗ ಕೈಲಿ ಮೊಬೈಲ್ ಹಿಡಿದೇ ಇರುತ್ತಾರೆ. ಯಾರಾದರೂ ಮನೆಗೆ ಬಂದರೆ ಕೋಪ. ಮಕ್ಕಳು, ಗಂಡ ಯಾರೂ ಬೇಡ, ಸುಮ್ಮನೆ ಮೊಬೈಲ್ ಪರದೆಯನ್ನು ತೀಡುತ್ತಲೇ ಇರಬೇಕು ಅನ್ನಿಸುತ್ತೆ ಎನ್ನುತ್ತಾರೆ. 'ಸ್ವಲ್ಪ ಮೊಬೈಲ್ ಬಳಕೆ ಕಡಿಮೆ ಮಾಡಿ' ಎಂದೆ. ಆದರೆ ಅದು ಅವರಿಗೆ ಸಾಧ್ಯವಾಗುತ್ತಿಲ್ಲ. ಈಗ ಎಡಗೈ ಹೆಬ್ಬೆರಳು ಪೂರ್ತಿ ಬಳಸಲಿಕ್ಕೆ ಸಾಧ್ಯವೇ ಆಗದೇ ಹೋಗಿದೆ.

ಸಮಸ್ಯೆಗಳಾಗುತ್ತೆ ಎಂದು ಗೊತ್ತಾಗಿಯೂ ಕೆಲಸ ಹಗುರ ಮಾಡಿಕೊಳ್ಳಲು ಮಕ್ಕಳಿಗೆ ಮೊಬೈಲ್ ಕೊಡುತ್ತೇವೆ. ಅವರ ಭವಿಷ್ಯವನ್ನೇ ಹಾಳು ಮಾಡುತ್ತೇವೆ. ಗೀಳಿಗೆ ಬಿದ್ದು ದೊಡ್ಡವರೂ ಹೀಗೇ ಆಗುತ್ತಿದ್ದೇವೆ. ಇನ್ನು ಯುವಕರ ಸ್ಥಿತಿಯಂತೂ ಹೇಳಲಾಗುತ್ತಿಲ್ಲ. ಸಾಧನೆ ಮಾಡುವ ಹೊತ್ತಿನಲ್ಲಿ ಕಳೆದುಹೋಗುತ್ತಿದ್ದಾರೆ. ಯಾವುದೇ ಆದರೂ ಅತಿಯಾದ ಬಳಕೆಯಿಂದ ನಮಗೇ ಹಾನಿ ಎಂದರೂ ಮನಸ್ಸು ಕೇಳುವುದಿಲ್ಲ ನಾವು ಯಾಕೆ ಇಷ್ಟು ದುರ್ಬಲರಾಗುತ್ತಿದ್ದೇವೆ?

ನಮ್ಮ ಇಚ್ಛಾಶಕ್ತಿಯನ್ನು ಕುಂದಿಸುವ ಯಾವುದನ್ನೇ ಆದರೂ ದೂರವಿಡುವ ದೃಢ ಸಂಕಲ್ಪವನ್ನು ನಾವು ಮಾಡಲೇಬೇಕು. ❖

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

27 ನವೆಂಬರ್ 2025 ಗುರುವಾರ, ಶ್ರೀ ವಿಶ್ವಾವಸು ನಾಮ ಸಂವತ್ಸರ ದಕ್ಷಿಣಾಯನ ಹೇಮಂತ ಋತು ತಿಥಿ: ಮಾರ್ಗಶಿರ ಶುಕ್ಲ ಸಪ್ತಮಿ ಗಂ. 24-31 **ನಕ್ಷತ್ರ:** ಧನಿಷ್ಠ ಗಂ. 26-32 **ಯೋಗ:** ಧ್ರುವ ಗಂ. 12-09 **ಕರಣ:** ಗರ ಗಂ, 12-22 ವೃಶ್ಚಿಕ ಮಾಸದ 12 ನೇ ದಿನ. **ಮಳೆ ನಕ್ಷತ್ರ :** ಅನುರಾಧ 3 ನೇ ಪಾದ. **ರಾಹುಕಾಲ :** ಮಧ್ಯಾಹ್ನ 01-30 - 03-00 , **ಸೂರ್ಯೋದಯ :** 06-39 **ಸೂರ್ಯಾಸ್ತ :** 05-57, **ಮುಸ್ಲಿಂ ದಿನಾಂಕ :** 5 ಜುಮಾದುಸ್ಸಾನಿ , **ದಿನ ವಿಶೇಷ :** ಮಿತ್ರ ಸಪ್ತಮಿ, **ಅದೃಷ್ಟ ಸಂಖ್ಯೆ :** 6, 9

ಮೇಷ: ಹಿರಿಯ ಅಧಿಕಾರಿಗಳು ಪರಿಶ್ರಮ ಹಾಗೂ ಜವಾಬ್ದಾರಿಯುತ ನಡವಳಿಕೆಗಳನ್ನು ಗಮನಿಸಿ ಆರ್ಥಿಕ ಮಟ್ಟವನ್ನು ಮೇಲಕ್ಕೆತ್ತುವರು. ವೃತ್ತಿಯಲ್ಲಿ ಸ್ವಾತಂತ್ರವಾಗಿ ನಿರ್ಧಾರ ತೆಗೆದುಕೊಳ್ಳುವ ಜವಾಬ್ದಾರಿ ನಿಮ್ಮದ್ದಾಗಲಿದೆ.

ವೃಷಭ: ಸಹೋದರರಿಂದ ಹಿತವಚನ ಕೇಳಬೇಕಾದೀತು, ಭಿನ್ನಾಭಿಪ್ರಾಯ ಮೂಡಿದಲ್ಲಿ ಶಾಂತ ಸ್ವಭಾವದಿಂದ ವರ್ತಿಸಿ. ತಾಯಿಯ ಆರೋಗ್ಯದಲ್ಲಿ ಏರಿಳಿತ ಇರುತ್ತದೆ. ನಿವೇಶನ ಖರೀದಿಸಲು ಹುಡುಕಾಟ ನಡೆಸುವಿರಿ.

ಮಿಥುನ: ಸಾರ್ವಜನಿಕರ ಸೇವೆ ಮಾಡುವವರಿಗೆ ಅನುಯಾಯಿಗಳಿಂದ ಸಹಕಾರ ಕೆಲವರಿಂದ ಅಸಹಕಾರ ಎರಡನ್ನೂ ಸ್ವಾಗತಿಸುವ ಅನಿವಾರ್ಯ ಉಂಟಾಗುತ್ತದೆ. ನಿರುದ್ಯೋಗಿಗಳ ಮನೋಕಾಮನೆ ಈಡೇರುತ್ತದೆ.

ಕರ್ಕಾಟಕ: ಹಣಕಾಸು ಪರಿಸ್ಥಿತಿ ಉತ್ತಮವಾಗುವುದರಿಂದ ಒತ್ತಡ ತರುವಂಥ ಕೆಲಸಗಳಿದ್ದರೂ ಬಗೆಹರಿಯುವುದು. ಪರೋಪಕಾರ ಸ್ವಭಾವದಿಂದಾಗಿ ವೈಯಕ್ತಿಕ ಸ್ಥಾನ-ಮಾನಗಳು ಲಭಿಸಲಿವೆ.

ಸಿಂಹ: ಎಂಜಿನಿಯರಿಂಗ್ ಕ್ಷೇತ್ರದಲ್ಲಿ ಇರುವವರಿಗೆ ಅವಕಾಶಗಳ ಜತೆ ಬಯಸಿದ ಜಾಗ ಸಿಗುವ ಸಾಧ್ಯತೆಗಳು ಇವೆ. ಕೃಷಿಗೆ ಸಂಬಂಧಿಸಿದ ಯೋಜನೆಗಳ ಬಗ್ಗೆ ಚಿಂತೆ ಮಾಡಬೇಕಾದ ಅಗತ್ಯವಿಲ್ಲ.

ಕನ್ಯಾ: ಹಿತಶತ್ರುಗಳಿಂದ ವಂಚನಾ ಪ್ರಸಂಗವಿದ್ದರೂ ಅನುಭವಕ್ಕೆ ಬರುವುದಿಲ್ಲ. ಮಧ್ಯಸ್ಥಿಕೆಯ ಕೆಲಸದಿಂದ ಕೈ ಸುಟ್ಟುಕೊಳ್ಳುವ ಸಾಧ್ಯತೆ ಇದೆ. ವೈದ್ಯರನ್ನು ಭೇಟಿ ಮಾಡುವ ಸನ್ನಿವೇಶಗಳು ಎದುರಾಗುವವು.

ತುಲಾ: ನಿಮ್ಮ ನಡವಳಿಕೆಗಿಂತ ನಿಮ್ಮ ಸರಳತೆಗೆ ಸ್ಥಾನಮಾನ ದೊರಕುವುದರಿಂದ ಸರಳತೆಯನ್ನು ಮಂತ್ರವನ್ನು ಜಪಿಸಿ. ಮಕ್ಕಳ ವಿದ್ಯಾಭ್ಯಾಸ ಸಮಾಧಾನ ತರಲಿದೆ.

ವೃಶ್ಚಿಕ: ಅಧಿಕಾರಿ ವರ್ಗದವರಲ್ಲಿ ಹಾಗೂ ಸಹಚರರಲ್ಲಿ ವೈಮನಸ್ಸು ದೂರ ಮಾಡಿಕೊಳ್ಳುವುದು ಉತ್ತಮ. ದುರ್ಗಾಪರಮೇಶ್ವರಿಯ ಆರಾಧನೆಯಿಂದ ಶುಭವಾಗುವುದು.


ಧನು: ಸಿಕ್ಕಿರುವ ಹೊಸ ವೃತ್ತಿಯ ಅಧಿಕಾರಿಗಳು ನಿಮಗೆ ಉತ್ತಮ ರೀತಿಯಲ್ಲಿ ಸಹಾಯ ಮಾಡುತ್ತಾರೆ. ವಿದ್ಯಾಭ್ಯಾಸದಲ್ಲಿ ಒಳ್ಳೆಯ ಫಲಿತಾಂಶ ಸಿಕ್ಕಿ, ಹೆಚ್ಚಿನ ವ್ಯಾಸಂಗಕ್ಕೆ ವಿದೇಶಕ್ಕೆ ತೆರಳುವ ಅವಕಾಶವಿದೆ.

ಮಕರ: ವಂಶದ ಕುಡಿಯು ಬಯಸಿದ ರೀತಿಯಲ್ಲಿಯೇ ಉತ್ತಮ ಜೀವನವನ್ನು ನಡೆಸುತ್ತಿರುವುದನ್ನು ಜನರು ಹೊಗಳುವುದು ಕೇಳಿ ಆನಂದವನ್ನು ಹೊಂದುವಿರಿ. ದೇವರ ಧ್ಯಾನದಿಂದ ಅದನ್ನು ಹೋಗಲಾಡಿಸಿಕೊಳ್ಳಿ.

ಕುಂಭ: ನಾಟಕ ಅಥವಾ ಸಿನಿಮಾದಲ್ಲಿ ನಟನೆ ಮಾಡುವಂಥರಿಗೆ ಉತ್ತಮ ಅವಕಾಶಗಳ ಜತೆ ಹೆಸರೂ ಬರಲಿದೆ. ಜೀವನದಲ್ಲಿನ ಸಂತೋಷ ಪಡೆಯಲು ಅವಕಾಶಗಳು ಲಭಿಸಲಿವೆ. ಎಲ್ಲಾ ವಿಚಾರದಲ್ಲೂ ಎಚ್ಚರದ ನಡೆ ಇರಲಿ.

ಮೀನ: ಹಿಂದಿನ ದಿನದ ನಿದ್ರಾಹೀನತೆಯಿಂದಾಗಿ ಇಂದಿನ ಕೆಲಸಗಳಲ್ಲಿ ನಷ್ಟ ಸಂಭವಿಸಬಹುದು. ಮಕ್ಕಳ ಪ್ರತಿಯೊಂದು ಹೆಜ್ಜೆಯ ಮೇಲೂ ಎಚ್ಚರಿಕೆಯ ಕಣ್ಣನ್ನು ಇಟ್ಟಿರಲೇಬೇಕಾಗುತ್ತದೆ.

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ:	25,884
ಇಂದಿನ ಅಂತ್ಯ:	26,205
ದಿನದ ಗರಿಷ್ಠ:	26,215
	320

ಮೊಟ್ಟೆ ಧಾರಣೆ (ಎನ್‌ಇಸಿಸಿ) ಬೆಂಗಳೂರು

	100 ಕ್ಕೆ	₹675
	12 ಕ್ಕೆ	₹96
ಮೈಸೂರು:	100 ಕ್ಕೆ	₹675

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹181.50
ಆರ್‌ಎಸ್‌ಎಸ್-5	₹176.50
ಗುಡ್ ಲಾಟ್	₹164

ರಾಮನಗರ ರೇಷ್ಮೆಗೂಡು

ಮಿಶ್ರತಳಿ(ಸಿ.ಬಿ)	₹500-801
ದ್ವಿತಳಿ (ಬಿ.ವಿ)	₹510-922

ಈರುಳ್ಳಿ ಧಾರಣೆ ಬೆಂಗಳೂರು (ಕ್ವಿಂಟಲ್‌ಗೆ)

ದೊಡ್ಡ	₹1200-2400
ಮಧ್ಯಮ	₹600-1200
ಸಣ್ಣ	₹200-600

ಮುಂಬೈ ಖಾದ್ಯ ತೈಲ (ಆವರಣದಲ್ಲಿ ಕಳೆದ ವಹಿವಾಟಿನ ದರ) (10 ಕೆ.ಜಿಗೆ)

ಶೇಂಗಾ (ರಿಫೈನ್ಡ್)	₹1550 (1550)
ಸೋಯಾ (ರಿಫೈನ್ಡ್)	₹1265 (1270)
ಸೂರ್ಯಕಾಂತಿ (ರಿಫೈನ್ಡ್)	₹1465 (1480)
ವಾನಸ್ಪತಿ	₹1240 (1245)

ಅಡಿಕೆ ಧಾರಣೆ

ಕುಮಟಾ		ಶಿವಮೊಗ್ಗ		ಶಿರಸಿ	
ಚಾಲಿ	45680-45680	ಬೆಟ್ಟೆ	55300-72699	ಬೆಟ್ಟೆ	40689-49809
ಪುತ್ತೂರು		ಗೊರಬಲು	19000-41898	ಬಿಳಿಗೋಟು	24611-39399
ಕೋಕ	20000-34500	ಹೊಸತು	48469-59011	ಚಾಲಿ	43550-49499
ಹೊಸತು	26000-40000	ರಾಶಿ	51009-59599	ಕೆಂಪುಗೋಟು	27099-35099
		ಸರಕು	60079-97510	ರಾಶಿ	54299-60399

ವಿರಳ ಲೋಹಕ್ಕೆ ಉತ್ತೇಜನ

₹7,280 ಕೋಟಿ ಮೊತ್ತದ ಯೋಜನೆಗೆ ಪ್ರಧಾನಿ ನೇತೃತ್ವದ ಸಂಪುಟ ಒಪ್ಪಿಗೆ

ನವದೆಹಲಿ (ಪಿಟಿಐ): ದೇಶದಲ್ಲಿ 'ವಿರಳ ಲೋಹದ ಶಾಶ್ವತ ಅಯಸ್ಕಾಂತ' ತಯಾರಿಕೆಗೆ ಉತ್ತೇಜನ ನೀಡಲು ₹7,280 ಕೋಟಿ ಮೊತ್ತದ ಯೋಜನೆಗೆ ಪ್ರಧಾನಿ ನರೇಂದ್ರ ಮೋದಿ ಅಧ್ಯಕ್ಷತೆಯಲ್ಲಿ ನಡೆದ ಕೇಂದ್ರ ಸಚಿವ ಸಂಪುಟದ ಸಭೆಯು ಬುಧವಾರ ಒಪ್ಪಿಗೆ ನೀಡಿದೆ.

ಇದು ಚೀನಾ ಮೇಲಿನ ಭಾರತದ ಅವಲಂಬನೆಯನ್ನು ಕಡಿಮೆ ಮಾಡಲು ನೆರವಾಗಲಿದೆ ಎಂದು ವಿಶ್ಲೇಷಿಸಲಾಗಿದೆ. ವಿರಳ ಲೋಹದ ಶಾಶ್ವತ ಅಯಸ್ಕಾಂತಗಳು ವಿದ್ಯುತ್ ಚಾಲಿತ ವಾಹನ, ನವೀಕರಿಸಬಹುದಾದ ಇಂಧನ, ಎಲೆಕ್ಟ್ರಾನಿಕ್ಸ್, ರಕ್ಷಣಾ ಉಪಕರಣಗಳು ಸೇರಿ ಹಲವು ವಲಯಗಳ ಪಾಲಿಗೆ ಬಹಳ ಮಹತ್ವದವು.

'ಈ ಯೋಜನೆಯು ವಿರಳ ಲೋಹದ ಶಾಶ್ವತ ಅಯಸ್ಕಾಂತ ತಯಾರಿಕೆಯನ್ನು ಉತ್ತೇಜಿಸಲಿದೆ. ವಾರ್ಷಿಕ ಆರು ಸಾವಿರ ಟನ್‌ನಷ್ಟು ಉತ್ಪಾದನೆಯ ಗುರಿಯನ್ನು ಹೊಂದಲಾಗಿದೆ' ಎಂದು ಕೇಂದ್ರ ಮಾಹಿತಿ ಮತ್ತು ಪ್ರಸಾರ ಸಚಿವ ಅಶ್ವಿನಿ ವೈಷ್ಣವ್ ಸುದ್ದಿಗಾರರಿಗೆ ತಿಳಿಸಿದ್ದಾರೆ.

ಮುಖ್ಯಾಂಶಗಳು

- ಚೀನಾ ಮೇಲಿನ ಅವಲಂಬನೆ ತಗ್ಗಿಸಲು ನೆರವು
- ವಾರ್ಷಿಕ 6 ಸಾವಿರ ಟನ್ ಉತ್ಪಾದನೆಯ ಗುರಿ
- 2030ರ ವೇಳೆಗೆ ಬೇಡಿಕೆ ದುಪ್ಪಟ್ಟಾಗುವ ಅಂದಾಜು



ವಿರಳ ಲೋಹದ ಆಕ್ಸೈಡುಗಳನ್ನು ಲೋಹಗಳನ್ನಾಗಿ ಪರಿವರ್ತಿಸುವ, ಲೋಹಗಳನ್ನು ಮಿಶ್ರಲೋಹಗಳನ್ನಾಗಿ ಪರಿವರ್ತಿಸುವ, ಮಿಶ್ರಲೋಹಗಳನ್ನು ಅಯಸ್ಕಾಂತಗಳನ್ನಾಗಿ ಮಾಡುವ ತಯಾರಿಕಾ ಘಟಕಗಳ ಸ್ಥಾಪನೆಗೆ ಈ ಯೋಜನೆಯು ನೆರವು ನೀಡಲಿದೆ.

ಯೋಜನೆಯ ಅಡಿಯಲ್ಲಿ ಒಟ್ಟು ಉತ್ಪಾದನಾ ಗುರಿಯನ್ನು ಐದು ಫಲಾನುಭವಿಗಳಿಗೆ ಹಂಚಿಕೆ ಮಾಡುವ ಉದ್ದೇಶ ಇದೆ. ಇದಕ್ಕಾಗಿ ಜಾಗತಿಕ ಬಿಡ್ ನಡೆಸಲಾಗುತ್ತದೆ. ಪ್ರತಿ ಫಲಾನುಭವಿಗೂ ವಾರ್ಷಿಕ 1,200 ಟನ್ ತಯಾರಿಕೆಯ ಗುರಿಯನ್ನು ಹಂಚಿಕೆ ಮಾಡಲಾಗುತ್ತದೆ. ಇದಕ್ಕೆ ಸಂಬಂಧಿಸಿದ ಮಾರ್ಗಸೂಚಿಯನ್ನು ಶೀಘ್ರವೇ ಹೊರಡಿಸಲಾಗುತ್ತದೆ ಎಂದು ಸಚಿವರು ತಿಳಿಸಿದ್ದಾರೆ.

ಯೋಜನೆಯ ಒಟ್ಟು ಮೊತ್ತವಾದ ₹7,280 ಕೋಟಿಯಲ್ಲಿ ಮಾರಾಟ ಆಧಾರಿತ ಉತ್ತೇಜನ ಮೊತ್ತವಾದ ₹6,450 ಕೋಟಿ ಕೂಡ ಸೇರಿದೆ.

ವಿದ್ಯುತ್ ಚಾಲಿತ ವಾಹನಗಳಿಗೆ, ನವೀಕರಿಸಬಹುದಾದ ಮೂಲಗಳಿಂದ ಉತ್ಪಾದಿಸುವ ಇಂಧನಕ್ಕೆ, ಗ್ರಾಹಕ ಬಳಕೆ ಉತ್ಪನ್ನಗಳಿಗೆ ಬೇಡಿಕೆ ಹೆಚ್ಚಾಗುತ್ತಿರುವ ಕಾರಣದಿಂದಾಗಿ ದೇಶದಲ್ಲಿ ವಿರಳ ಲೋಹದ ಶಾಶ್ವತ ಅಯಸ್ಕಾಂತಗಳಿಗೆ ಬೇಡಿಕೆಯು 2030ರ ವೇಳೆಗೆ ದುಪ್ಪಟ್ಟಾಗುವ ಅಂದಾಜು ಇದೆ.

ಈಗ ಇವುಗಳನ್ನು ಚೀನಾ ಸೇರಿದಂತೆ ಬೇರೆ ಬೇರೆ ದೇಶಗಳಿಂದ ಆಮದು ಮಾಡಿಕೊಳ್ಳಲಾಗುತ್ತಿದೆ. ಈ ಶಾಶ್ವತ ಅಯಸ್ಕಾಂತಗಳ ಪೂರೈಕೆದಾರ ದೇಶಗಳ ಪೈಕಿ ಚೀನಾ ಬಹಳ ಪ್ರಮುಖವಾಗಿದೆ. ಅದು ಇವುಗಳ ರಫ್ತಿನ ಮೇಲೆ ನಿರ್ಬಂಧ ವಿಧಿಸಿರುವುದರಿಂದಾಗಿ ಭಾರತದ ಆಟೊಮೊಬೈಲ್, ಎಲೆಕ್ಟ್ರಾನಿಕ್ಸ್ ಸೇರಿದಂತೆ ಕೆಲವು ವಲಯಗಳಿಗೆ ತೊಂದರೆ ಆಗಿದೆ.

ಪ್ರವಾಹ, ಭೂಕುಸಿತ 17 ಮಂದಿ ಸಾವು

ಮೆಡಾನ್ (ಎಪಿ): ಇಂಡೊನೇಷ್ಯಾದ ಸುಮಾತ್ರಾ ದ್ವೀಪದಲ್ಲಿ ಸುರಿದ ಧಾರಾಕಾರ ಮಳೆಯಿಂದಾಗಿ ಪ್ರವಾಹ–ಭೂಕುಸಿತ ಸಂಭವಿಸಿದ್ದು, ಕನಿಷ್ಠ 17 ಜನರು ಮೃತಪಟ್ಟು, ಆರು ಮಂದಿ ಗಾಯಗೊಂಡಿದ್ದಾರೆ.

ರಸ್ತೆಗೆ ಮಣ್ಣು ಕುಸಿದಿದ್ದು, ಬಂಡೆಗಳು ಉರುಳಿವೆ. ಮರಗಳು ಅಡ್ಡಲಾಗಿ ಬಿದ್ದಿರುವುದರಿಂದ ಸ್ಥಳಕ್ಕೆ ತೆರಳಲು ರಕ್ಷಣಾ ಸಿಬ್ಬಂದಿ ಹರಸಾಹಸ ಮಾಡಬೇಕಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ರಕ್ಷಣಾ ಸಿಬ್ಬಂದಿಯು ಐವರ ಮೃತದೇಹಗಳನ್ನು ಪತ್ತೆಹಚ್ಚಿದ್ದು, ಗಾಯಗೊಂಡಿದ್ದ ಮೂವರನ್ನು ರಕ್ಷಿಸಿದ್ದಾರೆ. ನಾಪತ್ತೆಯಾಗಿರುವ ನಾಲ್ವರಿಗಾಗಿ ಶೋಧ ನಡೆಸಿದ್ದಾರೆ ಎಂದಿದ್ದಾರೆ.

ಮುಂಬೈ ಧಾರಣೆ (ಶೇಂಗಾ)

26-11-2025	
ಜಾವಾ 70/80(ಹೊಸ)	10700-10800
ಜಾವಾ 80/90(ಹೊಸ)	10000-10100
ದಪ್ಪ ಮಧ್ಯಪ್ರದೇಶ (ಹೊಸ)	7900-8000
ದಪ್ಪ ಗುಜರಾತ್ (ಹೊಸ)	9000-9100
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1560 (1560)
ಒಂದು ವಾರದ ಡೆಲಿವರಿ	1555 (1555)
ಪಾಮ್ ವಾರದ ಡೆಲಿವರಿ	1238 (1243)
ಸೂರ್ಯಕಾಂತಿ ಎಣ್ಣೆ ಕಚ್ಚಾ	1400 (1400)
ಚಿನ್ನ - ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10 ಗ್ರಾಂ	1,25,500 (1,24,750)
ಬೆಳ್ಳಿ ಕೆ.ಜಿಗೆ	1,58,800 (1,56,500)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ರಷ್ಯಾ, ಉಕ್ರೇನ್‌ಗೆ ರಾಯಭಾರಿ: ಟ್ರಂಪ್

ವಾಷಿಂಗ್ಟನ್ (ಎಪಿ): ಉಕ್ರೇನ್‌ನಲ್ಲಿ ನಡೆಯುತ್ತಿರುವ ಯುದ್ಧವನ್ನು ಕೊನೆಗೊಳಿಸಲು ಸೂಕ್ಷ್ಮ ತಂತ್ರವೊಂದನ್ನು ರೂಪಿಸಿರುವುದಾಗಿ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಮಂಗಳವಾರ ಹೇಳಿದ್ದಾರೆ.

ರಷ್ಯಾ ಅಧ್ಯಕ್ಷ ವ್ಲಾದಿಮಿರ್ ಪುಟಿನ್, ರಾಯಭಾರಿ ಸ್ಟೀವ್ ವಿಟ್ಕಾಫ್ ಮತ್ತು ಉಕ್ರೇನಿಯನ್ ಅಧಿಕಾರಿಗಳನ್ನು ಭೇಟಿ ಮಾಡಲು ಸೇನಾ ಕಾರ್ಯದರ್ಶಿ ಡ್ಯಾನ್ ಡ್ರಿಸ್ಕಾಲ್ ಅವರನ್ನು ಕಳುಹಿಸುವುದಾಗಿಯೂ ಹೇಳಿದ್ದಾರೆ.

ಮಂಗಳವಾರ ಸಂಜೆ ಏರ್‌ಫೋರ್ಸ್ ಒನ್‌ನಲ್ಲಿ ಮಾತನಾಡಿದ ಟ್ರಂಪ್, 'ಯುದ್ಧ ನಿಲ್ಲಿಸುವುದು ಕಷ್ಟ. ಅದಕ್ಕಾಗಿ ಪ್ರಸ್ತುತ 28 ಅಂಶಗಳ ತಂತ್ರವೊಂದನ್ನು ರೂಪಿಸಲಾಗಿದೆ. ಇದನ್ನೊಂದು ಪರಿಕಲ್ಪನೆ ಎಂದೇ ಹೇಳಬಹುದು' ಎಂದಿದ್ದಾರೆ.

ಸುಮಾರು ನಾಲ್ಕು ವರ್ಷಗಳಿಂದ ನಡೆಯುತ್ತಿರುವ ಯುದ್ಧವನ್ನು ಕೊನೆಗೊಳಿಸುವ ಉದ್ದೇಶದಿಂದ ರೂಪಿಸಲಾದ ಟ್ರಂಪ್ ಅವರ ಈ ತಂತ್ರ ಕಳೆದ ವಾರ ಹೊರಬಿದ್ದಿದೆ.

ಸೆನ್ಸೆಕ್ಸ್ 1,022 ಅಂಶ ಜಿಗಿತ

ಬಡ್ಡಿ ದರ ಕಡಿತಗೊಳಿಸುವ ನಿರೀಕ್ಷೆ ಹೆಚ್ಚಳದಿಂದ ಏರಿಕೆ



ಮುಂಬೈ (ಪಿಟಿಐ): ಅಮೆರಿಕದ ಫೆಡರಲ್ ರಿಸರ್ವ್ ಬಡ್ಡಿ ದರ ಕಡಿತಗೊಳಿಸುವ ಬಗ್ಗೆ ಹೂಡಿಕೆದಾರರಲ್ಲಿ ನಿರೀಕ್ಷೆ ಹೆಚ್ಚಳವಾಗಿರುವುದು ಮತ್ತು ವಿದೇಶಿ ಬಂಡವಾಳದ ಒಳಹರಿವಿನಿಂದ ದೇಶದ ಷೇರುಪೇಟೆ ಸೂಚ್ಯಂಕಗಳು ಬುಧವಾರದ ವಹಿವಾಟಿನಲ್ಲಿ ಏರಿಕೆ ಕಂಡಿವೆ.

ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 1,022 ಅಂಶ ಏರಿಕೆಯಾಗಿ, 85,609ಕ್ಕೆ ವಹಿವಾಟು ಅಂತ್ಯಗೊಂಡಿದೆ. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 320 ಅಂಶ ಹೆಚ್ಚಳವಾಗಿ 26,205ಕ್ಕೆ ತಲುಪಿದೆ.

ರಷ್ಯಾ ಮತ್ತು ಉಕ್ರೇನ್ ನಡುವೆ ನಡೆಯುತ್ತಿರುವ ಯುದ್ಧಕೊನೆಗೊಳಿಸಲು ಒಪ್ಪಂದವೊಂದು ಸಾಧ್ಯವಾಗಬಹುದು ಎಂಬ ಆಶಾವಾದ ಹೆಚ್ಚಳವಾಗಿದೆ. ಇದು ಹೂಡಿಕೆದಾರರಿಗೆ ಉತ್ತೇಜನ ನೀಡಿದ್ದರಿಂದ ವಿವಿಧ ವಲಯಗಳ ಷೇರು ಖರೀದಿ ಹೆಚ್ಚಳವಾಯಿತು. ಇದರಿಂದ ಷೇರುಪೇಟೆ ಸೂಚ್ಯಂಕಗಳು ಏರಿಕೆ ಕಂಡವು ಎಂದು ಮಾರುಕಟ್ಟೆ ತಜ್ಞರು ಹೇಳಿದ್ದಾರೆ.

ಏಷ್ಯಾದ ಮಾರುಕಟ್ಟೆಯಲ್ಲಿ ದಕ್ಷಿಣ ಕೊರಿಯಾ, ಜಪಾನ್ ಮತ್ತು ಹಾಂಗ್‌ಕಾಂಗ್ ಮಾರುಕಟ್ಟೆಗಳು ಸಕಾರಾತ್ಮಕ ವಹಿವಾಟಿನಲ್ಲಿ ಅಂತ್ಯಗೊಂಡಿವೆ. ಶಾಂಘೈ ಮಾತ್ರ ನಕಾರಾತ್ಮಕ ವಹಿವಾಟು ಕಂಡಿದೆ.

'ಡಿಸೆಂಬರ್‌ನಲ್ಲಿ ಫೆಡರಲ್ ರಿಸರ್ವ್ ಬಡ್ಡಿ ದರ ಕಡಿತಗೊಳಿಸುವ ನಿರೀಕ್ಷೆ ಹೆಚ್ಚಿದೆ. ಮುಂದಿನ ತಿಂಗಳು ಆರ್‌ಬಿಐ ರೆಪೊ ದರವನ್ನು ಶೇ 0.25ರಷ್ಟು ಕಡಿತಗೊಳಿಸುವ ನಿರೀಕ್ಷೆ ಇದೆ. ಇದು ಕೂಡ ಹೂಡಿಕೆದಾರರಿಗೆ ಉತ್ತೇಜನ ನೀಡಿತು. ಇದರಿಂದ ದೇಶದ ಷೇರುಪೇಟೆ ಸೂಚ್ಯಂಕಗಳು ಏರಿಕೆ ಕಂಡಿವೆ' ಎಂದು ರೆಲಿಗೇರ್ ಬ್ರೋಕಿಂಗ್ ಲಿಮಿಟೆಡ್‌ನ ಹಿರಿಯ ಉಪಾಧ್ಯಕ್ಷ (ಸಂಶೋಧನೆ) ಅಜಿತ್ ಮಿಶ್ರಾ ಹೇಳಿದ್ದಾರೆ.

ಮಂಗಳವಾರದ ವಹಿವಾಟಿನಲ್ಲಿ ವಿದೇಶಿ ಸಾಂಸ್ಥಿಕ ಹೂಡಿಕೆದಾರರು ₹785 ಕೋಟಿ ಮೌಲ್ಯದ ಷೇರುಗಳನ್ನು ಖರೀದಿ ಮಾಡಿದ್ದರೆ, ದೇಶೀಯ ಸಾಂಸ್ಥಿಕ ಹೂಡಿಕೆದಾರರು ₹3,912 ಕೋಟಿ ಮೌಲ್ಯದ ಷೇರು ಖರೀದಿಸಿದ್ದಾರೆ.

ಜಾಗತಿಕ ಮಾರುಕಟ್ಟೆಯಲ್ಲಿ ಬ್ರೆಂಟ್ ಕಚ್ಚಾ ತೈಲ ದರವು ಶೇ 0.03ರಷ್ಟು ಏರಿಕೆಯಾಗಿದೆ. ಪ್ರತಿ ಬ್ಯಾರಲ್ ದರವು 62.50 ಡಾಲರ್ ಆಗಿದೆ.

ರಿಲಯನ್ಸ್ ಎಂ–ಕ್ಯಾಪ್ ಹೆಚ್ಚಳ: ರಿಲಯನ್ಸ್ ಇಂಡಸ್ಟ್ರೀಸ್ ಲಿಮಿಟೆಡ್‌ನ ಷೇರಿನ ಮೌಲ್ಯ ಶೇ 2ರಷ್ಟು ಏರಿಕೆಯಾಗಿದೆ. ಇದರಿಂದ ಕಂಪನಿಯ ಮಾರುಕಟ್ಟೆ ಬಂಡವಾಳದ ಮೌಲ್ಯ (ಎಂ–ಕ್ಯಾಪ್) ₹21.24 ಲಕ್ಷ ಕೋಟಿಗೆ ಏರಿಕೆ ಆಗಿದೆ.

ಚಿನ್ನ, ಬೆಳ್ಳಿ ದರ ಏರಿಕೆ

ಇಲ್ಲಿನ ಚಿನಿವಾರ ಪೇಟೆಯಲ್ಲಿ ಬುಧವಾರದ ವಹಿವಾಟಿನಲ್ಲಿ ಚಿನ್ನ ಮತ್ತು ಬೆಳ್ಳಿ ಧಾರಣೆ ಏರಿಕೆ ಆಗಿದೆ.

10 ಗ್ರಾಂ ಚಿನ್ನದ (ಶೇ 99.9ರಷ್ಟು ಪರಿಶುದ್ಧತೆ) ದರವು ₹1,200 ಹೆಚ್ಚಳವಾಗಿ, ₹1,30,100ರಂತೆ ಮಾರಾಟವಾಗಿದೆ. ಆಭರಣ ಚಿನ್ನದ (ಶೇ 99.5ರಷ್ಟು ಪರಿಶುದ್ಧತೆ) ಬೆಲೆ ಇಷ್ಟೇ ಪ್ರಮಾಣದಲ್ಲಿ ಏರಿಕೆಯಾಗಿ, ₹1,29,500 ಆಗಿದೆ. ಬೆಳ್ಳಿ ಧಾರಣೆ ಕೆ.ಜಿಗೆ ₹2,300 ಜಿಗಿತವಾಗಿ, ₹1,63,100 ಆಗಿದೆ ಎಂದು ಅಖಿಲ ಭಾರತ ಸರಾಫ್ ಅಸೋಸಿಯೇಷನ್ ತಿಳಿಸಿದೆ. ಜಾಗತಿಕ ಮಾರುಕಟ್ಟೆಯಲ್ಲಿ ಚಿನ್ನದ ದರವು ಏರಿಕೆ ಆಗಿರುವುದು ಮತ್ತು ಫೆಡರಲ್ ರಿಸರ್ವ್ ಬಡ್ಡಿ ದರ ಕಡಿತಗೊಳಿಸುವ ನಿರೀಕ್ಷೆ ಹೆಚ್ಚಳವೇ ಹಳದಿ ಲೋಹದ ಬೆಲೆ ಏರಿಕೆಗೆ ಕಾರಣ ಎಂದು ತಿಳಿಸಿದೆ.

ಬಿಸಿಸಿಐ ಜೊತೆ ಏಷ್ಯನ್ ಪೇಂಟ್ಸ್ ಪಾಲುದಾರಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ) ಜೊತೆ ಏಷ್ಯನ್ ಪೇಂಟ್ಸ್ 'ಭಾರತ ಕ್ರಿಕೆಟ್‌ನ ಅಧಿಕೃತ ಕಲರ್ ಪಾರ್ಟ್‌ನರ್' ಒಪ್ಪಂದ ಮಾಡಿಕೊಂಡಿದೆ.

ಇದು ಮೂರು ವರ್ಷಗಳ ಅವಧಿಯ ಒಪ್ಪಂದ. ಬಿಸಿಸಿಐ ಜೊತೆ ಒಪ್ಪಂದ ಮಾಡಿಕೊಂಡ ಮೊದಲ ಪೇಂಟ್ಸ್ ಕಂಪನಿ ತಾನು ಎಂದು ಏಷ್ಯನ್ ಪೇಂಟ್ಸ್ ತಿಳಿಸಿದೆ.

'ದೇಶದ 140 ಕೋಟಿ ಹೃದಯಗಳನ್ನು ಕ್ರಿಕೆಟ್ ಒಗ್ಗೂಡಿಸುತ್ತದೆ. ಬಿಸಿಸಿಐ ಜೊತೆ ಪಾಲುದಾರಿಕೆ ಮಾಡಿಕೊಂಡಿರುವುದು ನಮಗೆ ಸಂತಸ ಮೂಡಿಸಿದೆ' ಎಂದು ಏಷ್ಯನ್ ಪೇಂಟ್ಸ್ ಲಿಮಿಟೆಡ್‌ನ ವ್ಯವಸ್ಥಾಪಕ ನಿರ್ದೇಶಕ ಮತ್ತು ಸಿಇಒ ಅಮಿತ್ ಸಿಂಗ್ಲೆ ಹೇಳಿದ್ದಾರೆ.

ಬಿಸಿಸಿಐ ವಕ್ತಾರ ದೇವಜಿತ್ ಸೈಕಿಯಾ ಮಾತನಾಡಿ, 'ಜನರ ಜೀವನಕ್ಕೆ ಬಣ್ಣ ಮತ್ತು ಭಾವನೆಗಳನ್ನು ಸೇರಿಸುವ ಏಷ್ಯನ್ ಪೇಂಟ್ಸ್‌ನ ಪರಂಪರೆಯು ಭಾರತೀಯ ಕ್ರಿಕೆಟ್‌ನ ಉತ್ಸಾಹ ಹೆಚ್ಚಿಸುತ್ತದೆ' ಎಂದು ಹೇಳಿದ್ದಾರೆ.

ಸುದ್ದಿ 2 ನಿಮಿಷ

ಅಕ್ಕಿ ಉತ್ಪಾದನೆ ಹೆಚ್ಚಳ

ನವದೆಹಲಿ (ಪಿಟಿಐ): ಮುಂಗಾರು ಹಂಗಾಮಿನಲ್ಲಿ ದೇಶದಲ್ಲಿ ಅಕ್ಕಿ ಉತ್ಪಾದನೆಯು ದಾಖಲೆಯ 12.45 ಕೋಟಿ ಟನ್ ಆಗಿದೆ ಎಂದು ಕೇಂದ್ರ ಕೃಷಿ ಸಚಿವಾಲಯ ಹೇಳಿದೆ. ಇದು ಹಿಂದಿನ ವರ್ಷದ ಇದೇ ಅವಧಿಯ ಉತ್ಪಾದನೆಗೆ ಹೋಲಿಸಿದರೆ ಶೇಕಡ 1.4ರಷ್ಟು ಹೆಚ್ಚು.

ಆದರೆ ದ್ವಿದಳ ಧಾನ್ಯಗಳು, ಎಣ್ಣೆಕಾಳುಗಳು ಮತ್ತು ಹತ್ತಿಯ ಉತ್ಪಾದನೆಯು ಕಡಿಮೆ ಆಗಿದೆ. 2025–26ನೇ ವರ್ಷದ ಮುಂಗಾರು ಹಂಗಾಮಿನಲ್ಲಿ ದೇಶದ ಒಟ್ಟು ಆಹಾರ ಧಾನ್ಯ ಉತ್ಪಾದನೆಯು 17.33 ಕೋಟಿ ಟನ್ ಆಗಿದೆ ಎಂದು ಸಚಿವಾಲಯ ಸಿದ್ಧಪಡಿಸಿರುವ ಮೊದಲ ಮುಂಗಡ ಅಂದಾಜಿನಲ್ಲಿ ಹೇಳಲಾಗಿದೆ.

ಹಿಂದಿನ ವರ್ಷದ ಮುಂಗಾರು ಹಂಗಾಮಿನಲ್ಲಿ ದೇಶದಲ್ಲಿ 16.95 ಕೋಟಿ ಟನ್ ಆಹಾರ ಧಾನ್ಯ ಉತ್ಪಾದನೆ ಆಗಿತ್ತು. ಹಿಂದಿನ ವರ್ಷದ ಮುಂಗಾರು ಹಂಗಾಮಿನಲ್ಲಿ ಅಕ್ಕಿಯ ಉತ್ಪಾದನೆಯು 12.28 ಕೋಟಿ ಟನ್‌ಗಳಷ್ಟು ಇತ್ತು.

ಮುಂಗಾರು ಹಂಗಾಮಿನ ಬೆಳೆಗಳನ್ನು ಸೆಪ್ಟೆಂಬರ್–ಅಕ್ಟೋಬರ್‌ನಲ್ಲಿ ಕೊಯ್ಲು ಮಾಡಲಾಗುತ್ತದೆ. ಅಕ್ಕಿಯು ಮುಂಗಾರು ಹಂಗಾಮಿನ ಪ್ರಮುಖ ಬೆಳೆಯಾಗಿದೆ.



'ದೇಶದ ಕೆಲವು ಭಾಗಗಳಲ್ಲಿ ಸುರಿದ ಅತಿವೃಷ್ಟಿಯು ಬೆಳೆಗಳಿಗೆ ಹಾನಿ ಉಂಟುಮಾಡಿದೆ. ಆದರೆ ಹೆಚ್ಚಿನ ಪ್ರದೇಶಗಳು ಉತ್ತಮ ಮುಂಗಾರು ಮಳೆಯಿಂದಾಗಿ ಪ್ರಯೋಜನ ಪಡೆದಿವೆ. ಇದರಿಂದಾಗಿ ಒಟ್ಟಾರೆಯಾಗಿ ಬೆಳೆ ಹೆಚ್ಚಾಗಿದೆ' ಎಂದು ಕೇಂದ್ರ ಕೃಷಿ ಸಚಿವ ಶಿವರಾಜ್ ಸಿಂಗ್ ಚೌಹಾಣ್ ಹೇಳಿದ್ದಾರೆ.

ಸುಂಕ ವಿನಾಯಿತಿ ರದ್ದು ಸಂಕಷ್ಟದಲ್ಲಿ ವಿದೇಶಿ ವ್ಯಾಪಾರಸ್ಥರು

ನ್ಯೂಯಾರ್ಕ್ (ಎಪಿ): ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಸುಂಕ ವಿನಾಯಿತಿಯನ್ನು ರದ್ದು ಮಾಡಿದ್ದರಿಂದ ಅಲ್ಲಿನ ಗ್ರಾಹಕರನ್ನು ನೆಚ್ಚಿಕೊಂಡಿದ್ದ ಕೆನಡಾ ವ್ಯಾಪಾರಸ್ಥರು ಸಂಕಷ್ಟದಲ್ಲಿ ಸಿಲುಕಿದ್ದಾರೆ.

ಕೆನಡಾದ ಪ್ರಿನ್ಸ್ ಎಡ್ವರ್ಡ್ ದ್ವೀಪದ ಬುಕೊಲಿಕ್ ಬೆಲ್‌ಫಾಸ್ಟ್‌ನಲ್ಲಿರುವ ಉಣ್ಣೆ ಮತ್ತು ನೂಲಿನ ಅಂಗಡಿ 'ಫ್ಲೀಸ್ ಆ್ಯಂಡ್ ಆ್ಯಂಪ್; ಹಾರ್ಮೋನಿ' ಮಾಲೀಕರಾದ ಕಿಮ್ ದೊಹರ್ಟಿ ಅವರು ಅಮೆರಿಕದ ಗ್ರಾಹಕರಿಗೆ ನೂಲಿನ ಉಂಡೆಯನ್ನು ರಫ್ತು ಮಾಡುತ್ತಿದ್ದರು. ಮೊದಲು 800 ಡಾಲರ್ ಒಳಗಿನ ಬೆಲೆಯ ಪ್ಯಾಕೇಜ್‌ಗಳಿಗೆ ರಫ್ತು ವಿನಾಯಿತಿ ಇತ್ತು. ಆದರೆ ಟ್ರಂಪ್ ನೇತೃತ್ವದ ಆಡಳಿತವು ಆಗಸ್ಟ್ 29ರಿಂದ ಸುಂಕ ವಿನಾಯಿತಿಯನ್ನು ರದ್ದು ಮಾಡಿದೆ. ಅನಂತರ ಅಮೆರಿಕದ ಗ್ರಾಹಕರಿಗೆ ನೂಲಿನ ಉಂಡೆ ಕಳುಹಿಸಲು ತಗಲುವ ವೆಚ್ಚ ದುಪ್ಪಟ್ಟಾಗಿದೆ. ಇದರಿಂದ ವ್ಯಾಪಾರಕ್ಕೆ ಹಿನ್ನಡೆ ಉಂಟಾಗಿದೆ.

ಅಮೆರಿಕದಲ್ಲಿ ರಜೆ ಆರಂಭವಾಗಿರುವುದರಿಂದ ಖರೀದಿಗೆ ಇದು ಸಂಕ್ರಮಣ ಕಾಲ. ಆದರೆ ಟ್ರಂಪ್ ಅವರ ನಿರ್ಧಾರದಿಂದ ಸಣ್ಣ ವ್ಯಾಪಾರಿಗಳು ಮತ್ತು ಅಂಗಡಿಗಳ ಮಾಲೀಕರು ಬೆಲೆ ಏರಿಕೆಯ ಬಿಸಿ ಅನುಭವಿಸುತ್ತಿದ್ದಾರೆ.

ಕಟ್ಟಡಗಳಿಗೆ ಬೆಂಕಿ: 36 ಮಂದಿ ಸಾವು

ಹಾಂಗ್‌ಕಾಂಗ್ (ಎಪಿ): ಇಲ್ಲಿನ ವಸತಿ ಸಮುಚ್ಚಯವೊಂದರ ಬಹುಮಹಡಿ ಕಟ್ಟಡಗಳಲ್ಲಿ ಬೆಂಕಿ ಅವಘಡ ಸಂಭವಿಸಿದ ಪರಿಣಾಮ 36 ಮಂದಿ ಮೃತಪಟ್ಟಿದ್ದಾರೆ.

'ಈ ಘಟನೆಯಲ್ಲಿ 279 ಮಂದಿ ನಾಪತ್ತೆಯಾಗಿದ್ದಾರೆ. ಕಟ್ಟಡಗಳಲ್ಲಿದ್ದ 700 ಜನರನ್ನು ತಾತ್ಕಾಲಿಕ ಆಶ್ರಯತಾಣಗಳಿಗೆ ಸ್ಥಳಾಂತರಿಸಲಾಗಿದೆ' ಎಂದು ಅಧಿಕಾರಿಗಳು ಬುಧವಾರ ತಿಳಿಸಿದ್ದಾರೆ.

ನಿರ್ಮಾಣ ಕಾಮಗಾರಿಗಾಗಿ ಕಟ್ಟಡಗಳ ಸುತ್ತಲೂ ಬಿದಿರಿನ ಕಂಬಗಳನ್ನು ಅಳವಡಿಸಿದ್ದರಿಂದ ಬೆಂಕಿಯು ಮತ್ತಷ್ಟು ತೀವ್ರವಾಗಿ ವ್ಯಾಪಿಸಿತ್ತು. ದಟ್ಟ ಹೊಗೆ ಮತ್ತು ಜ್ವಾಲೆ ಕಟ್ಟಡಗಳನ್ನು ಆವರಿಸಿಕೊಂಡಿತ್ತು.



ಬಹುಮಹಡಿ ಕಟ್ಟಡಗಳಲ್ಲಿ ಸಂಭವಿಸಿದ ಬೆಂಕಿ ಅವಘಡ — ಎಪಿ ಚಿತ್ರ

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)

ಅರಸೀಕೆರೆ	₹27550-27550
ಪುತ್ತೂರು	₹6000-24500
ತುಮಕೂರು	₹15000-19000

ಹಸೀನಾ ಹಸ್ತಾಂತರ: ಪ್ರತಿಕ್ರಿಯೆ ಬಯಸಿದ ಬಾಂಗ್ಲಾ

ಢಾಕಾ (ಪಿಟಿಐ): 'ಬಾಂಗ್ಲಾದೇಶದ ಪದಚ್ಯುತ ಪ್ರಧಾನಿ ಶೇಖ್ ಹಸೀನಾ ಅವರ ಹಸ್ತಾಂತರ ಕುರಿತು ಈ ಹಿಂದೆ ಮಾಡಿದ್ದ ಮನವಿಗೆ ಭಾರತ ಪ್ರತಿಕ್ರಿಯೆ ನೀಡಿಲ್ಲ. ಆದರೆ ಈಗ ಪರಿಸ್ಥಿತಿ ಭಿನ್ನವಾಗಿದೆ. ನ್ಯಾಯಿಕ ಪ್ರಕ್ರಿಯೆ ಮುಗಿದು, ಮಾಜಿ ಪ್ರಧಾನಿ ಶಿಕ್ಷೆಗೆ ಗುರಿಯಾಗಿದ್ದಾರೆ. ಹೀಗಾಗಿ ಭಾರತದಿಂದ ನಾವು ಪ್ರತಿಕ್ರಿಯೆ ಬಯಸುತ್ತೇವೆ' ಎಂದು ಬಾಂಗ್ಲಾದೇಶದ ಸರ್ಕಾರ ಬುಧವಾರ ಹೇಳಿದೆ.

'ಮಾನವೀಯತೆ ಮೇಲಿನ ದಾಳಿ' ಕುರಿತ ಆರೋಪವು ಸಾಬೀತಾದ ನಂತರ ಅಂತರರಾಷ್ಟ್ರೀಯ ವಿಶೇಷ ನ್ಯಾಯಮಂಡಳಿ 78 ವರ್ಷದ ಹಸೀನಾ ಅವರಿಗೆ ನವೆಂಬರ್ 17ರಂದು ಮರಣ ದಂಡನೆ ವಿಧಿಸಿತ್ತು. ಇದಾದ ನಂತರ ಕಳೆದ ವಾರ ಮುಹಮ್ಮದ್ ಯೂನಸ್ ಅವರ ನೇತೃತ್ವದ ಮಧ್ಯಂತರ ಸರ್ಕಾರ ಭಾರತ ಸರ್ಕಾರಕ್ಕೆ ಅಧಿಕೃತ ಪತ್ರವೊಂದನ್ನು ರವಾನಿಸಿದೆ. ಇತ್ತೀಚಿನ ಮನವಿಗೆ ನಾವು ಭಾರತದ ಪ್ರತಿಕ್ರಿಯೆ ನಿರೀಕ್ಷಿಸುತ್ತಿದ್ದೇವೆ' ಎಂದು ಬಾಂಗ್ಲಾ ವಿದೇಶಾಂಗ ಇಲಾಖೆ ಸಲಹೆಗಾರ ಎಂ. ತೌಹಿದ್ ಹುಸೇನ್ ಸುದ್ದಿಗಾರರಿಗೆ ತಿಳಿಸಿದ್ದಾರೆ.

'ಅವರು (ಭಾರತ ಸರ್ಕಾರ) ಒಂದು ವಾರದಲ್ಲಿ ಉತ್ತರ ನೀಡಬಹುದು ಎಂದೇನೂ ನಾನು ನಿರೀಕ್ಷಿಸುವುದಿಲ್ಲ. ಆದರೆ, ಉತ್ತರ ನೀಡಲೇಬೇಕೆಂದು ಬಯಸುತ್ತೇವೆ. ಎರಡೂ ದೇಶಗಳ ನಡುವಿನ ಹಸ್ತಾಂತರ ಒಪ್ಪಂದದ ಅನ್ವಯ ಹಸೀನಾ ಅವರನ್ನು ವಶಕ್ಕೆ ಒಪ್ಪಿಸಬೇಕೆಂದು ನವದೆಹಲಿಯಲ್ಲಿರುವ ಬಾಂಗ್ಲಾ ಹೈಕಮಿಷನ್ ಭಾರತಕ್ಕೆ ಅಧಿಕೃತ ಮನವಿ ಸಲ್ಲಿಸಿತ್ತು' ಎಂದರು.

ಭಾರಿ ಪ್ರತಿಭಟನೆ, ಹಿಂಸಾಚಾರದ ನಂತರ ಪದಚ್ಯುತಿಗೊಂಡಿದ್ದ ಶೇಖ್ ಹಸೀನಾ ಅವರು 2024ರ ಆಗಸ್ಟ್‌ನಿಂದ ಭಾರತದಲ್ಲಿ ಆಶ್ರಯ ಪಡೆದಿದ್ದಾರೆ.

'ಪರಾರಿಯಾದ ಅಪರಾಧಿಗಳ' ಹಸ್ತಾಂತರಕ್ಕಾಗಿ ಹೇಗ್‌ನಲ್ಲಿರುವ ಅಂತರರಾಷ್ಟ್ರೀಯ ಅಪರಾಧಿಕ ನ್ಯಾಯಾಲಯದ (ಐಸಿಸಿ) ಮೊರೆಹೋಗಲು ಚಿಂತನೆ ನಡೆಸುತ್ತಿರುವುದಾಗಿ ಮಧ್ಯಂತರ ಸರ್ಕಾರದ ಕಾನೂನು ಸಲಹೆಗಾರ ಆಸಿಫ್ ನಸ್ರುಲ್ ನವೆಂಬರ್ 20ರಂದು ಹೇಳಿದ್ದರು.

ಮನವಿ ಪರಿಶೀಲಿಸಿ ನಿರ್ಧಾರ–ಭಾರತ

ನವದೆಹಲಿ (ಪಿಟಿಐ): ಪದಚ್ಯುತ ಪ್ರಧಾನಿ ಶೇಖ್ ಹಸೀನಾ ಅವರನ್ನು ಹಸ್ತಾಂತರಿಸುವಂತೆ ಕೋರಿ ಬಾಂಗ್ಲಾದೇಶದ ಮನವಿ ಕುರಿತು ಪರಿಶೀಲನೆ ನಡೆಸಲಾಗುತ್ತಿದೆ ಎಂದು ಭಾರತ ಬುಧವಾರ ಹೇಳಿದೆ.



ಶೇಖ್ ಹಸೀನಾ

'ಈ ಮನವಿಯು ಹಲವು ನ್ಯಾಯಿಕ ಹಾಗೂ ಆಂತರಿಕ ಕಾನೂನು ಪ್ರಕ್ರಿಯೆಗಳನ್ನು ಒಳಗೊಂಡಿರುವ ಕಾರಣ, ವ್ಯಾಪಕ ಪರಿಶೀಲನೆ ನಡೆಸಲಾಗುತ್ತಿದೆ. ಬಾಂಗ್ಲಾದೇಶದಲ್ಲಿ ಶಾಂತಿ ಸ್ಥಾಪನೆ, ಪ್ರಜಾಪ್ರಭುತ್ವ ಮೌಲ್ಯಗಳನ್ನು ಎತ್ತಿಹಿಡಿಯುವುದು ಸೇರಿ ಆ ರಾಷ್ಟ್ರದ ಜನರ ಹಿತಾಸಕ್ತಿಗಳನ್ನು ಗಮನದಲ್ಲಿ ಇಟ್ಟುಕೊಂಡು ಸೂಕ್ತ ನಿರ್ಧಾರ ಕೈಗೊಳ್ಳಲಾಗುವುದು' ಎಂದು ವಿದೇಶಾಂಗ ಸಚಿವಾಲಯ ವಕ್ತಾರ ರಣಧೀರ್ ಜೈಸ್ವಾಲ್ ಹೇಳಿದ್ದಾರೆ.

ಎಲ್ ಆ್ಯಂಡ್ ಟಿ–ಕ್ಲೌಡ್‌ಫಿನಿಟಿ ಈಗ 'ವ್ಯೋಮ'

ಬೆಂಗಳೂರು: ಲಾರ್ಸನ್ ಆ್ಯಂಡ್ ಟೂಬ್ರೊ ಕಂಪನಿಯು ತನ್ನ ದತ್ತಾಂಶ ಕೇಂದ್ರ ವಹಿವಾಟಿನ ಹೆಸರನ್ನು 'ಲಾರ್ಸನ್ ಆ್ಯಂಡ್ ಟೂಬ್ರೊ ವ್ಯೋಮ' ಎಂದು ಬದಲಾಯಿಸಿದೆ.

ಈ ಮೊದಲು ಈ ವಹಿವಾಟಿನ ಹೆಸರು 'ಎಲ್‌ಆ್ಯಂಡ್‌ಟಿ–ಕ್ಲೌಡ್‌ಫಿನಿಟಿ' ಎಂದಾಗಿತ್ತು. ಸಂಸ್ಕೃತದ 'ವ್ಯೋಮ' ಹೆಸರಿನಿಂದ ಸ್ಫೂರ್ತಿ ಪಡೆದು ಈ ಹೆಸರು ಇಡಲಾಗಿದೆ ಎಂದು ಕಂಪನಿ ತಿಳಿಸಿದೆ.

'ಭಾರತದ ದತ್ತಾಂಶ ಕೇಂದ್ರ ಮಾರುಕಟ್ಟೆಯ ಗಾತ್ರವು ಮುಂದಿನ ಕೆಲವು ವರ್ಷಗಳಲ್ಲಿ ಭಾರಿ ಪ್ರಮಾಣದ ಬೆಳವಣಿಗೆ ಕಾಣುವ ಅಂದಾಜಿದೆ. ದೇಶದ ಡಿಜಿಟಲ್ ಮಹತ್ವಾಕಾಂಕ್ಷೆಯನ್ನು ಬೆಂಬಲಿಸುವ ವಿಶ್ವಾಸಾರ್ಹ ವ್ಯವಸ್ಥೆಯನ್ನು ಕಟ್ಟುವ ನಮ್ಮ ದೂರದೃಷ್ಟಿಯನ್ನು ಹೊಸ ಹೆಸರು ಪ್ರತಿನಿಧಿಸುತ್ತದೆ' ಎಂದು ಎಲ್‌ಆ್ಯಂಡ್‌ಟಿ ಕಂಪನಿಯ ಎಂ.ಡಿ. ಹಾಗೂ ಅಧ್ಯಕ್ಷ ಎಸ್.ಎನ್. ಸುಬ್ರಹ್ಮಣ್ಯನ್ ಹೇಳಿದ್ದಾರೆ.

ಸಫ್ರಾನ್ ಘಟಕಕ್ಕೆ ಪ್ರಧಾನಿ ಚಾಲನೆ

ಹೈದರಾಬಾದ್ (ಪಿಟಿಐ): ಹೈದರಾಬಾದ್‌ನಲ್ಲಿ ನಿರ್ಮಾಣವಾಗಿರುವ ಫ್ರಾನ್ಸ್‌ನ ಸಫ್ರಾನ್ ವಿಮಾನ ತಯಾರಿಕಾ ಘಟಕಕ್ಕೆ ಪ್ರಧಾನಿ ನರೇಂದ್ರ ಮೋದಿ ಅವರು ವರ್ಚುವಲ್ ಆಗಿ ಚಾಲನೆ ನೀಡಿದರು.

ಬಳಿಕ ಮಾತನಾಡಿದ ಅವರು, 'ಹೂಡಿಕೆದಾರರಿಗೆ ಭಾರತವು ನಂಬಿಕಸ್ಥ ಪಾಲುದಾರ. ಹೂಡಿಕೆದಾರರೆಂದರೆ ಸಹ ಸೃಷ್ಟಿಕರ್ತರಿದ್ದಂತೆ' ಎಂದು ಬಣ್ಣಿಸಿದರು.

'ಈ ಘಟಕವು ವಾಣಿಜ್ಯ ವಿಮಾನಗಳಲ್ಲಿ ಬಳಸುವ ಲೀಪ್ ಎಂಜಿನ್‌ಗಳನ್ನು ತಯಾರಿಸಲಿದೆ ಮತ್ತು ಯುವಜನರಿಗೆ ಉದ್ಯೋಗಾವಕಾಶಗಳನ್ನು ಒದಗಿಸಲಿದೆ' ಎಂದು ಅವರು ಬುಧವಾರ ಹೇಳಿದರು.

'ದೇಶದ ನಾಗರಿಕ ವಿಮಾನಯಾನ ವಲಯವು ವೇಗಗತಿಯಲ್ಲಿ ಬೆಳವಣಿಗೆ ಹೊಂದುತ್ತಿದೆ. ಈ ನಿಟ್ಟಿನಲ್ಲಿ ಸಫ್ರಾನ್ ಘಟಕವು ವಿಮಾನಗಳ ಎಂಜಿನ್, ಬಿಡಿಭಾಗಗಳು ಮತ್ತು ಪ್ರೊಪಲ್ಷನ್ ವ್ಯವಸ್ಥೆಯಲ್ಲಿ ಹೊಸ ಹೊಸ ವಿನ್ಯಾಸಗಳನ್ನು ಆವಿಷ್ಕರಿಸಬೇಕು' ಎಂದರು.

ಸಫ್ರಾನ್ ಏರ್‌ಕ್ರಾಫ್ಟ್ ಎಂಜಿನ್ ಸರ್ವೀಸಸ್ ಇಂಡಿಯಾ (ಎಸ್‌ಎಇಎಸ್‌ಐ) ಲೀಪ್ ಎಂಜಿನ್‌ಗಳ ಜಗತ್ತಿನ ಅತಿ ದೊಡ್ಡ ಎಂಆರ್‌ಒ (ಎಂಜಿನ್‌ಗಳ ನಿರ್ವಹಣೆ, ದುರಸ್ತಿ) ಘಟಕವಾಗಿದೆ. ಇದು 2026ರಿಂದ ಕಾರ್ಯಾರಂಭಿಸಲಿದ್ದು, ವಿಮಾನಯಾನ ಕ್ಷೇತ್ರದಲ್ಲಿ ದೇಶದ ಸಾಮರ್ಥ್ಯವನ್ನು ಬಲಪಡಿಸಲಿದೆ.

ನೂತನ ಘಟಕವು ವಾರ್ಷಿಕ ಗರಿಷ್ಠ 300 ಲೀಪ್ (ಎಲ್‌ಇಎಪಿ) ಎಂಜಿನ್‌ಗಳ ಸರ್ವೀಸ್ ಮಾಡುವಂತೆ ವಿನ್ಯಾಸಗೊಳಿಸಲಿದೆ. 1,000ಕ್ಕೂ ಹೆಚ್ಚು ತಂತ್ರಜ್ಞರು, ಎಂಜಿನಿಯರ್‌ಗಳಿಗೆ ಉದ್ಯೋಗ ನೀಡಲಿದೆ ಎಂದು ಪ್ರಧಾನ ಮಂತ್ರಿಯವರ ಕಾರ್ಯಾಲಯವು ತಿಳಿಸಿದೆ.

ಬೆಂಗಳೂರು–ಹೈದರಾಬಾದ್ ಡಿಫೆನ್ಸ್ ಕಾರಿಡಾರ್‌ಗೆ ಒತ್ತಾಯ

ಬೆಂಗಳೂರು–ಹೈದರಾಬಾದ್ ಪ್ರದೇಶವನ್ನು 'ಏರೋಸ್ಪೇಸ್ ಮತ್ತು ಡಿಫೆನ್ಸ್ ಕಾರಿಡಾರ್' ಎಂದು ಘೋಷಿಸುವಂತೆ ತೆಲಂಗಾಣ ಮುಖ್ಯಮಂತ್ರಿ ರೇವಂತ್ ರೆಡ್ಡಿ ಅವರು ಪ್ರಧಾನಿ ನರೇಂದ್ರ ಮೋದಿ ಅವರನ್ನು ಒತ್ತಾಯಿಸಿದರು.

ಸಫ್ರಾನ್ ಘಟಕಕ್ಕೆ ಚಾಲನೆ ನೀಡುವ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, 'ಕಳೆದ ಕೆಲವು ವರ್ಷಗಳಲ್ಲಿ ತೆಲಂಗಾಣದ ಏರೋಸ್ಪೇಸ್ ಮತ್ತು ಡಿಫೆನ್ಸ್ ವಲಯದಿಂದ ರಫ್ತು ದ್ವಿಗುಣವಾಗಿದೆ. ಕಳೆದ 9 ತಿಂಗಳಲ್ಲಿ ಸುಮಾರು ₹30,000 ಕೋಟಿ ಔಷಧ ರಫ್ತಾಗಿದೆ' ಎಂದು ತಿಳಿಸಿದರು.

'ನಾಗರಿಕ ವಿಮಾನಯಾನ ಸಚಿವಾಲಯದಿಂದ ತೆಲಂಗಾಣವು ಏರೊಸ್ಪೇಸ್ ಪ್ರಶಸ್ತಿ ಪಡೆದಿದೆ. ಏರೊಸ್ಪೇಸ್ ವಲಯದಲ್ಲಿ ಹೂಡಿಕೆಗೆ ಕೌಶಲ ಅಭಿವೃದ್ಧಿ ಅಗತ್ಯ. ಹೀಗಾಗಿ ಬೆಂಗಳೂರು–ಹೈದರಾಬಾದ್ ಪ್ರದೇಶವನ್ನು ಏರೊಸ್ಪೇಸ್ ಮತ್ತು ಡಿಫೆನ್ಸ್ ಕಾರಿಡಾರ್ ಎಂದು ಘೋಷಿಸಬೇಕು' ಎಂದು ಮನವಿ ಮಾಡಿದರು. ತೆಲಂಗಾಣದ ಏರೊಸ್ಪೇಸ್ ಮತ್ತು ರಕ್ಷಣಾ ವಲಯದ ಬೆಳವಣಿಗೆಯಲ್ಲಿ ಸಫ್ರಾನ್ ಘಟಕವು ಮಹತ್ವ ಮೈಲುಗಲ್ಲಾಗಲಿದೆ ಎಂದು ತಿಳಿಸಿದರು.



‘ಮುಂದೆ ತಪ್ಪು ಆಯ್ಕೆಗಳನ್ನು ಮಾಡಲ್ಲ’



ನೀನಾಸಂ ಸತೀಶ್

ಸತೀಶ್ ನೀನಾಸಂ ನಟಿಸುತ್ತಿರುವ ‘ದಿ ರೈಸ್ ಆಫ್ ಅಶೋಕ’ ಚಿತ್ರದ ಮೊದಲು ಹಾಡು ‘ಏಳೋ ಮಾದೇವ’ ಇತ್ತೀಚೆಗೆ ರಿಲೀಸ್ ಆಯಿತು. ಕನ್ನಡ, ತಮಿಳು ಹಾಗೂ ತೆಲುಗಿನಲ್ಲಿ ಈ ಸಿನಿಮಾ ಶೀಘ್ರದಲ್ಲೇ ತೆರೆಕಾಣಲಿದೆ. ಶಿವನ ಕುರಿತಾದ ಈ ಹಾಡಿಗೆ ಕೈಲಾಶ್ ಖೇರ್, ಸಾಧ್ವಿನಿ ಕೊಪ್ಪ ಹಾಗೂ ಸಿದ್ದು ದನಿಯಾಗಿದ್ದಾರೆ. ಪೂರ್ಣಚಂದ್ರ ತೇಜಸ್ವಿ ಸಂಗೀತ ನೀಡಿದ್ದಾರೆ.

‘ಅಶೋಕ ಬ್ಲೇಡ್’ ಎಂಬ ಶೀರ್ಷಿಕೆಯಲ್ಲಿ ಆರಂಭವಾಗಿದ್ದ ಈ ಸಿನಿಮಾ ನಿರ್ದೇಶಕ ವಿನೋದ್ ದೋಂಡಾಳೆ ನಿಧನದ ಬಳಿಕ ‘ದಿ ರೈಸ್ ಆಫ್ ಅಶೋಕ’ ಆಗಿತ್ತು. ಹಾಡು ಬಿಡುಗಡೆ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ನಟ ಸತೀಶ್, ‘ನಾನು ಮನೆಯಲ್ಲಿ ಮಲಗಿದ್ದರೂ ಜನ ‘ಅಯೋಗ್ಯ–2’ ಸಿನಿಮಾ ನೋಡುತ್ತಾರೆ ಎನ್ನುವ ಭರವಸೆ ಇದೆ. ಇದಕ್ಕೆ ಆ ಸಿನಿಮಾಗಿರುವ ಬ್ರ್ಯಾಂಡ್ ಕಾರಣವಾಗುತ್ತದೆ. ಆದರೆ ‘ದಿ ರೈಸ್ ಆಫ್ ಅಶೋಕ’ ಸಿನಿಮಾಗೆ ಹಾಗಲ್ಲ. ಈ ಸಿನಿಮಾ ಶುರುವಾದಾಗ ಹಾಕಿಕೊಂಡಿದ್ದ ಬಜೆಟ್ ಬೇರೆಯಾಗಿತ್ತು. ಮುಗಿದಾಗ ಆದ ಬಜೆಟ್ ಬೇರೆಯಾಗಿತ್ತು.

ಪ್ಯಾನ್ ಇಂಡಿಯಾ ಹುಚ್ಚಿಗಾಗಿ ಈ ಸಿನಿಮಾ ಮಾಡಿಲ್ಲ. ಸಿನಿಮಾ ಚೆನ್ನಾಗಿ ಆಗಬೇಕು, ನಮ್ಮ ಸಿನಿಮಾನೂ ಆ ಮಟ್ಟಕ್ಕೆ ಬೆಳೆಯಬೇಕು ಎಂದು ಕನಸು ಕಾಣುವುದು ತಪ್ಪಲ್ಲವಲ್ಲ. ಹಾಗೆ ಶುರುವಾದ ಪಯಣ ಇದು. ನನ್ನ ಬಳಿ ಕಥೆ ಬಂದಾಗ ನನಗೂ ಇಷ್ಟವಾಗಿತ್ತು. ನಿರ್ದೇಶಕರಾದ ವಿನೋದ್ ನಿಧನರಾದ ಬಳಿಕ ಈ ಸಿನಿಮಾದ ತೇರು ಎಳೆಯಲು ಉಳಿದದ್ದು ನಾನೊಬ್ಬನೇ. ಈ ಕನಸನ್ನು, ಸವಾಲನ್ನು ಹೊತ್ತು ನಾನು ಹೆಜ್ಜೆ ಹಾಕಿದೆ. ಮೂರು ವರ್ಷಗಳ ಕಾಲ ಒದ್ದಾಡಿ ಹಲವು ಕಷ್ಟಗಳ ಮಧ್ಯೆ ಸಿನಿಮಾ ಶೂಟಿಂಗ್ ನಡೆಸಿದ್ದೇವೆ’ ಎಂದರು.

> ಈ ಸಿನಿಮಾದಲ್ಲಿ ಒಂಬತ್ತು ಹಾಡುಗಳಿವೆ. ಮೂರು ಭಾಷೆಗಳಲ್ಲಿ ಈ ಸಿನಿಮಾ ತೆರೆಕಾಣುತ್ತಿದೆ. 27 ಟ್ರ್ಯಾಕ್ ರೆಕಾರ್ಡ್ ಮಾಡಿ, ದೊಡ್ಡಮಟ್ಟದಲ್ಲಿ ರಿರೆಕಾರ್ಡಿಂಗ್ ಮಾಡಿದ್ದೇವೆ
> **ಪೂರ್ಣಚಂದ್ರ ತೇಜಸ್ವಿ,** ಸಂಗೀತ ನಿರ್ದೇಶಕ.



‘ಕಷ್ಟಪಟ್ಟು ಸಿನಿಮಾ ಮಾಡಿದರೆ ಗೆದ್ದೇ ಗೆಲ್ಲುತ್ತೇವೆ. ಎರಡು ಮೂರು ಆಯ್ಕೆಗಳಲ್ಲಿ ತಪ್ಪು ಮಾಡಿದ್ದೆ. ಆದರೆ ಮುಂದೆ ಇಂತಹ ತಪ್ಪು ಮಾಡಲ್ಲ. ಉತ್ತಮ ಗುಣಮಟ್ಟದ, ಕಾಂಟೆಂಟ್ ಇರುವ ಸಿನಿಮಾಗಳನ್ನು ಮಾಡುತ್ತಲೇ ಇರುತ್ತೇನೆ. ಸಿನಿಮಾ ಪಯಣವನ್ನು ಬೇರೆ ಬೇರೆ ರಾಜ್ಯಗಳಿಗೆ ವಿಸ್ತರಿಸುತ್ತೇನೆ’ ಎನ್ನುತ್ತಾ ಮಾತಿಗೆ ವಿರಾಮವಿತ್ತರು.

‘ಎಲ್ಲಾ ಯುದ್ಧಗಳೂ ರಣರಂಗದಲ್ಲೇ ನಡೆಯುವುದಿಲ್ಲ’ ಎನ್ನುವ ಅಡಿಬರಹವಿರುವ ಈ ಸಿನಿಮಾವನ್ನು ವರ್ಧನ್ ಹರಿ ಜೊತೆಗೂಡಿ ಸತೀಶ್ ನಿರ್ಮಾಣ ಮಾಡಿದ್ದಾರೆ. 70ರ ದಶಕದಲ್ಲಿ ನಡೆಯುವ ಕಥೆ ಸಿನಿಮಾದಲ್ಲಿದ್ದು, ಸತೀಶ್ ಕ್ರಾಂತಿಕಾರಿ ಯುವಕನ ಪಾತ್ರಕ್ಕೆ ಜೀವ ತುಂಬಿದ್ದಾರೆ. ಅನ್ಯಾಯದ ವಿರುದ್ಧ ಹೋರಾಡುವ ಯುವಕನ ಬದುಕು ಹಾಗೂ ಸಂಘರ್ಷದ ಸುತ್ತಸಾಗುವ ಕಥೆಯನ್ನು ದಯಾನಂದ್ ಟಿ.ಕೆ ಬರೆದಿದ್ದಾರೆ. ಪೂರ್ಣಚಂದ್ರ ತೇಜಸ್ವಿ ಸಂಗೀತ ನಿರ್ದೇಶನ ಮಾಡಿದ್ದಾರೆ. ಲವಿತ್ ಛಾಯಾಚಿತ್ರಗ್ರಹಣ, ಮನು ಶೇಡ್ಗಾರ್ ಸಂಕಲನ, ರವಿವರ್ಮಾ ಹಾಗೂ ವಿಕ್ರಮ್ ಮೋರ್ ಸಾಹಸ ನಿರ್ದೇಶನ ಚಿತ್ರಕ್ಕಿದೆ. ಸಪ್ತಮಿ ಗೌಡ ನಾಯಕಿಯಾಗಿ ನಟಿಸಿದ್ದು, ಬಿ.ಸುರೇಶ, ಗೋಪಾಲಕೃಷ್ಣ ದೇಶಪಾಂಡೆ, ಯಶ್ ಶೆಟ್ಟಿ ಮುಖ್ಯ ಭೂಮಿಕೆಯಲ್ಲಿದ್ದಾರೆ.

ಪೋಸ್ಟ್ ಪ್ರೊಡಕ್ಷನ್‌ನಲ್ಲಿ ‘ಬಲರಾಮನ ದಿನಗಳು’

ವಿನೋದ್ ಪ್ರಭಾಕರ್ ನಾಯಕನಾಗಿ ನಟಿಸಿರುವ ‘ಬಲರಾಮನ ದಿನಗಳು’ ಚಿತ್ರ 2026ರ ಪ್ರಾರಂಭದಲ್ಲಿ ತೆರೆಗೆ ಬರಲಿದೆ ಎಂದು ಚಿತ್ರತಂಡ ಹೇಳಿದೆ. ಕೆ.ಎಂ. ಚೈತನ್ಯ ನಿರ್ದೇಶನದ ಚಿತ್ರ ಚಿತ್ರೀಕರಣ ಮುಗಿಸಿ ಪೋಸ್ಟ್ ಪ್ರೊಡಕ್ಷನ್ ಹಂತದಲ್ಲಿದೆ.

‘ತಮಿಳಿನ ಖ್ಯಾತ ಸಂಗೀತ ಸಂಯೋಜಕ ಸಂತೋಷ್ ನಾರಾಯಣ್ ಚಿತ್ರಕ್ಕೆ ಸಂಗೀತ ನೀಡುತ್ತಿದ್ದಾರೆ. ಅವರ 51ನೇ ಚಿತ್ರವಿದು. ಡಿಸೆಂಬರ್‌ನಲ್ಲಿ ಚಿತ್ರದ ಮೊದಲ ಹಾಡು ಬಿಡುಗಡೆ ಮಾಡುತ್ತೇವೆ. ‘ಆ ದಿನಗಳು’ ಚಿತ್ರದ ಪಾತ್ರಗಳು ಇಲ್ಲೂ ಮುಂದುವರೆದಿದ್ದು, ಅತುಲ್ ಕುಲಕರ್ಣಿ, ಶರತ್ ಲೋಹಿತಾಶ್ವ, ಆಶೀಶ್ ವಿದ್ಯಾರ್ಥಿ ಹಾಗೂ ಬಿಗ್ ಬಾಸ್ ಖ್ಯಾತಿಯ ವಿನಯ್ ಗೌಡ ಸೇರಿ ಹಲವು ಪ್ರತಿಭಾನ್ವಿತ ಕಲಾವಿದರು ಚಿತ್ರದಲ್ಲಿದ್ದಾರೆ’ ಎಂದರು ನಿರ್ದೇಶಕ.

ಪದ್ಮಾವತಿ ಫಿಲ್ಮ್ಸ್ ಬ್ಯಾನರ್ ಅಡಿಯಲ್ಲಿ ಪದ್ಮಾವತಿ ಜಯರಾಂ ಹಾಗೂ ಶ್ರೇಯಸ್ ಚಿತ್ರಕ್ಕೆ ಬಂಡವಾಳ ಹೂಡಿದ್ದಾರೆ. 80ರ ದಶಕದ ಕಥೆಯಲ್ಲಿ ವಿನೋದ್ ಪ್ರಭಾಕರ್‌ಗೆ ಪ್ರಿಯಾ ಆನಂದ್ ಜೋಡಿಯಾಗಿದ್ದಾರೆ. ವೇಣು ಛಾಯಾಚಿತ್ರಗ್ರಹಣವಿದೆ.

ಪ್ರಿಯಾ ಆನಂದ್

ತೆರೆಗೆ ಬರಲು ಸಜ್ಜಾದ ‘ತಂತ್ರ’



ಬಹುತೇಕ ಹೊಸಬರೇ ಸೇರಿ ಸಿದ್ಧಪಡಿಸಿರುವ ‘ತಂತ್ರ’ ಚಿತ್ರ ತೆರೆಗೆ ಬರಲು ಸಿದ್ಧವಾಗಿದೆ. ವಿಶ್ವನಾಥ್ ಕಥೆ ಬರೆದು, ಆ್ಯಕ್ಷನ್‌– ಕಟ್ ಹೇಳಿದ್ದಾರೆ. ಶಶಿಕಾಂತ ನಾಟೀಕರ್ ಮುಖ್ಯ ಪಾತ್ರದಲ್ಲಿ ನಟಿಸುವ ಜತೆಗೆ ಸಿಲ್ವರ್ ಸ್ಕೈ ಪ್ರೊಡಕ್ಷನ್ ಅಡಿಯಲ್ಲಿ ನಿರ್ಮಾಣ ಮಾಡಿದ್ದಾರೆ.

‘ಮನೋವೈಜ್ಞಾನಿಕ, ಥ್ರಿಲ್ಲರ್ ಅಂಶಗಳಿಂದ ಕೂಡಿರುವ ಚಿತ್ರ. ಸಂಶೋಧನಾ ತಂಡವೊಂದು ಭೂತ, ಪ್ರೇತಗಳ ಕುರಿತು ಅಧ್ಯಯನ ಪ್ರಾರಂಭ ಮಾಡುತ್ತದೆ. ಆದರೆ ಅವರಿಗೆ ಎದುರಾಗುವ ಸಮಸ್ಯೆಗಳು ಅವರನ್ನು ಸಂಕಷ್ಟಕ್ಕೆ ಸಿಲುಕಿಸುತ್ತದೆ. ಅವುಗಳಿಂದ ಹೇಗೆ ಪಾರಾಗಿ ಬರುತ್ತಾರೆ ಎಂಬುದೇ ಚಿತ್ರಕಥೆ’ ಎಂದರು ನಿರ್ದೇಶಕ.

ವಿಕ್ರಾಂತ್, ಸೌಜನ್ಯ, ಪಾರು ದಾವಣಗೆರೆ, ಸಂತೋಷ್ ಕೆರಿ ಮುಂತಾದವರು ಅಭಿನಯಿಸಿದ್ದಾರೆ. ರಮೇಶ್ ಕೃಷ್ಣ ಸಂಗೀತ, ರೋಹನ್ ದೇಸಾಯಿ-ವರ್ಧನ್ ಬಾಗಲಕೋಟೆ ಛಾಯಾಚಿತ್ರಗ್ರಹಣವಿದೆ.

‘ಫಾರಂ 6 ಪರಿಶೀಲನೆ: ಆಯೋಗದ ಹಕ್ಕು’

ಎಸ್‌ಐಆರ್ ಕುರಿತು ಸಲ್ಲಿಕೆಯಾದ ಅರ್ಜಿಗಳ ಅಂತಿಮ ವಿಚಾರಣೆ ಆರಂಭ

ಪ್ರಜಾವಾಣಿ ವಾರ್ತೆ/ಪಿಟಿಐ

ನವದೆಹಲಿ: ‘ದೇಶದಲ್ಲಿ ಈ ಹಿಂದೆ ಎಂದೂ ಮತದಾರರ ಪಟ್ಟಿ ಪರಿಷ್ಕರಣೆ (ಎಸ್‌ಐಆರ್) ನಡೆಸಿಲ್ಲ ಎನ್ನುವ ಕಾರಣಕ್ಕಾಗಿ ವಿವಿಧ ರಾಜ್ಯಗಳಲ್ಲಿ ಚುನಾವಣಾ ಆಯೋಗವು ಎಸ್‌ಐಆರ್ ಪ್ರಕ್ರಿಯೆ ನಡೆಸಲು ಈಗ ತೆಗೆದುಕೊಂಡಿರುವ ನಿರ್ಧಾರದ ಸಾಂವಿಧಾನಿಕ ಸಿಂಧುತ್ವವನ್ನು ವಿಚಾರಣೆಗೆ ಒಳಪಡಿಸಲು ಸಾಧ್ಯವಿಲ್ಲ’ ಎಂದು ಸುಪ್ರೀಂ ಕೋರ್ಟ್ ಹೇಳಿದೆ.

ಎಸ್‌ಐಆರ್ ನಡೆಸುವ ಆಯೋಗದ ನಿರ್ಧಾರದ ಸಾಂವಿಧಾನಿಕ ಸಿಂಧುತ್ವದ ಬಗ್ಗೆ ಸಲ್ಲಿಕೆಯಾಗಿರುವ ಹಲವು ಅರ್ಜಿಗಳ ಕುರಿತ ಅಂತಿಮ ವಿಚಾರಣೆಯನ್ನು ಭಾರತದ ಮುಖ್ಯ ನ್ಯಾಯಮೂರ್ತಿ (ಸಿಜೆಐ) ಸೂರ್ಯ ಕಾಂತ್ ಮತ್ತು ನ್ಯಾಯಮೂರ್ತಿ ಜಾಯ್ ಮಾಲ್ಯಾ ಬಾಗ್ಚಿ ಅವರ ಪೀಠವು ಬುಧವಾರ ಆರಂಭಿಸಿತು.

‘ಫಾರಂ 6ರಲ್ಲಿ (ತಾನು ಮತದಾರ ಎಂಬ ಬಗ್ಗೆ ವ್ಯಕ್ತಿಯು ನೋಂದಣಿ ಮಾಡಿಕೊಳ್ಳಲು ಭರ್ತಿ ಮಾಡಬೇಕಾದ ನಮೂನೆ) ನಮೂದು ಮಾಡಲಾದ ಮಾಹಿತಿಗಳು ಸರಿ ಇದೆಯೇ ಇಲ್ಲವೇ ಎಂಬ ಬಗ್ಗೆ ನಿರ್ಧಾರ ಕೈಗೊಳ್ಳುವ ಅಧಿಕಾರ ಆಯೋಗಕ್ಕೆ ಇದೆ’ ಎಂದು ಪೀಠ ಅಭಿಪ್ರಾಯಪಟ್ಟಿತು.

> **ಪಶ್ಚಿಮ ಬಂಗಾಳ, ಕೇರಳ, ತಮಿಳುನಾಡಿನಲ್ಲಿ ಕೈಗೊಳ್ಳಲಾಗುತ್ತಿರುವ ಎಸ್‌ಐಆರ್ ಪ್ರಕ್ರಿಯೆಯ ಬಗ್ಗೆ ರಾಜಕೀಯ ಪಕ್ಷಗಳು ಭಯ ಬಿತ್ತುತ್ತಿವೆ**
> **ಚುನಾವಣಾ ಆಯೋಗ,**
> (ಕೇರಳದಲ್ಲಿ ನಡೆಯುತ್ತಿರುವ ಎಸ್‌ಐಆರ್ ಕುರಿತು ಸಲ್ಲಿಸಲಾದ ಅರ್ಜಿಗಳ ವಿಚಾರಣೆ ವೇಳೆ, ಸುಪ್ರೀಂ ಕೋರ್ಟ್‌ಗೆ ಹೇಳಿದ್ದು)

ಅರ್ಜಿಯೊಂದಕ್ಕೆ ಪ್ರತಿಕ್ರಿಯಿಸಿದ ಪೀಠವು, ‘ವ್ಯಕ್ತಿ ಸಲ್ಲಿಸಿದ ಫಾರಂ 6 ಅನ್ನು ಸ್ವೀಕರಿಸುವುದಕ್ಕೆ ಮತ್ತು ನಿಮ್ಮ ಹೆಸರನ್ನು ಮತದಾರರ ಪಟ್ಟಿಯಲ್ಲಿ ಸೇರಿಸಲು, ನಿಮ್ಮ ಪ್ರಕಾರ ಚುನಾವಣಾ ಆಯೋಗವು ಅಂಚೆ ಕಚೇರಿಯೇ?’ ಎಂದು ಪೀಠ ಕೇಳಿತು.

ಇದಕ್ಕೆ ಪ್ರತಿಕ್ರಿಯಿಸಿದ ಅರ್ಜಿದಾರರ ಪರ ವಕೀಲ ಕಪಿಲ್ ಸಿಬಲ್, ‘ಪ್ರಾಥಮಿಕವಾಗಿ ಆಯೋಗದ ಕೆಲಸ ಅಂಚೆ ಕಚೇರಿಯದ್ದೇ ಹೌದು. ಆದರೆ, ಕೆಲವು ವಿಶೇಷ ಸಂದರ್ಭಗಳಲ್ಲಿ ಮಾತ್ರ ಅಲ್ಲವಷ್ಟೆ’ ಎಂದರು. ಇದಕ್ಕೆ ಉತ್ತರಿಸಿದ ಪೀಠ, ‘ನಮೂನೆಯಲ್ಲಿನ ಮಾಹಿತಿಗಳನ್ನು ಸರಿಪಡಿಸುವುದಕ್ಕೆ ಆಯೋಗಕ್ಕೆ ಸಾಂವಿಧಾನಿಕ ಹಕ್ಕು ಇದೆ’ ಎಂದಿತು.

ಅಂತಿಮ ವಿಚಾರಣೆಯನ್ನು ಗುರುವಾರಕ್ಕೆ ಮುಂದೂಡಲಾಯಿತು.

ಮೂರು ರಾಜ್ಯಗಳ ಅರ್ಜಿ ವಿಚಾರಣೆಗೆ ದಿನಾಂಕ ನಿಗದಿ: ತಮಿಳುನಾಡು ಮತ್ತು ಕೇರಳದಲ್ಲಿ ನಡೆಸುತ್ತಿರುವ ಎಸ್‌ಐಆರ್ ಬಗ್ಗೆ ಸಲ್ಲಿಕೆಯಾಗಿರುವ ಅರ್ಜಿಗಳ ಕುರಿತು ಡಿ.1 ಒಳಗೆ ಪ್ರತಿಕ್ರಿಯಿಸಿ ಎಂದು ಆಯೋಗಕ್ಕೆ ಪೀಠ ಹೇಳಿತು. ಮುಂದಿನ ವಿಚಾರಣೆ ಡಿ.4ಕ್ಕೆ ನಡೆಯಲಿದೆ. ಕೇರಳದ ಅರ್ಜಿಯ ವಿಚಾರಣೆಯನ್ನು ಡಿ.2ಕ್ಕೆ ಮುಂದೂಡಿತು.

ಬೂತ್ ಮಟ್ಟದ ಅಧಿಕಾರಿಗಳು ಆತ್ಮಹತ್ಯೆ ಮಾಡಿಕೊಳ್ಳುತ್ತಿರುವ ಪಶ್ಚಿಮ ಬಂಗಾಳದಲ್ಲಿ ನಡೆಯುತ್ತಿರುವ ಎಸ್‌ಐಆರ್ ಕುರಿತು ಸಲ್ಲಿಕೆಯಾದ ಅರ್ಜಿಗಳ ವಿಚಾರಣೆಯನ್ನು ಡಿ.9ಕ್ಕೆ ನಡೆಸುವುದಾಗಿ ಪೀಠ ಹೇಳಿತು. ಈ ವಾರದ ಅಂತ್ಯದ ಒಳಗೆ ಪ್ರಕ್ರಿಯಿಸುವಂತೆ ಆಯೋಗಕ್ಕೆ ಸೂಚಿಸಿತು.

ಸಿಬಲ್ ವಾದವೇನು?

- ಎಷ್ಟೋ ಮತದಾರರು ಅವಿದ್ಯಾವಂತರು. ಫಾರಂ ತುಂಬುವ ಅನಗತ್ಯ ಹೊರೆ ಅವರ ಮೇಲೆ ಹೇರಿದಂತಾಗುತ್ತದೆ. ಇದು ಅಸಾಂವಿಧಾನಿಕವೂ ಹೌದು ಮತ್ತು ಇದು ಮತದಾರರ ಜವಾಬ್ದಾರಿಯೂ ಅಲ್ಲ. ಸರಿಯಾಗಿ ನಮೂನೆ ಭರ್ತಿ ಮಾಡದಿದ್ದರೆ ಮತದಾರರ ಪಟ್ಟಿಯಿಂದ ಹೊರಗುಳಿಯುವ ಸಾಧ್ಯತೆಯೂ ಇದೆ
- ಒಮ್ಮೆ ವ್ಯಕ್ತಿಯೊಬ್ಬರ ಹೆಸರು ಮತದಾರರ ಪಟ್ಟಿಯಲ್ಲಿ ಸೇರಿದರೆ ಮುಗಿಯಿತು. ಆತ ಮತದಾರ ಅಲ್ಲ ಎನ್ನುವುದನ್ನು ಸರ್ಕಾರ ಸಾಬೀತು ಮಾಡಬೇಕು. ವ್ಯಕ್ತಿಯೊಬ್ಬ ಹೆಸರು ಪಟ್ಟಿಯಿಂದ ಹೊರಗಿಡಲಾಗುತ್ತದೆ ಎಂದರೆ, ಅದಕ್ಕೊಂದು ತಾರ್ಕಿಕ ಮತ್ತು ನ್ಯಾಯಸಮ್ಮತ ಪ್ರಕ್ರಿಯೆ ನಡೆಯಬೇಕು. ಆತ ಈ ದೇಶದ ನಾಗರಿಕ ಎಂದು ಆತನ ಹೆಸರು ಪಟ್ಟಿಯಲ್ಲಿ ಒಮ್ಮೆ ಸೇರ್ಪಡೆಗೊಂಡ ಬಳಿಕ ಆತನ ಹೆಸರನ್ನು ತೆಗೆದು ಹಾಕಲಾಗದು

‘ಪೌರತ್ವದ ನಿರ್ಧಾರ: ಬಿಎಲ್‌ಒಗಳಿಗೆ ಅಧಿಕಾರ ಇಲ್ಲ’

ಅಸ್ಸಾಂನಲ್ಲಿನ ಎಸ್‌ಐಆರ್ ಮಾರ್ಗಸೂಚಿಯ ಬಗ್ಗೆ ವಕೀಲ ಪ್ರಶಾಂತ್ ಭೂಷಣ್ ನ್ಯಾಯಾಲಯದ ಗಮನಕ್ಕೆ ತಂದರು. ‘ಈ ಮಾರ್ಗಸೂಚಿಯ ಪ್ರಕಾರ ವ್ಯಕ್ತಿಯ ಪೌರತ್ವವನ್ನು ಚುನಾವಣಾ ಅಧಿಕಾರಿ ನಿರ್ಧರಿಸುತ್ತಾನೆ. ಈ ಅಧಿಕಾರಿಗೆ ಇಂಥ ಅಧಿಕಾರ ನೀಡಿರುವುದು ಸರಿಯಿಲ್ಲ’ ಎಂದರು.

ಇದೇ ವಾದವನ್ನು ಮುಂದುವರಿಸಿದ ಕಪಿಲ್ ಸಿಬಲ್, ‘ವ್ಯಕ್ತಿಯು ಮಾನಸಿಕ ಅಸ್ವಸ್ಥ ಹೌದೋ ಅಲ್ಲವೋ ಅಥವಾ ಆತ ನಾಗರಿಕ ಹೌದೋ ಅಲ್ಲವೊ ಎನ್ನುವುದನ್ನು ಸಾಂವಿಧಾನಿಕ ಪ್ರಾಧಿಕಾರ ಅಥವಾ ಕೇಂದ್ರ ಗೃಹ ಸಚಿವಾಲಯ ನಿರ್ಧಾರ ಮಾಡಬೇಕು. ಇದು ಬಿಎಲ್‌ಒಗಳ ಕೆಲಸವಲ್ಲ’ ಎಂದರು.

‘ಈ ಬಗ್ಗೆ ನಿರ್ಧಾರ ಕೈಗೊಳ್ಳುವ ಅಧಿಕಾರ ಬಿಎಲ್‌ಒಗಳಿಗೆ ಇಲ್ಲ. ಇಡೀ ಎಸ್‌ಐಆರ್ ಪ್ರಕ್ರಿಯೆಯೇ ನೂರಾರು ತಪ್ಪುಗಳಿಂದ ಕೂಡಿದೆ ಮತ್ತು ಅಸಾಂವಿಧಾನಿಕವಾಗಿದೆ’ ಎಂದರು.

> **ವ್ಯಕ್ತಿಯು ಈ ದೇಶ ಪೌರ ಹೌದೋ ಅಲ್ಲವೋ ಎನ್ನುವುದನ್ನು ಆಧಾರ್ ಕಾರ್ಡ್ ಮಾತ್ರವೇ ನಿರ್ಧರಿಸುವುದಿಲ್ಲ. ಈ ಚೀಟಿ ಇರುವುದು ಸರ್ಕಾರದ ಸೌಲಭ್ಯಗಳನ್ನು ಪಡೆದುಕೊಳ್ಳಲು. ಒಂದು ವೇಳೆ ಪಕ್ಕದ ದೇಶಕ್ಕೆ ಸೇರಿದ ವ್ಯಕ್ತಿಯೊಬ್ಬರು ನಮ್ಮ ದೇಶದಲ್ಲಿ ಕಾರ್ಮಿಕನಾಗಿ ದುಡಿಯುತ್ತಿದ್ದರೆ, ಆತನನ್ನು ನಮ್ಮ ದೇಶದ ಮತದಾರನನ್ನಾಗಿ ಮಾಡಬೇಕೇ?**
> **ಸೂರ್ಯ ಕಾಂತ್,** ಸಿಜೆಐ

> **ಫಾರಂ 6 ಇರುವುದು ಅರ್ಹರನ್ನು ಪಟ್ಟಿಗೆ ಸೇರಿಸಲು ಸರಿ. ಆದರೆ, ಪರಿಶೀಲನೆಯನ್ನೇ ಮಾಡದೆ ಫಾರಂ 6 ಅನ್ನು ಸ್ವೀಕರಿಸಬೇಕು ಮತ್ತು ಪಟ್ಟಿಗೆ ಹೆಸರು ಸೇರಿಸಬೇಕು ಎಂದು ಆಯೋಗಕ್ಕೆ ನಿಯಮ ಮಾಡಲಾಗದು**
> **ಜಾಯ್ ಮಾಲ್ಯಾ ಬಾಗ್ಚಿ,** ನ್ಯಾಯಮೂರ್ತಿ

ಬಿಎಲ್‌ಒಗಳ ಪ್ರತಿಭಟನೆ ಪೊಲೀಸ್ ಕಮಿಷನರ್‌ಗೆ ಪತ್ರ

ಕೋಲ್ಕತ್ತ (ಪಿಟಿಐ): ಎಸ್‌ಐಆರ್ ಸಂಬಂಧಿತ ಕೆಲಸದ ಹೊರೆಯನ್ನು ನಿರ್ವಹಿಸಲು ಸಾಧ್ಯವಾಗುತ್ತಿಲ್ಲ ಎಂದು ಆರೋಪಿಸಿ ಬೂತ್ ಮಟ್ಟದ ಅಧಿಕಾರಿಗಳು (ಬಿಎಲ್‌ಒ) ಪಶ್ಚಿಮ ಬಂಗಾಳದ ರಾಜ್ಯ ಚುನಾವಣಾ ಆಯೋಗದ ಕಚೇರಿ ಎದುರು ಪ್ರತಿಭಟಿಸಿದ್ದರ ಕುರಿತು ಕಳವಳ ವ್ಯಕ್ತಪಡಿಸಿ ಚುನಾವಣಾ ಆಯೋಗವು ಕೋಲ್ಕತ್ತ ಪೊಲೀಸ್ ಕಮಿಷನರ್ ಅವರಿಗೆ ಬುಧವಾರ ಪತ್ರ ಬರೆದಿದೆ.

ಪೊಲೀಸ್ ಕಮಿಷನರ್ ಮನೋಜ್ ಕುಮಾರ್ ವರ್ಮಾ ಅವರಿಗೆ ಪತ್ರ ಬರೆದಿರುವ ಆಯೋಗವು, ‘ಇದೊಂದು ಗಂಭೀರವಾದ ಭದ್ರತಾ ವೈಫಲ್ಯ. ಮುಂದಿನ 48 ಗಂಟೆಗಳಲ್ಲಿ ಈ ಬಗ್ಗೆ ಕ್ರಮ ಕೈಗೊಳ್ಳಬೇಕು’ ಎಂದಿದೆ. ಸುಮಾರು 30 ಗಂಟೆ ನಡೆದ ಪ್ರತಿಭಟನೆಯು ಮಂಗಳವಾರ ಸಂಜೆ ಮುಕ್ತಾಯಗೊಂಡಿತು.

‘ರಾಜ್ಯ ಚುನಾವಣಾ ಅಧಿಕಾರಿ ಕಚೇರಿಗೆ ಸೂಕ್ತ ಭದ್ರತೆ ಒದಗಿಸಲಾಗಿಲ್ಲ. ಪರಿಸ್ಥಿತಿ ನಿಭಾಯಿಸಲು ಇರುವಷ್ಟು ಸಿಬ್ಬಂದಿ ಸಾಲದು. ಇದರಿಂದ ಕಚೇರಿಯಲ್ಲಿರುವ ಸಿಬ್ಬಂದಿಯ ಸುರಕ್ಷತೆಗೆ ಬೆದರಿಕೆ ಎದುರಾಗಿದೆ. ಸಿಬ್ಬಂದಿಗೆ ಕಚೇರಿಯಲ್ಲಿ ಮಾತ್ರವಲ್ಲದೆ ಅವರ ಮನೆಗಳಿಗೂ ಸೂಕ್ತ ಭದ್ರತೆ ಒದಗಿಸಬೇಕು. ಜೊತೆಗೆ ಅವರು ಮನೆಯಿಂದ ಕಚೇರಿ, ಕಚೇರಿಯಿಂದ ಮನೆಗೆ ಹೋಗುವಾಗಲೂ ಭದ್ರತೆ ನೀಡಬೇಕು’ ಎಂದು ಆಯೋಗ ನಿರ್ದೇಶಿಸಿದೆ.

> **ಎನ್‌ಆರ್‌ಸಿ ಮಾಡುವುದೇ ಎಸ್‌ಐಆರ್ ನಡೆಸುತ್ತಿರುವುದರ ಹಿಂದಿನ ನೈಜ ಉದ್ದೇಶ**
> **ಮಮತಾ ಬ್ಯಾನರ್ಜಿ,** ಪಶ್ಚಿಮ ಬಂಗಾಳ ಮುಖ್ಯಮಂತ್ರಿ (ಸಂವಿಧಾನ ದಿನದ ಅಂಗವಾಗಿ ನಡೆದ ಕಾರ್ಯಕ್ರಮದಲ್ಲಿ ನೀಡಿದ ಪ್ರತಿಕ್ರಿಯೆ)

> **ಎಸ್‌ಐಆರ್ ಕಾರಣ ದೈಹಿಕ ಮತ್ತು ಮಾನಸಿಕ ಒತ್ತಡದಿಂದ ಮೃತಪಟ್ಟ ಪ್ರತಿಯೊಬ್ಬರ ಕುಟುಂಬಗಳಿಗೆ ಆಯೋಗವು ₹1 ಕೋಟಿ ಪರಿಹಾರ ನೀಡಬೇಕು**
> **ಅಖಿಲೇಶ್ ಯಾದವ್,** ಸಮಾಜವಾದಿ ಪಕ್ಷದ ಮುಖ್ಯಸ್ಥ, ಸಂಸದ

ಸಾರಿಗೆ ನೌಕರರ ಬೇಡಿಕೆ: ಡಿ.5 , 6ಕ್ಕೆ ಸಭೆ

ಬೆಂಗಳೂರು: ಕೆಎಸ್‌ಆರ್‌ಟಿಸಿ ನೌಕರರ ಸಂಘಟನೆಗಳ ಜಂಟಿ ಕ್ರಿಯಾ ಸಮಿತಿ ಹಾಗೂ ಸಾರಿಗೆ ನಿಗಮಗಳ ನೌಕರರ ಸಂಘಟನೆಗಳ ಒಕ್ಕೂಟದ ಮುಖಂಡರೊಂದಿಗೆ ಡಿ.5 ಮತ್ತು ಡಿ.6ರಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಸಭೆ ನಡೆಸಲಿದ್ದು, ಬೇಡಿಕೆ ಈಡೇರಿಕೆ ಕುರಿತು ಅಂತಿಮ ಚರ್ಚೆ ನಡೆಸಲಿದ್ದಾರೆ.

ವೇತನ ಬಾಕಿ, ವೇತನ ಪರಿಷ್ಕರಣೆ ಸೇರಿ ವಿವಿಧ ಬೇಡಿಗೆಕೆಗಳ ಈಡೇರಿಕೆಗೆ ಬಗ್ಗೆ ವಿಧಾನಸೌಧದಲ್ಲಿ ಬುಧವಾರ ನಡೆದ ಸಭೆ ಅಪೂರ್ಣಗೊಂಡಿತು. ಹಾಗಾಗಿ, ಸಭೆಯನ್ನು ಮುಂದೂಡಲಾಯಿತು.

ಪಿವಿ ಬ್ರ್ಯಾಂಡ್ ಸ್ಪಾಟ್

ಪತ್ರಿಕೆಯಲ್ಲಿ ಪ್ರಕಟವಾಗುತ್ತಿರುವ ಪಿವಿ ಬ್ರ್ಯಾಂಡ್ ಸ್ಪಾಟ್ ಪ್ರಸ್ತುತಿಯ ಲೇಖನ ಸಿದ್ಧಪಡಿಸುವಲ್ಲಿ ನಮ್ಮ ಪತ್ರಕರ್ತರ ಯಾವುದೇ ಪಾತ್ರ ಇರುವುದಿಲ್ಲ. ಸಂಸ್ಥೆಯ ಜಾಹೀರಾತು ಮತ್ತು ಬ್ರ್ಯಾಂಡ್ ವಿಭಾಗಗಳ ಪ್ರಸ್ತುತಿಯಾಗಿರುವ **‘ಪಿವಿ ಬ್ರ್ಯಾಂಡ್ ಸ್ಪಾಟ್’**ನ ಮಾಹಿತಿಯನ್ನು (ಕಂಟೆಂಟ್) ಓದುಗರು ಜಾಹೀರಾತು ಎಂದೇ ಭಾವಿಸಬಹುದು.



ಸಮಾಜ ಕಲ್ಯಾಣ ಇಲಾಖೆಯು ಬೆಂಗಳೂರಿನ ಅಂಬೇಡ್ಕರ್ ಭವನದಲ್ಲಿ ಆಯೋಜಿಸಿದ್ದ ಸಂವಿಧಾನ ದಿನಾಚರಣೆ ಕಾರ್ಯಕ್ರಮವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ನಗಾರಿ ಬಾರಿಸುವ ಮೂಲಕ ಉದ್ಘಾಟಿಸಿದರು. ಕಾನೂನು ಸಲಹೆಗಾರರಾದ ಎ.ಎಸ್. ಪೊನ್ನಣ್ಣ, ಸಚಿವರಾದ ಕೆ.ಎಚ್. ಮುನಿಯಪ್ಪ, ಎಚ್‌.ಸಿ. ಮಹದೇವಪ್ಪ, ಎಂ.ಸಿ.ಸುಧಾಕರ್ ಮತ್ತು ಕರ್ನಾಟಕ ಎಸ್‌ಸಿ – ಎಸ್‌ಟಿ, ಅಲೆಮಾರಿ ಅಭಿವೃದ್ಧಿ ನಿಗಮದ ಅಧ್ಯಕ್ಷೆ ಜಿ. ಪಲ್ಲವಿ ಇದ್ದರು – ಪ್ರಜಾವಾಣಿ ಚಿತ್ರ

ಶಿವಕುಮಾರ್ ಪರ ‘ಒಕ್ಕಲಿಗರ’ ಸ್ವರ

‘ಡಿಕೆಶಿ ಸಿ.ಎಂ ಆಗಲಿ’

ಒಂದನೇ ಪುಟದಿಂದ...

‘ಶಿವಕುಮಾರ್ ಮೇಲೆ ದೇವರ ಆಶೀರ್ವಾದವೂ ಇದೆ. ತಲಾ ಎರಡೂವರೆ ವರ್ಷ ಅಧಿಕಾರ ಹಂಚಿಕೆಯಾಗಿದೆ ಎಂಬ ಭಾವನೆ ಜನರಲ್ಲಿ, ನಮ್ಮಲ್ಲಿದೆ. ಅದನ್ನು ಸೂಕ್ತವಾಗಿ ಬಗೆಹರಿಸಬೇಕು’ ಎಂದು ಅವರು ಪ್ರತಿಪಾದಿಸಿದರು.

‘ಅವರು ಶ್ರೀಮಠದ ಸದ್ಭಕ್ತರೇ. ಆಗೇ ಆಗುತ್ತದೆ ಎಂಬ ಭರವಸೆ ಅವರಿಗಿದೆ. ಆಗದಿದ್ದಲ್ಲಿ ಅವರು ಬಂದು ನಮ್ಮನ್ನು ಭೇಟಿಯಾಗಬಹುದು. ಆದರೆ, ಭಕ್ತ ವರ್ಗದಲ್ಲಿ ಆ ಬಗ್ಗೆ ಕೂಗಿದೆ. ಬಹಳ ಮಂದಿ ಬಂದು ಭೇಟಿಯಾಗುತ್ತಿದ್ದಾರೆ. ‘ಆಗುತ್ತಿಲ್ಲವೇಕೆ? ನಾವೂ ಎರಡೂವರೆ ವರ್ಷ ಕಾದಿದ್ದೇವೆ. ಈಗ ಆಗುತ್ತಿರುವ ಬೆಳವಣಿಗೆಗಳನ್ನು ಗಮನಿಸಿದರೆ ಏನೋ ವ್ಯತ್ಯಾಸ ಆದಂತಿದೆ. ಹೀಗಾಗಿ, ನೀವು ಆಶೀರ್ವಾದ ಮಾಡಬೇಕು’ ಎಂದು ಕೇಳುತ್ತಿದ್ದಾರೆ’ ಎಂದರು.

‘ಮುಖ್ಯಮಂತ್ರಿ ಸ್ಥಾನದ ಆಕಾಂಕ್ಷಿ ಆಗಿರುವ ಶಿವಕುಮಾರ್ ಹಲವು ಬಾರಿ ಮಠಕ್ಕೆ ಭೇಟಿ ಕೊಟ್ಟಿದ್ದರೂ ನಮ್ಮೊಂದಿಗೆ ಅವರು ಆ ಕುರಿತು ಮಾತನಾಡಿಲ್ಲ’ ಎಂದು ತಿಳಿಸಿದರು.

‘ಕೊಟ್ಟ ಮಾತಿಗೆ ತಕ್ಕಂತೆ ನಡೆಯಿರಿ’

ಒಂದನೇ ಪುಟದಿಂದ...

ಕೆಪಿಸಿಸಿ ಕಚೇರಿಯಲ್ಲಿ ಬುಧವಾರ ನಡೆದ ಸಂವಿಧಾನ ದಿನಾಚರಣೆ ಕಾರ್ಯಕ್ರಮ ಹಾಗೂ ನಂತರ ಸುದ್ದಿಗಾರರ ಜತೆ ಮಾತನಾಡಿದ ಅವರು, ‘ಮುಖ್ಯಮಂತ್ರಿ ಹುದ್ದೆ, ಅಧಿಕಾರ ಹಸ್ತಾಂತರದ ಬಗ್ಗೆ ಪಕ್ಷದ ಹೈಕಮಾಂಡ್ ನಾಯಕರು ಸೂಕ್ತ ತೀರ್ಮಾನ ತೆಗೆದುಕೊಳ್ಳುತ್ತಾರೆ. ಮಲ್ಲಿಕಾರ್ಜುನ ಖರ್ಗೆ, ಸೋನಿಯಾ ಗಾಂಧಿ, ರಾಹುಲ್ ಗಾಂಧಿ ಸೇರಿದಂತೆ ಪಕ್ಷದ ಹಿರಿಯ ನಾಯಕರು ಚರ್ಚೆ ನಡೆಸುತ್ತಾರೆ’ ಎಂದರು.

‘ಮುಖ್ಯಮಂತ್ರಿ ಹುದ್ದೆ ಅಥವಾ ಉನ್ನತ ಅಧಿಕಾರ ಮುಖ್ಯವಲ್ಲ. ಪಕ್ಷದ ಎಲ್ಲರೊಡನೆ ಒಟ್ಟಾಗಿ ಕೆಲಸ ಮಾಡಿ, ಪಕ್ಷವನ್ನು ರಾಜ್ಯದಲ್ಲಿ ಮತ್ತೆ ಅಧಿಕಾರಕ್ಕೆ ತರುವುದು ಮುಖ್ಯ. ಕೆಲ ಶಾಸಕರ ದೆಹಲಿ ಪ್ರವಾಸ ನನ್ನ ಪರವಾಗಿ ಅಲ್ಲ. ಯಾರೂ ಮಾತನಾಡುವುದು ಬೇಡ. ಪಕ್ಷ ಸೂಕ್ತ ಸಮಯದಲ್ಲಿ ನಿರ್ಣಯ ಕೈಗೊಳ್ಳಲಿದೆ. ಅಧಿಕಾರದ ಬಗ್ಗೆ ಏನೇ ಚರ್ಚೆಯಗಿದ್ದರೂ ಅದು ನಾಲ್ಕು ಗೋಡೆಗಳ ಮಧ್ಯೆ ಆಗಿದೆ. ಅದನ್ನು ಬಹಿರಂಗವಾಗಿ ಚರ್ಚೆ ಮಾಡುವುದಿಲ್ಲ’ ಎಂದರು.

ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ನ್ಯಾಯಪೀಠ ಆದೇಶ

ಜಾತಿ ಪ್ರಮಾಣಪತ್ರ: ಸ್ವಯಂಪ್ರೇರಿತ ತನಿಖೆ ಸಲ್ಲ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಜಾತಿ ಪ್ರಮಾಣಪತ್ರಗಳ ಸಿಂಧುತ್ವಕ್ಕೆ ಸಂಬಂಧಿಸಿದ ಪ್ರಕರಣಗಳಲ್ಲಿ ನಾಗರಿಕ ಹಕ್ಕುಗಳ ಘಟಕಕ್ಕೆ ಸ್ವಯಂ ಪ್ರೇರಿತ ತನಿಖೆ ಕೈಗೊಳ್ಳುವ ಅವಕಾಶವಿಲ್ಲ’ ಎಂದು ಹೈಕೋರ್ಟ್ ಪ್ರಕರಣವೊಂದರಲ್ಲಿ ಸ್ಪಷ್ಟಪಡಿಸಿದೆ.

ತಮ್ಮ ಜಾತಿ ಪ್ರಮಾಣದ ಸಿಂಧುತ್ವಕ್ಕೆ ಸಂಬಂಧಿಸಿದಂತೆ ತನಿಖೆ ನಡೆಸಲು ನಾಗರಿಕ ಹಕ್ಕುಗಳ ಜಾರಿ ವಿಭಾಗದ ಡಿವೈಎಸ್‌ಪಿಗೆ ನಿರ್ದೇಶನ ನೀಡಲಾಗಿದ್ದ ಕ್ರಮವನ್ನು ಪ್ರಶ್ನಿಸಿ ಹಾವೇರಿ ಜಿಲ್ಲೆಯ ಲಕ್ಮಾಪುರದ ನಿವೃತ್ತ ಮುಖ್ಯ ಶಿಕ್ಷಕ ಟಿ.ಎಚ್.ಹೊಸಮನಿ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ನ್ಯಾಯಪೀಠ ಈ ಆದೇಶ ನೀಡಿದೆ.

‘ನಾಗರಿಕ ಹಕ್ಕುಗಳ ಜಾರಿ ಕೋಶವು ಜಾತಿ ಪ್ರಮಾಣಪತ್ರದ ಸಿಂಧುತ್ವದ ಕುರಿತಂತೆ ಸ್ವಯಂಪ್ರೇರಿತ ತನಿಖೆ ಕೈಗೆತ್ತಿಕೊಳ್ಳುವ ಅಧಿಕಾರ ಹೊಂದಿಲ್ಲ. ಆದರೆ, ಜಿಲ್ಲಾ ಜಾತಿ ಪರಿಶೀಲನಾ ಸಮಿತಿ ನೀಡುವ ವರದಿಯ ಬಳಿಕ ತನಿಖೆ ಕೈಗೊಳ್ಳುವ ಅಧಿಕಾರ ಹೊಂದಿರುತ್ತದೆ. ಹೀಗಾಗಿ, ಈ ಪ್ರಕರಣದಲ್ಲಿ ಅರ್ಜಿದಾರರಿಗೆ ಸಂಬಂಧಿಸಿದಂತೆ ನಾಗರಿಕ ಹಕ್ಕುಗಳ ಜಾರಿ ಘಟಕದ ನಿರ್ದೇಶನದ ಅನುಸಾರ ಕೈಗೊಂಡಿರುವ ಪ್ರಕ್ರಿಯೆ ಮತ್ತು ಅದರ ನಂತರದ ಎಲ್ಲ ಪ್ರಕ್ರಿಯೆಗಳು ಅನೂರ್ಜಿತವಾಗಲಿವೆ’ ಎಂದು ನ್ಯಾಯಪೀಠ ಹೇಳಿದೆ.

ಹೈಕೋರ್ಟ್ ಸುದ್ದಿ

‘ಕರ್ನಾಟಕ ಪರಿಶಿಷ್ಟ ಜಾತಿ–ಪರಿಶಿಷ್ಟ ಪಂಗಡಗಳು ಮತ್ತು ಇತರೆ ಹಿಂದುಳಿದ ವರ್ಗಗಳ (ನೇಮಕಾತಿ, ಮೀಸಲಾತಿ ಇತ್ಯಾದಿ) ನಿಯಮ–1992ರ 7ರ ಉಪ ನಿಯಮ(4)ರಡಿ ಯಾವುದೇ ವ್ಯಕ್ತಿ ಜಾತಿ ಪ್ರಮಾಣಪತ್ರಕ್ಕೆ ಸಂಬಂಧಿಸಿದಂತೆ, ಜಿಲ್ಲಾ ಜಾತಿ ಪರಿಶೀಲನಾ ಸಮಿತಿ ತನಿಖೆ ನಡೆಸಲು ಸೂಚಿಸಿದರೆ ಮಾತ್ರವೇ ನಾಗರಿಕ ಹಕ್ಕುಗಳ ಜಾರಿ ಘಟಕ ಅದನ್ನು ಕಾರ್ಯರೂಪಕ್ಕೆ ತರಬಹುದಾಗಿದೆ’ ಎಂದಿದೆ.

ಅರ್ಜಿಯನ್ನು ಪುರಸ್ಕರಿಸಿರುವ ನ್ಯಾಯಪೀಠ, ‘ಹೊಸಮನಿ ಅವರಿಗೆ ಲಭ್ಯವಾಗಬೇಕಾದ ಪ್ರಯೋಜನಗಳನ್ನು ತಡೆಹಿಡಿದಿದ್ದರೆ ತಕ್ಷಣವೇ ಬಿಡುಗಡೆ ಮಾಡಬೇಕು. ಆದರೆ, ಅರ್ಜಿದಾರರ ಕುಟುಂಬದ ಸದಸ್ಯರು ಪರಿಶಿಷ್ಟ ಜಾತಿ ಅಥವಾ ಪಂಗಡಕ್ಕೆ ಸೇರಿದ್ದವರು ಎಂದು ಹೇಳಿಕೊಂಡು ಯಾವುದೇ ಸೌಲಭ್ಯಗಳನ್ನು ಪಡೆದುಕೊಳ್ಳಲು ಅರ್ಜಿದಾರರ ಜಾತಿ ಪ್ರಮಾಣಪತ್ರವನ್ನು ಬಳಕೆ ಮಾಡಲು ಅವಕಾಶವಿಲ್ಲ’ ಎಂದು ವಿವರಿಸಿದೆ. ಅರ್ಜಿದಾರರ ಪರ ಹೈಕೋರ್ಟ್ ವಕೀಲರಾದ ಬಿ. ವಿಜಯಕುಮಾರ್ ಮತ್ತು ಜಿ.ಕೆ. ಹಿರೇಗೌಡರ ವಾದ ಮಂಡಿಸಿದ್ದರು.

ತವರು ನೆಲದಲ್ಲಿ ಎಡವಿಬಿದ್ದ ಭಾರತ ತಂಡ

ಹಾರ್ಮರ್ ಸ್ಪಿನ್ ಎದುರು ಬಸವಳಿದ ಪಂತ್ ಬಳಗ

• 25 ವರ್ಷಗಳ ನಂತರ ಭಾರತದಲ್ಲಿ ಸರಣಿ ಗೆದ್ದ ದಕ್ಷಿಣ ಆಫ್ರಿಕಾ

• ಮಧು ಜವಳಿ

ಗುವಾಹಟಿ: ಭಾರತದ ನೆಲದಲ್ಲಿ ಇಪ್ಪತ್ತೈದು ವರ್ಷಗಳ ನಂತರ ಟೆಸ್ಟ್ ಸರಣಿ ಜಯ ಸಾಧಿಸಿದ ದಕ್ಷಿಣ ಆಫ್ರಿಕಾ ತಂಡದ ಆಟಗಾರರು ಭಾವುಕರಾದರು. ಇಲ್ಲಿ ನಡೆದ ಎರಡನೇ ಟೆಸ್ಟ್‌ನಲ್ಲಿ 408 ರನ್‌ಗಳ ಜಯ ಸಾಧಿಸಿ ಪ್ರವಾಸಿ ಬಳಗವು ಸಂಭ್ರಮಿಸಿತು.

ಇನ್ನೊಂದೆಡೆ ಸ್ಕೋರರ್‌ಗಳೂ ದಾಖಲೆಗಳನ್ನು ಬೊಗಸೆ ತುಂಬ ಮೊಗೆದುಕೊಟ್ಟರು. ತವರು ಮತ್ತು ವಿದೇಶಿ ನೆಲದಲ್ಲಿ ಭಾರತ ತಂಡವು ಅತಿ ದೊಡ್ಡ ಅಂತರದಿಂದ ಸೋತ ಪಂದ್ಯ ಇದಾಯಿತು. ಸತತ ಎರಡು ಋತುಗಳಲ್ಲಿ ಪ್ರವಾಸಿ ತಂಡಗಳು ಭಾರತದ ಬಳಗವನ್ನು ಅದರದ್ದೇ ನೆಲದಲ್ಲಿ ಮಣಿಸಿದವು. ತವರಿನಲ್ಲಿ ಆಡಿರುವ ಕಳೆದ ಏಳು ಟೆಸ್ಟ್‌ಗಳಲ್ಲಿ ಐದರಲ್ಲಿ ಸೋಲು. ಹೀಗೆ ಪಟ್ಟಿ ಬೆಳೆಯುತ್ತದೆ.

ಟೆಸ್ಟ್ ಕ್ರಿಕೆಟ್‌ಗೆ ಉತ್ತಮವೆನಿಸಿದ ಪಿಚ್‌ನಲ್ಲಿ ಮುಖ್ಯ ಕೋಚ್ ಗೌತಮ್ ಗಂಭೀರ್ ಮಾರ್ಗದರ್ಶನದ ಭಾರತ ತಂಡ ಶರಣಾಯಿತು. ಗಂಭೀರ್ ಅವರು ಕೋಚ್ ಸ್ಥಾನಕ್ಕೆ ನೇಮಕವಾದ ನಂತರದ ಅವಧಿಯ ವೈಫಲ್ಯಗಳ ಸಾಲಿಗೆ ಮತ್ತೊಂದು ಹೀನಾಯ ಸೋಲಿನ ಅಧ್ಯಾಯ ಸೇರ್ಪಡೆಯಾಯಿತು. ದಕ್ಷಿಣ ಆಫ್ರಿಕಾ ತಂಡವು 2–0ಯಿಂದ ಸರಣಿಯನ್ನು ಗೆದ್ದು ದಾಖಲೆ ಬರೆಯಿತು.

ಈ ಪಂದ್ಯದ ನಾಲ್ಕನೇ ದಿನದಾಟದ ಮುಕ್ತಾಯಕ್ಕೆ ಭಾರತ ತಂಡವು 27 ರನ್‌ಗಳಿಗೆ 2 ವಿಕೆಟ್ ಕಳೆದುಕೊಂಡಿತ್ತು. ಗೆಲುವಿನ ಗುರಿ ತಲುಪಲು ಇನ್ನೂ 522 ರನ್‌ಗಳು (ಗುರಿ; 549 ರನ್) ಬೇಕಾಗಿದ್ದವು. ಕೊನೆಯ ದಿನವಾದ ಬುಧವಾರ ಈ ಗುರಿಯನ್ನು ಸಾಧಿಸಿ ಸರಣಿಯನ್ನು ಸಮಬಲಗೊಳಿಸಿಕೊಳ್ಳುವುದು ಅಸಾಧ್ಯ ಸವಾಲಾಗಿತ್ತು. ಆದರೆ ಸೋಲುವುದನ್ನು ತಪ್ಪಿಸಿಕೊಳ್ಳಲೂ ಆತಿಥೇಯರಿಗೆ ತೆಂಬಾ ಬವುಮಾ ಬಳಗವು ಆಸ್ಪದ ಕೊಡಲಿಲ್ಲ. ಊಟದ ವಿರಾಮಕ್ಕೂ ಮುನ್ನ 63.5 ಓವರ್‌ಗಳಲ್ಲಿ 140 ರನ್ ಗಳಿಸಿದ ಭಾರತ ತಂಡ ಶರಣಾಯಿತು.

2000ನೇ ಇಸವಿಯಲ್ಲಿ ಹ್ಯಾನ್ಸಿ ಕ್ರೋನಿಯೆ ನಾಯಕತ್ವದ ದಕ್ಷಿಣ ಆಫ್ರಿಕಾ ತಂಡವು ಸಚಿನ್ ತೆಂಡೂಲ್ಕರ್ ಸಾರಥ್ಯದ ಭಾರತ ತಂಡದ ಎದುರು ಸರಣಿ ಜಯಿಸಿತ್ತು.

ರವೀಂದ್ರ ಜಡೇಜ (54 ರನ್) ಅವರನ್ನು ಬಿಟ್ಟರೆ ಭಾರತದ ಉಳಿದ ಬ್ಯಾಟರ್‌ಗಳಿಂದ ನಿರೀಕ್ಷಿತ ಆಟ ಮೂಡಿಬರಲಿಲ್ಲ. ವಾಷಿಂಗ್ಟನ್ ಸುಂದರ್ (16 ರನ್) ಅವರು ಇನಿಂಗ್ಸ್‌ನಲ್ಲಿ ಅತ್ಯಧಿಕ ರನ್ ಗಳಿಸಿದ ಎರಡನೇ ಆಟಗಾರ. ಭಾರತದ ಎರಡನೇ ಇನಿಂಗ್ಸ್ 266 ನಿಮಿಷಗಳಲ್ಲಿ ಮುಕ್ತಾಯವಾಯಿತು.

ಆಫ್‌ಸ್ಪಿನ್ನರ್ ಸಿಮೊನ್ ಹಾರ್ಮರ್ (37ಕ್ಕೆ6) ಅವರು ಸರಣಿಯಲ್ಲಿ ಒಟ್ಟು 17 ವಿಕೆಟ್ ಪಡೆದು ಸರಣಿಶ್ರೇಷ್ಠ ಗೌರವಕ್ಕೂ ಪಾತ್ರರಾದರು.

ಭಾರತದ ಇನಿಂಗ್ಸ್ ಅವಲೋಕಿಸಿದರೆ; ಕೆಲವು ಹಂತಗಳಲ್ಲಿ ಅಲ್ಪಸ್ವಲ್ಪ ಪ್ರತಿರೋಧ ಕಂಡುಬಂದಿತು. ಆದರೆ ದೀರ್ಘ ಮತ್ತು ಗಟ್ಟಿಯಾದ ಜತೆಯಾಟಗಳು ಮೂಡಿಬರಲಿಲ್ಲ. ಸಾಯಿ ಸುದರ್ಶನ್ ಅವರು ಒಂದು ಬಾರಿ ಜೀವದಾನ ಪಡೆದರು. ಮಾರ್ಕೊ ಯಾನ್ಸೆನ್ ಬೌಲಿಂಗ್‌ನಲ್ಲಿ ಸಾಯಿ ಔಟಾಗಿದ್ದ ಎಸೆತ ನೋಬಾಲ್ ಆಗಿತ್ತು. ಸಾಯಿ 139 ಎಸೆತಗಳನ್ನು ಆಡಿ 14 ರನ್ ಗಳಿಸಿದರು.

ಕುಲದೀಪ್ ಯಾದವ್ ಅವರನ್ನು ಆಫ್‌ಸ್ಪಿನ್ನರ್ ಹಾರ್ಮರ್ ಬೌಲ್ಡ್ ಮಾಡಿದರು. ಅದೇ ಓವರ್‌ನಲ್ಲಿ ಧ್ರುವ ಜುರೇಲ್ ಅವರ ವಿಕೆಟ್ ಗಳಿಸುವಲ್ಲಿ ಹಾರ್ಮರ್ ಯಶಸ್ವಿಯಾದರು. ರಿಷಭ್ ಪಂತ್ ಆಕ್ರಮಣಶೈಲಿ ಹೊಡೆತ ಆಡಲಿಲ್ಲ. ಒಂದು ಬೌಂಡರಿ ಮತ್ತು ಒಂದು ಸಿಕ್ಸರ್ ಹೊಡೆಯುವ ದಿಟ್ಟತನ ತೋರಿಸಿದರು. ಆದರೆ ದೊಡ್ಡ ಇನಿಂಗ್ಸ್ ಆಡಲಿಲ್ಲ. ಅವರೂ ಹಾರ್ಮರ್ ಮೋಡಿಗೆ ವಿಕೆಟ್ ಕೊಟ್ಟರು.

ಎಚ್ಚರಿಕೆ ಮತ್ತು ಏಕಾಗ್ರತೆಯೊಂದಿಗೆ ಆಡುವವರಿಗೆ ಹೆಚ್ಚು ಹೊತ್ತು ನಿಲ್ಲುವ ಅವಕಾಶವನ್ನು ಪಿಚ್ ನೀಡಿತ್ತು. ಆದರೆ, ಬ್ಯಾಟರ್‌ಗಳು ಸಹನೆ ಕಳೆದುಕೊಳ್ಳುವಂತೆ ಮಾಡುವ ತಂತ್ರಗಾರಿಕೆಯನ್ನು ಹಾರ್ಮರ್ ಅಚ್ಚುಕಟ್ಟಾಗಿ ಹೆಣೆದರು. ಇದೆಲ್ಲದರ ನಡುವೆ ಜಡೇಜ ಅವರ ಬ್ಯಾಟಿಂಗ್ ಚೇತೋಹಾರಿಯಾಗಿತ್ತು.



ಟ್ರೋಫಿಯೊಂದಿಗೆ ದಕ್ಷಿಣ ಆಫ್ರಿಕಾ ನಾಯಕ ತೆಂಬಾ ಬವುಮಾ

ಐಸಿಸಿ ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್ ಅಂಕಪಟ್ಟಿ

ಸ್ಥಾನ	ತಂಡ	ಪಂದ್ಯ	ಗೆಲುವು	ಸೋಲು	ಡ್ರಾ	ಪಾಯಿಂಟ್ಸ್	ಗೆಲುವಿನ ಸರಾಸರಿ(%)
1	ಆಸ್ಟ್ರೇಲಿಯಾ	4	4	0	0	48	100
2	ದಕ್ಷಿಣ ಆಫ್ರಿಕಾ	4	3	1	0	36	75
3	ಶ್ರೀಲಂಕಾ	2	1	0	1	16	66.67
4	ಪಾಕಿಸ್ತಾನ	2	1	1	0	12	50
5	ಭಾರತ	9	4	4	1	52	48.15

ಮಾಹಿತಿ: ಐಸಿಸಿ ವೆಬ್‌ಸೈಟ್





ನಿರಾಶೆಯಲ್ಲಿ ರವೀಂದ್ರ ಜಡೇಜ (ಎಡ) 6 ವಿಕೆಟ್ ಪಡೆದ ಸಿಮೊನ್ ಹಾರ್ಮರ್ ಸಂಭ್ರಮ ಪಿಟಿಐ ಚಿತ್ರಗಳು

ಸ್ಕೋರ್ ಕಾರ್ಡ್

ಮೊದಲ ಇನಿಂಗ್ಸ್: ದಕ್ಷಿಣ ಆಫ್ರಿಕಾ: 489 (151.1 ಓವರುಗಳಲ್ಲಿ)
ಭಾರತ: 201 (83.5 ಓವರುಗಳಲ್ಲಿ)
ಎರಡನೇ ಇನಿಂಗ್ಸ್:
ದಕ್ಷಿಣ ಆಫ್ರಿಕಾ: 5 ವಿಕೆಟ್‌ಗೆ 260 ಡಿಕ್ಲೇರ್ (78.3 ಓವರುಗಳಲ್ಲಿ)
ಭಾರತ: 140 (63.5 ಓವರುಗಳಲ್ಲಿ)
(ಮಂಗಳವಾರ: 2 ವಿಕೆಟ್‌ಗೆ 27)
ಸುದರ್ಶನ್ ಸಿ ಮರ್ಕರಂ ಬಿ ಮುತ್ತುಸಾಮಿ 14 (139ಎ, 4x1)
ಕುಲದೀಪ್ ಸಿ ಹಾರ್ಮರ್ 5 (38ಎ, 4x1)
ಜುರೇಲ್ ಸಿ ಮರ್ಕರಂ ಬಿ ಹಾರ್ಮರ್ 2 (3ಎ)
ಪಂತ್ ಸಿ ಮರ್ಕರಂ ಬಿ ಹಾರ್ಮರ್ 13 (16ಎ, 4x1, 6x1)
ಜಡೇಜ ಸಿ ವೆರೆಯನ್ ಬಿ ಮಹಾರಾಜ್ 54 (87ಎ, 4x4, 6x2)
ಸುಂದರ್ ಸಿ ಮರ್ಕರಂ ಬಿ ಹಾರ್ಮರ್ 16 (44ಎ, 4x2)
ನಿತೀಶ್ ರೆಡ್ಡಿ ಸಿ ವೆರೆಯನ್ ಬಿ ಹಾರ್ಮರ್ 0 (3ಎ)
ಬೂಮ್ರಾ ಔಟಾಗದೇ 1 (2ಎ)
ಸಿರಾಜ್ ಸಿ ಯಾನ್ಸೆನ್ ಬಿ ಮಹಾರಾಜ್ 0 (4ಎ)
ಇತರೆ: 16 (ಬೈ 5, ಲೆಗ್‌ಬೈ 9, ನೋಬಾಲ್ 2)
ವಿಕೆಟ್ ಪತನ: 3–40 (ಕುಲದೀಪ್ ಯಾದವ್, 23.3), 4–42 (ಧ್ರುವ್ ಜುರೇಲ್, 23.6), 5–58 (ರಿಷಭ್ ಪಂತ್, 31.2), 6–95 (ಸಾಯಿ ಸುದರ್ಶನ್, 47.5), 7–130 (ವಾಷಿಂಗ್ಟನ್ ಸುಂದರ್, 60.4), 8–138 (ನಿತೀಶ್ ಕುಮಾರ್ ರೆಡ್ಡಿ, 62.1), 9–140 (ರವೀಂದ್ರ ಜಡೇಜ, 63.1), 10–140 (ಮೊಹಮ್ಮದ್ ಸಿರಾಜ್, 63.5)
ಬೌಲಿಂಗ್: ಮಾರ್ಕೊ ಯಾನ್ಸೆನ್ 15–7–23–1; ವಿಯಾನ್ ಮಲ್ಡರ್ 4–1–6–0; ಸಿಮೋನ್ ಹಾರ್ಮರ್ 23–6–37–6; ಕೇಶವ ಮಹಾರಾಜ್ 12.5–1–37–2; ಏಡನ್ ಮರ್ಕರಂ 2–0–2–0; ಸೆನುರಾನ್ ಮುತ್ತುಸಾಮಿ 7–1–21–1
ಪಂದ್ಯದ ಆಟಗಾರ: ಮಾರ್ಕೊ ಯಾನ್ಸೆನ್ (93, 6/48, 1/23)
ಸರಣಿಯ ಆಟಗಾರ: ಹಾರ್ಮರ್ (17 ವಿಕೆಟ್)

ಫಲಿತಾಂಶ: ದಕ್ಷಿಣ ಆಫ್ರಿಕಾಕ್ಕೆ 408 ರನ್ ಜಯ

ಭಾರತಕ್ಕೆ ದೊಡ್ಡ ಅಂತರದ ಸೋಲು (ರನ್‌ಗಳಲ್ಲಿ)

ರನ್	ಎದುರಾಳಿ	ವರ್ಷ	ತಾಣ
408	ದಕ್ಷಿಣ ಆಫ್ರಿಕಾ	2025	ಗುವಾಹಟಿ
342	ಆಸ್ಟ್ರೇಲಿಯಾ	2004	ನಾಗ್ಪುರ
341	ಪಾಕಿಸ್ತಾನ	2006	ಕರಾಚಿ
ಇನಿಂಗ್ಸ್ + 336	ವೆಸ್ಟ್ ಇಂಡೀಸ್	1958	ಕೋಲ್ಕತ್ತ
333	ಆಸ್ಟ್ರೇಲಿಯಾ	2017	ಪುಣೆ


9 ದಕ್ಷಿಣ ಆಫ್ರಿಕಾ ತಂಡದ ಏಡನ್ ಮರ್ಕರಂ ಈ ಪಂದ್ಯದಲ್ಲಿ ಒಟ್ಟು 9 ಕ್ಯಾಚ್‌ಗಳನ್ನು ಪಡೆದರು. ಇದು ಫೀಲ್ಡರ್‌ವೊಬ್ಬ ಟೆಸ್ಟ್ ಪಂದ್ಯವೊಂದರಲ್ಲಿ ಪಡೆದ ಗರಿಷ್ಠ ಕ್ಯಾಚ್. ಈ ದಾಖಲೆ ಈವರೆಗೆ ಭಾರತದ ಅಜಿಂಕ್ಯ ರಹಾನೆ (8) ಅವರ ಹೆಸರಿನಲ್ಲಿತ್ತು.



ಹಿಂದಿ ಚಿತ್ರರಂಗದ ಹೀ-ಮ್ಯಾನ್‌ಗೆ ನಮನಗಳು!

‘ನನ್ನ ಭವಿಷ್ಯ ಬಿಸಿಸಿಐ ನಿರ್ಧರಿಸುತ್ತೆ’

ಗುವಾಹಟಿ (ಪಿಟಿಐ): ಭಾರತ ಕ್ರಿಕೆಟ್ ತಂಡವು ತವರಿನಲ್ಲಿ ನಡೆದ ಟೆಸ್ಟ್ ಕ್ರಿಕೆಟ್ ಸರಣಿಗಳಲ್ಲಿ ವೈಫಲ್ಯ ಅನುಭವಿಸಿರುವ ಹಿನ್ನೆಲೆಯಲ್ಲಿ ಮುಖ್ಯ ಕೋಚ್ ಗೌತಮ್ ಗಂಭೀರ್ ವಿರುದ್ಧ ವ್ಯಾಪಕ ಅಸಮಾಧಾನ ವ್ಯಕ್ತವಾಗುತ್ತಿದೆ.



ಅವರು ಕೋಚ್ ಸ್ಥಾನಕ್ಕೆ ನೇಮಕವಾದ ನಂತರ ಭಾರತ ತಂಡವು ನ್ಯೂಜಿಲೆಂಡ್ ಮತ್ತು ಇದೀಗ ದಕ್ಷಿಣ ಆಫ್ರಿಕಾ ಎದುರಿನ ಟೆಸ್ಟ್ ಸರಣಿಗಳಲ್ಲಿ ‘ವೈಟ್‌ವಾಷ್’ ಆಗಿದೆ. ಸಾಮಾಜಿಕ ಜಾಲತಾಣಗಳಲ್ಲಿ ಕ್ರಿಕೆಟ್ ಅಭಿಮಾನಿಗಳು ಮತ್ತು ರವಿಶಾಸ್ತ್ರಿ ಸೇರಿದಂತೆ ಹಲವು ದಿಗ್ಗಜರು ಗಂಭೀರ್ ಅವರ ಕಾರ್ಯಶೈಲಿಯ ಕುರಿತು ಟೀಕಿಸಿದ್ದಾರೆ.

ಬುಧವಾರ ಎರಡನೇ ಟೆಸ್ಟ್ ಮುಕ್ತಾಯದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಗಂಭೀರ್, ‘ನನ್ನ ಭವಿಷ್ಯವನ್ನು ಬಿಸಿಸಿಐ ನಿರ್ಧರಿಸಲಿದೆ. ನಾನು ಮುಖ್ಯವಲ್ಲ. ಆದರೆ ಭಾರತದ ಕ್ರಿಕೆಟ್ ಮಹತ್ವದ್ದು ಎಂದು ಮುಖ್ಯ ಕೋಚ್ ಆಗಿ ನೇಮಕವಾದ ನಂತರದ ಮೊದಲ ಸುದ್ದಿಗೋಷ್ಠಿಯಲ್ಲಿ ಹೇಳಿದ್ದೆ. ಈಗಲೂ ಅದಕ್ಕೆ ಬದ್ಧ’ ಎಂದರು.

‘ಜನರು ನನ್ನ ಸಾಧನೆಗಳನ್ನು ಬೇಗನೆ ಮರೆಯುತ್ತಾರೆ. ನಮ್ಮ ಯುವ ಆಟಗಾರರ ತಂಡವು ಇಂಗ್ಲೆಂಡ್‌ನಲ್ಲಿ ಮಾಡಿದ ಸಾಧನೆಯನ್ನು ಮರೆಯುತ್ತಾರೆ. ಆದರೆ ನ್ಯೂಜಿಲೆಂಡ್ ವಿರುದ್ಧದ ಸರಣಿ ಫಲಿತಾಂಶ ಕುರಿತು ಮಾತನಾಡುತ್ತಾರೆ. ಚಾಂಪಿಯನ್ಸ್ ಟ್ರೋಫಿ, ಏಷ್ಯಾ ಕಪ್ ಜಯಿಸಿದ ತಂಡವು ನನ್ನದೇ ಎಂಬುದನ್ನೂ ಮರೆಯುತ್ತಾರೆ’ ಎಂದು ಹೇಳಿದರು.

ಗಂಭೀರ್ ವಿರುದ್ಧ ಘೋಷಣೆ: ಪಂದ್ಯದಲ್ಲಿ ಭಾರತ ತಂಡವು ಸೋತ ನಂತರ ಕ್ರಿಕೆಟ್ ಮೈದಾನದ ಗ್ಯಾಲರಿಗಳಲ್ಲಿದ್ದ ಪ್ರೇಕ್ಷಕರು ಗೌತಮ್ ಗಂಭೀರ್ ಅವರ ವಿರುದ್ಧ ಘೋಷಣೆ ಕೂಗಿದರು. ‘ಗಂಭೀರ್ ಹಾಯ್..ಹಾಯ್.. ಗೋ ಬ್ಯಾಕ್’ ಎಂದು ಕೂಗಿದರು. ಭಾರತ ಕ್ರಿಕೆಟ್‌ನ ಕರಾಳ ದಿನ ಇದಾಗಿದೆ ಎಂದೂ ಟೀಕಿಸಿದರು.

ಕೆಎಸ್‌ಸಿಎ ಚುನಾವಣೆ: ಅಭ್ಯರ್ಥಿ ಪಟ್ಟಿ ಪ್ರಕಟಣೆಗೆ ಹೈಕೋರ್ಟ್ ತಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆಯ (ಕೆಎಸ್‌ಸಿಎ) ಪದಾಧಿಕಾರಿಗಳ ಆಯ್ಕೆಗೆ ನಡೆಯುತ್ತಿರುವ ಚುನಾವಣೆಯ ಕಣದಲ್ಲಿ ಉಳಿದಿರುವ ಅಭ್ಯರ್ಥಿಗಳು ಯಾರೆಂಬುದನ್ನು ಸದ್ಯ ಪ್ರಕಟಿಸಬಾರದು’ ಎಂದು ಹೈಕೋರ್ಟ್ ಆದೇಶಿಸಿದೆ.

ಅಧ್ಯಕ್ಷ ಸ್ಥಾನಕ್ಕೆ ನಾಮಪತ್ರ ಸಲ್ಲಿಸಿರುವ ಕೆ.ಎನ್.ಶಾಂತಕುಮಾರ್ ಅವರು ‘ಚುನಾವಣೆಯಲ್ಲಿ ನನ್ನನ್ನೂ ಅಭ್ಯರ್ಥಿಯನ್ನಾಗಿ ಪರಿಗಣಿಸಲು ನಿರ್ದೇಶಿಸಬೇಕು’ ಎಂದು ಕೋರಿ ಸಲ್ಲಿಸಿರುವ ಅರ್ಜಿಯನ್ನು ನ್ಯಾ. ಸೂರಜ್ ಗೋವಿಂದರಾಜು ಅವರಿದ್ದ ಏಕಸದಸ್ಯ ನ್ಯಾಯಪೀಠ ಬುಧವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಅರ್ಜಿದಾರರ ಪರ ಹಿರಿಯ ವಕೀಲ ಎಸ್.ಎಸ್.ನಾಗಾನಂದ ಅವರ ವಾದ ಮಾನ್ಯ ಮಾಡಿದ ನ್ಯಾಯಪೀಠವು, ‘ನಾಮಪತ್ರ ಪರಿಶೀಲನೆ ಮತ್ತು ಅದನ್ನು ತಿರಸ್ಕರಿಸುವ ಮುನ್ನ ಅರ್ಜಿದಾರರು ₹200 ಚಂದಾ ಹಣ ಪಾವತಿಸಿದ್ದಾರೆಯೇ? ಹಣ ಪಾವತಿಸಿದ ವಿಚಾರವನ್ನು ಚುನಾವಣಾ ಅಧಿಕಾರಿ ಗಮನಕ್ಕೆ ತರಲಾಗಿದೆಯೇ? ಎಂಬ ಎರಡು ಸರಳ ಅಂಶಗಳನ್ನು ಖಾತರಿಪಡಿಸಿಕೊಳ್ಳಬೇಕಿದೆ. ಹಾಗಾಗಿ, ಈ ಸೀಮಿತ ವಿಚಾರಕ್ಕೆ ಸಂಬಂಧಿಸಿದಂತೆ ನಾಮಪತ್ರ ಪರಿಶೀಲನಾ ಪ್ರಕ್ರಿಯೆಯ ವಿಡಿಯೊ ದಾಖಲೆಯನ್ನು ನ್ಯಾಯಾಲಯಕ್ಕೆ ಸಲ್ಲಿಸಬೇಕು’ ಎಂದು ಕೆಎಸ್‌ಸಿಎಗೆ ನಿರ್ದೇಶಿಸಿತು.

‘ಗುರುವಾರ (ನ. 27) ಬೆಳಿಗ್ಗೆ 10.30ಕ್ಕೆ ವಿಚಾರಣೆ ನಡೆಸಲಾಗುವುದು’ ಎಂದು ಪೀಠವು ತಿಳಿಸಿತು.

ಕೋರಿಕೆ ಏನು?: ಡಿ. 7ರಂದು ನಡೆಯಲಿರುವ ಚುನಾವಣೆಯ ಪ್ರಕ್ರಿಯೆಯ ಭಾಗವಾಗಿ ಅರ್ಜಿದಾರರು ಅಭ್ಯರ್ಥಿಯಾಗಿ ನಾಮಪತ್ರ ಸಲ್ಲಿಸಿದ್ದರು. ಆದರೆ, ‘ಅವರ ಸದಸ್ಯತ್ವದ ಹಿಂಬಾಕಿ ಇದೆ’ ಎಂಬ ಕಾರಣಕ್ಕೆ ನಾಮಪತ್ರ ತಿರಸ್ಕರಿಸಲಾಗಿತ್ತು.

ಸೈಯದ್ ಮುಷ್ತಾಕ್ ಅಲಿ ಟ್ರೋಫಿ ಟಿ20 ಕ್ರಿಕೆಟ್: ಆರ್. ಸ್ಮರಣ್ ಅರ್ಧಶತಕ

ಕರ್ನಾಟಕಕ್ಕೆ ರೋಚಕ ಗೆಲುವು

ಅಹಮದಾಬಾದ್ (ಪಿಟಿಐ): ಕರ್ನಾಟಕ ತಂಡವು, ಸೈಯದ್ ಮುಷ್ತಾಕ್ ಅಲಿ ಟ್ರೋಫಿ ಕ್ರಿಕೆಟ್ ಟೂರ್ನಿಯ ಮೊದಲ ಪಂದ್ಯದಲ್ಲಿ ಉತ್ತರಾಖಂಡ ವಿರುದ್ಧ ಕೊನೆಯ ಎಸೆತದಲ್ಲಿ ಐದು ವಿಕೆಟ್‌ಗಳ ರೋಚಕ ಜಯಗಳಿಸಿ ಶುಭಾರಂಭ ಮಾಡಿತು. ರಣಜಿ ಟ್ರೋಫಿಯ ಉತ್ತಮ ಆಟ ಮುಂದುವರಿಸಿದ ರವಿಚಂದ್ರನ್ ಸ್ಮರಣ್ 67 ರನ್ (41ಎ, 4x7, 6x2) ಗಳಿಸಿ ಮಿಂಚಿದರು.

ಬುಧವಾರ ನಡೆದ ‘ಡಿ’ ಗುಂಪಿನ ಈ ಪಂದ್ಯದಲ್ಲಿ ಬ್ಯಾಟ್ ಮಾಡಲು ಕಳುಹಿಸಲ್ಪಟ್ಟ ಉತ್ತರಾಖಂಡ ತಂಡವು 20 ಓವರುಗಳಲ್ಲಿ 5 ವಿಕೆಟ್‌ಗೆ 197 ರನ್‌ಗಳ ಸವಾಲಿನ ಮೊತ್ತ ಗಳಿಸಿತು.

ನಾಯಕ ಕುನಾಲ್ ಚಂದೇಲ ಕೇವಲ 49 ಎಸೆತಗಳಲ್ಲಿ ಏಳು ಬೌಂಡರಿ, ಐದು ಸಿಕ್ಸರ್‌ಗಳಿದ್ದ 88 ರನ್ ಬಾರಿಸಿದರು. ಅವರಿಗೆ ಬೆಂಬಲ ನೀಡಿದ ಆಂಜನೇಯ ಸೂರ್ಯವಂಶಿ 36 ಎಸೆತಗಳಲ್ಲಿ 54 ರನ್ (4x5, 6x3) ಗಳಿಸಿದರು. ಇವರಿಬ್ಬರು ನಾಲ್ಕನೇ ವಿಕೆಟ್‌ಗೆ 122 ರನ್ ಸೇರಿಸಿದರು. ಕೊನೆಯಲ್ಲಿ ಶಾಶ್ವತ್ ದಂಗ್ವಾಲ್ ಬಿರುಸಿನ 27 ರನ್ (13ಎ, 4x4, 6x1) ಗಳಿಸಿದ್ದರಿಂದ ತಂಡದ ಮೊತ್ತ 200ರ ಹತ್ತಿರ ತಲುಪಿತು. ಕರ್ನಾಟಕದ ಕಡೆ ವಿದ್ವತ್ ಕಾವೇರಪ್ಪ 37 ರನ್ನಿಗೆ 3 ವಿಕೆಟ್ ಪಡೆದರು.



ಆರ್. ಸ್ಮರಣ್

ಕರ್ನಾಟಕದ ಆರಂಭ ಉತ್ತಮವಾಗಿರಲಿಲ್ಲ. ತಂಡ 15 ರನ್ ಗಳಿಸುವಷ್ಟರಲ್ಲಿ ಎದುರಾಳಿ ತಂಡದ ಎಡಗೈ ವೇಗದ ಬೌಲರ್ ರಾಜನ್ ಕುಮಾರ್ (24ಕ್ಕೆ3) ಬೌಲಿಂಗ್‌ನಲ್ಲಿ ಕೃಷ್ಣನ್ ಶ್ರೀಜಿತ್ (7) ಮತ್ತು ಅನುಭವಿ ಕರುಣ್ ನಾಯರ್ (4) ಅವರನ್ನು ಕಳೆದುಕೊಂಡಿತ್ತು. ಆದರೆ ನಾಯಕ ಮಯಂಕ್ ಅಗರವಾಲ್ (29) ಜೊತೆಗೂಡಿದ ಸ್ಮರಣ್ ತಂಡದ ನೆರವಿಗೆ ಬಂದರು. 84 ರನ್ ಜೊತೆಯಾಟದಿಂದ ಕರ್ನಾಟಕ ಚೇತರಿಸಿತು.

ಆದರೆ ಮಯಂಕ್, ಸ್ಮರಣ್ ಮತ್ತು ಅಭಿನವ್ ಮನೋಹರ್ (10) ಅವರನ್ನು 29 ರನ್‌ಗಳ ಅಂತರದಲ್ಲಿ ಕಳೆದುಕೊಂಡಾಗ ಉತ್ತರಾಖಂಡ ಮೇಲುಗೈ ಪಡೆಯುವಂತೆ ಕಂಡಿತು. ಒಂದು ಹಂತದಲ್ಲಿ ಮಾಜಿ ಚಾಂಪಿಯನ್ನರಿಗೆ 6.4 ಓವರುಗಳಲ್ಲಿ 70 ರನ್ ಗಳಿಸಬೇಕಾದ ಸವಾಲು ಎದುರಾಯಿತು.

ಕೆಳಕ್ರಮಾಂಕದಲ್ಲಿ ಪ್ರವೀಣ್ ದುಬೆ (38, 24ಎ) ಮತ್ತು ಶುಭಾಂಗ್ ಹೆಗ್ಡೆ (29, 18ಎ) ಅಮೂಲ್ಯ ಆಟವಾಡಿ ತಂಡವನ್ನು ಅಂತಿಮ ಎಸೆತದಲ್ಲಿ ಗುರಿ ತಲುಪಿಸಿದರು.

ಸಂಕ್ಷಿಪ್ತ ಸ್ಕೋರು: ಉತ್ತರಾಖಂಡ: 20 ಓವರುಗಳಲ್ಲಿ 5ಕ್ಕೆ 197 (ಕುನಾಲ್ ಚಂದೇಲ 88, ಆಂಜನೇಯ ಸೂರ್ಯವಂಶಿ 54; ವಿದ್ವತ್ ಕಾವೇರಪ್ಪ 37ಕ್ಕೆ3); ಕರ್ನಾಟಕ: 20 ಓವರುಗಳಲ್ಲಿ 5ಕ್ಕೆ 198 (ಆರ್.ಸ್ಮರಣ್ 67, ಪ್ರವೀಣ್ ದುಬೆ ಔಟಾಗದೇ 38, ಶುಭಾಂಗ್ ಹೆಗ್ಡೆ ಔಟಾಗದೇ 29; ರಾಜನ್ ಕುಮಾರ್ 24ಕ್ಕೆ3).
ಪಂದ್ಯದ ಆಟಗಾರ: ಆರ್.ಸ್ಮರಣ್.

ಬೌಂಡರಿ, ಸಿಕ್ಸರ್ ಮಳೆಗರೆದ ಉರ್ವಿಲ್

ಹೈದರಾಬಾದ್ (ಪಿಟಿಐ): ಸಿಕ್ಸರ್, ಬೌಂಡರಿಗಳ ಮಳೆಗರೆದ ನಾಯಕ ಉರ್ವಿಲ್ ಪಟೇಲ್ ಅವರು 37 ಎಸೆತಗಳಲ್ಲಿ ಅಜೇಯ 119 ರನ್ ಸಿಡಿಸಿ ಗುಜರಾತ್ ತಂಡ, ಸಿ ಗುಂಪಿನ ಪಂದ್ಯದಲ್ಲಿ ಸರ್ವಿಸಸ್ ತಂಡವನ್ನು ಎಂಟು ವಿಕೆಟ್‌ಗಳಿಂದ ಸದೆಬಡಿಯುವಲ್ಲಿ ಪ್ರಮುಖ ಪಾತ್ರವಹಿಸಿದರು.

ನಾಯಕನಾಗಿ ಬುಧವಾರ ತಮ್ಮ ಮೊದಲ ಪಂದ್ಯವನ್ನು ಆಡಿದ 27 ವರ್ಷ ವಯಸ್ಸಿನ ಪಟೇಲ್ 12 ಬೌಂಡರಿ, 10 ಸಿಕ್ಸರ್‌ಗಳನ್ನು ಬಾರಿಸಿದರು. 183 ರನ್ ಬೆನ್ನಟ್ಟಿದ ಗುಜರಾತ್‌ಗೆ ಆರ್ಯ ದೇಸಾಯಿ (60) ಮತ್ತು ಉರ್ವಿಲ್ ಮೊದಲ ವಿಕೆಟ್‌ಗೆ 174 ಸೇರಿಸಿದ್ದರಿಂದ ಪಂದ್ಯ ಏಕಪಕ್ಷೀಯವಾಯಿತು.

ಉರ್ವಿಲ್, 2023ರಲ್ಲಿ ಚಂಡೀಗಢ ವಿರುದ್ಧ ವಿಜಯ್ ಹಜಾರೆ ಟ್ರೋಫಿ ಪಂದ್ಯದಲ್ಲಿ 41 ಎಸೆತಗಳಲ್ಲಿ ಶತಕ ಬಾರಿಸಿದ್ದರು.

ಸಂಕ್ಷಿಪ್ತ ಸ್ಕೋರು: ಸರ್ವಿಸಸ್: 20 ಓವರುಗಳಲ್ಲಿ 9 ವಿಕೆಟ್‌ಗೆ 182 (ಗೌರವ್ ಕೋಚಾರ್ 60); ಗುಜರಾತ್: 12.3 ಓವರುಗಳಲ್ಲಿ 2 ವಿಕೆಟ್‌ಗೆ 183 (ಆರ್ಯ ದೇಸಾಯಿ 60, ಉರ್ವಿಲ್ ಪಟೇಲ್ ಔಟಾಗದೇ 119; ಮೋಹಿತ್ ಆರ್. 39ಕ್ಕೆ2).

ಕೂಚ್ ಬಿಹಾರ್: ರಾಜ್ಯ ತಂಡಕ್ಕೆ ಸುಲಭ ಜಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ತಂಡವು ಕೂಚ್ ಬಿಹಾರ್ ಟ್ರೋಫಿ ಎಲೈಟ್ ಸಿ ಗುಂಪಿನ ಪಂದ್ಯದಲ್ಲಿ ಬುಧವಾರ ಹಿಮಾಚಲ ಪ್ರದೇಶ ತಂಡವನ್ನು 7 ವಿಕೆಟ್‌ಗಳಿಂದ ಸುಲಭವಾಗಿ ಮಣಿಸಿತು.

ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಗೆಲುವಿಗೆ 148 ರನ್ ಗುರಿ ಪಡೆದ ರಾಜ್ಯ ತಂಡವು ಅಂತಿಮ ದಿನ 40.1 ಓವರ್‌ಗಳಲ್ಲಿ 3 ವಿಕೆಟ್ ನಷ್ಟಕ್ಕೆ ಗುರಿ ತಲುಪಿತು.

ಆತಿಥೇಯ ತಂಡವು ಮಂಗಳವಾರ 30 ಓವರ್‌ಗಳಲ್ಲಿ 3 ವಿಕೆಟ್‌ಗೆ 98 ರನ್ ಗಳಿಸಿತ್ತು. ನಾಯಕ ಮಣಿಕಂಠ ಶಿವಾನಂದ (ಔಟಾಗದೇ 32; 42ಎ, 4x5) ಹಾಗೂ ಸಿದ್ಧಾರ್ಥ್ ಅಖಿಲ್ (ಔಟಾಗದೇ 32; 54ಎ, 4x3) ಅವರು ಮುರಿಯದ ನಾಲ್ಕನೇ ವಿಕೆಟ್ ಜೊತೆಯಾಟದಲ್ಲಿ 64 ರನ್ ಸೇರಿಸಿ, ತಂಡವನ್ನು ಗೆಲುವಿನ ದಡ ಸೇರಿಸಿದರು.

ಸಂಕ್ಷಿಪ್ತ ಸ್ಕೋರು: ಹಿಮಾಚಲ ಪ್ರದೇಶ: 162 ಮತ್ತು 182; ಕರ್ನಾಟಕ: 197 ಮತ್ತು 40.1 ಓವರ್‌ಗಳಲ್ಲಿ 3 ವಿಕೆಟ್‌ಗೆ 148 (ಮಣಿಕಂಠ ಶಿವಾನಂದ ಔಟಾಗದೇ 32, ಸಿದ್ಧಾರ್ಥ್ ಅಖಿಲ್ ಔಟಾಗದೇ 32).
ಫಲಿತಾಂಶ: ಕರ್ನಾಟಕ ತಂಡಕ್ಕೆ 7 ವಿಕೆಟ್‌ಗಳ ಜಯ.

ಗೌರವಕ್ಕೆ ಪಾತ್ರರಾದ ಅತಿ ಕಿರಿಯ ಆಟಗಾರ

ಸಿಂದರೋವ್‌ಗೆ ವಿಶ್ವಕಪ್ ಕಿರೀಟ

ಪಣಜಿ (ಪಿಟಿಐ): ಉಜ್ಬೇಕಿಸ್ತಾನದ ಜಾವೊಖಿರ್ ಸಿಂದರೋವ್ ಅವರು ವೇಗದ ಆಟಗಳ ಟೈಬ್ರೇಕರ್‌ನಲ್ಲಿ ಚೀನಾದ ವೇಯಿ ಯಿ ಅವರನ್ನು ಸೋಲಿಸಿ ಫಿಡೆ ಚೆಸ್ ವಿಶ್ವಕಪ್ ಗೆದ್ದುಕೊಂಡರು. 19 ವರ್ಷ ವಯಸ್ಸಿನ ಸಿಂದರೋವ್ ವಿಶ್ವಕಪ್ ಗೆದ್ದ ಅತಿ ಕಿರಿಯ ಆಟಗಾರ ಎಂಬ ಗೌರವಕ್ಕೂ ಭಾಜನರಾದರು.

ಇವರಿಬ್ಬರ ನಡುವಣ ಎರಡು ಕ್ಲಾಸಿಕಲ್ ಆಟಗಳು ಡ್ರಾ ಆಗಿ ಸ್ಕೋರ್ 1–1 ಸಮಬಲವಾಗಿತ್ತು. ಬುಧವಾರ ಟೈಬ್ರೇಕರ್‌ನಲ್ಲಿ ವೇಯಿ ಯಿ ಅವರು ಮೊದಲ ಆಟವನ್ನು ಸುಲಭವಾಗಿ ಡ್ರಾ ಮಾಡಿಕೊಂಡರು. ಆದರೆ ಉಜ್ಬೇಕಿಸ್ತಾನದ ಆಟಗಾರ ಕಪ್ಪು ಕಾಯಿಗಳಲ್ಲಿ ಆಡಿ ಎದುರಾಳಿಯ ರಕ್ಷಣೆ ಭೇದಿಸಿ 60 ನಡೆಗಳಲ್ಲಿ ಎರಡನೇ ಆಟ ಗೆದ್ದುಕೊಂಡು ಒಟ್ಟು 2.5–1.5 ರಿಂದ ಪಂದ್ಯ ಗೆದ್ದರು.

ಸಿಂದರೋವ್ ಅವರು ವಿಶ್ವನಾಥನ್ ಆನಂದ್ ಟ್ರೋಫಿಯ ಜೊತೆ ₹1.07 ಕೋಟಿ ಬಹುಮಾನ ತಮ್ಮದಾಗಿಸಿಕೊಂಡರು. ನಾಕೌಟ್ ಮಾದರಿಯ ಈ ಟೂರ್ನಿಯಲ್ಲಿ ಉಜ್ಬೇಕಿಸ್ತಾನದ ಆಟಗಾರ 16ನೇ ಶ್ರೇಯಾಂಕ ಪಡೆದಿದ್ದರು. ಚೀನಾದ ಆಟಗಾರ ಸುಮಾರು ₹76 ಲಕ್ಷ ಬಹುಮಾನ ಗಳಿಸಿದರು.

ಸಿಂದರೋವ್ ಮತ್ತು ವೇಯಿ ಯಿ ಇಬ್ಬರೂ ಕ್ಯಾಂಡಿಡೇಟ್ಸ್‌ಗೆ ಅರ್ಹತೆ ಪಡೆದಿದ್ದಾರೆ. ಮೂರನೇ ಸ್ಥಾನ ಪಡೆದ ರಷ್ಯಾದ ಇಸಿಪಂಕೊ ಅವರೂ ಸೈಪ್ರಸ್‌ನಲ್ಲಿ ಮುಂದಿನ ಫೆಬ್ರವರಿ–ಮಾರ್ಚ್‌ನಲ್ಲಿ ನಿಗದಿಯಾಗಿರುವ ಎಂಟು ಆಟಗಾರರ ಟೂರ್ನಿಯಲ್ಲಿ ಆಡುವ ಅವಕಾಶ ಗಳಿಸಿದ್ದಾರೆ.

ಸದ್ಯ ಈ ಮೂವರ ಜೊತೆ (ಸಿಂದರೋವ್, ವೇಯಿ ಯಿ, ಇಸಿಪೆಂಕೊ) ಜೊತೆ ಅಮೆರಿಕದ ಫ್ಯಾಬಿಯಾನೊ ಕರುವಾನ, ನೆದರ್ಲೆಂಡ್ಸ್‌ನ ಅನಿಶ್ ಗಿರಿ, ಜರ್ಮನಿಯ ಮಥಾಯಿಸ್ ಬ್ಲೂಬಾಮ್ ಅವರೂ ಅರ್ಹತೆ ಗಳಿಸಿದ್ದಾರೆ. ಚೆಸ್ ಸರ್ಕಿಟ್‌ನಲ್ಲಿ ಉತ್ತಮ ಸಾಧನೆ ತೋರಿರುವ ಭಾರತದ ಪ್ರಜ್ಞಾನಂದ ಮತ್ತು ಜಪಾನ್‌ನ ಹಿಕಾರು ನಕಾಮುರಾ ಅವರೂ ಅರ್ಹತೆ ಪಡೆಯುವುದು ಬಹುತೇಕ ಖಚಿತವಾಗಿದೆ.

ನೊದಿರ್ಬೆಕ್ ಅಬ್ದುಸತ್ತಾರೋವ್ ನಂತರ ಸಿಂದರೋವ್ ಅವರು ಉಜ್ಬೇಕಿಸ್ತಾನದ ಎರಡನೇ ಪ್ರಮುಖ ಆಟಗಾರ ಎನಿಸಿದ್ದಾರೆ.



ಪ್ರಶಸ್ತಿಯೊಂದಿಗೆ ವೇಯಿ ಯಿ (ಎಡ), ಜಾವೊಖಿರ್ ಸಿಂದರೋವ್ ಫಿಡೆ ಚಿತ್ರ

FIDE WORLD CUP GOA 2025

ಡಬ್ಲ್ಯುಪಿಎಲ್ ಆಟಗಾರ್ತಿಯರ ಬಿಡ್ ಇಂದು: ಬೌಲರ್‌ಗಳತ್ತ ಆರ್‌ಸಿಬಿ ಚಿತ್ತ

ಪ್ರಜಾವಾಣಿ ವಾರ್ತೆ

ನವದೆಹಲಿ: ಏಕದಿನ ಕ್ರಿಕೆಟ್ ವಿಶ್ವಕಪ್ ಜಯಿಸಿದ ಸಂಭ್ರಮದಲ್ಲಿರುವ ಭಾರತ ಮಹಿಳಾ ತಂಡದ ಆಟಗಾರ್ತಿಯರಿಗೆ ಗುರುವಾರ ನಡೆಯಲಿರುವ ಮಹಿಳಾ ಪ್ರೀಮಿಯರ್ ಲೀಗ್ (ಡಬ್ಲ್ಯುಪಿಎಲ್) ಹರಾಜು ಪ್ರಕ್ರಿಯೆಯಲ್ಲಿ ದೊಡ್ಡ ಮೊತ್ತ ಒಲಿಯುವ ನಿರೀಕ್ಷೆ ಇದೆ.

ಒಟ್ಟು 277 ಆಟಗಾರ್ತಿಯರು ಬಿಡ್‌ನಲ್ಲಿದ್ದಾರೆ. ಅದರಲ್ಲಿ ಭಾರತದ 194 ಮತ್ತು 83 ವಿದೇಶಿ ಆಟಗಾರ್ತಿಯರು ಇದ್ದಾರೆ. ಈ ಬಿಡ್ ಪ್ರಕ್ರಿಯೆಯಲ್ಲಿ ರಾಯಲ್ ಚಾಲೆಂಜರ್ಸ್ ಬೆಂಗಳೂರು (ಆರ್‌ಸಿಬಿ) ತಂಡವು ತನ್ನ ಬೌಲಿಂಗ್ ವಿಭಾಗವನ್ನು ಬಲಗೊಳಿಸುವತ್ತ ಚಿತ್ತ ನೆಟ್ಟಿದೆ.

ಆರ್‌ಸಿಬಿಯ ಪರ್ಸ್‌ನಲ್ಲಿ ₹6.15 ಕೋಟಿ ಮತ್ತು ಒಂದು ರೈಟ್ ಟು ಮ್ಯಾಚ್ ಕಾರ್ಡ್ ಇದೆ. ತಂಡದ ನಾಯಕಿ ಸ್ಮೃತಿ ಮಂದಾನ (₹3.5ಕೋಟಿ), ರಿಚಾ ಘೋಷ್ (₹2.75 ಕೋಟಿ), ಎಲಿಸ್ ಪೆರಿ (₹2 ಕೋಟಿ) ಮತ್ತು ಶ್ರೇಯಾಂಕಾ ಪಾಟೀಲ (₹60 ಲಕ್ಷ) ಅವರನ್ನು ಉಳಿಸಿಕೊಳ್ಳಲು ಆರ್‌ಸಿಬಿಯು ಒಟ್ಟು ₹8.85 ಕೋಟಿ ಖರ್ಚು ಮಾಡಿದೆ.

ಬೆಂಗಳೂರು ತಂಡವು ತನ್ನ ತಂಡದ ಬೌಲಿಂಗ್ ವಿಭಾಗಕ್ಕೆ ಶಕ್ತಿ ತುಂಬಲು ಮಧ್ಯಮವೇಗಿ ರೇಣುಕಾ ಸಿಂಗ್, ಲಾರೆನ್ ಬೆಲ್ ಅಥವಾ ಕ್ರಾಂತಿ ಗೌಡ್ ಅವರನ್ನು ಸೆಳೆದುಕೊಳ್ಳಲು ಪ್ರಯತ್ನಿಸಬಹುದು.

ಮುಂಬೈ ಇಂಡಿಯನ್ಸ್ ಮತ್ತು ಡೆಲ್ಲಿ ಕ್ಯಾಪಿಟಲ್ಸ್ ತಂಡಗಳು ಕಳೆದ ಮೂರು ಆವೃತ್ತಿಗಳಲ್ಲಿ ಟಾಪ್ ಎರಡರಲ್ಲಿ ಸ್ಥಾನ ಪಡೆದಿವೆ.

ಅಮೆಲಿಯಾ ಕೇರ್, ನ್ಯಾಟ್ ಶಿವರ್ ಬ್ರಂಟ್ ಮತ್ತು ಹೇಯಲಿ ಮ್ಯಾಥ್ಯೂಸ್ ಅವರನ್ನು ಖರೀದಿಸಲು ಪೈಪೋಟಿ ಏರ್ಪಡುವ ನಿರೀಕ್ಷೆ ಇದೆ.

ಗುಜರಾತ್ ಜೈಂಟ್ಸ್ ತಂಡವು ತನ್ನ ತಂಡವನ್ನು ಬಲಾಢ್ಯಗೊಳಿಸಲು ಹೆಚ್ಚು ಪ್ರಯತ್ನಿಸಲಿದೆ. ಒಟ್ಟು ₹ 9 ಕೋಟಿ ಮತ್ತು ಮೂರು ಆರ್‌ಟಿಎಂ ಅವರ ಖಾತೆಯಲ್ಲಿವೆ.



ರೇಣುಕಾ ಸಿಂಗ್

2030ರ ಕಾಮನ್‌ವೆಲ್ತ್ ಕ್ರೀಡೆ: ಭಾರತದ ಆತಿಥ್ಯ

ಒಂದನೇ ಪುಟದಿಂದ...

2010ರ ದೆಹಲಿ ಕ್ರೀಡೆಗಳಿಗೆ ಭಾರತ ಸುಮಾರು ₹70,000 ಕೋಟಿ ವೆಚ್ಚ ಮಾಡಿತ್ತು. ಇದು ಮೂಲ ಅಂದಾಜುವೆಚ್ಚ ₹1,600 ಕೋಟಿಗಿಂತ ಮೀತಿಮೀರಿದ ಕಾರಣ ವ್ಯಾಪಕ ಭ್ರಷ್ಟಾಚಾರದ ಆರೋಪ, ಟೀಕೆಗಳು ಕೇಳಿಬಂದಿದ್ದವು.

ಕಾಮನ್‌ವೆಲ್ತ್ ಕ್ರೀಡೆಯು ನಾಲ್ಕು ವರ್ಷಗಳಿಗೊಮ್ಮೆ ನಡೆಯುತ್ತದೆ.

‘2030ರ ಕ್ರೀಡೆಗಳು ಕಾಮನ್‌ವೆಲ್ತ್ ಆಂದೋಲನದ ಶತಮಾನೋತ್ಸವ ಸಂದರ್ಭವಾಗಲಿದೆ ಮಾತ್ರವಲ್ಲ, ಮುಂದಿನ ಶತಮಾನಕ್ಕೆ ಬುನಾದಿಯಾಗಲಿದೆ’ ಎಂದು ಭಾರತ ಒಲಿಂಪಿಕ್ ಸಂಸ್ಥೆ ಮತ್ತು ಭಾರತ ಕಾಮನ್‌ವೆಲ್ತ್ ಕ್ರೀಡೆಗಳ ಸಂಘದ ಅಧ್ಯಕ್ಷೆ ಪಿ.ಟಿ.ಉಷಾ ತಿಳಿಸಿದರು.

ಅಭಿನಂದನೆ: ಭಾರತಕ್ಕೆ ಕಾಮನ್‌ವೆಲ್ತ್ ಕ್ರೀಡೆಗಳು ಮರಳುತ್ತಿರುವುದಕ್ಕೆ ಪ್ರಧಾನಿ ನರೇಂದ್ರ ಮೋದಿ ಮತ್ತು ಕ್ರೀಡಾ ಸಚಿವ ಮನ್ಸುಖ್ ಮಾಂಡವೀಯ ಅವರು ದೆಹಲಿಯಲ್ಲಿ ಸಂಸತ ವ್ಯಕ್ತಪಡಿಸಿದ್ದಾರೆ.

‘ದೇಶದ ಜನರಿಗೆ ಅಭಿನಂದನೆಗಳು. ನಮ್ಮ ಸಾಮೂಹಿಕ ಬದ್ಧತೆ ಮತ್ತು ಕ್ರೀಡಾಮನೋಭಾವದ ಸ್ಫೂರ್ತಿಯು ಜಾಗತಿಕ ಕ್ರೀಡಾ ನಕ್ಷೆಯಲ್ಲಿ ಭಾರತದ ಸ್ಥಾನ ಗಟ್ಟಿಯಾಗಿಸಿದೆ’ ಎಂದು ಮೋದಿ ಎಕ್ಸ್‌ನಲ್ಲಿ ಸಂದೇಶ ಹಾಕಿದ್ದಾರೆ.

‘ಭಾರತ ದೊಡ್ಡ ಮಟ್ಟದ ಕ್ರೀಡೆಗಳನ್ನು ನಡೆಸಲು ಸಮರ್ಥವಾಗಿದೆ. 2036ರೊಳಗೆ ವಿಶ್ವದ ಅಗ್ರ 10ರಲ್ಲಿ ಮತ್ತು ಸ್ವಾತಂತ್ರ್ಯದ ಶತಮಾನೋತ್ಸವ ವರ್ಷವಾದ 2047ರಲ್ಲಿ ಅಗ್ರ 5 ರಾಷ್ಟ್ರಗಳಲ್ಲಿ ಪ್ರಬಲ ಕ್ರೀಡಾ ರಾಷ್ಟ್ರವಾಗಿ ಗುರುತಿಸಿಕೊಳ್ಳಲಿದೆ’ ಎಂದು ಮಾಂಡವೀಯ ಹೇಳಿದ್ದಾರೆ.

15 ರಿಂದ 17 ಆಟ: 2030ರ ಕ್ರೀಡೆಗಳಲ್ಲಿ 15 ರಿಂದ 17 ಆಟಗಳು ಇರಲಿವೆ ಎಂದು ಕಾಮನ್‌ವೆಲ್ತ್ ಸ್ಪೋರ್ಟ್ ಖಚಿತಪಡಿಸಿದೆ.

ಅಥ್ಲೆಟಿಕ್ಸ್ ಮತ್ತು ಪ್ಯಾರಾ ಅಥ್ಲೆಟಿಕ್ಸ್, ಈಜು ಮತ್ತು ಪ್ಯಾರಾ ಈಜು, ಟೇಬಲ್ ಟೆನಿಸ್ ಮತ್ತು ಪ್ಯಾರಾ ಟೇಬಲ್‌ಟೆನಿಸ್, ವೇಟ್‌ಲಿಫ್ಟಿಂಗ್ ಮತ್ತು ಪ್ಯಾರಾ ವೇಟ್‌ಲಿಫ್ಟಿಂಗ್, ಆರ್ಟಿಸ್ಟಿಕ್ ಜಿಮ್ನಾಸ್ಟಿಕ್ಸ್, ನೆಟ್‌ಬಾಲ್ ಮತ್ತು ಬಾಕ್ಸಿಂಗ್ ಸ್ಪರ್ಧೆಗಳು ಖಚಿತವಾಗಿರುವ ಕ್ರೀಡೆಗಳಾಗಿವೆ.

ಉಳಿದ ಕ್ರೀಡೆಗಳನ್ನು ಮತ್ತು ಕಾರ್ಯಕ್ರಮಗಳನ್ನು ಅಂತಿಮಗೊಳಿಸುವ ಪ್ರಕ್ರಿಯೆ ಮುಂದಿನ ತಿಂಗಳು ಆರಂಭವಾಗಲಿದೆ.

ಈಜು: ಹಿತಶ್ರೀಗೆ ಮತ್ತೊಂದು ಚಿನ್ನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನೆಟ್ಟಕಲ್ಲಪ್ಪ ಈಜು ಕೇಂದ್ರದ (ಎನ್‌ಎಸಿ) ಈಜುಪಟುಗಳು ಬಸವನಗುಡಿ ಈಜು ಕೇಂದ್ರದಲ್ಲಿ (ಬಿಎಸಿ) ನಡೆಯುತ್ತಿರುವ ರಾಜ್ಯ ಶಾರ್ಟ್ ಕೋರ್ಸ್ ಈಜು ಚಾಂಪಿಯನ್‌ಷಿಪ್‌ನಲ್ಲಿ ನಾಲ್ಕನೇ ದಿನವೂ ಆಕರ್ಷಕ ಪ್ರದರ್ಶನ ಮುಂದುವರಿಸಿದರು. ಹಿತಶ್ರೀ ಎನ್. ಅವರು 17 ವರ್ಷದೊಳಗಿನ ಬಾಲಕಿಯರ 400 ಮೀ. ವೈಯಕ್ತಿಕ ಮೆಡ್ಲೆ ಸ್ಪರ್ಧೆಯಲ್ಲಿ ಹಾಗೂ ಆರ್ಯನ್ ಎ. ಪಾಟೀಲ್ 17 ವರ್ಷದೊಳಗಿನ ಬಾಲಕರ 50 ಮೀ. ಬಟರ್‌ಫ್ಲೈ ಸ್ಪರ್ಧೆಯಲ್ಲಿ ಚಿನ್ನ ಗೆದ್ದರು.



ವಿಶಾಖನ್

ಹಿತಶ್ರೀ ಅವರು 17 ವರ್ಷದೊಳಗಿನ ಬಾಲಕಿಯರ 400 ಮೀ. ಮೆಡ್ಲೆಯಲ್ಲಿ 5ನಿ.32.65 ಸೆಕೆಂಡುಗಳಲ್ಲಿ ಗುರಿತಲುಪಿದರು. ಡಿಕೆವಿ ಅಕ್ವಾಟಿಕ್‌ನ ಪ್ರತೀಕ್ಷಾ ಗೌಡ (5ನಿ. 36.10ಸೆ.) ಹಾಗೂ ಬಿಎಸಿನ ಆಸ್ರಾ ಸುಧೀರ್ (5ನಿ.41.24ಸೆ.) ಕ್ರಮವಾಗಿ ಬೆಳ್ಳಿ ಹಾಗೂ ಕಂಚು ಗೆದ್ದರು. ಬಾಲಕರ ವಿಭಾಗದ ಈ ಸ್ಪರ್ಧೆಯಲ್ಲಿ ಮೂರೂ ಪ್ರಶಸ್ತಿ ಬಿಸಿಎ ಈಜುಪಟುಗಳ ಪಾಲಾದವು. ಸೂರ್ಯ ಜೆ.ಟಿ. (4ನಿ.40.67ಸೆ.) ಸ್ವರ್ಣಗೆದ್ದರೆ, ರಾಘವ್ ಎಸ್. (4ನಿ.44.16ಸೆ.) ಹಾಗೂ ಯಶ್ ಕಾರ್ತಿಕ್ (4ನಿ.51.41ಸೆ.) ಕ್ರಮವಾಗಿ ಬೆಳ್ಳಿ ಹಾಗೂ ಕಂಚು ಜಯಿಸಿದರು.

ಆರ್ಯನ್ ಅವರು 26.16ಸೆಕೆಂಡುಗಳಲ್ಲಿ ಸ್ಪರ್ಧೆ ಮುಗಿಸಿದರು. ಅನೀಶ್ ಎ. ಕೋರೆ (26.39ಸೆ.) ರಜತ ಪದಕಕ್ಕೆ ಹಾಗೂ ಅನ್ವಿತ್ ಆರ್.ಬಿ. ಕಂಚಿಗೆ ಕೊರಳೊಡ್ಡಿದರು. ಬಿಎಸಿನ ವಿಶಾಖನ್ ಶರವಣನ್ ಅವರು 17 ವರ್ಷದೊಳಗಿನ ಬಾಲಕರ 50 ಮೀ. ಹಾಗೂ 100 ಮೀ. ಬ್ರೆಸ್ಟ್‌ಸ್ಟ್ರೋಕ್‌ನಲ್ಲಿ ಚಿನ್ನ ಗೆದ್ದರು.

ಬ್ಯಾಡ್ಮಿಂಟನ್: ಪ್ರಿಕ್ವಾರ್ಟರ್‌ಗೆ ಉನ್ನತಿ, ಶ್ರೀಕಾಂತ್

ಲಖನೌ (ಪಿಟಿಐ): ಅಗ್ರ ಶ್ರೇಯಾಂಕದ ಆಟಗಾರ್ತಿ ಉನ್ನತಿ ಹೂಡ ಹಾಗೂ ಅನುಭವಿ ಶಟ್ಲರ್‌ಗಳಾದ ಕಿದಂಬಿ ಶ್ರೀಕಾಂತ್ ಮತ್ತು ಎಚ್.ಎಸ್.ಪ್ರಣಯ್ ಅವರು ಸೈಯದ್ ಮೋದಿ ಅಂತರರಾಷ್ಟ್ರೀಯ ಸೂಪರ್ 300 ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಬುಧವಾರ ಪ್ರಿಕ್ವಾರ್ಟರ್ ಫೈನಲ್ ಪ್ರವೇಶಿಸಿದರು.

ಉನ್ನತಿ ಅವರು 21–13, 21–18ರಿಂದ ಸ್ವದೇಶದ ಆಕರ್ಷಿ ಕಶ್ಯಪ್ ವಿರುದ್ಧ ನೇರ ಗೇಮ್‌ಗಳಲ್ಲಿ ಗೆಲುವು ಸಾಧಿಸಿದರು. ಶ್ರೀಕಾಂತ್ ಅವರು 21–13, 21–10ರಿಂದ ಸ್ವದೇಶದ ಕವೀನ್ ತಂಗಂ ಅವರನ್ನು ನಿರಾಯಾಸವಾಗಿ ಮಣಿಸಿದರು.

2023ರ ವಿಶ್ವ ಬ್ಯಾಡ್ಮಿಂಟನ್ ಕಂಚು ವಿಜೇತ ಪ್ರಣಯ್ ಅವರು 21–15, 21–10ರಿಂದ ಶಾಶ್ವತ್ ದಲಾಲ್ ವಿರುದ್ಧ ಜಯ ಸಾಧಿಸಿದರು. ಅಗ್ರ ಶ್ರೇಯಾಂಕದ ಸಿಂಗಪುರದ ಆಟಗಾರ ತೇ ಅವರು 21–19, 21–17ರಿಂದ ಋತ್ವಿಕ್ ಸಂಜೀವಿ ಅವರನ್ನು ಮಣಿಸಿ, 16ರ ಘಟ್ಟಕ್ಕೆ ಮುನ್ನಡೆದರು.

ಉದಯೋನ್ಮುಖ ಆಟಗಾರ್ತಿ ತನ್ವಿ ಶರ್ಮಾ ಅವರು ಮಹಿಳೆಯರ ಸಿಂಗಲ್ಸ್‌ನಲ್ಲಿ 21–15, 21–19ರಿಂದ ಅಶ್ಮಿತಾ ಸಿ. ಅವರನ್ನು ಮಣಿಸಿ, ಎರಡನೇ ಸುತ್ತಿಗೆ ಮುನ್ನಡೆದರು. ಬೆಂಗಳೂರಿನ ಆಟಗಾರ ಬಿ.ಎಂ. ಭಾರದ್ವಾಜ್ ಅವರು 18–21, 21–16, 23-21ರಿಂದ ತರುಣ್ ರೆಡ್ಡಿ ಕೆ. ಅವರನ್ನು ಮಣಿಸಿದರು.

ಗಾಯತ್ರಿ ಹಾಗೂ ಮಾನಸಾ ರಾವತ್ ಜೋಡಿಯು ಮಹಿಳೆಯರ ಡಬಲ್ಸ್‌ನಲ್ಲಿ 21–11, 21–18ರಿಂದ ಆರತಿ ಸುಹೀಲ್ ಹಾಗೂ ವರ್ಷಿಣಿ ವಿಶ್ವನಾಥ್ ಜೋಡಿಯನ್ನು ಸೋಲಿಸಿತು.



ಉನ್ನತಿ ಹೂಡ

ಕ್ವಾರ್ಟರ್‌ಗೆ ಯಂಗ್ ಓರಿಯನ್ಸ್ ಬಿ.ಸಿ

ಬೆಂಗಳೂರು: ಸಂಘಟಿತ ಆಟ ಆಡಿದ ಯಂಗ್ ಓರಿಯನ್ಸ್ ಸ್ಪೋರ್ಟ್ಸ್ ಕ್ಲಬ್ ತಂಡ ‘ಸ್ಟೇಟ್ ಅಸೋಸಿಯೇಶನ್ ಕಪ್’ಗಾಗಿ ನಡೆಯುತ್ತಿರುವ ರಾಜ್ಯ ಮಟ್ಟದ ಬ್ಯಾಸ್ಕೆಟ್‌ಬಾಲ್ ಚಾಂಪಿಯನ್‌ಷಿಪ್‌ನಲ್ಲಿ ಬುಧವಾರ ಎಂಟರ ಘಟ್ಟ ಪ್ರವೇಶಿಸಿತು.

ಕಂಠೀರವ ಕ್ರೀಡಾಂಗಣದಲ್ಲಿ ನಡೆದ ಪ್ರಿಕ್ವಾರ್ಟರ್‌ಫೈನಲ್ ಪಂದ್ಯದಲ್ಲಿ ಯಂಗ್ ಓರಿಯನ್ಸ್ ತಂಡವು 100–65ರಿಂದ ಚಿಕ್ಕಮಗಳೂರು ಜಿಲ್ಲಾ ತಂಡವನ್ನು ಸುಲಭವಾಗಿ ಮಣಿಸಿತು. ಸುಮಂತ್ (23 ಪಾಯಿಂಟ್ಸ್) ಹಾಗೂ ಶಶಾಂಕ್ (19 ಪಾಯಿಂಟ್ಸ್) ಅವರು ಓರಿಯನ್ಸ್ ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿದರು.

ಪ್ರಿಕ್ವಾರ್ಟರ್ ಸುತ್ತಿನ ಇತರೆ ಪಂದ್ಯಗಳಲ್ಲಿ ಡಿವೈಇಎಸ್ ಬೆಂಗಳೂರು ತಂಡ 93–55ರಿಂದ ಬೆಂಗಳೂರು ವ್ಯಾನ್‌ಗಾರ್ಡ್ಸ್ ವಿರುದ್ಧ; ಬ್ಯಾಂಕ್ ಆಫ್ ಬರೋಡಾ ತಂಡ 76–41ರಿಂದ ಸಹಕಾರನಗರ ಬಿ.ಸಿ. ವಿರುದ್ಧ; ಸದರ್ನ್ ಬ್ಲೂಸ್ ತಂಡ 78–59ರಿಂದ ಜೆಎಸ್‌ಸಿ ವಿರುದ್ಧ; ಎಂಎನ್‌ಕೆ ರಾವ್ ಪಾರ್ಕ್ ಬಿ.ಸಿ. ತಂಡ 70–62ರಿಂದ ದೇವಾಂಗ ಯೂನಿಯನ್ ವಿರುದ್ಧ; ವಿವೇಕ್ಸ್ ಸ್ಪೋರ್ಟ್ಸ್ ಕ್ಲಬ್ ತಂಡ 74–54 ರಿಂದ ಹೂಪ್ಸ್ ಬಿ.ಸಿ. ವಿರುದ್ಧ; ಬೀಗಲ್ಸ್ ಬಿ.ಸಿ. ತಂಡ 77–74ರಿಂದ ಬಿಸಿವೈಎ ವಿರುದ್ಧ ಹಾಗೂ ಜಿಎಸ್‌ಟಿ ಆ್ಯಂಡ್ ಕಸ್ಟಮ್ಸ್ 80–62ರಿಂದ ರಾಜಮಹಲ್ ಬಿ.ಸಿ. ತಂಡದ ವಿರುದ್ಧ ಜಯ ಸಾಧಿಸಿದವು.